ಸಂಪುಟ ೪
ಸಂಚಿಕೆ ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

೧೯೭೨

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ,

ಲೇಖಕರಿಗೆ ಸೂಚನೆಗಳು

'ಕರ್ನಾಟಕ ಭಾರತಿ'ಯು ಸೃಜನ, ವಿಮರ್ಶನ, ಸಂಶೋಧನ ಮತ್ತು ವೈಜ್ಞಾನಿಕ ಸಾಹಿತ್ಯದ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೆ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನ ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು, **ಸಂಪಾದಕರು 'ಕರ್ನಾಟಕ ಭಾರತಿ', ಕನ್ನಡ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು **ಎರಡು** ಪ್ರತಿಗಳನ್ನು ಕಳುಹಿಸಬೇಕು.

ಇನ್ನಿತರ ಯಾವದೇ ವಿಷಯಕ್ಕೆ **ಡಾಯರೆಕ್ಟರ್, ಪ್ರಸಾರಂಗ ವಿಸ್ತರಣ ಹಾಗೂ ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೪ ಸಂಚಿಕೆ : ೩

ಪ್ರಧಾನ ಸಂಪಾದಕರು
ಡಾ. ಆರ್. ಸಿ. ಹಿರೇಮಠ

ಸಹಾಯಕ ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೪, ಸಂಚಿಕೆ : ३
ಜನೆವರಿ ೧೯೭೨

ಸಂಕ್ರಮಣ ಸಂಚಿಕೆ

ಪ್ರಕಾಶಕರು :

ಶ್ರೀ ಎಸ್. ಎಸ್. ಒಡೆಯರ, ಎಂ.ಎ., ಎಲ್‌ಎಲ್.ಬಿ.
ರಜಿಸ್ಟ್ರಾರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೩

ಮುದ್ರಕರು :

ಶ್ರೀ ಬಿ. ಜಿ. ಗುತ್ತಲ, ಬಿ.ಎ., ಎಲ್‌ಎಲ್.ಬಿ.
ಸಂಯುಕ್ತ ಕರ್ನಾಟಕ ಪ್ರೆಸ್, ಕೊಪ್ಪಿಕರ್ ರೋಡ್, ಹುಬ್ಬಳ್ಳಿ - ೨೦

ಪರಿವಿಡಿ

ಒಬ್ಬೊಂಟಿಯಾಗಿ

ನೀವೀಗ ಬಹಳಷ್ಟು ಸಣ್ಣವರಿದ್ದೀರಿ
ನಾನೀಗ ಬಹಳಷ್ಟು ದೊಡ್ಡವನಿದ್ದೇನೆ
ಆದ್ದರಿಂದ ನೀವು ನನ್ನನ್ನು ಬಹಳಷ್ಟು
ಪ್ರೀತಿಸುತ್ತೀರಿ.
ಹೊತ್ತು ಹೋದಂತೆಲ್ಲ ಹೊತ್ತು ಹೋದಂತೆಲ್ಲ
ನೀವು ಬಹಳಷ್ಟು ದೊಡ್ಡವರಾಗುವಿರಿ
ನಾನು :
ಬಹಳಷ್ಟು ಸಣ್ಣವನಾಗುವೆನು
ಆಗ :
ನೀವು ನನ್ನನ್ನು ಬಹಳಷ್ಟು ಪ್ರೀತಿಸುವದಿಲ್ಲ
(ಅರ್ಥಾತ್ ಲಕ್ಷಿಸುವದಿಲ್ಲ)
ಹೀಗಾಗಿ :
ನನ್ನ ನಿಮ್ಮನ್ನು ಬೇರ್ಪಡಿಸಿದ
ಅಂದರೆ
ನಮ್ಮೆಲ್ಲರಿಗೂ ಅಂತರಿಸಿದ ಜಾಗಕ್ಕೆ
ಗೆರೆ ಎಳೆದು–ಒಬ್ಬೊಂಟಿಯಾಗಿ
ಅಧ್ಯಯನ ನಡೆಸಿದ್ದೇನೆ
ಜೀವನ ವಿಶ್ಲೇಷಣೆಗೆ.

★ ಚೆನ್ನಣ್ಣ ವಾಲೀಕಾರ

ಬೆಳಕು ಹರಿಯಿತು

ಅಡುಗೆ ಮನೆಯ ಕೆಲಸ ಮುಗಿಸಿ ಸೀತಾ ಮಲಗುವ ಕೋಣೆಗೆ ಬಂದಿದ್ದಳೋ ಇಲ್ಲವೋ, ಸುಬ್ಬಣ್ಣ ಅವಳ ಮೇಲೆ ಎರಗಿ, "ಏ ಸೀತೀ ಈ ಹೊತ್ತು ನನ್ನದೂ ನಿನ್ನದೂ ಆಗಿ ಹೋಗಲಿ" ಎಂದು ಫಳೀರನೆ ಅವಳ ತಲೆಗೆ ಒಂದು ಏಟು ಹಾಕಿದ. "ಅಯ್ಯೋ ಸತ್ತೆ" ಎನ್ನುತ್ತ ಆಕೆ ಮೂಲೆಗೆ ಹೋಗಿ ಬಿದ್ದಳು.

ಸುಬ್ಬಣ್ಣನಿಗೆ ಈ ರಾದ್ಧಾಂತ, ತಾಯಿಗೆಲ್ಲಿ ಕೇಳುವುದೋ ಎಂದು ಭಯ. "ಎಲೇ ಬಾಯಿ ಬಿಟ್ಟೆಯೆಂದರೆ ನೋಡು" ಎಂದು ಅವನು ಪಿಸುದನಿಯಲ್ಲಿಯೇ ಅಬ್ಬರಿಸಿದ.

"ಏ ಸುಬ್ಬೂ ಏನೋ ಅದು ಸದ್ದು"? ಎಂದು ತಾಯಿ ಕೂಗಿ ಕೇಳಿಯೇ ಬಿಟ್ಟಳು. ಯಾವ ಪ್ರಶ್ನೆ ಬಂದೀತೆಂದು ಅವನು ಹೆದರಿಕೊಂಡಿದ್ದನೋ ಅದು ಬಂದೇ ಬಿಟ್ಟಿತ್ತು.

"ಅವ್ವ, ಏನೂ ಇಲ್ಲ" ಎಂದು ಹೇಳಿದನಾದರೂ, ತಾಯಿಗೆಲ್ಲಿ ಗೊತ್ತಾಗಿ ಬಿಡುವುದೋ ಎಂದು ಅವನಷ್ಟಕ್ಕೇ ಅವನಿಗೆ ಹೆದರಿಕೆ. ಆ ಕೊರೆಯುವ ಚಳಿಯಲ್ಲಿಯೂ ಅವನು ಬೆವೆತುಕೊಂಡಿದ್ದ.

"ನನ್ನನ್ನು ಇಷ್ಟಕ್ಕೆ ಏಕೆ ಬಿಡುತ್ತೀರಿ ? ಸಾಯಿಸಿಯೇ ಬಿಡಿರಿ. ನಿಮ್ಮ ಕೈಯಿಂದಲೇ ಸಾವು ಬಂದರೆ ನನಗೆ ಒಳ್ಳೆಯದೇ ಆಗ್ತದೆ" ಎಂದು ಸೀತಾ ಮೆಲ್ಲಗೆ ಅಳತೊಡಗಿದಳು.

"ಈ ನಾಟಕ ನೀನು ನನ್ನ ಮುಂದೆ ಆಡಬೇಡ. ಆ ರಾವಣನ ಸಹವಾಸ ಮಾಡಿ ನನ್ನೆದುರು ನೀನು ಈ ಸೋಗು ಮಾಡ್ತೀಯಾ?" ಸುಬ್ಬಣ್ಣ ಭಾರೀ ಉದ್ವೇಗದಿಂದ, ಕೋಪ ತುಂಬಿಕೊಂಡು ಕೇಳಿದ.

"ಯಾವ ರಾವಣ ಏನು ? ನೀವಾಡೋದು ನನಗೊಂದೂ ಅರ್ಥ ಆಗೋಲ್ಲ ! ಸುಮ್ಮಸುಮ್ಮನೆ ನೀವು ತಲೆ ಕೆಡಿಸಿಕೊಂಡೀರಿ. ಇಲ್ಲದ ಅಪವಾದ ಯಾಕ ನೀವು ನನ್ನ ತಲೀಮೇಲೆ ಹೊರಸ್ತೀರಿ ? ಅತ್ತೆಮ್ಮನವರನ್ನಾದರೂ ಕೇಳ್ರಿ" ಎಂದು ಸೀತಾ ಅಳುತ್ತಲೇ ತನ್ನನ್ನು ಸಮರ್ಥಿಸಿಕೊಂಡಳು.

"ಆಹಾ, ಬಹಳ ಸಾಜವಂತಿ. ಪತಿವ್ರತಾ ಶಿರೋಮಣಿ !" ಎಂದು ಸುಬ್ಬಣ್ಣ ವ್ಯಂಗವಾಗಿ ನುಡಿದ.

"ನೀವು ಇಂಥ ಮಾತು ಆಡೋದಕಿಂತ ನನ್ನನ್ನು ಒಮ್ಮೆಲೇ ಕುತಿಗಿ ಹಿಚುಕಿ ಸಾಯಿಸಿ ಬಿಡ್ರಿ. ಅಯ್ಯೋ ದೇವರೇ ನಾನು ಕೇಳಬಾರ್ದ ಮಾತು ಕೇಳೋ ಹೊತ್ತು ತಂದಿ" ಎಂದು ಸೀತಾ ತನ್ನ ರೋದನದ ತಾನವನ್ನು ಎತ್ತರಿಸಿದಳು.

"ಇಲ್ಲಿ ನೋಡು ನೀನು ಮಾಡಬಾರದ್ದು ಮಾಡಿದರೆ ನಾನು ಆಡಬಾರದ್ದು ಆಡಬೇಕಾಗುತ್ತದೆ" ಎನ್ನುತ್ತ ಸುಬ್ಬಣ್ಣ ಅವಳ ಬಾಯನ್ನು ಗಟ್ಟಿಯಾಗಿ ಅದುಮಿ ಹಿಡಿದ.

ಶೀತ ಬಾಧೆಯಿಂದ ನರಳುತ್ತಿದ್ದ ಅವಳಿಗೆ ಒಮ್ಮೆಲೇ ಉಸಿರುಕಟ್ಟಿದಂತಾಗಿ, ಆಕೆ ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ಸುಬ್ಬಣ್ಣನ ಕೈಯನ್ನು ತನ್ನ ಬಾಯಿಂದ ಕಿತ್ತು ಆಚೆಗೆ ಸರಿಸಿದಳು.

ಸುಬ್ಬಣ್ಣ ಕೊಟ್ಟ ಪೆಟ್ಟಿಗಿಂತಲೂ ಅವನು ಆಡಿದ ಮಾತು ಅವಳ ಮರ್ಮಕ್ಕೆ ಹತ್ತಿತ್ತು. "ಅಯ್ಯೋ ಅವ್ವಾ, ನನ್ನ ಬಾಳ್ವೆ ಏನಾಯಿತೇ" ಎಂದು ಅವಳು ಬಿಕ್ಕಿ ಬಿಕ್ಕಿಸಿ ಅಳತೊಡಗಿದಳು.

"ನಿನ್ನ ಅವ್ವ ಬಂದು ಈಗ ನಿನ್ನನ್ನೇನೂ ಬಿಡಿಸಿಕೊಳ್ಳುವದಿಲ್ಲ–ಆ ವಿಠೋಬ ಬಂದು ಬಿಡಿಸಿಕೊಳ್ಳುವನೋ ಹೇಗೋ ನೋಡು" ಎಂದು ಸುಬ್ಬಣ್ಣ ಅಣಕಿಸಿದ.

"ಆ ದೇವರಂಥ ಮನುಷ್ಯರ ಹೆಸರು ಸುಮ್ನೇ ತೆಗೀಬೇಡಿರಿ." ಎಂದು ಸೀತಾ ಗೋಗೆರೆದಳು.

"ಬಾಯಿ ಮುಚ್ಚು ರಂಡೆ," ಎನ್ನುತ್ತ ಸುಬ್ಬಣ್ಣ ಅವಳ ಕೆನ್ನೆಗೆ ಎರಡು ಏಟು ಕೊಟ್ಟ. "ಪಾಪ ದೇವರಂಥ ಮನುಷ್ಯ" ಎಂದು ವ್ಯಂಗವಾಗಿ ನುಡಿದ.

ಆ ಏಟಿಗೆ "ಅಯ್ಯೋ ಅಮ್ಮಾ" ಎಂದು ಸೀತಾ ಕೂಗಿಕೊಂಡಳು.

ಇನ್ನೂ ನಿದ್ರೆ ಬಾರದೆ ಹೊರಳಾಡುತ್ತಿದ್ದ ರಂಗಮ್ಮ "ಏ, ಸೀತಾ, ಸುಬ್ಬು ಏನಾಯಿತ್ರೋ" ಎನ್ನುತ್ತ ಹಾಸುಗೆಯಿಂದ ಎದ್ದಳು. ಅವಳಿಗೆ ಕಣ್ಣು ಕಾಣಿಸದಿದ್ದರೂ ಕಿವಿ ಕೇಳಿಸುತ್ತಿದ್ದವು.

೦ ೦ ೦ ೦ ೦ ೦ ೦

ವಿಠೋಬನು ಜಂಗಲ್ ಕಾಂಟ್ರ್ಯಾಕ್ಟ ಹಿಡಿದುಕೊಂಡು ಅಲ್ಲಿ ಬಂದಾಗ ಸುಬ್ಬಣ್ಣನೇ ಅವನನ್ನು ಕರೆದು ತನ್ನ ತಾಯಿ ಹಾಗೂ ಹೆಂಡತಿಗೆ ಪರಿಚಯ ಮಾಡಿಕೊಟ್ಟಿದ್ದ. ಸೀತಾನ ಮುಗ್ಧತೆ ಹಾಗೂ ರಂಗಮ್ಮನ ಆತ್ಮೀಯತೆಗಳಿಂದ ಅವನು ಮಾರುಹೋಗಿದ್ದ. ಅವರಲ್ಲಿ ಅವನು ತನ್ನ ತಂಗಿ ತಾಯಿಯ ಛಾಯೆಯನ್ನೇ ಗುರುತಿಸಿಕೊಂಡಿದ್ದ.

ಕಾಡಿನಲ್ಲಿ ಒಬ್ಬನೇ ಕೈ ಬಾಯಿ ಸುಟ್ಟುಕೊಂಡು ತೊಂದರೆಪಟ್ಟುಕೊಳ್ಳಬಾರದೆಂದು ರಂಗಮ್ಮ ಅವನನ್ನು "ಮಗ, ನೀನು ಇಲ್ಲಿಯೇ ಉಣ್ಣಬೇಕು" ಎಂದು ಬಲವಂತ ಪಡಿಸಿದ್ದಳು. ಅವಳಿಗೆ ಮಗನ ಸಮವಯಸ್ಕನಾದ ವಿಠೋಬನು ಕೂಡ ಇನ್ನೊಬ್ಬ ಸುಬ್ಬಣ್ಣ. ರಂಗಮ್ಮನ ಕಕ್ಕುಲಾತಿಯ ಕರೆಯನ್ನು ನಿರಾಕರಿಸುವುದು ವಿಠೋಬನಿಗೆ ಆಗಲಿಲ್ಲ.

ಅವನ ಊಟ ಉಪಚಾರ ನಿತ್ಯವೂ ಸುಬ್ಬಣ್ಣನೊಂದಿಗೆ ರಂಗಮ್ಮನ ಮನೆಯಲ್ಲಿಯೇ ನಡೆಯುತೊಡಗಿದವು. ಜನ್ಮಾಂತರದ ಸಂಬಂಧಿ ಎಂಬಂತೆ ಅವನು ಅವರ ಮನೆಯುವನೇ ಆಗಿಬಿಟ್ಟಿದ್ದ. ಸುಬ್ಬಣ್ಣನಿದ್ದರೆ ಅವನ ಜತೆಯಲ್ಲಿ ಬರಬೇಕು. ಅವನೇನಾದರೂ ಗದ್ದೆಗೆ ಹೋಗಿದ್ದರೆ ವಿಠೋಬನೊಬ್ಬನೇ ಬರಬೇಕು. ಮೊದಮೊದಲು ಅವನಿಗೆ ಸಂಕೋಚವೆನಿಸಿತಾದರೂ ಅವರ ನಿರ್ವ್ಯಾಜ ಪ್ರೀತಿ ಅವನಿಗೆ ಸಲುವಳಿಯನ್ನು

ತಂದುಕೊಟ್ಟಿತ್ತು. ಸೀತಾ ಕೂಡ, ವಿಠೋಬನೊಂದಿಗೆ ತನ್ನ ಅಣ್ಣ ಎಂಬ ಸಲುಗೆಯಿಂದಲೇ ನಡೆದುಕೊಂಡಿದ್ದಳು.

ಊಟಕ್ಕೆ ತಿಂಡಿಗೆ ರಂಗಮ್ಮನ ಮನೆಗೆ ಬರುತ್ತಿದ್ದನಾದರೂ ವಿಠೋಬನು ರಾತ್ರಿಯನ್ನು ಮರ ಕಡಿಯುವ ಆಳುಗಳೊಂದಿಗೆ, ಅಲ್ಲಿಯೇ ಸಮೀಪದಲ್ಲಿದ್ದ ಗುಡಿಸಲಿನಲ್ಲಿ ಕಳೆಯುತ್ತಿದ್ದ. ಅವರೊಂದಿಗೆ ನಕ್ಕು ಕೆಲೆದು, ಅವರಲ್ಲಿ ಉತ್ಸಾಹ ತುಂಬಿ ಅವರನ್ನು ಬೆಳಿಗ್ಗೆ ಬೇಗನೆ ಕಾಡಿಗೆ ಸಾಗು ಹಾಕುವದೇ ಅವನ ಉದ್ದೇಶವಾಗಿದ್ದಿತು. ಮಧ್ಯಾಹ್ನ-ವಾಯಿತೆಂದರೆ ಗಾಳಿ ತಡೆದು ನಿಂತು ಕಾಡಿನಲ್ಲಿಯೂ ಧಗೆ ಉಂಟಾಗುತ್ತಿತ್ತು. ಮಳೆ ಬೀಳುವುದಕ್ಕೆ ಮುಂಚೆಯೇ ಕೆಲಸ ಸಾಗಿದರೆ ಸಾಗಬೇಕು; ಒಮ್ಮೆ ಮಳೆ ಬೀಳಲು ಆರಂಭವಾಯಿತೆಂದರೆ ಮುಂದೆ ಕಾಡಿನಲ್ಲಿ ಕಾಲಿಡುವುದಕ್ಕೆ ಆಗುತ್ತಿರಲಿಲ್ಲ.

ಆ ದಿನ ಮಧ್ಯಾಹ್ನ ಸುಬ್ಬಣ್ಣ ಊಟಕ್ಕೆ ಇನ್ನೂ ಬಂದಿರಲಿಲ್ಲ. "ಅವರು ಬರುವುದು ಎಷ್ಟು ಹೊತ್ತಿಗೋ ಏನೋ, ನೀವು ಊಟಮಾಡಿ" ಎಂದು ಸೀತಾ ವಿಠೋಬನಿಗೆ ಹೇಳಿದಳು. ಊಟಕ್ಕೆ ನೀಡುತ್ತಿದ್ದಾಗ, ಸೀತಾ ಬಹು ಪ್ರಯಾಸದಿಂದ ಬಲಗೈಯಲ್ಲಿ ತಟ್ಟೆ ಹಿಡಿದು ಎಡಗೈಯಿಂದ ಬಡಿಸುತ್ತಿದ್ದಳು. ಅವಳ ಕೈಗೆ ಮೂರು ದಿನಗಳ ಹಿಂದೆ ಯಾವುದೋ ಮುಳ್ಳು ಚುಚ್ಚಿ ಅದು ಊದಿಕೊಂಡಿತ್ತು. ವಿಠೋಬ ಅದನ್ನು ಗಮನಿಸಿದ್ದ. ಅವನು ಕೇಳಿದರೆ, ತನ್ನ ಕೈಗೆ ಏನೂ ಆಗಿಲ್ಲವೆಂದು ಆಕೆ ಹೇಳಿದ್ದಳು. ಊಟವಾದ ಮೇಲೆ ವಿಠೋಬ, "ನೋಡೋಣ, ಸೀತಾ ಕೈ ತೋರಿಸು" ಎಂದು ಕೇಳಿದ್ದ. ಅವಳು "ಇಲ್ಲ ಇಲ್ಲ" ಎಂದು ಹೇಳುತ್ತ ಅವನು ಬಲವಂತ ಪಡಿಸಿದ ಮೇಲೆ ಆಕೆ ಮುಂದೆ ಚಾಚಿದ್ದಳು. ಅದು ಕೀತು ಕೊಂಡಿತ್ತು. "ಪಾಪ, ಎಷ್ಟು ನೋವಾಗಿದೆಯೋ ಏನೋ" ಎನ್ನುತ್ತ ವಿಠೋಬ ಅದರ ಮೂತಿಗೆ ಒಂದು ಗುಂಡು ಸೂಜಿ ಚುಚ್ಚಿ ಬಾಯಿ ಮಾಡಿದ.

ಅದೇ ಆಗ, ಹೊರಗಿನಿಂದ ಬಂದ ಸುಬ್ಬಣ್ಣನಿಗೆ, ದೂರದಲ್ಲಿಯ ಚಿತ್ರ ಬಹು ವಿಚಿತ್ರವಾಗಿ ಕಾಣಿಸಿತು. ವಿಠೋಬನು, ಕೈ ಹಿಡಿದುಕೊಂಡು ತನ್ನ ಹೆಂಡತಿಯೊಂದಿಗೆ ಸರಸ ನಡೆಸಿದ್ದಾನೆ, ಅವನ ಮನಸ್ಸು ಒಳಗೇ ಅವಡುಗಚ್ಚಿತು.

ಸುಬ್ಬಣ್ಣ ಬಂದುದನ್ನು ವಿಠೋಬನಾಗಲಿ, ಸೀತೆಯಾಗಲಿ ಗಮನಿಸಿರಲಿಲ್ಲ. "ಈಗ ಮನಸ್ಸಿಗೆ ಆರಾಮ ಅನಿಸಿತಲ್ಲವೇ" ಎಂದು ವಿಠೋಬ ಸೀತೆಗೆ ಹೇಳಿದುದು ಸುಬ್ಬಣ್ಣನ ಕಿವಿಗೆ ಬಿದ್ದಾಗ ಅವನ ಮನಸ್ಸಿಗೆ ಕಸವಿಸಿ ಎನಿಸಿತು.

ಹಿಂದೆ ಸುಬ್ಬಣ್ಣನ ಸದ್ದು ಕೇಳಿಸುವುದಕ್ಕೂ ವಿಠೋಬನು ಸೀತೆಯ ಕೈ ಬಿಡುವುದಕ್ಕೂ ಸರಿ ಹೋಯಿತು.

ಸುಬ್ಬಣ್ಣನ ಮುಖ ಬಿಗಿದುಕೊಂಡಿರುವುದನ್ನು ನೋಡಿದ ವಿಠೋಬನು ಅವನಿಗೆ ತಮಾಷೆ ಮಾಡುವಂತೆ, "ನೋಡು ಸುಬ್ಬಾ. ನಿನ್ನ ಊಟವನ್ನು ನಾನೇ ಮುಗಿಸಿದೆ," ಎಂದ.

ಅದಕ್ಕೆ ಅವನು, ತನ್ನ ಮುಖದಂತೆ ಮಾತಿನಲ್ಲಿಯೂ ಬಿರುಸುತನ ಇರಿಸಿಕೊಂಡು, “ನನ್ನ ತಟ್ಟೆ ನಿನಗೇ ಮೀಸಲೆಂಬುವನ್ನು ನಾನು ಬಲ್ಲೆ” ಎಂದು ವ್ಯಂಗವಾಗಿ ನುಡಿದ.

o o o o o o o

ತನ್ನ ಗಂಡನ ಮನಸ್ಸಿನಲ್ಲಿ ಬಿರುಗಾಳಿಯನ್ನೆಬ್ಬಿಸಿ, ಬಾಯಿಂದ ಮನಸ್ಸಿಗೆ ಬಂದ ಮಾತನ್ನು ಆಡಹಚ್ಚಿದ ಪ್ರಸಂಗ ಆ ಮಧ್ಯಾಹ್ನವೇ ನಡೆದದ್ದೆಂಬುದನ್ನು ಸೀತಾಬಲ್ಲಳು. ವಿವೇಕ ಕಳೆದುಕೊಂಡು ಹುಚ್ಚನಂತಾಗಿದ್ದ ತನ್ನ ಗಂಡನಿಗೆ ತಿಳಿ ಹೇಳುವಂಥ ಸಾಮರ್ಥ್ಯ ಅವಳಿಗಿರಲಿಲ್ಲ, ಆಕೆ, ಕೊನೆಯ ಅಸ್ತ್ರವೆಂದು ಕಣ್ಣೀರನ್ನು ಸುರಿಸಿದ್ದಳು. ನೀರಿನಿಂದ ಕಲ್ಲು ಕರಗುತ್ತದೆ. ಆದರೆ, ಕಣ್ಣೀರಿನಿಂದಲೂ ಅವನ ಹೃದಯ ಕರಗಲಿಲ್ಲ.

“ಏ, ಸುಬ್ಬಾ” ಎಂದು ತಾಯಿ ಕೂಗುವುದನ್ನು ಕೇಳಿದ ಸುಬ್ಬಣ್ಣನು, ಸೀತೆಯಿಂದ ಹಿಂದೆ ಸರಿದು, “ಬಾಯಿ ಬಿಟ್ಟಕ್ಕೆಂದು ಬಿಟ್ಟರೆ ನೋಡು” ಎಂದು ಅವಳಿಗೆ ಒಂದು ಬಲವಾದ ಗುದ್ದು ಹಾಕಿದ.

ಸೀತೆ ಚೀರುತ್ತ ಹೌಹಾರಿದ ಜಿಂಕೆಯಂತೆ ಒಮ್ಮೆಲೆ ಬಾಗಿಲ ಕಡೆಗೆ ಧಾವಿಸಿದಳು. ತಾಯಿಯ ಎದುರು ಹೆಂಡತಿಯ ಬಗೆಗೆ ಎಂದೂ ದೂರಿಕೊಳ್ಳದಿದ್ದ ಸುಬ್ಬಣ್ಣನಿಗೆ ಇಂದು ಅವಳೆದುರು ದೂರಿಕೊಳ್ಳುವುದು ಅವಾಸ್ತವವೆನಿಸಿತು. ಅವನು ಬಾಯಿ ಬಿಗಿಹಿಡಿದು ಕೊಂಡು ಇದ್ದನೋ ಇಲ್ಲವೋ ಎಂಬಂತೆ ನೆಲಬಿಟ್ಟು ಕದಲದಂತೆ ನಿಂತಲ್ಲಿಯೇ ನಿಂತಿದ್ದ

ಕಣ್ಣು ಕಾಣದ ರಂಗತ್ತೆಯ ಹತ್ತಿರ ಹೋದರೆ ತನ್ನ ಗಂಡ ಅಲ್ಲಿಗೂ ಬಂದಾ ನೆಂದು ಹೆದರಿಕೊಂಡು ಸೀತೆ ಅಳುತ್ತಲೇ ಹೊರಗೆ ಓಡಿದಳು. ಗಂಡನ ಕೈಯ ಹೊಡೆತ, ಬಾಯ ಹೊಡೆತಗಳಿಗಿಂತಲೂ ಕರಾಳ ಕತ್ತಲೆ ಅವಳಿಗೆ ಎಷ್ಟೂ ಭಯವನ್ನು ಉಂಟು ಮಾಡಲಿಲ್ಲ. ಆಕೆ ಕಾಣ ಕಾಣುತ್ತಿದ್ದಂತೆಯೇ ಕತ್ತಲೆಯಲ್ಲಿ ಕರಗಿಹೋದಳು. ಅವಳ ಧ್ವನಿ ದೂರದಲ್ಲಿ ಲೀನವಾಗಿ ಹೋದಂತೆ ಕೇಳಿಸಿತು.

“ಸುಬ್ಬಾ, ಸೀತೆಗೆ ಏನು ಮಾಡ್ದ್ಯೋ ? ಅವಳೆಲ್ಲಿಗೆ ಓಡಿ ಹೋದಳೋ ? ಹುಳಹುಪ್ಪಡಿ, ಕಾಡುಮಿಕ ತುಂಬಿವೆ. ಹುಡುಗಿ ಗತಿ ಏನು ?” ಎಂದು ರಂಗಮ್ಮ ಕೋಲು ಹಿಡಿದು ತಡವರಿಸುತ್ತ ಸುಬ್ಬಣ್ಣನ ಕೋಣೆಯ ಕಡೆಗೆ ನಡೆದಿದ್ದಳು.

ಆ ರಾತ್ರಿ ವಿಠೋಬನಿಗೆ ಏನು ಲಹರಿ ಬಂದಿತ್ತೋ ಏನೋ ? ನಾಟಾ ಕಡಿಯುವ ಆಳುಗಳೊಂದಿಗೆ ಚಕ್ಕಂದವಾಗಿ ಹಾಡುತ್ತ ಕುಡಿಯುತ್ತ ಕುಳಿತಿದ್ದ. ಕನಸಿನಲ್ಲಿ ಆಡುವಂತೆ ಅಲ್ಲಿ ಎಚ್ಚರವಿಲ್ಲದ ಮಾತುಗಳು ನಡೆದಿದ್ದವು.

“ಅಯ್ಯೋ ಅಣ್ಣ, ನನ್ನ ಕಾಯಬೇಕು.” ಎಂದು ಸೀತಾ ಓಡುತ್ತ ಬಂದು ವಿಠೋಬನ ಪಾದದ ಬಳಿ ದೊಪ್ಪನೆ ಬಿದ್ದೊಡನೆಯೇ ಅವನಿಗೆ ಒಮ್ಮೆಲೇ ನಿಶೆ ಹರಿದು ನಿಚ್ಚಳಾದಂತಾಯಿತು.

ಆಳುಗಳೆಲ್ಲರೂ ಅವಾಕ್ಕಾಗಿ, “ಇದೇನು” ಎಂದು ಸೀತಾ ವಿಠೋಬರ ಕಡೆಗೆ ನೋಡತೊಡಗಿದರು,

"ಯಾವನವನು ನಿನಗೆ ಅಂಜಿಕೆ ಹಾಕಿದವನು" ಎಂದು ಸೀತೆಯನ್ನು ಕೇಳುತ್ತ, ವಿಠೋಬನು ತನ್ನ ಆಳುಗಳ ಕಡೆಗೆ ತಿರುಗಿ "ಇಲ್ಲಿ ನೋಡ್ರೋ, ನನ್ನ ತಂಗೀನ ಅಪ-ಮಾನ ಮಾಡಿದವ್ನ ನನ್ನ ಕೋವಿಯಿಂದ ಸುಟ್ಟುಹಾಕಿಬಿಡ್ತೇನೆ" ಎಂದ. ಅವನು ಆ ರೀತಿ ಕೋಪಗೊಂಡುದುದನ್ನು ಅವರು ಹಿಂದೆಂದೂ ನೋಡಿರಲಿಲ್ಲ.

ಸೀತೆ ಬಿಕ್ಕಿ ಬಿಕ್ಕಿ ಅಳುತ್ತ, ತನ್ನ ಗಂಡನು ತನ್ನ ಬಗೆಗೆ ಸುಮ್ಮಸುಮ್ಮನೆ ಸಂದೇಹ ಪಟ್ಟುದುದನ್ನು ಅವನೆದುರು ತೋಡಿಕೊಂಡಳು.

ಅವರು ನೋಡನೋಡುತ್ತಿದ್ದಂತೆ ವಿಠೋಬನು ತನ್ನ ರೈಫಲ್ಲನ್ನು ಬಲಗೈಯಲ್ಲಿ ಹಿಡಿದು, ಎಡಗೈಯಿಂದ ಸೀತೆಯನ್ನು ಹಿಡಿದೆಳೆಯುತ್ತ "ಇಲ್ಲಿ ನನ್ನೊಂದಿಗೆ ಬಾ. ಅವ ನನ್ನು ನೋಡಿಬಿಡುತ್ತೇನೆ. ನನ್ನ ತಂಗಿಗೆ ಆದ ಅಪಮಾನ ಬೇರೆಯಲ್ಲ, ನನಗೆ ಆದ ಅವಮಾನ ಬೇರೆಯಲ್ಲ" ಎಂದು ನುಡಿದ.

ವಿಠೋಬನ ಕರ್ಕಶ ನುಡಿಗಳನ್ನು ಕೇಳಿ ಸುಬ್ಬಣ್ಣ ಹೆದರಿ ಬಾಗಿಲನ್ನು ಮುಚ್ಚಿ ಅಗಳಿ ಹಾಕಿದ್ದ.

"ಎಲೇ ಭಟ್ಟಾ, ಒಳಗೆ ಯಾಕೆ ಕುಂತಿದ್ದೀ. ಹೊರಗೆ ಬಾ," ಎಂದು ವಿಠೋಬ ಆರ್ಭಟಿಸಿದ.

"ಅವರಿಗೇನಾದರೂ ಮಾಡಿದ್ರೆ ನೀವು ನನ್ನ ಸಾಯಿಸ್ತೀರಿ" ಎಂದು ಸೀತಾ ವಿಠೋಬನನ್ನು ಅಂಗಲಾಚುತ್ತಿದ್ದಳು. ವಿಠೋಬನಿಗೆ ಹೇಳಿದುದು ಈ ರೀತಿ ಆದೀ ತೆಂದು ಅವಳು ಎಣಿಸಿರಲಿಲ್ಲ. ಕೋವಿ ತನ್ನ ಗಂಡನ ಮೇಲೆ ಹಾರಿದರೆ ಎನ್ನುವ ಹೆದರಿಕೆಯಿಂದ ಅವಳ ಹೃದಯ ತಲ್ಲಣಿಸಿತ್ತು.

"ಅಣ್ಣ, ನೀವು ನನ್ನ ಗಂಡನ ಮೇಲೆ ಈ ಕೋವೀ ಹಿಡಿದುಬಿದ್ದರೆ ನನ್ನ ಮಾಂಗಲ್ಯದ ಗತಿ ?" ಎಂದು ಸೀತಾ ಅವನನ್ನು ಅಂಗಲಾಚಿ ಬೇಡಿದಳು.

"ನನ್ನ ತಂಗೀ ನೀತಿ ಬಗ್ಗೆ ಅಪನಂಬಿಗೆ ಮಾಡಿಕೊಂಡ ಆ ಭಟ್ಟನಿಗೆ ಪಾಠ ಕಲಿ ಸದೇ ನಾನು ಬಿಡುವುದಿಲ್ಲ" ಎಂದು ವಿಠೋಬ ಸೀತೆಯ ದೈನ್ಯಾಸವನ್ನು ಗಮನಿಸದೆ ಆರ್ಭಟಿಸಿದ.

ಮುದುಕಿ ರಂಗಮ್ಮ ಬಾಗಿಲನ್ನು ತೆರೆದು, "ಏ ಮಗಾ, ನನ್ನ ವಿಠ್ಠೂ" ಎನ್ನುತ್ತ ಮುಂದೆ ಬಂದಳು.

ಆ ಮುದುಕಿಯ ಮಾತೃವಾತ್ಸಲ್ಯಕ್ಕೆ ವಿಠೋಬ ನಿಂತಲ್ಲಿಯೇ ಕರಗಿದ್ದ. ರಂಗಮ್ಮ ಅವನನ್ನು ಮೈದಡವಲು ಬಂದಾಗ ಅವಳ ಕೈಗೆ ಅವನು ಹಿಡಿದಿದ್ದ ಕೋವಿ ತಾಗಿತು. ಕಣ್ಣು ಕಾಣದಿದ್ದರೂ ಆ ಮುದುಕಿಗೆ ಎಲ್ಲವೂ ಅರ್ಥವಾಯಿತು.

"ವಿಠ್ಠೂ, ನೀನು ಏನಾದರೂ ಮಾಡುವ ಮೊದಲು ನನ್ನನ್ನು ಮುಗಿಸು. ನನ್ನ ಕಣ್ಣು ಎಂದೋ ಹೋದ್ವು, ಈಗ ಈ ಜೀವಾನೂ ಹೋಗಿಬಿಡ್ಲಿ," ಎಂದಳು ರಂಗಮ್ಮ.

"ಅವ್ವಾ, ನಾನೇನು ಕಟುಕ ಎಂದು ತಿಳಿದೇನು ? ನಿನ್ನ ಮಗ, ನಿನ್ನ ಸೊಸೀಗೆ, ನನ್ನ ತಂಗಿಗೆ ಏನು ಮಾಡಿದಾನ ಕೇಳು. ತನ್ನ ಹೆಂಡತಿಗೆ ತಾನು ಮರ್ಯಾದಿ ಕೊಡದಿದ್ದರ ಅವನ ಮರ್‍ಯಾದೀನಾದರೂ ಎಲ್ಲಿ ಉಳಿತೈತಿ ? ಹಾಲಿನಂಥ ನನ್ನ ಈ ತಂಗೀ ಜೀವನದಾಗ ಅವನು ಉಪ್ಪ ಹಾಕಾಕ ನಿಂತಾನ," ಎಂದು ವಿಠೋಬ ಭಾವೋದ್ವೇಗದಿಂದ ನುಡಿದ.

"ಹುಚ್ಚು, ಹುಡುಗು ಬುದ್ಧಿ ಎರಡೂ ಕೂಡಿ ಆಗ್ಯಾನ ನನ್ನ ಸುಬ್ಬ್ಯಾ. ಅವ ನನ್ನ ಹೊಟ್ಟ್ಯಾಗ ಹಾಕ್ಕೋ," ಎನ್ನುತ್ತ ರಂಗಮ್ಮ "ಏ ಸುಬ್ಬಾ, ಸುಬ್ಬಾ" ಎಂದು ಕೂಗಿದಳು.

ನಡೆದ ಮಾತುಗಳೆಲ್ಲವನ್ನೂ ಸುಬ್ಬಣ್ಣ ಕದದ ಮರೆಯಲ್ಲಿಯೇ ನಿಂತು ಮೈಯೆಲ್ಲ ಕಿವಿಯಾಗಿ ಕೇಳಿದ್ದ. ಅಪರಾಧಿಯಂತೆ ಅವನು ಮೆಲ್ಲನೆ ನಡೆದು ಬಂದು "ಅವ್ವಾ" ಎಂದ.

"ನಿಂದೆಷ್ಟೋ ಅಹಂಕಾರ, ತಪ್ಪಾಯಿತೆಂದು ಹೇಳಿಕೋ" ಎಂದರು ರಂಗಮ್ಮ.

"ವಿಠ್ಯಾ, ನನ್ನನ್ನು ಕ್ಷಮಿಸು. ನನ್ನ ಹೆಂಡ್ತೀ ಕಣ್ಣಲ್ಲಿ ಬೆರಳಿಡೋಕೆ ಹೋಗಿ ನನ್ನ ಕಣ್ಣಲ್ಲೇ ಇಟ್ಕೊಂಡೆ."

"ಕ್ಷಮಿಸಬೇಕಾದವನು ನಾನಲ್ಲ ಸುಬ್ಬ್ಯಾ," ವಿಠೋಬ ಹೇಳಿದ, "ನನ್ನ ತಂಗಿ ನಿನ್ನನ್ನು ಕ್ಷಮಿಸಬೇಕು. ಅವಳ ಮನಸ್ಸಿಗೆ ಚುಚ್ಚಿದ ಅಂಬುಗಳನ್ನು ನೀನೇ ತೆಗೆಯಬೇಕು," ಅಷ್ಟು ಹೊತ್ತಿಗೆ ಕತ್ತಲು ಸರಿಯಿತು ; ಬೆಳಕು ಹರಿಯಿತು.

★ **ಪಾಟೀಲ ಪುಟ್ಟಪ್ಪ**

ಪಂಪ ಭಾರತದ ಒಂದು ಪದ್ಯ

ಶ್ರೀಕೃಷ್ಣ ಪಾಂಡವರಿಗೆ ನ್ಯಾಯವಾಗಿ ಬರಬೇಕಾಗಿದ್ದ ಅರ್ಧ ರಾಜ್ಯವನ್ನು ಕೇಳಲು ಸರ್ವರ ಅಭಿಪ್ರಾಯದಂತೆ ಕೌರವರ ಬಳಿಗೆ ಪಾಂಡವರ ರಾಯಭಾರಿಯಾಗಿ ಬರುವನು. ಬಂದವನು ನೇರವಾಗಿ ಪಾಂಡವ ಪಕ್ಷಪಾತಿಯಾಗಿದ್ದ ವಿದುರನ ಮನೆಯಲ್ಲಿ ಉಳಿದುಕೊಂಡು ಪಥಶ್ರಮವನ್ನು ನೀಗಿದನು. ಮಾರನೆ ದಿವಸ ಸುಯೋಧನನನ್ನು ಕಂಡು ಸಭೆಯಲ್ಲಿ ನಯವಾಗಿ ಎಲ್ಲ ಅಂಶಗಳನ್ನು ತಿಳಿಸಿ ಪಾಂಡವರಿಗೆ ಐದು ಹಳ್ಳಿಗಳನ್ನಾದರೂ ಕೊಡಬೇಕೆಂದು ಸೂಚಿಸುವನು.* ಆದರೆ ಛಲದಂಕಮಲ್ಲನಾದ ಸುಯೋಧನನು ಆ ಮಾತಿಗೆ ಒಡಂಬಡದೆ ಯುದ್ಧವನ್ನೇ ಬೆಸೆದನು.

ಹೀಗೆ ತಾನು ಬಂದ ಸಂಧಾನ ಕಾರ್ಯ ಮುರಿದು ಬೀಳಲು ಶ್ರೀಕೃಷ್ಣ ಭೇದೋಪಾಯದ ಚಿಂತನೆಯೆಸಗಿದನು. ಕೌರವರ ಸೇನೆಯಲ್ಲಿ ಸಗ್ಗದಕಲಿ ಕರ್ಣನೆಂದರಿತು. ಅವನ ಹುಟ್ಟನ್ನು ತಿಳಿಸಿ ಪಾಂಡವರ ಕಡೆ ಸೇರುವಂತೆ ಮಾಡಲು ಬಗೆದನು. ಮಾನವ ಸಹಜವಾದ ದೌರ್ಬಲ್ಯಕ್ಕೆ ಕರ್ಣನೂ ಒಳಗಾಗಿ, ಸಹೋದರರೆಂದು ತಿಳಿದಮೇಲೆ ಪಾಂಡವರನ್ನು ಕೊಲ್ಲಲಾರನೆಂದು ಭಾವಿಸಿ ಅವನನ್ನು ಬರಸೆಳೆದು ರಥದಲ್ಲಿ ಕುಳ್ಳಿರಿಸಿಕೊಂಡು ಹುಟ್ಟಿನ ಗುಟ್ಟನ್ನು ಸ್ಪಷ್ಟಪಡಿಸಿ ಪಾಂಡವರ ಕಡೆ ಸೇರಬೇಕೆಂದು ಕೇಳಿದನು. ಆದರೆ ಕರ್ಣ ಮಿತ್ರದ್ರೋಹಿಯಾಗಲಾರ; ಸ್ವಾಮಿದ್ರೋಹಿಯೆನಿಸಲಾರ. ತಾನು ವೀರಮಾತೆ ಕುಂತಿದೇವಿಯ ಚೊಚ್ಚಲ ಮಗನೆಂಬುಂಶ ತಿಳಿದು ತನು ರೋಮಾಂಚನಗೊಂಡಿತು. ಆನಂದ ಭಾಷ್ಪ ತುಳುಕಿದುವು. ತುಮುಲಕ್ಕೆ ಸಿಕ್ಕಿಬಿದ್ದ ಕರ್ಣ ಒಂದು ನಿರ್ಧಾರಕ್ಕೆ ಬಂದು ಕೃಷ್ಣನಿಗೆ ಒಂದು ಅಭಿಪ್ರಾಯವನ್ನು ಸೂಚಿಸಿದನು. ಅದು ಹೀಗಿದೆ-

ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ ಯೇವ ಮಿಲ್ಲದಿವನಾ (ಯ್ವು)ದೋ ತಪ್ಪದೆ ಪೇಟಿಮೆಂಬ ಭೂ
ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ[1]

ಈ ರೀತಿ ಹೇಳುವಾಗ ತನಗೂ ಸುಯೋಧನನಿಗೂ ಇರುವ ಸ್ನೇಹವನ್ನೂ ಅಭಿಮಾನ ಪ್ರೀತಿ ವಿಶ್ವಾಸಗಳನ್ನು ಸೂಚಿಸಲಾಗಿದೆ. ಜಗತ್ತೇ ತನ್ನನು ತಿರಸ್ಕರಿಸಿದಾಗ ತನ್ನನ್ನು ಆದರಿಸಿ ಅಂಗರಾಜ್ಯಾಭಿಷೇಕ ಮಾಡಿ ಸರ್ವರೊಳಗೆ ಮಾನ್ಯನೆನಿಸಿ ಪುರಸ್ಕರಿಸಿದವನು ಸುಯೋಧನನೇ ಹೊರತು ಪಾಂಡವರಲ್ಲ ! ಕೃಷ್ಣನಲ್ಲ!! ಹಡೆದ ತಾಯಿ ಕುಂತಿಯಲ್ಲ ! ! ! ಈಗ ತನ್ನಿಂದ ಪಾಂಡವರಿಗೆ ಹಾನಿಯುಂಟಾ

---

* ಪಂಪಭಾರತ ; ಆಶ್ವಾಸ : ೯- ಪದ್ಯ: ೪೩. ಪರಿಷತ್ಪ್ರಕಟಣೆ; ಸಂ. ಬೆಳ್ಳಾವೆ ವೆಂಕಟನಾರಣಪ್ಪ : ೧೯೩೧-

೧ ಪಂಪಭಾರತ: ಆಶ್ವಾಸ: ೯; ಪದ್ಯ: ೬೯.

ದೀತೆಂದು ತನ್ನನ್ನು ಒಲಿಸಿಕೊಳ್ಳುವ ಸಂಚು ಹೂಡಿದ್ದಾನೆ ಧರ್ಮ ಸಂಸ್ಥಾಪನಾಚಾರ್ಯ ಕೃಷ್ಣ. ತನ್ನನ್ನು ಇದುವರೆಗೂ ಕಿತ್ತು ತಿನ್ನುತ್ತಿದ್ದ ಜನ್ಮ ರಹಸ್ಯವನ್ನು ಬಿಚ್ಚಿಟ್ಟಿದ್ದಾನೆ. ಈಗ ತನ್ನ ಕರ್ತವ್ಯವೆಂದರೆ ತನ್ನ ಸ್ವಾಮಿ–ಗೆಳೆಯನ ಪರವಾಗಿ ಅಂತರನ್ನು ಇಱಿದು ಋಣತೀರಿಸುವುದು. ಆದುದರಿಂದ ಸುಯೋಧನನನ್ನು ಬಿಟ್ಟು ಬರಲಾರೆನೆಂದು ಹೇಳುವಲ್ಲಿ ಈ ಮಾತುಗಳನ್ನು ಹೇಳಿದ್ದಾನೆ. ಈ ಪದ್ಯದಲ್ಲಿ ಅವರಿಬ್ಬರ ನಡುವಣ ಮೈತ್ರಿಯ ಶಕ್ತಿ, ಕರ್ಣನ ಸ್ನೇಹನಿಷ್ಠೆ, ಸ್ವಾಮಿನಿಷ್ಠೆ, ವ್ಯಕ್ತವಾಗಿವೆ.

ಈ ಪದ್ಯದ ಬಗೆಗೆ ಅನೇಕ ಅಭಿಪ್ರಾಯಗಳು, ಅನೇಕ ವ್ಯಾಖ್ಯಾನಗಳು ಇವೆ. ಎಲ್ಲಾ ಅಭಿಪ್ರಾಯ, ವ್ಯಾಖ್ಯಾನವನ್ನು ತಿಳಿಸಿ, ಅವುಗಳಲ್ಲಿನ ಸಾರಾಸಾರ ಅಂಶಗಳನ್ನು ವಿವೇಚಿಸಿ ನಮ್ಮ ಸ್ಪಷ್ಟ ಅಭಿಪ್ರಾಯವನ್ನು ನಿರೂಪಿಸುವ ನೈಜ ಪ್ರಯತ್ನವನ್ನು ಮಾಡಲಾಗಿದೆ.

ದಿ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು ಇದರ ಅರ್ಥ ವಿವರಣೆ ಹೇಳುತ್ತಾ "ಅಂತಃಪುರದೊಳಗೊಮ್ಮೆ ಭಾನುಮತೀ ದುರ್ಯೋಧನರು ನೆತ್ತವನ್ನಾಡುತ್ತಿದ್ದರು. ನೋಟಕನಾಗಿ ಈ ಕರ್ಣನೊಬ್ಬನೇ ಸನ್ನಿಧಿಗೊಂಡಿದ್ದನು. ಆಗ ನಡೆದ ವ್ಯತಿಕರವನ್ನವಧಾನಿಸಿರಿ :

'ನೆತ್ತವನಾಡಿ ಭಾನುಮತಿ ಸೋಲ್ತ'ಳು. 'ಸೋಲಮು ನೀವುದೆಂದು-
ಭೂಪೋತ್ತಮನು-ಕಾಡು

ತ್ತಿ'ದ್ದನು. ಆ ಕಾಟಕ್ಕೊಳಗಾದ ರಾಣಿಯು 'ಲಂಬಣಂಪಱಿ'ದುದು.
'ಮುತ್ತಿನ ಕೇಡನೆ

ನೋಡಿ ನೋಡಿ ಬುಳ್ಕು'ತ್ತಿದ್ದಳಾಕೆ. ಕೇಳೀಪ್ರಿಯನಾದರಸನು 'ಏವ
ವಿಲ್ಲದೆ' 'ಇವಂ'

(ಈ ಮುತ್ತುಗಳನ್ನು) ತನಗೊದಗಬೇಕಾಗಿದ್ದ ಪಣವನ್ನಾಗಿ 'ಆ
[ಯ್ವು]ದೊ ತಪ್ಪದೆ

ಪೇಱಿಮೆಂ'ದು ಕೇಳಿದನು. ಹಾಗೆ ಶುದ್ಧಾಂತರಂಗ ವಿಶ್ವಾಸಯುತ-
ನಾದ

'ಭೂಪೋತ್ತಮನಂಬಿಸುಟ್ಟಿರದೆ ನಿಮ್ಮೊಳಿ ಪೊಕ್ಕೊಡೆ' ಕರ್ಣನಿವನು
'ಬೇಡನಲ್ಲನೇ?'[೨]

೨ ನಾಡೋಜಪಂಪ: ಲೇ. ಮುಳಿಯತಿಮ್ಮಪ್ಪಯ್ಯ; ೧೯೩೮, ಪುಟ ೪೬೯.

ಅವರೇ ಇದೇ ಅಭಿಪ್ರಾಯದ ಅಡಿ ಟಿಪ್ಪಣಿಯಲ್ಲಿ 'ಅ(ಯ್ಯು)ದೋ' ಎಂದು. ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅಚ್ಚಾದ ಪುಸ್ತಕದಲ್ಲಿದೆ. ಸರ್ವ ಮಾತೃಕೆಗಳಲ್ಲೂ 'ಅವುದೋ' ಎಂದೇ ಇರುವುದೆಂದು ಅಡಿಟಿಪ್ಪಣಿಯಿಂದಲೂ ತಿಳಿದುಬರುತ್ತಿದೆ. ಆದುದರಿಂದ ಆ ಪಾಠವೇ ಸಾಧುವಾಗಿರಬೇಕೆಂದು ನಮಗೂ ಸಂದೇಹವಿದೆ."[೧]

ಇದರ ತಾತ್ಪರ್ಯವನ್ನು ಅವರೇ ಹೀಗೆ ಹೇಳಿದ್ದಾರೆ. "ಕೆಳಗೆ ಲಂಬಣದ ಮುತ್ತುಗಳೆಲ್ಲವೂ ಬಿದ್ದಿದ್ದುವು. ಆ ಮುತ್ತುಗಳೊಳಗೆ ಗುರುತುವಡೆದ 'ಅವುದೊ' ಒಂದು ಮುತ್ತನ್ನಾಕೆ ಒತ್ತಿಟ್ಟುದಾಗಿರಬೇಕು. ಅದನ್ನವಳು ಸೋತಮೇಲೂ ಕೊಡದುದರಿಂದಲೆ ಆ ಕಾಟಕ್ಕೆ ಪ್ರಾರಂಭವಾಯಿತು. ಆ ನಿರ್ದಿಷ್ಟಮಣಿಯ ಗುರುತಿನ ಹೊಲಬುಗಾದೆ ಮಣಿಸಮೂಹವನ್ನೀಕ್ಷಿಸಿ 'ಅವುದೊ (ಅವುದು + ಓ?) ತಪ್ಪದೆ ಇವಂ (ಈ ಮುತ್ತುಗಳನ್ನು) ಪೇೞಿಂ'–ಎಂದರೆ ನಿರ್ದಿಷ್ಟಮಣಿ ಯಾವುದೆಂದು ತಪ್ಪದೆ (ಬಿದ್ದುವುಗಳನ್ನೆಲ್ಲವನ್ನೂ ಪರಿಶೀಲಿಸಿ) ಹೇಳಿರಿ' ಎಂದು ಭಾವವು."[೨] ಎಂದು ತಿಳಿಸಿದ್ದಾರೆ. ಇದು ಸಂಪೂರ್ಣವಾಗಿ ತಪ್ಪುಗ್ರಹಿಕೆ ಎಂದೇ ನಮ್ಮ ಭಾವನೆ.

ಪಂಪ ಭಾರತವನ್ನು ಪರಿಷ್ಕರಿಸಿ ಸಂಪಾದಿಸುತ್ತಾ ಅದರ ಉಪೋದ್ಘಾತದಲ್ಲಿ ದಿ. ಬೆಳ್ಳಾವೆ ವೆಂಕಟನಾರಣಪ್ಪನವರು ಆಗ್ಗೆ ಸರ್ಕಾರದ ಟೆಕ್ಸ್ಟ್‌ಬುಕ್ ಕಮೀಟಿಯ ಕಾರ್ಯದರ್ಶಿ ಮ॥ ರಾ॥ ಎ. ಎನ್. ನರಸಿಂಹಯ್ಯ ಬಿ.ಎ.ಎಲ್.ಟಿ. ಅವರಿಗೆ ಗ್ರಂಥವನ್ನು ಕಳುಹಿಸಿದ್ದರು. ಇದರ ಬಗೆಗೆ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್‌ಬಹಾದ್ದೂರ್ ಆರ್. ನರಸಿಂಹಾಚಾರ್ಯ, ಮ॥ ರಾ॥ ಬಿ. ಎಂ. ಶ್ರೀ, ಶ್ರೀ ಬಿ. ಕೃಷ್ಣಪ್ಪನವರು. ಡಿ. ವಿ. ಜಿ.. ಬಿ. ರಾಮರಾವ್, ಶಾಂತಿರಾಜ ಶಾಸ್ತ್ರಿಗಳು. ಕಾನಕಾನಹಳ್ಳಿ ವರದಾಚಾರ್ಯರು ಮೊದಲಾದ ವಿದ್ವಾಂಸರ ಸಲಹೆ, ಅಭಿಪ್ರಾಯಗಳನ್ನು ಸ್ವೀಕರಿಸಿ, ಸರ್ವಮಾನ್ಯವಾದಂತಹ ಪಾಠಗಳನ್ನಿಟ್ಟು ಪುಸ್ತಕವನ್ನು ಪ್ರಕಟಿಸಿದರು. ಈ ಪುಸ್ತಕ ಪ್ರಕಟಣೆಯಲ್ಲಿ ಇಷ್ಟು ಆಸಕ್ತಿವಹಿಸಿ ಶುದ್ಧವಾದುದನ್ನು ಆರಿಸಿ ಪ್ರಕಟಿಸಿರುವಾಗ ಇದರಲ್ಲಿ ಪಾಠಾಂತರವಿದೆಯೆಂದು ಹೇಳುವುದರಲ್ಲಿ ಅರ್ಥವಿಲ್ಲ. ಇದನ್ನು ಪ್ರಕಟಿಸುವಾಗ. ಪರಿಷ್ಕರಿಸುವಾಗ ಅರ್ಥಪುಷ್ಟಿಗೆ ಬಾಧಕವಾಗದಂತೆ ಎಚ್ಚರ ವಹಿಸಲಾಗಿದೆ ಎಂದು ನಾವು ಮನಗಾಣಬೇಕಾದ ಅಂಶ.

ಶ್ರೀ ತಿಮ್ಮಪ್ಪಯ್ಯನವರು ಹೇಳಿದಂತೆ ಯಾವುದೋ ಒಂದು ಮುತ್ತನ್ನು ಪಣವಾಗಿ ಇಟ್ಟಿಲ್ಲ. ಮುತ್ತಿನ ಹಾರವನ್ನೇ ಇಟ್ಟಿದ್ದಾಳೆ. ಹಾರವನ್ನು ಬಿಚ್ಚಿ ಅದರೊಳಗಿನ ಒಂದು ಮುತ್ತನ್ನು ಮಾತ್ರ ಪಣವಾಗಿಡುವ ಅಂಶ ಸಾಧುವಲ್ಲ. ಕಂಡಿಲ್ಲ, ಕೇಳಿಲ್ಲ. ಆದುದರಿಂದ ಬೆಳ್ಳಾವೆಯವರು ಬಳಸಿರುವ "ಆಯ್ದುದೋ" ಎಂಬ ಪಾಠವೇ ಸರಿಯೆಂದು ನಮ್ಮ ಅಭಿಪ್ರಾಯ. ಇತ್ತೀಚಿಗೆ ನನಗೆ ಬರೆದ ಪತ್ರವೊಂದರಲ್ಲಿ ಆಚಾರ್ಯ ಡಿ. ಎಲ್. ಎನ್. ರವರೂ ಈ ಪಾಠವೇ ಸರಿಯಾದುದೆಂದು ತಿಳಿಸಿದ್ದಾರೆ.

---

೧ ನಾಡೋಜ ಪಂಪ : ಪುಟ, ೪೬೯; ಅಡಿಟಿಪ್ಪಣಿ : ೨.

೨. ಅದೇ: ಪುಟ, ೪೬೯-೭೦ ರ ಅಡಿಟಿಪ್ಪಣಿ.

ಅಲ್ಲದೆ ಈ ಶಬ್ದದ ಹಿಂದೆ "ಯೇವಮಿಲ್ಲದಿವನ್" ಎಂಬ ಶಬ್ದರೂಪವಿದೆ. ಇವನ್ (ಇವುಗಳನ್ನು) ಎಂಬ ಮಾತು ಬಂದು ಅದರ ಮುಂದೆ ಅಪುದೋ (ಅವುದು ಓ ?) ಎಂಬ ಮಾತು ಬರುವುದು ವ್ಯಾಕರಣಬದ್ಧವಲ್ಲ. ಸೂಕ್ಷ್ಮ ಪ್ರಜ್ಞೆಯುಳ್ಳ ಪ್ರತಿಭಾವಂತ ಮಹಾ ಕವಿ–ತಾನು ಎಷ್ಟೇ ಆರ್ಷ ಪ್ರಯೋಗವೆಂದರೂ–ಯೇವಮಿಲ್ಲದಿವನಾಪುದೋ" ಎಂದು ಹೇಳಿ "ಆವುದು ಓ ?" ಎಂಬ ಪ್ರಶ್ನಾರ್ಥಕ ಧ್ವನಿಯಿಟ್ಟಿರಲಾರ. ಆದುದರಿಂದ ನಮ್ಮ ದೃಷ್ಟಿಗೆ "ಆಯ್ವುದೋ" ಎಂಬ ಶಬ್ದ ಆಯ್ದುಕೊಳ್ಳುವುದೋ–ಆಯ್ದುಕೊಡುವುದೋ ಎಂಬ ಅರ್ಥದಲ್ಲಿ ಬಳಸಲ್ಪಟ್ಟಿದೆ ಎಂದು ನಮ್ಮ ಭಾವನೆ.

ನೆತ್ತವನ್ನಾಡಿದವರು ಭಾನುಮತಿ–ಕರ್ಣ; ಭಾನುಮತಿ–ದುರ್ಯೋಧನರಲ್ಲ. ದುರ್ಯೋಧನ ಇಲ್ಲಿ ಸಾಕ್ಷಿ. ಹೀಗೆ ಅರ್ಥ ಮಾಡಿದಾಗ ಮಾತ್ರ ಇಲ್ಲಿನ ಸಂದರ್ಭಕ್ಕೆ ಧ್ವನಿಗೆ ಹೆಚ್ಚು ಪೋಷಣೆ ಬರುತ್ತದೆ. ದುರ್ಯೋಧನ–ಭಾನುಮತಿ (ಪತಿ–ಸತಿ) ಯರು ಪಗಡೆಯಾಡಿದುದರಲ್ಲಿ ವಿಶಿಷ್ಟ ಭಾವನೆಯೇನೂ ಇಲ್ಲ. ಕರ್ಣ, ದುರ್ಯೋಧನನ ಗೆಳೆಯ, ಆಪ್ತ, ಭಾನುಮತಿಗೆ ಹೊರತಲ್ಲ ಎಂಬ ಭಾವನೆಗೆ ಅವಕಾಶವಿದ್ದು ಸಲುಗೆ ಹೆಚ್ಚು ಎಂಬ ಅಂಶ ವ್ಯಕ್ತಗೊಳ್ಳಬೇಕು. ಆದುದರಿಂದ ಭಾನುಮತಿ–ಕರ್ಣರೇ ಪಗಡೆ ಯಾಡುತ್ತಿದ್ದರೆಂದು ದುರ್ಯೋಧನನಲ್ಲವೆಂದೂ ಅರ್ಥಮಾಡುವುದು ಹೆಚ್ಚು ಸಮಂಜಸವಾದ ವಿವರಣೆಯೆನಿಸುತ್ತದೆ.

ಹೀಗೆಂದು ಅರ್ಥಮಾಡಿಕೊಂಡ ಮೇಲೆ "ಸೋಲಮನೀವುದೆಂದು" ಕಾಡಿದವನು ಕರ್ಣನೇ. ಶ್ರೀ ತಿಮ್ಮಪ್ಪಯ್ಯನವರು "ಭೂಪೋತ್ತಮನು" ಎಂಬ ವಿಶೇಷಣವನ್ನು ಬಳಸಿದ್ದಾರೆ. ಇದು ಅನಾವಶ್ಯಕವಾದುದಾಗಿದೆ. ಕಾಟಕ್ಕೆ ಒಳಗಾದ ಮಾತ್ರಕ್ಕೆ ಲಂಬಣ ಹರಿಯುವುದಿಲ್ಲ. ಯಾರಾದರೂ ಹಿಡಿದೆಳೆದಿರಬೇಕು. ಬಹುಶಃ ಅದು ಕರ್ಣ. ಇಲ್ಲಿ ಬಳ್ಕಿದವರು ಕರ್ಣನೇ. ಭಾನುಮತಿಯಲ್ಲ. ಆಕೆ ಬಳ್ಕುವ ಕಾರಣವೂ ಇಲ್ಲ. ಸಾಮ್ರಾಟನ ಇದಿರು ಸಾಮ್ರಾಜ್ಞಿಯ ಕೊರಳಿಗೆ ಕೈಯಿಟ್ಟು ಮುತ್ತಿನ ಹಾರವನ್ನು ಹಿಡಿದೆಳೆದು ಮುತ್ತುಗಳನ್ನು ಹಾಳುಮಾಡಿದ್ದಾನೆ. ಇದು ಅಸಾಧಾರಣವಾದ ಅಪವಾದ. ಇಂತಹ ಅಕಾರ್ಯಮಾಡಿದುದರಿಂದ ಕರ್ಣನೇ ತನ್ನ ಕೃತ್ಯಕ್ಕೆ ಹೇಸಿ ನಡುಗಿದನು (ಬಳ್ಕಿದನು) ಎಂದು ಅರ್ಥಮಾಡಬೇಕು.

ಶ್ರೀ ರಂಗಾಚಾರ್‌ರವರು ತಮ್ಮ ಲೇಖನವೊಂದರಲ್ಲಿ ಈ ಪದ್ಯದ ಭಾವವನ್ನು "ದುರ್ಯೋಧನನು ಭಾನುಮತಿಯೊಡನೆ ಪಗಡೆಯಾಡುತ್ತಿರುವನು. ಅವಳು ಸೋತು (ಹೋಗುವಳು, ಸೋಲವನ್ನು ಕೊಡಬೇಕೆಂದು ಅವನು ಅವಳನ್ನು ಹಿಡಿದು ಕಾಡುವನು. ಆಗ ಅವಳ ಮುತ್ತಿನಹಾರವು ಕಿತ್ತುಹೋಗುವುದು. ಅವಳು ಇದೆಂತಹ ಅವಲಕ್ಷಣದ ಚಿಹ್ನೆಯೆಂದು ನೊಂದು ಆ ಮುತ್ತುಗಳನ್ನು ಆಯುತ್ತಿರುವಳು. ಆಗ ದುರ್ಯೋಧನನು ಪಕ್ಕದಲ್ಲಿ ಕುಳಿತಿರುವ ಕರ್ಣನನ್ನು ನೋಡಿ "ಇಗೋ ಸೋತುಹೋಗಿ

ನಾಚಿಕೆ ಇಲ್ಲದೆ ಮುತ್ತನ್ನು ಆಯುತ್ತಿರುವಳು. ಇದು ನ್ಯಾಯವೇ ನೀವೇ ಹೇಳಿ" ಎಂದು ಮಧ್ಯಸ್ಥಿಕೆಗೆ ಕರೆಯುವನು. ಆಹಾ ! ಇದೆಂತಹ ಸನ್ನಿವೇಶ ! ಅಂತಃಪುರ ! ಚಕ್ರವರ್ತಿ ಚಕ್ರವರ್ತಿನಿಯರ ಪ್ರಣಯಕಲಹದ ಸಮಯ ! ಅಲ್ಲಿಗೆ ಕರ್ಣನ ಪ್ರವೇಶ ? ಅಷ್ಟೇ ಅಲ್ಲ ದಂಪತಿಗಳಿಗವನು ಮಧ್ಯಸ್ಥಗಾರ. ದುರ್ಯೋಧನನಿಗೆ ಕರ್ಣನಲ್ಲಿರುವ ವಿಶ್ವಾಸವನ್ನಳೆಯಲು ಇದಕ್ಕಿಂತಲೂ ಹೆಚ್ಚಿನ ಅಳತೆಗೋಲು ಸಿಕ್ಕದು."[೫] ಎಂದು ವಿವರಿಸಿದ್ದಾರೆ.

ಶ್ರೀ ರಂಗಾಚಾರ್ಯರು ಶ್ರೀ ತಿಮ್ಮಪ್ಪಯ್ಯನವರನ್ನು ಅನುಸರಿಸಿ ಪಗಡೆಯಾಟ ಭಾನುಮತಿ–ದುರ್ಯೋಧನರ ನಡುವೆ ನಡೆಯಿತೆಂದು ಹೇಳಿದ್ದಾರೆ. ಇದರಲ್ಲಿ ಹೆಚ್ಚಿನ ಔಚಿತ್ಯವೇನೂ ಇಲ್ಲವೆಂದು ಆಗಲೇ ತಿಳಿಸಿಯಾಗಿದೆ. ಇವರು "ಏವ" ಶಬ್ದಕ್ಕೆ "ನಾಚಿಕೆ" ಎಂದು ಅರ್ಥಮಾಡಿದ್ದಾರೆ. ಆದರೆ ಸಂದರ್ಭಕ್ಕೆ ಈ ಅರ್ಥ ಉಚಿತವಲ್ಲ. ಸರ ಹರಿದು ಮುತ್ತು ಚೆಲ್ಲಾಪಿಲ್ಲಿಯಾಗಿರುವಾಗ ಭಾನುಮತಿ ಅವುಗಳನ್ನು ಆಯು ವುದೇಕೆಂಬುದು ಸ್ಪಷ್ಟವಲ್ಲ. ಬಿಕ್ಕಿದವರಾರು ? ಕರ್ಣನೇ ? ಭಾನುಮತಿಯೇ ? ಕಾರಣವೇನು ? ಎಂಬಂಶಗಳು ಈ ಅಭಿಪ್ರಾಯದಲ್ಲಿ ಸ್ಪಷ್ಟವಾಗಿಲ್ಲ. ಮುತ್ತಿನ ಹಾರ ಹರಿದುದು ಅವಲಕ್ಷಣವೇಕಾಗಬೇಕೋ ನಮಗೆ ಅರ್ಥವಾಗಿಲ್ಲ. ದಂಪತಿಗಳಿಬ್ಬರ ಪ್ರೇಮ ಕಲಹದ ನಡುವೆ ತಮಗೆ ಹತ್ತಿರದವರೂ ಆಪ್ತರಾದವರನ್ನು ಮಧ್ಯಸ್ಥಿಕೆಗೆ ಕರೆಯುವುದು ಸರ್ವೇಸಾಮಾನ್ಯವಾದುದು. ಇದಕ್ಕಿಂತಲೂ ಮಿಗಿಲಾದ ವಿಶಿಷ್ಟವಾದ ಅಳತೆಗೋಲು ಈ ಇಬ್ಬರ ಮೈತ್ರಿಯನ್ನು ಅಳೆಯಲು ಸಿಗುತ್ತದೆ.

ಕುವೆಂಪು ಈ ವಿಷಯವನ್ನು ಹೀಗೆ ವಿವರಿಸುತ್ತಾರೆ. "ಹಿಂದೊಂದು ದಿನ ಅಂತಃಪುರದಲ್ಲಿ ತನ್ನ ಸ್ನೇಹಿತನ ಪಟ್ಟಮಹಿಷಿಯೊಡನೆ ಪಣವೊಡ್ಡಿ ನೆತ್ತವಾಡು ತ್ತಿದ್ದ. ಸೋತ ಭಾನುಮತಿ ಸೋಲವನ್ನು ಕೊಡದೆ ತಪ್ಪಿಸಿಕೊಳ್ಳಲೆಳಸಿದುದೂ, ಆಗ ಕಲಹದಲ್ಲಿ ಪಣವಾಗಿ ಒಡ್ಡಿದ್ದ ಅವಳ ಮುತ್ತಿನ ಹಾರ ಹರಿದು ಹೋಗುವುದೂ, ಅದನ್ನು ನೋಡಿ ಏನು ಅಚಾತುರ್ಯವಾಗಿ ಹೋಯಿತು ಎಂದು ತಾನು ಅಳುಕುತ್ತಿದ್ದುದೂ, ದುರ್ಯೋಧನ ಮುತ್ತು ಚೆಲ್ಲಿರುವುದನ್ನು ಕರ್ಣನ ಮನಸ್ಥಿತಿಯನ್ನು ಕಂಡು "ಇವನಾಯ್ವುದೋ ತಪ್ಪದೆ ಪೇೞಿಮ್" ಎಂದು ಗಮನವನ್ನು ಮುತ್ತನ್ನು ಆಯುವ ಕಡೆಗೆ ಹರಿಸಿ ಅದುದು ಅಚಾತುರ್ಯವೇ ಅಲ್ಲ ಎಂಬಂತೆ ವರ್ತಿಸಿ ಅವನ ಅಳುಕನ್ನು ಪರಿಹರಿಸಿದುದೂ, ಈ ಎಲ್ಲ ಚಿತ್ರವೂ ಕರ್ಣನ ಸ್ಮೃತಿ ಪಟಲದ ಮೇಲೆ ಹಾಯ್ದು ಹೋಗುತ್ತವೆ. ಇಲ್ಲಿ ವ್ಯಕ್ತವಾಗುವ ರಾಧೇಯನ ಸ್ನೇಹ ಶಕ್ತಿಯ ಹೊಡೆತಕ್ಕೆ ರಾಜತಂತ್ರಜ್ಞ ಕೃಷ್ಣನ ಭೇದೋಪಾಯ, ಕೌಟಿಲ್ಯ, ಕುಯುಕ್ತಿಗಳೆಲ್ಲ ನುಚ್ಚುನೂರಾಗುತ್ತವೆ."[೬]

---

೫. ಪ್ರಬುದ್ಧ ಕರ್ನಾಟಕ. ಸಂಪುಟ: ೨೩: ಸಂಚಿಕೆ: ೪; ಪುಟ: ೨೮.
೬. ಅಭಿನಂದನೆ : ಪು : ೪೫೭.

ಇಲ್ಲಿ ನೆತ್ತವನಾಡಿದವರು ಭಾನುಮತಿ–ಕರ್ಣ ಎಂಬ ಅಂಶ ಸ್ಪಷ್ಟವಿದೆ. ಮುತ್ತಿನ ಕೇಡನ್ನು ನೋಡಿ ಅಳುಕಿನಿಂದ ನಡುಗುತ್ತಿದ್ದವನು ಕರ್ಣ ಎಂಬ ಸೂಚನೆ ಇದೆ. "ಇವನಾಯ್ಚುದೋ ತಪ್ಪದೆ ಪೇೞಿಂ" ಎಂಬ ಮಾತಿನ ಅರ್ಥ ಸ್ಪಷ್ಟವಾಗಿಲ್ಲ.

ಸಾಹಿತ್ಯ ಜಿಜ್ಞಾಸುಗಳಿಗೆ ಪಿತಾಮಹರಂತಿರುವ ಆಚಾರ್ಯ ಡಿ. ಎಲ್. ನರಸಿಂಹಾಚಾರ್ಯರು ಈ ವಿಷಯವನ್ನು ಕುರಿತು ನನಗೆ ಬರೆದ ಪತ್ರದಲ್ಲಿ ಈ ರೀತಿ ಅಭಿಪ್ರಾಯ ಪಡುತ್ತಾರೆ. "ನೆತ್ತವನ್ನು ಆಡಿದವರು ಭಾನುಮತಿ–ಕರ್ಣ; ದುರ್ಯೋಧನ ಪ್ರೇಕ್ಷಕನಾಗಿದ್ದ; ಸ್ಥಳ ಭಾನುಮತಿಯ ಅಂತಃಪುರವಿರಬಹುದು. ಸೋತವಳು ಭಾನುಮತಿ. ಅವಳ ಮುತ್ತಿನ ಸರವನ್ನು ಹಿಡಿದೆಳೆದವನು ಕರ್ಣ. ಅದು ಹರಿದು ಹೋಗಿ ಮುತ್ತುಗಳೆಲ್ಲಾ ಚೆಲ್ಲಾಪಿಲ್ಲಿಯಾಗಿ ಹರಡಿದುವು. ಆಗ ಕರ್ಣನಿಗೆ ಅರಿವುಂಟಾಗುತ್ತದೆ. ತನ್ನ ಸ್ವಾಮಿ ಏನು ಹೇಳುವನೋ ಎಂದು ಅವನು ಹೆದರಿ ನಡುಗುತ್ತಿದ್ದಾನೆ. ಆಗ ದುರ್ಯೋಧನ ಏತಕ್ಕೆ ಈ ನಡುಕ, ಮುತ್ತುಗಳನ್ನು ಆರಿಸಿ ಕೊಡಲೆ ಎಂದು ಕೇಳುವನು. ಇಂಥ ಸ್ವಾಮಿಯನ್ನು ಬಿಟ್ಟು ಹೇಗೆ ಬರಲಿ ನಾನು ಪಾಂಡವರ ಪಕ್ಷಕ್ಕೆ ಎಂದ ಕರ್ಣ. ಇದು ನನ್ನ ಅಭಿಪ್ರಾಯ. ಈ ವಿಷಯದ ಬಗೆಗೆ "ಆಯ್ವುದೋ" ಸರಿಯಾದ ಪಾಠ[೭].

ಈ ವಿಷಯವಾಗಿ ಚರ್ಚೆ ಮಾಡಬೇಕೆಂದು ಕೇಳಿದಾಗ ಆಸಕ್ತಿಯಿಂದ ನನ್ನನ್ನು ಪ್ರೋತ್ಸಾಹಿಸಿ, ತಮ್ಮ ಅಭಿಪ್ರಾಯವನ್ನು ಹೇಳುತ್ತಾ ಪ್ರೊ. ಜಿ. ವೆಂಕಟ ಸುಬ್ಬಯ್ಯನವರು ಈ ರೀತಿ ಹೇಳಿದರು. "ಭಾನುಮತಿ–ಕರ್ಣ ಪಗಡೆಯಾಡಿರುವುದು ಸರಿಯಾದರೂ ಕರ್ಣ ಸರವನ್ನು ಹಿಡಿದೆಳೆಯುವಷ್ಟು ಒರಟನಾಗಿರಲಾರ. ಕಾಡುವಾಗ ಭಾನುಮತಿ ಸರವನ್ನು ಕೊಡೆನೆಂದು ಮುರುಕ ಮಾಡುವಾಗ ಸರ ಹರಿದಿರಬೇಕು. ದುರ್ಯೋಧನ ಅಲ್ಲಿದ್ದನೇ–ಆ ನಂತರ ಬಂದನೇ" ಎಂಬ ಸಮಸ್ಯೆಯನ್ನು ಮುಂದೂಡಿದರು.

ಈ ಎಲ್ಲಾ ಅಭಿಪ್ರಾಯಗಳನ್ನೂ ಗಮನಿಸಿ ನನ್ನದೇ ಅಭಿಪ್ರಾಯವನ್ನು ಸಹೃದಯರ ಮುಂದೆ ಇಡಬಯಸುತ್ತೇನೆ.

ಪದ್ಯವನ್ನು ಓದಿದೊಡನೆಯೆ ಇಷ್ಟು ಅಂಶಗಳು ಸ್ಪಷ್ಟವಾಗಿ ಹೊಳೆಯುತ್ತವೆ. ಈ ಪದ್ಯದಲ್ಲಿ ಹಿಂದೆ ನಡೆದ ಘಟನೆಯನ್ನು ಸ್ಪಷ್ಟವಾಗಿ ಹೇಳುತ್ತಾನೆ. ಇಲ್ಲಿ ಬಳಸಿರುವ ಧ್ವನಿಯಲ್ಲಿ ಕರ್ಣನ ಜೀವನದಲ್ಲಿ ಕರ್ಣ–ದುರ್ಯೋಧನರ ಸ್ನೇಹವನ್ನು ಮೂಸೆಯಲ್ಲಿಕ್ಕಿ ಪುಟಗೊಳಿಸುವ ಘಟನೆ ಇದು ಎಂಬ ಅಂಶ ವ್ಯಕ್ತವಾಗಿದೆ. ಇಲ್ಲಿ ಎರಡು ರೀತಿಯಲ್ಲಿ ಅರ್ಥಮಾಡಲು ಸಾಧ್ಯವಿದೆ. ಆದರೆ ಈ ಮಾತು ಹೇಳಿರುವ ಸನ್ನಿವೇಶ, ಹೇಳಿದ ವ್ಯಕ್ತಿ, ಕೇಳಿದ ವ್ಯಕ್ತಿ, ಅಭಿಪ್ರಾಯವನ್ನು ಗಮನಿಸಿ ಈ ಪದ್ಯಕ್ಕೆ ಈ ರೀತಿ ಅರ್ಥ

---

೭. ದಿನಾಂಕ ೨೫-೬-೧೯೬೯ ರಂದು ಬರೆದ ಪತ್ರ.

ಮಾಡಬಹುದು. "ಭಾನುಮತಿ–ಕರ್ಣ ಇಬ್ಬರೂ ಪಗಡೆಯಾಡುತ್ತಿದ್ದರು. ಪಗಡೆ ಆಟಕ್ಕೆ ಪಣವಾಗಿ ಮುತ್ತಿನ ಹಾರವನ್ನು ಒಡ್ಡಿದರು. ದುರ್ಯೋಧನ ಇವರಿಬ್ಬರ ಆಟಕ್ಕೆ ಸಾಕ್ಷಿಯಾಗಿ ಕುಳಿತಿದ್ದನು. ಭಾನುಮತಿ ಆಟದಲ್ಲಿ ಸೋತು, ಪಣವನ್ನು ಕೊಡಲು ನಿರಾಕರಿಸಿದಳು. (ಈ ನಿರಾಕರಣೆ ಸ್ತ್ರೀ ಸಹಜವಾದ ಆಭರಣಗಳ ಮೇಲಿನ ಆಸೆ ಇರಬಹುದು. ಅಲ್ಲದೆ ಸೋದರ ಸಮಾನನಾದವನಲ್ಲಿ ಸಲುಗೆಯೂ ಇರಬಹುದು.) ಕರ್ಣ ಕಾಡಿದನು. ಫಲಕಾರಿಯಾಗಲಿಲ್ಲ. ಆಗ ಕ್ಷತ್ರಿಯೋಚಿತವಾದ ವಿಜಯೋನ್ಮಾದಕ್ಕೆ ಒಳಗಾದ ಕರ್ಣ ಸರವನ್ನು ಹಿಡಿದೆಳೆದ. ಸರಹರಿದು ಮುತ್ತುಗಳು ಈಡಾಡಿದುವು. ಈಗೆ ಕರ್ಣನಿಗೆ ಅರಿವಾಗುತ್ತದೆ. ಆದುದರಿಂದ ತಾನು ಮಾಡಿದುದು ಅಕಾರ್ಯವೆಂಬ ಭಾವನೆಯಿಂದ ಬಳ್ಕುತ್ತಾನೆ (ಭಯದಿಂದ ತಲೆಬಾಗುತ್ತಾನೆ.).[೮] ಆಗ ದುರ್ಯೋಧನ ಯಾವುದೇ ವಿಧವಾದ ಭಿನ್ನಭಾವಗಳಿಗೆ ಎಡೆಗೊಡದೆ, ಸಂಶಯಗ್ರಸ್ಥನಾಗದೆ,[೯] "ಇವನಾಯ್ವುದೋ ತಪ್ಪದೆ ಪೇಳಿಂ" ಎಂದು ಕರ್ಣನನ್ನು ಕೇಳಿದ್ದಾನೆ. ಇಲ್ಲಿ "ತಪ್ಪದೆ ಪೇಳಿಂ" ಎಂಬ ಮಾತು ಬರಲು ಕರ್ಣನಿಗೆ ಮುತ್ತಿನ ಸರವೂ ಬೇಡ ಮತ್ತೇನು ಮಾತೂ ಬೇಡ. ಇಲ್ಲಿಂದ ಹೋದರೆ ಸಾಕು ಎನಿಸಿರಬೇಕು. ಆದುದರಿಂದ ಆರಿಸಿ ಕೊಡಲೆ ತಪ್ಪದೆ ಹೇಳಿ ಎಂದಿದ್ದಾನೆ ಕವಿ. ಇಂತಹ ಭೂಪೋತ್ತಮನನ್ನು ಬಿಟ್ಟು ನಣ್ಪಿನ ನೆವದಿಂದ ಪಾಂಡವರಲ್ಲಿ ಸೇರಿದುದಾದರೆ ನಾನು ಜಗತ್ತಿನ–ಧರ್ಮದ–ದೃಷ್ಟಿಯಲ್ಲಿ ಬೇಡದವನಾಗುತ್ತೇನೆ. ನಿಕೃಷ್ಟನಾಗುತ್ತೇನೆ" ಎಂದು ಹೇಳಿದನೆಂಬುದು ಪದ್ಯದಲ್ಲಿನ ಭಾವನೆ.

ಪಗಡೆಯಾಟಕ್ಕೆ ಪಣವಿಟ್ಟುದಕ್ಕೆ ಸೂಚನೆಯನ್ನು ಕವಿ ಎಲ್ಲಿಯೂ ಕೊಟ್ಟಿಲ್ಲ. ಆದರೆ "Poetry must be Suggestive" ಎನ್ನುವಂತೆ ಕವಿ ಎಲ್ಲವನ್ನೂ ಹೇಳದೆ ತಾನು ಹೇಳುವ ಕೆಲವಂಶಗಳಿಂದ ಅನೇಕ ಸಂಗತಿಗಳನ್ನು ಕಲ್ಪಿಸಿಕೊಡಲು ಅವಕಾಶ ಮಾಡಿಕೊಟ್ಟಿರುತ್ತಾನೆ. ಇಲ್ಲಿಯೂ ಪಣವಿಟ್ಟರೆಂದು ಕಲ್ಪಿಸಿಕೊಳ್ಳಬೇಕಾಗುತ್ತದೆ.

ಈ ಪದ್ಯದಲ್ಲಿ ಗಮನಿಸಬಹುದಾದ ಸಮಸ್ಯೆಗಳು ಇಷ್ಟು. (೧) ಕರ್ಣನೇ ಮುತ್ತಿನ ಹಾರವನ್ನು ಹಿಡಿದೆಳೆದು ಕಿತ್ತನೆ ? (೨) ದುರ್ಯೋಧನ ಅಲ್ಲಿದ್ದನೆ, ಆ ನಂತರ ಬಂದನೆ ? (೩) "ಆಯ್ವುದೋ" ಶಬ್ದದ ಸ್ಪಷ್ಟವಾದ ಅರ್ಥವೇನು ? (೪) "ಪೇಳಿಂ" ಎಂಬುದರ ಔಚಿತ್ಯವೇನು ? (೫) ಬಳ್ಕಿದವರು ಯಾರು ? (೬) "ಬೇಡನಲ್ಲನೆ" ಎಂಬ ಶಬ್ದದ ನಿಖರವಾದ ಅರ್ಥವೇನು ? (೭) ಕರ್ಣನೇ ಭಾನುಮತಿಯೊಂದಿಗೆ ಪಗಡೆಯಾ

---

೮. ಬಳ್ಕು = ನಮನೇ. To bend. ಶಬ್ದಮಣಿದರ್ಪಣ. ಧಾತುಪ್ರಕರಣಂ. ೬೩. ಪುಟ : ೩೬೪. ಸಂ. ಎಫ್. ಕಿಟೆಲ್, ಮಂಗಳೂರು ೧೯೭೦.

೯. ಏವ ಎಂಬ ಶಬ್ದಕ್ಕೆ ಸಂಶಯರಹಿತ ವರ್ತನೆ, ಮಾತ್ಸರ್ಯವಿಲ್ಲದಿರುವಿಕೆ, ಬಿನ್ನಭಾವ ಎಂದು ಅರ್ಥವನ್ನು ಇಟ್ಟುಕೊಳ್ಳಲು (ಹೇವ > ಹ್ಯಾವ > ಏವ) ಸೂಚಿಸಿದ ಜಿ. ವೆಂ. ಎರೆಸೀಮೆಯವರಿಗೆ ಲೇಖಕ ಋಣಿ.

ಡಿದನೆಂದು ಹೇಳಿದರೆ ಅವನ "ಶೀಲ"ದ ಅನುಮಾನಕ್ಕೆ ಎಡೆಯಾಗುವುದಿಲ್ಲವೇ? ಎಂಬ ಸಮಸ್ಯೆಗಳು. ಇವುಗಳಿಗೆ ಈ ರೀತಿ ಸಮಾಧಾನವನ್ನು ಹೇಳಬಹುದು.

೧) ಕ್ಷತ್ರಿಯುವರಿಗೆ ಗೆಲುವನ್ನು ಸಂಪಾದಿಸಿದಾಗ ಮೈಮರೆಯುವುದು ಸ್ವಾಭಾವಿಕವಾದ ಸಂಗತಿ. ಆಗ ಅವರು ಏನೇನು ಮಾಡುವರು ಎಂಬುದು ಊಹೆಗೆ ನಿಲುಕದ ಅಂಶ. ಹೀಗಿರುವಾಗ ವೀರಮಾತೆ ಕುಂತಿಯ ಮಗನಾಗಿ ಸಹಜ ಕ್ಷತ್ರಿಯನೆನಿಸಿದ್ದ ಕರ್ಣನಿಗೆ ಉನ್ಮಾದವಾಗಿರುವುದು ಸಹಜವೇ ಆಗಿದೆ. ಇಲ್ಲಿ ಆಚಾರ್ಯ ಬಿ. ಎಂ. ಶ್ರೀಯವರ ಅಶ್ವತ್ಥಾಮನ್ ನಾಟಕವಲ್ಲಿ ಬರುವ "(ಸೇನಾಧಿಪತ್ಯಮೇ) ಕರ್ಣನ್, ಶೃಂಗಾರಮೇ ಕರ್ಣನ್" ಎಂಬ ಮಾತನ್ನು ನೆನಪುಮಾಡಿಕೊಳ್ಳಬಹುದು. ಸೋತ ಸೋಲವನ್ನು ಕೊಡೆನೆಂದು ಛಲದಂಕಮಲ್ಲ ಸಾಮ್ರಾಟನ ಸತಿ ನುಡಿದಾಗ ಉದ್ವೇಗಗೊಂಡ ಕರ್ಣ ತನ್ನ ಸುಪ್ತ ಚೇತನದಲ್ಲಿದ್ದ ಕ್ಷಾತ್ರಗುಣದಿಂದ ಅನೂಹ್ಯವಾಗಿ ಉತ್ತೇಜಿತನಾಗಿ ಸರವನ್ನು ಹಿಡಿದೆಳೆದಿರಲಿಕ್ಕೇಬೇಕು.

೨) ದುರ್ಯೋಧನ ಅಲ್ಲಿದ್ದನೆಂದರೇ ಅರ್ಥಪುಷ್ಟಿ ಹೆಚ್ಚುವುದು. ಸರಹಿಡಿದೆಳೆದ ನಂತರ ಬಂದನೆಂದರೆ ಸಮಂಜಸವೂ ಅಲ್ಲ, ಸೂಕ್ತವೂ ಅಲ್ಲ. ತನ್ನ ಎದುರಿನಲ್ಲೇ ಸರವನ್ನು ಹಿಡಿದೆಳೆದರೂ ಲೆಕ್ಕಕ್ಕೆ ತಾರದೆ ಬೇರೆ ಯಾವ ರೀತಿ ಸಂಶಯಭಾವನೆಗೂ ಎಡೆಗೊಡದೆ ಅವನನ್ನೇ ಹುರಿದುಂಬಿಸುವ ರೀತಿಯಲ್ಲಿ ವರ್ತಿಸಿದನೆಂದರೇ ಸರಿಹೊಂದುತ್ತದೆ. ಆದುದರಿಂದ ದುರ್ಯೋಧನನು ತನ್ನ ಸತಿ ಮತ್ತು ಸ್ನೇಹಿತ ಇಬ್ಬರ ನಡುವಣ ಆಟಕ್ಕೆ ತೀರ್ಪುಗಾರನಾಗಿ, ನೋಟಕನಾಗಿ ಕುಳಿತಿದ್ದನೆಂದು ವಿಚಾರಮಾಡುವಲ್ಲಿ ಬಾಧಕವೇನೂ ಇರಲಾರದೆಂದು ನಮ್ಮ ಅಭಿಪ್ರಾಯ.

೩) "ಆಯ್ವುದೋ" ಎಂದು ಕೇಳಿದವನು ಸುಯೋಧನ. ಆದರೆ ಅರ್ಥವೇನು? ಶ್ರೀ ಮುಳಿಯ ತಿಮ್ಮಪ್ಪಯ್ಯನವರ ಅಭಿಪ್ರಾಯವನ್ನು ಈ ಹಿಂದೆ ಚರ್ಚಿಸಲಾಗಿದೆ. ಶ್ರೀ ರಂಗಾಚಾರ್ಯರ ಅರ್ಥ ಸಂಪೂರ್ಣ ತಪ್ಪುಗ್ರಹಿಕೆ ಎಂಬುದು ನಮ್ಮ ಸ್ಪಷ್ಟ ಅಭಿಪ್ರಾಯ. ಕ್ಷತ್ರಿಯ ಸಹಜವಾದ ಉನ್ಮಾದಕ್ಕೆ ಒಳಗಾಗಿ ಸರವನ್ನು ಹಿಡಿದೆಳೆದುದು ಅಚಾತುರ್ಯವಾಯಿತೇದು ನಡುಗುತ್ತಿರುವ ಕರ್ಣನನ್ನು ಕುರಿತು ಈ ಮುತ್ತುಗಳನ್ನು ಆಯ್ದುಕೊಡಲೇ ಎಂದು ದುರ್ಯೋಧನನು ಕೇಳಿದನೆಂಬುದೇ ಇಲ್ಲಿನ ಸ್ಪಷ್ಟವಾದ ಅರ್ಥ.

೪) "ಪೇೞಿಂ" ಎಂದು ಬಹುವಚನದಲ್ಲಿ ನಿರ್ದೇಶಿಸಿದ್ದಾನೆ. ಕರ್ಣ ಗೆದ್ದವನು. ತನ್ನ ಸತಿ ಸೋತು ಪಣವನ್ನು ಸಲ್ಲಿಸಲು ಹಿಂತೆಗೆದಿದ್ದಾಳೆ. ಈ ಸಂದರ್ಭದಲ್ಲಿ ಕರ್ಣನ ವರ್ತನೆಯೇ ಸರಿ ಎಂದು ಪುಷ್ಟೀಕರಿಸುವಂತೆ ದುರ್ಯೋಧನ ತಾನು ಸಾಮ್ರಾಟನೆಂಬುದನ್ನು ಗಣನೆಗೆ ತಾರದೆ "ಇವನಾಯ್ವುದೋ ತಪ್ಪದೆ ಪೇೞಿಂ" ಎಂದು ಇಲ್ಲಿ ಯಾವ ಅಚಾತುರ್ಯವೂ ನಡೆಯಲಿಲ್ಲವೆಂದು ಹೇಳಲು ಈ ರೀತಿ ಗೌರವಸೂಚಕ ಬಹುವಚನ ಶಬ್ದವನ್ನು ಕವಿ ಬಳಸಿದ್ದಾನೆಂಬುದೇ ಇಲ್ಲಿನ ಔಚಿತ್ಯ.

೫) 'ಬಳ್ಕಿ'ದವರು ಕರ್ಣನೆಂದೇ ಹೇಳಬೇಕಾಗುತ್ತದೆ. ಭಾನುಮತಿ ನಡುಗಿದ ಳೆಂಬುದಕ್ಕೆ ಆಧಾರ ಕಡಿಮೆ. ಕ್ಷಾತ್ರಗುಣಬಂಧಿತನಾಗಿದ್ದ ಕರ್ಣ ಸಂಯಮವನ್ನು ಕಳೆದುಕೊಂಡು ಸರವನ್ನು ಹಿಡಿದೆಳೆದು ಮುತ್ತಿನ ಕೇಡನ್ನು ನೋಡಿ ತಪ್ಪಿನರಿವಾಗಿ ತನ್ನ ವರ್ತನೆಗೆ ಭಯವಿಹ್ವಲನಾಗಿ ತಲೆ ಬಾಗುತ್ತಾನೆ, ಎಷ್ಟೋ ಸೋದರ ಸಲುಗೆ ಇದ್ದರೂ ಸಾಮ್ರಾಟನ ಎದುರಿನಲ್ಲಿಯೇ ಸಾಮ್ರಾಜ್ಞಿಯ ಕೊರಳಿಗೆ ಕೈಯಿಟ್ಟು ಬೆಲೆ ಬಾಳುವ ಮುತ್ತಿನ ಸರವನ್ನು ಹಿಡಿದೆಳೆದುದು ಅಕಾರ್ಯವೆಂದು ಭಯಪಡುತ್ತಾನೆ, ನಡುಗುತ್ತಾನೆ. ಇಲ್ಲಿ ಬಳ್ಕು ಎಂದರೆ ವೈಯಾರವಲ್ಲ. ಭಯಗೂಡಿದ ತಲೆ ಬಾಗುವಿಕೆ.

೬) 'ಬೇಡನಲ್ಲನೆ' ಎಂದಾಗ ಪ್ರಾಣಿಗಳನ್ನು ಬೇಟೆಯಾಡಿ ಕೊಂದು ತಿಂದು ಬದುಕುವ ತುಚ್ಛವ್ಯಕ್ತಿ ಎಂಬರ್ಥ ಬರುತ್ತದೆ. ಆದರೂ ಧರ್ಮ ಬಾಹಿರನಾಗಿ—ಕರ್ತವ್ಯಚ್ಯುತನಾಗಿ—ಮಿತ್ರದ್ರೋಹಿಯಾಗಿ–ಸ್ವಾಮಿದ್ರೋಹಿಯಾಗಿ ಜಗತ್ತಿಗೆ ಹೊರತಾಗಿ ಬದುಕುವ ಜೀವನ ತನ್ನದಾಗುತ್ತದೆ ಎಂಬ ಭಾವನೆಯೇ ಸರಿ ಎಂದು ನಮ್ಮ ಅಭಿಪ್ರಾಯ.

೭) ಈ ಅಂಶ, ವಿಚಾರಮಾಡಬೇಕಾದುದು. ಏಕೆಂದರೆ ಈ ಸಮಾಜದ ಪರಿಸರ ಅಂತಹುದು. ಆದರೆ ದುರ್ಯೋಧನ ಕರ್ಣನನ್ನು ಆಪ್ತನೆಂದು, ಸಹೋದರನಿಗೂ ಮಿಗಿಲಾಗಿ ಗೌರವಿಸುತ್ತಿದ್ದನು. ಅವರಿಬ್ಬರ ನಡುವೆ ಯಾವ ಮನಸ್ತಾಪಕ್ಕೂ ಅವಕಾಶವಿರಲಿಲ್ಲ. (ದುರ್ಯೋಧನನಿಗಿಲ್ಲದ ಸಂಶಯ ನಮಗೇಕೆ ?) ಭಾನುಮತಿ ಕರ್ಣನೊಂದಿಗೆ ಸೋದರ ಸಲುಗೆಯನ್ನು ಹೊಂದಿರುವುದರಲ್ಲಿ ಆಶ್ಚರ್ಯವಿಲ್ಲ. ಇಂತಿಷ್ಟು ಸಲುಗೆ ಇದ್ದರೂ, ಸಂಯಮವನ್ನು ಕಳೆದುಕೊಂಡರೂ 'ಶೀಲ'ಕ್ಕೆ ಚ್ಯುತಿ ತರುವಂತಹ ವ್ಯಕ್ತಿತ್ವ ಕರ್ಣನದಲ್ಲ.

ಈ ಎಲ್ಲ ದೃಷ್ಟಿಗಳಿಂದ ಮೇಲೆ ಹೇಳಿದ ರೀತಿಯಲ್ಲಿ ಪದ್ಯವನ್ನು ಅರ್ಥಮಾಡಿದರೆ ಪದ್ಯದ ಭಾವನೆ ಸ್ಪಷ್ಟವಾಗುತ್ತದೆ. ಕರ್ಣ–ದುರ್ಯೋಧನರ ಸ್ನೇಹದ ಸ್ನಿಗ್ಧತೆ ಸ್ಪಷ್ಟವಾಗುತ್ತದೆ. ಕರ್ಣನ ವ್ಯಕ್ತಿತ್ವಕ್ಕೆ ಉಜ್ವಲ ಕಳೆ ಬರುತ್ತದೆ. "ನೆನೆಯದಿರಣ್ಣ ಭಾರತದೊಳಿಂ ಪೆಱರಾರು ಮನೊಂದೆಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯು" ಎಂಬ ಕವಿಯ ಚರಮವಾಕ್ಯ ಸಾರ್ಥಕವಾಗುತ್ತದೆ. ಆತನ ಔಚಿತ್ಯಪ್ರಜ್ಞೆಗೆ ಬೆಲೆ ಬರುತ್ತದೆ. ಇಲ್ಲವಾದರೆ ಆ ಮಹಾ ನವನವೋನ್ಮೇಷಶಾಲಿನಿಯಾದ ಪ್ರತಿಭೆಗೆ ಅಪಚಾರವೆಸಗಿದಂತೆಯೇ ಸರಿ.*

★ ಆರ್. ರಾಚಪ್ಪ

---

* ಈ ದಿಶೆಯಲ್ಲಿ ನಾನು ಕಂಡಾಗ ಆತ್ಮೀಯತೆಯಿಂದ ಸಲಹೆಗಳನ್ನು ಕೊಟ್ಟು ಪ್ರೋತ್ಸಾಹಿಸಿದ ಆಚಾರ್ಯ ಡಿ. ಎಲ್. ಎನ್., ಪ್ರೊ. ಜಿ. ವೆಂಕಟಸುಬ್ಬಯ್ಯನವರು, ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು, ಶ್ರೀ ಎನ್. ಬಸವಾರಾಧ್ಯರು, ಶ್ರೀ ಆರ್. ವಿ. ಕುಲಕರ್ಣಿಯವರು, ಶ್ರೀ ಚನ್ನಪ್ಪ ಎರೇಸೀಮೆಯವರು, ಇವರಿಗೆಲ್ಲಾ ಲೇಖಕ ಚಿರಋಣಿ.

ಹಳ್ಳಿಗಳ ಅಭಿವೃದ್ಧಿ ಕಾರ್ಯದಲ್ಲಿ ಹಳ್ಳಿಗರ ಕ್ರಿಯಾತ್ಮಕ ಪಾತ್ರ

ಅಭಿವೃದ್ಧಿ ಕಾರ್ಯದ ಉದ್ದೇಶ ಹಾಗೂ ಸಾಧನೆ

ಭಾರತದಲ್ಲಿ ಹಳ್ಳಿಗಳ ಅಭಿವೃದ್ಧಿ ಕಾರ್ಯವನ್ನು ೧೯೫೨ ರ ಅಕ್ಟೋಬರ್ ಎರಡನೆಯ ತಾರೀಖಿನಂದು ಪ್ರಾರಂಭಿಸಲಾಯಿತು. ಮಹಾತ್ಮಾ ಗಾಂಧಿಯವರ ಪುಣ್ಯ ಜನ್ಮದಿನದಂದು ಈ ಕಾರ್ಯವನ್ನು ಪ್ರಾರಂಭಿಸಿದುದು ಔಚಿತ್ಯಪೂರ್ಣ ವಾಗಿದೆ. ಈ ಕಾರ್ಯವನ್ನು ಪ್ರಾರಂಭಿಸುವಾಗ ಅಂದು ಭಾರತದಲ್ಲಿರುವ ೫,೫೮,೦೦೦ ಹಳ್ಳಿಗಳಲ್ಲಿ ವಾಸಿಸುತ್ತಿರುವ ೨೯.೫ ಕೋಟಿ ಜನರ ಜೀವನಕ್ಕೆ ಹೊಸ ರೂಪವನ್ನು ಕೊಡಬೇಕೆಂಬ ಹಿರಿದಾಸೆಯನ್ನು ಇಟ್ಟುಕೊಳ್ಳಲಾಗಿತ್ತು. ಪಂಡಿತ ಜವಾಹರಲಾಲರು, ಮೌಂಟ್ ಅಬುದಲ್ಲಿ ನಡೆದ ಸಮ್ಮೇಳನದಲ್ಲಿ ತಿಳಿಸಿದ ಪ್ರಕಾರ, ಹಳ್ಳಿಗಳಲ್ಲಿ ಒಕ್ಕಲುತನಾಭಿವೃದ್ಧಿ, ಆಹಾರ ಧಾನ್ಯಗಳ ಬೆಳೆಸುವಿಕೆಯ ಅಭಿವೃದ್ಧಿ ಮತ್ತು ಸಣ್ಣ ಕೈಗಾರಿಕೆಗಳ ಅಭಿವೃದ್ಧಿ –ಇವು ಅಭಿವೃದ್ಧಿ ಕಾರ್ಯದ ತುರ್ತು ಉದ್ದೇಶಗಳಾಗಿದ್ದುವು. ಇವುಗಳ ಸಾಧನೆ ಯಿಂದಾಗಿ, ಹಳ್ಳಿಗಳ ಒಟ್ಟಾರೆ ಅಭಿವೃದ್ಧಿ ಮಾಡಿ, ಅಪರೋಕ್ಷವಾಗಿ ಇಡೀ ರಾಷ್ಟ್ರದ ಅಭಿವೃದ್ಧಿ ಮಾಡುವುದು ಅಂತಿಮ ಉದ್ದೇಶವಾಗಿತ್ತು.

ಈ ಉದ್ದೇಶಗಳ ಸಾಧನೆಗಾಗಿ ಪ್ರಾರಂಭಿಸಲ್ಪಟ್ಟ ಗ್ರಾಮಾಭಿವೃದ್ಧಿ ಕಾರ್ಯ, ಸರಕಾರ ಮತ್ತು ಜನತೆಯ ಸಹಕಾರದೊಂದಿಗೆ ನಡೆಯಬೇಕೆನ್ನುವ ಧ್ಯೇಯವುಳ್ಳದ್ದಾಗಿತ್ತು. ಸರಕಾರವು ಅಭಿವೃದ್ಧಿ ಕಾರ್ಯದಲ್ಲಿ ಹಣ ಮತ್ತು ತಾಂತ್ರಿಕ ಸಹಾಯಗಳನ್ನು ಒದಗಿಸಿ ಕೊಡಬೇಕು. ಪರ್ಯಾಯವಾಗಿ ಜನರು ಶ್ರಮದಾನ ಹಾಗು ಸಲಕರಣೆಗಳನ್ನು, ಸಹಕಾರವನ್ನು ಕೊಡಬೇಕಾಗಿ ಆಶಿಸಿತ್ತು. ಈ ದಿಶೆಯಲ್ಲಿ ಸರಕಾರದ ವಂತಿಗೆ ೨/೩ ಆಗಿದ್ದು, ಜನರ ವಂತಿಗೆ ೧/೩ ಆಗಿರಬೇಕೆಂದು ಯೋಜಿಸಲಾಗಿತ್ತು. ಇದಲ್ಲದೇ ಪ್ರಾರಂಭಾವಸ್ಥೆಯಲ್ಲಿ ಸರಕಾರವು ವಿಶೇಷ ಸಹಾಯ ಮಾಡಿ ಅಭಿವೃದ್ಧಿ ಕಾರ್ಯವನ್ನು ತ್ವರಿತಗೊಳಿಸಿ ಕ್ರಮೇಣ ಜನರಲ್ಲಿ ಸ್ವಶಕ್ತಿಯನ್ನು ಹುಟ್ಟಿಸಿ ತಮ್ಮ ಕಲ್ಯಾಣದಲ್ಲಿ ತಾವೇ ಹೊಣೆ ಹೊತ್ತು, ಪಂಚಾಯಿತಿಗಳು ಅದರ ಮೇಲ್ವಿಚಾರಣೆ ಮಾಡಲು ಶಕ್ತವಾಗಿ, ಜನರ ಅಭಿವೃದ್ಧಿ ಕಾರ್ಯದಲ್ಲಿ ತಮ್ಮ ಶಕ್ತಿ ವಿಲೀನಗೊಳಿಸ ಬೇಕೆಂಬುದು ಹಿರಿದಾಗಿ ಆಶಿಸಿದ ಉದ್ದೇಶವಾಗಿತ್ತು.

ಈ ಕಾರಣದಿಂದಾಗಿ ಪಂಡಿತ ಜವಾಹರಲಾಲರು ಒಮ್ಮೆ "ಗ್ರಾಮಾಭಿ ವೃದ್ಧಿ ಕಾರ್ಯಗಳು ಕೇವಲ ಹಳ್ಳಿಗಳ ಭೌತಿಕ ಬೆಳವಣಿಗೆಯನ್ನು ತರಲು ಸಾಧ್ಯವಾಗುವ ದೃಷ್ಟಿಯಿಂದ ಮಹತ್ವವಲ್ಲ. ಆದರೆ ಅವು ಜನರನ್ನು ತಮ್ಮ

ಬೆಳವಣಿಗೆಯನ್ನು ಮಾಡಿಕೊಳ್ಳಲು, ಶಕ್ತರನ್ನಾಗಿ ಮಾಡಲು ಸಹಾಯವಾಗುವದರಿಂದ ಮಹತ್ವಪುಳ್ಳದ್ದಾಗಿವೆ" ಎಂದು ನುಡಿದಿದ್ದಾರೆ.

ಈ ಎಲ್ಲ ಉದ್ದೇಶಗಳ ಸಾಧನೆಗಾಗಿ ಗ್ರಾಮಾಭಿವೃದ್ಧಿ ಕಾರ್ಯದ ಸಿಬ್ಬಂದಿ ವರ್ಗವು ಭಾರತದಲ್ಲಿ ಅಭಿವೃದ್ಧಿ ಕಾರ್ಯವನ್ನು ಪ್ರಾರಂಭಿಸಿ, ಕಾರ್ಯಗತ ಮಾಡುತ್ತಾ ಬಂದ ಹಲವಾರು ವರ್ಷಗಳ ಅನುಭವ ಸ್ವಲ್ಪ ಮಟ್ಟಿಗೆ ನಿರಾಶಾದಾಯಕವಾಗಿದೆ. ಏಕೆಂದರೆ, ಜನರು, ಹಳ್ಳಿಗಳ ಅಭಿವೃದ್ಧಿ ಕಾರ್ಯದಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿದ್ದು ಅಷ್ಟೊಂದು ಕಂಡುಬರುತ್ತಿಲ್ಲ. ಅಲ್ಲದೇ ತಮ್ಮ ಅಭಿವೃದ್ಧಿ ಮಾಡಿಕೊಳ್ಳುವುದರಲ್ಲಿ ಸ್ವಂತ ಶಕ್ತಿಯನ್ನು ಸಾಧಿಸುವಲ್ಲಿ ಪ್ರಯತ್ನಿಸುತ್ತಿಲ್ಲ. ಹೀಗಾಗಿ ಅಭಿವೃದ್ಧಿ ಕಾರ್ಯದ ಮೂಲ ತತ್ವಕ್ಕೆ ಕೊಡಲಿ ಪೆಟ್ಟು ಬಿದ್ದಂತಾಗಿದೆ. ಸ್ಥಿತಿ ಹೀಗಾಗಲು ಹಲವಾರು ಕಾರಣಗಳುಂಟು. ಅಭಿವೃದ್ಧಿ ಕಾರ್ಯ ಸಿಬ್ಬಂದಿ ವರ್ಗವು ಸರಕಾರದ ನಿರ್ದೇಶನದ ಮೇರೆಗೆ ಕೇವಲ ಅಂಕಿ ಸಂಖ್ಯೆಗಳ ಗುರಿ ಸಾಧನೆಯಲ್ಲಿ ವಿಶೇಷ ಒತ್ತಾಯಕ್ಕೊಳಗಾಗಿ, ಅಭಿವೃದ್ಧಿ ಕಾರ್ಯವು ಜನರ ಸಹಕಾರದೊಂದಿಗೆ ನಡೆಯಬೇಕಾದುದು ಎಂಬುದನ್ನು ಮರೆತು, ಅಭಿವೃದ್ಧಿ ಕಾರ್ಯದ ಆಗು ಹೋಗುಗಳು ಮತ್ತು ಅದರಿಂದ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಇಲ್ಲವೇ ಬರಮಾಡಿಕೊಳ್ಳಲು ಜನರನ್ನು ಶಿಕ್ಷಣ ಕೊಟ್ಟು ಅವರ ಮಾನಸಿಕ ಬದಲಾವಣೆಗಳನ್ನು ಮಾಡುವಲ್ಲಿ ಹಿಂದಾದರು. ಇದರ ದುಷ್ಪರಿಣಾಮವಾಗಿ ಜನರು ಅಭಿವೃದ್ಧಿ ಕಾರ್ಯ ಕೇವಲ ಸರಕಾರದ ಜವಾಬ್ದಾರಿ, ಜನರಿಗೇನು ಅದರ ಹೊಣೆಯಿಲ್ಲ ಎನ್ನುವ ತಪ್ಪು ಕಲ್ಪನೆ ಬೆಳೆದು ಅಭಿವೃದ್ಧಿ ಕಾರ್ಯದ ಯಶಸ್ಸಿಗೆ ಬಾಧಕವಾಗಿದೆ. ಅಭಿವೃದ್ಧಿ ಕಾರ್ಯದ ಯಶಸ್ಸನ್ನು ಅಳೆದು ನೋಡುವ ವಿಮರ್ಶಕರು, ಬೇರೆ ದಾರಿಯಿಲ್ಲದೆ, ಕಟುವಾಗಿ ಅದರ ಅಯಶಸ್ಸನ್ನು ಟೀಕಿಸಬೇಕಾಗಿದೆ. ಅಲ್ಲದೇ ಇನ್ನು ಮುಂದೆ ಅಭಿವೃದ್ಧಿ ಕಾರ್ಯವು ಜನರಿಗಾಗಿ ಬಾಳಬಲ್ಲುದೇ ಎನ್ನುವುದು ಸಂಶಯಾಸ್ಪದವಾಗಿದೆ ಆದರೆ ಒಂದು ಮಾತು ನಿಜ. ಜನರ ಅಭಿವೃದ್ಧಿ ಆಗಬೇಕಾಗಿದೆ. ಆದರೆ ಅಭಿವೃದ್ಧಿ ಕಾರ್ಯ ಸಾಧಿಸುವ ಬಗೆಯಲ್ಲಿ ಮಾರ್ಪಾಟಾಗಬೇಕಾಗಿದೆ, ಸುಧಾರಣೆ ಬೇಕಾಗಿದೆ.

ಸಂಶೋಧನೆಯ ಕೆಲವು ಸಂಗತಿಗಳು

ಅಭಿವೃದ್ಧಿ ಕಾರ್ಯದ ಬಗೆಗೆ ನಡೆಸಿದ ಕೆಲವು ಸಂಶೋಧನೆಗಳ ಸಂಗತಿಗಳನ್ನು ಕೆಳಗೆ ವಿವರಿಸಲಾಗಿದೆ.

ಹಳ್ಳಿಗಳ ಅಭಿವೃದ್ಧಿಯಲ್ಲಿ ಜನರು ಎಷ್ಟರ ಮಟ್ಟಿಗೆ ಸಹಕಾರ ಮಾಡಿದ್ದಾರೆ ಎಂದರೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡಾ. ೫೪.೬ರಷ್ಟು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡಾ ೪೩ರಷ್ಟು

ಮತ್ತು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡಾ ೨೪ ರಷ್ಟು. ಇದನ್ನು ನೋಡಲಾಗಿ ಜನರು ಅಭಿವೃದ್ಧಿಕಾರ್ಯದಲ್ಲಿ ಸಹಕಾರ ಮಾಡಬೇಕೆನ್ನುವ ಹಂಬಲ ಕ್ರಮೇಣ ಕಡಿಮೆಯಾಗುತ್ತ ಬಂದಿದೆ.

ಅಲ್ಲದೆ ಜನರ ಸಹಕಾರವು ಕೂಡ ಹಳ್ಳಿಯ ಸಮುದಾಯದ ವಿವಿಧ ಗುಂಪುಗಳಿಂದ ಅಸಮವಾಗಿ ಬಂದುದು ಕಂಡು ಬರುತ್ತಿದೆ. ದೊಡ್ಡ ಬೇಸಾಯಗಾರರಿಂದ ಕೇವಲ ಶೇಕಡಾ ೭, ಮಧ್ಯಮ ಬೇಸಾಯಗಾರರಿಂದ ಶೇಕಡಾ ೨೭, ಸಣ್ಣ ಬೇಸಾಯಗಾರರಿಂದ ಶೇಕಡಾ ೨೯ ಮತ್ತು ಕೃಷಿಕಕಾರ್ಮಿಕರಿಂದ ಶೇಕಡಾ ೧೧ ರಷ್ಟು ಸಹಕಾರ ಲಭ್ಯವಾಗಿದೆ. ಇದರಿಂದ ಯಾರು ಹೆಚ್ಚು ಸಹಕಾರ ನೀಡಬಲ್ಲವರಾಗಿದ್ದರೋ ಅವರೇ ಹಿಂದೇಟು ಹಾಕಿದ್ದಾರೆ.

ಈ ರೀತಿಯಲ್ಲಿ ಜನರ ಸಹಕಾರದಲ್ಲಿ ವ್ಯತ್ಯಯ ಕಂಡು ಬರುವುದಕ್ಕೆ ಕಾರಣವೆಂದರೆ ಜನರಲ್ಲಿ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರಿಯಾದ ಪರಿಜ್ಞಾನ ಹಾಗು ಪರಿಚಯವಿಲ್ಲ. ಅಲ್ಲದೆ ಅಭಿವೃದ್ಧಿ ಕಾರ್ಯದ ಸಿಬ್ಬಂದಿ ವರ್ಗವೂ ಕೂಡ ಜನರನ್ನು ಈ ಕಾರ್ಯದ ಗೊತ್ತು ಗುರಿಗಳಲ್ಲಿ ಪಾಲುಗೊಳ್ಳಲು ಪ್ರೇರೇಪಿಸಿಲ್ಲವೆಂದು ಕಾಣುತ್ತದೆ.

ಜನಾಭಿಪ್ರಾಯದ ಭಾರತದ ಸಂಸ್ಥೆಯು (Indian Institute of Public opinion) ನಡೆಸಿದ ಸಂಶೋಧನೆಯ ಪ್ರಕಾರ ೧೯೬೪ ರಲ್ಲಿ ಕೇವಲ ಶೇಕಡಾ ೫ ಜನ ಅಭಿವೃದ್ಧಿ ಕಾರ್ಯದ ಉದ್ದೇಶಗಳ ಬಗ್ಗೆ ಜ್ಞಾನವುಳ್ಳವರಾಗಿದ್ದರೆ ಶೇಕಡಾ ೫೦ ಜನ ಅವುಗಳ ಬಗ್ಗೆ ಸಂಪೂರ್ಣ ಅಜ್ಞಾನಿಗಳಾಗಿದ್ದರು. ಅಲ್ಲದೆ ಅಭಿವೃದ್ಧಿ ಮಂಡಳಿಯು ಮಾಡಿದ ಕಾರ್ಯಗಳ ಸಾಧನೆಗಳ ಬಗೆಗೆ ೧/೩ ಜನ ಮಾತ್ರ ಜ್ಞಾನವುಳ್ಳವರಾಗಿದ್ದರೆ, ೨/೩ ಜನಕ್ಕೆ ಏನು ಗೊತ್ತಿರಲಿಲ್ಲ.

ಸಂಶೋಧನೆಯ ಇನ್ನೊಂದು ಮಾಹಿತಿಯೆ ಅಭಿವೃದ್ಧಿಕಾರ್ಯದ ಯಶಸ್ಸನ್ನು ಅಳೆಯುವ ಸಂಘದಿಂದ, (Programme evaluation organisat on) ನಡೆಸಿದ ಸಂಶೋಧನೆಯಲ್ಲಿ ೧೮ ಅಭಿವೃದ್ಧಿ ಮಂಡಳಿಗಳ ಪೈಕಿ ೧೩ ಮಂಡಳಿಗಳು, ಅಭಿವೃದ್ಧಿ ಕಾರ್ಯವು ಕೇವಲ ಸರಕಾರದ ಯೋಜನೆ, ಮತ್ತು ಅಭಿವೃದ್ಧಿಯ ಎಲ್ಲ ಹೊಣೆಯನ್ನು ಸರಕಾರವೇ ಹೊರಬೇಕು ಎಂದು ಮತ್ತು ಜನ, ಸಹಕಾರ ಅಪೇಕ್ಷಿಸಬಾರದು ಎಂದು ಅಭಿಪ್ರಾಯ ವ್ಯಕ್ತಪಡಿಸಿದೆ.

ಈ ಎಲ್ಲ ಸಂಶೋಧನೆಗಳ ಸಂಗತಿಗಳಿಂದ ಗೊತ್ತಾಗುವ ಮಾತೆಂದರೆ, ಜನರಲ್ಲಿ ಅಭಿವೃದ್ಧಿ ಕಾರ್ಯದ ಬಗ್ಗೆ ಸರಿಯಾದ ಅರಿವು ಇಲ್ಲ ಮತ್ತು ಸಬಲ ಗುಂಪುಗಳು ಕಡಿಮೆ ಸಹಕಾರ ಕೊಡುತ್ತಿವೆ ಮತ್ತು ನಿರ್ಬಲ ಗುಂಪುಗಳು ಹೆಚ್ಚಿನ ಸಹಕಾರ ಕೊಡುತ್ತಿರುವುದಾದರು, ಲಾಭದ ದೃಷ್ಟಿಯಿಂದ ಸಬಲ

ಗುಂಪುಗಳೇ ಹೆಚ್ಚು ಊರ್ಜಿತ ಸ್ಥಿತಿಯನ್ನು ಹೊಂದಿವೆ. ಮತ್ತು ಸಣ್ಣ ಗುಂಪುಗಳು ಅನೇಕ ಸಲ ನಿರ್ಲಕ್ಷಿಸಲ್ಪಟ್ಟಿವೆ.

ಜನರ ಕ್ರಿಯಾಶೀಲತೆಗೆ ಅನುವು ಮಾಡಿಕೊಡುವುದರ ಆವಶ್ಯಕತೆ

ಈ ಹಿನ್ನೆಲೆಯಲ್ಲಿರುವ ಅಭಿವೃದ್ಧಿ ಕಾರ್ಯದ ಬಗೆಯಲ್ಲಿ ಪುನರ್ಯೋಜನೆ ಮಾಡಬೇಕಾದುದು ಅವಶ್ಯವಾಗಿದೆ. ಅಭಿವೃದ್ಧಿ ಕಾರ್ಯದಲ್ಲಿ ಜನರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟು ಅವರು ಆ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಸರಕಾರ ಮಾರ್ಗದರ್ಶಿಯಾಗಿರಬೇಕು. ಅಂತೆಯೇ ಬಲವಂತರಾಯ ಮೆಹತಾ ಕಮಿಟಿಯು ಗ್ರಾಮ ಪಂಚಾಯಿತಿಗಳಿಗೆ ಅಭಿವೃದ್ಧಿ ಕಾರ್ಯದ ಆಡಳಿತೆಯಲ್ಲಿ ಸರಕಾರದಷ್ಟೆ ಸ್ಥಾನ ದೊರಕಿಸಿ ಕೊಡಬೇಕೆಂದು ಅಭಿಪ್ರಾಯ ಪಟ್ಟಿದ್ದು ಶ್ಲಾಘನೀಯವಾಗಿದೆ. ಹೀಗಾಗುವದರಿಂದ ಮಾತ್ರ ವಾಸ್ತವಿಕೆ ಯಲ್ಲಿ ಜನರಿಗೆ ತಮ್ಮ ಅಭಿವೃದ್ಧಿ ಕಾರ್ಯದ ಯೋಜನೆಯಲ್ಲಿ ತಮ್ಮ ಹೊಣೆ ಹೊತ್ತು ಕ್ರಿಯಾಶೀಲರಾಗಲು ಅನುವು ಮಾಡಿಕೊಟ್ಟಂತಾಗುತ್ತದೆ.

ಜನರ ಕ್ರಿಯಾಶೀಲತೆಯ ಅವಶ್ಯವನ್ನು ಸ್ಪಷ್ಟಪಡಿಸುವ ತತ್ವಗಳು

೧) ಮಾನವನ ಯೋಗ್ಯತೆಗೆ ಬೆಲೆ ಕೊಡಬೇಕು.

೨) ಮಾನವತೆಗೆ ಬೆಲೆ ಕೊಡಬೇಕು.

೩) ತನ್ನ ಅಭಿವೃದ್ಧಿಯ ಕಾರ್ಯದಲ್ಲಿ ಏನನ್ನು ಮಾಡಬೇಕೆನ್ನುವ ಬಗ್ಗೆ ಅವನಿಗೆ ನಿರ್ಧಾರ ಮಾಡುವ ಹಕ್ಕಿದೆ.

೪) ಮಾನವನು ತನ್ನ ಶಕ್ತಿ ಸಾಮರ್ಥ್ಯದಿಂದ ಬೆಳೆಯಬಲ್ಲನು.

ಈ ತತ್ವಗಳ ಆಧಾರದ ಮೇಲೆ ಅಭಿವೃದ್ಧಿ ಕಾರ್ಯದ ಯೋಜನೆ ಯನ್ನು ಬಲಪಡಿಸಿದಾಗ ಮಾತ್ರ ಜನರು ಕ್ರಿಯಾಶೀಲರಾಗಿ ಕಾರ್ಯಬದ್ಧ ರಾಗುತ್ತಾರೆ. ಆದರೆ ಅವರ ಕಾರ್ಯಕ್ಕೆ ಆಗಾಗ ಯೋಗ್ಯ ಮಾರ್ಗದರ್ಶನ ನೀಡಬೇಕಾಗುತ್ತದೆ.

ಜನರ ಕ್ರಿಯಾಶೀಲತೆಯನ್ನು ಕಾರ್ಯಗತಗೊಳಿಸುವ ಅಂಗಗಳು

ಗ್ರಾಮ ಪಂಚಾಯತಿಗಳು:– ಗ್ರಾಮ ಪಂಚಾಯತಿಗಳು, ಗ್ರಾಮ ಸಮುದಾಯದ ಪ್ರಮುಖ ಸಂಸ್ಥೆಗಳು. ಆ ಗ್ರಾಮದ ಜನರ ಆಗು ಹೋಗುಗಳು, ಬೇಕು ಬೇಡಗಳು ಆ ಗ್ರಾಮ ಪಂಚಾಯಿತಿಯ ಅಧಿಕಾರ ವರ್ಗದವರಿಗೆ ಸೇರಿದುವಾಗಿವೆ. ಗ್ರಾಮ ಪಂಚಾಯತಿಯಲ್ಲಿ ಆ ಗ್ರಾಮದ ವಿವಿಧ ಬಣಗಳನ್ನು ನಿರೂಪಿಸುವ ಜನರು, ಅಧಿಕಾರ ವರ್ಗದಲ್ಲಿರುವುದರಿಂದ

ಅವರಿಗೆ ಆ ಗ್ರಾಮದ ವಿಶೇಷ ಮಾಹಿತಿ ಇರುತ್ತದೆ. ಜನರ ಆಚಾರ ವಿಚಾರ, ಊರಲ್ಲಿಯ ಜಾತಿ ಜಗಳಗಳು, ಮತ್ತು ಇನ್ನಿತರ ಮುಖ್ಯ ಸಂಗತಿಗಳು ಗೊತ್ತಿರುತ್ತವೆ. ಇದರಿಂದಾಗಿ ಅಭಿವೃದ್ಧಿಕಾರ್ಯವನ್ನು ಯಾವ ರೀತಿಯಲ್ಲಿ ಕೈಗೆತ್ತಿಕೊಳ್ಳಬೇಕು, ಅಲ್ಲದೇ ಯಾವ ಕಾರ್ಯಗಳಿಗೆ ಪ್ರಾಶಸ್ತ್ಯಕೊಡಬೇಕು. ತಮ್ಮತಮ್ಮಲ್ಲಿ ಸಹಕಾರ, ತ್ಯಾಗ, ಹೇಗೆ ಸಾಧ್ಯವಾಗಬಲ್ಲದು ಎನ್ನುವ ವಿಷಯುಗಳ ಬಗ್ಗೆ ಸಂಪೂರ್ಣ ಪ್ರಾಧಾನ್ಯ ಅವರಿಗೆ ಸಿಗುತ್ತದೆ. ಇದರಿಂದಾಗಿ ತಮ್ಮ ಕಾರ್ಯಸಾಧನೆ ತಾವೇ ಮಾಡುವಲ್ಲಿ ಅವರಿಗೆ ಹೆಮ್ಮೆಯಾಗುತ್ತದೆ. ಬೇಕೆನಿಸಿದಾಗ ಇಲ್ಲವೇ ಅನ್ಯಾಯದ ದಾರಿಹಿಡಿದಾಗ ಸರಕಾರದ ಸಿಬ್ಬಂದಿ ಅವರಿಗೆ ನೆರವಾಗಬಹುದು ಮತ್ತು ಅವರನ್ನು ಅನ್ಯಾಯಮಾರ್ಗದಿಂದ ಎಳೆದುತರಬಹುದು.

ಸಂಘ-ಸಂಸ್ಥೆಗಳು : ಪ್ರತಿಯೊಂದು ಹಳ್ಳಿಗಳಲ್ಲಿ ಖಾಸಗಿ ಸಂಸ್ಥೆಗಳು ಇರುವದು ಸ್ವಾಭಾವಿಕವಾಗಿದೆ. ಈ ಖಾಸಗಿ ಸಂಸ್ಥೆಗಳು, ಧಾರ್ಮಿಕ ಸಂಸ್ಥೆಗಳೇ ಆಗಿರಬಹುದು, ಇಲ್ಲವೇ ಜಾತಿಯ ಸಂಸ್ಥೆಗಳಾಗಿರಬಹುದು. ಇನ್ನು ಕೆಲವು ಸಂಸ್ಥೆಗಳೆಂದರೆ, ಭಜನಾ ಮಂಡಳಿ, ತರುಣ ಸಂಘ, ಗೆಳೆಯರ ಬಳಗ, ಭಗಿನಿ ಮಂಡಳ, ಹರಟೆ ಗುಂಪುಗಳು, ಆಟದ ಗುಂಪುಗಳು ಆಗಿರಬಹುದು. ಶಾಲೆಯ ಶಿಕ್ಷಕರೂ ಪ್ರಮುಖ ಪಾತ್ರವಹಿಸಬಲ್ಲರು. ಈ ಎಲ್ಲ ಗುಂಪುಗಳು ಗ್ರಾಮದ ಅಭಿವೃದ್ಧಿ ಕಾರ್ಯದಲ್ಲಿ ಕಾತರವಾಗುತ್ತವೆ ಗ್ರಾಮಪಂಚಾಯತಿಯವರು ಅಭಿವೃದ್ಧಿಕಾರ್ಯದಲ್ಲಿ ಜನರ ಸಂಪೂರ್ಣ ಸಹಕಾರಕ್ಕಾಗಿ ಈ ಸಂಘ-ಸಂಸ್ಥೆಗಳ ಸಹಕಾರಪಡೆದುಕೊಳ್ಳುವುದು ಅವಶ್ಯವಾಗುತ್ತದೆ. ಒಮ್ಮೊಮ್ಮೆ ಈ ಸಂಘ-ಸಂಸ್ಥೆಗಳು ಗಣನೆಗೆ ತಾರದಿದ್ದರೆ ಅಭಿವೃದ್ಧಿ ಕಾರ್ಯಕ್ಕೆ ಕಂಟಕವನ್ನೇ ತರಬಹುದು. ಇನ್ನೊಮ್ಮೆ ಈ ಸಂಸ್ಥೆಗಳೇ ಕಾರ್ಯವನ್ನು ತ್ವರಿತಗೊಳಿಸಬಹುದು. ಉದಾಹರಣೆಗಾಗಿ ವಿಶೇಷತಃ ಗ್ರಾಮಗಳಲ್ಲಿ ಧಾರ್ಮಿಕ ಸಂಸ್ಥೆಗಳು, ಭಜನಾ ಮಂಡಳಿಗಳು ಪ್ರಬಲವಾಗಿರುತ್ತವೆ. ಈ ಸಂಸ್ಥೆಗಳು ಅಭಿವೃದ್ಧಿ ಕಾರ್ಯದಲ್ಲಿ ಅಭಿರುಚಿ ತೆಗೆದುಕೊಂಡಾಗ ಊರಿನ ಜನ ಯಾವ ಭೇದಗಳಿಲ್ಲದೆ ಮುಂದೆ ಬಂದ ಕಾರ್ಯವು ಯಶಸ್ವಿಯಾಗುವಂತೆ ನೋಡಿಕೊಳ್ಳುತ್ತಾರೆ. ಅಲ್ಲದೆ ಸಿಬ್ಬಂದಿವರ್ಗದಿಂದ ಆಗಲಾರದಂಥ ಕಾರ್ಯ ಇಲ್ಲಿ ಅನಾಯಾಸವಾಗಿ ನೇರವೇರಬಹುದು.

ಸಮಾಜ ಕಾರ್ಯಕರ್ತರು : ಗ್ರಾಮಪಂಚಾಯತಿಯೇ ಆಗಲಿ, ಖಾಸಗೀ ಸಂಸ್ಥೆಗಳೇ ಆಗಲಿ, ಇಲ್ಲವೇ ಒಟ್ಟಾರೇ ಹಳ್ಳಿಯ ಜನರೇ ಆಗಲೀ ನಿಜವಾದ ಅಭಿವೃದ್ಧಿಕಾರ್ಯದ ಅರಿವನ್ನು ಪಡೆದುಕೊಂಡು ಕಾರ್ಯಬದ್ಧರಾಗುವಲ್ಲಿ ಸಮಾಜ ಕಾರ್ಯಕರ್ತರು ಸಹಾಯವಾಗಬಲ್ಲರು. ತರಬೇತಿಪಡೆದ ಸಮಾಜಕಾರ್ಯಕರ್ತರು ತಮ್ಮ ವೃತ್ತಿ ವಿಧಾನಗಳಿಂದ ಗ್ರಾಮದ ಜನರಿಗೆ ತಮ್ಮ ಸಮಸ್ಯೆಗಳನ್ನು ತಿಳಿದು

ಕೊಳ್ಳುವಲ್ಲಿ, ಅವುಗಳನ್ನು ಪರಿಹರಿಸಲು ಸಹಾಯಮಾಡುವ ಸಂಘ-ಸಂಸ್ಥೆಗಳ ಅನುಕೂಲಪಡೆದುಕೊಳ್ಳುವಲ್ಲಿ, ಕಾರ್ಯವು ಯೋಜಿತಕ್ರಮದಲ್ಲಿ ನಡೆಯಲು ಅನುಕೂಲವಾಗುವಂತೆ, ಸಮಾಜಕಾರ್ಯಕರ್ತರು ಸಹಾಯವಾಗಬಲ್ಲರು. ಸಮಾಜಕಾರ್ಯಕರ್ತರು ಗ್ರಾಮದ ಜನರಿಗೂ, ಸರಕಾರದ ಸಿಬ್ಬಂದಿವರ್ಗಕ್ಕೂ ನಡುವೆ ಅನುಕೂಲಮಾಡಿಕೊಡುವ ಮಧ್ಯಸ್ಥರಾಗಬಲ್ಲರು. ಇದಲ್ಲದೆ ಗ್ರಾಮ ಪಂಚಾಯತಿಯ ಧುರೀಣರಿಗೆ ಸರಿಯಾದ ಸಲಹೆಗಳನ್ನೂ ಕೊಟ್ಟು ಅವರ ಯೋಗ್ಯ ಧುರೀಣತ್ವಕ್ಕೆ ಮಾರ್ಗದರ್ಶನ ನೀಡಬಲ್ಲರು.

ಈ ಎಲ್ಲ ವ್ಯಕ್ತಿ ಹಾಗು ಸಂಸ್ಥೆಗಳು ಜನರನ್ನು ಕಾರ್ಯಕ್ಕೆ ಹಚ್ಚಬಲ್ಲರು. ಇಂಥ ಪರಿಸ್ಥಿತಿಯಲ್ಲಿ ಮಾತ್ರ ಜನರು ಅಭಿವೃದ್ಧಿಕಾರ್ಯದ ತತ್ವಗಳನ್ನು ಉಳಿಸಿಕೊಂಡು ಅದರ ಯಶಸ್ಸಿಗೆ ಕಾರಣರಾಗಬಲ್ಲರು. ಆಗ ಮಾತ್ರ ಗಾಂಧೀಜಿಯವರು ಹಾಗು ರಾಷ್ಟ್ರದ ಹಿರಿಯ ಧುರೀಣರು ಹಂಬಲಿಸಿದ ಸುಖೀ ರಾಜ್ಯ ಮತ್ತು ಗ್ರಾಮಗಳ ಪುನರ್‌ನಿರ್ಮಾಣ ಸಾಧ್ಯವಾಗಬಲ್ಲುದು ಎನ್ನುವ ನಂಬಿಕೆ ಬರುವದು.

ಸಲಹೆಗಳು

ಗ್ರಾಮಾಭಿವೃದ್ಧಿಕಾರ್ಯದಲ್ಲಿ ಜನರ ಕ್ರಿಯಾತ್ಮಕ ಪಾತ್ರಕ್ಕೆ ಯೋಗ್ಯ ಮಾರ್ಗದರ್ಶನ ಕೊಡುವಲ್ಲಿ ಕೆಳಗಿನ ಕೆಲವು ಸಲಹೆಗಳು ಸೂಚಿತವಾಗಿವೆ.

೧) ಜನರಲ್ಲಿ ಸಮುದಾಯದ ಐಕ್ಯತೆಯನ್ನು ಹೆಚ್ಚಿಸುವಲ್ಲಿ ಮತ್ತು ಲೋಕಶಕ್ತಿಯನ್ನು (Social action) ಬೆಳೆಸುವಲ್ಲಿ ಶಿಕ್ಷಣ ಕೊಡಬೇಕು.

೨) ತರಬೇತಿಪಡೆದ ಸಮಾಜಕಾರ್ಯಕರ್ತರಿಗೆ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಯೋಗ್ಯ ಮನ್ನಣೆ ಸಿಗಬೇಕು.

೩) ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಅಭಿವೃದ್ಧಿಕಾರ್ಯಗಳಿಗೆ ಪ್ರಾಶಸ್ತ್ಯ ನೀಡಬೇಕು.

೪) ಗ್ರಾಮಪಂಚಾಯತಿಗಳ ಧುರೀಣರಿಗೆ ಯೋಗ್ಯ ಧುರೀಣತ್ವದ ತರಬೇತಿ ಅವಸರವೆನಿಸಿದಾಗ ಕೊಡಬೇಕು.

★ ಎಸ್. ಆರ್. ಶಾಸ್ತ್ರಿ

ಹಿತ್ತಲದ ಸುರಭೂಜ

ಎಲ್ಲೋ ಬಿದ್ದಿದ್ದ ಬಿಕನಾಸಿ ಬೀಜಾ ತಂದು
ಇಲ್ಲಿ ಬಿತ್ತಿದ್ದೇನೆ ನನ್ನ ಹಿತ್ತಲದಲ್ಲಿ.
ಸೀಮೆ ಗೊಬ್ಬರ ತಂದು ಹರಡಿಲ್ಲ ನಾನಿಲ್ಲಿ,
ದನದ ಹಕ್ಕೆಯಗೋತ ಸೆಗಣಿರಾಡಿ.
ಮನೆಯ ಮಕ್ಕಳ ಹೊಲಸು ಪಲಸನ್ನೆಲ್ಲ ತಂದು
ಚೆಲ್ಲುವದಿಲ್ಲೇ ಆ ನಮ್ಮ ಮನೆ ಮುದಿಕಿ.
ಒಮ್ಮೆ ಹೀಗೇಕಿ ಹಾವು ಬಂದಿರೆಂದರೆ
ಗೊಮ್ಮೆನ್ನುತ್ತದೆ ಮೂಗಿದ್ದರೆ, ನಿಮಗೂ
... ...
ಎಂತ ಪಸಂದಾಗಿ ಬೆಳೆಯುತ್ತದೆನ್ನುತ್ತೀರಾ
ನನಗೆ ನಂಬಿಗೆ ಇದೆ ನನ್ನ ಹಿತ್ತಲ ಮಣ್ಣು
ಅಷ್ಟು ಕಳಪೆಯಲ್ಲ ಎಂದು !!
ಬೆಳೆದು ಮಲ ಮಲ ಎಂದು ನಳನಳಿಸಿ
ನಿಂದಾಗ ; ಇದೇ ಹಕ್ಕರಿಕೆ, ತಿರಕಸಾಲಿಯ ಪಲ್ಯ
ಹರಿದು ಕಳಿಸುತ್ತೇನೆ- ಸಿಪ್ರುಡು ಕಟ್ಟಿ, ನಿಮಗೂ.
ಛೇ, ಈ ಜವ್ವಾರಿ ಸೊಪ್ಪಿನ ರುಚಿ
ಆ ಸುಡುಗಾಡು ಸೀಮೆಗೊಬ್ಬರವುಂಡ
ನಿಮ್ಮ ತೋಟದ ಹಸುರಿಗೇನು ಬಂದೀತು ಬಿಡಿ !
... .
ಏನೋ ಬೆಳೆದಾಗ ಅಷ್ಟಿಷ್ಟು ನಿಮಗೂ
ಕಳಿಸುತ್ತೇನೆ ನಮಗಿಲ್ಲದಿದ್ದರೂ ಹೋಯ್ತು.
ತಿಂದು, ರುಚಿನೋಡಿ ಮತ್ತೆ ಬೇಕೆಂದೀರಾ,
ಬೆಳೆದುಕೊಳ್ಳಿಸ್ವಾಮಿ ನಿಮ್ಮ ಹಿತ್ತಲದಲ್ಲೂ
ನಿಮ್ಮ ಹಿತ್ತಲ ಮಣ್ಣು ರಸಹೀರಿ ಬೆಳೆದಾಗ
ಆ ಹಸಿರು ನಮಗಿಷ್ಟು ಕಳಿಸಿಕೊಡಿ.
ಹೀಗೆ ಅದಲಾ ಬದಲಾ ಮಾಡಿ ಆಗೀಗೊಮ್ಮೆ
ನಮ್ಮ ನಾಲಿಗೆ ತೀಟೆ ತೃಪ್ತಿಪಡಿಸೋಣಂತೆ
ಏನು ಒಪ್ಪಿಗೆ ತಾನೇ ?

★ "ಶ್ರೀಚೆನ್ನ"

ಅರ್ಧನಾರೀಶ್ವರ ಅರವೆಣ್ಣು

ಭಾರತೀಯ ಸಾಹಿತ್ಯದಲ್ಲಿ ಅರ್ಧನಾರೀಶ್ವರನ ಕಲ್ಪನೆ ಪುರಾತನವಾದುದು. ಅದರ ಕಾಲದ ಗಡಪು ಕ್ರಿಸ್ತಪೂರ್ವದಾಚೆ. ಆದರೆ ಒಂದು ದೇಶದ ಸಮಗ್ರ ಸಂಸ್ಕೃತಿಯ ಕುರುಹಾಗಿ ಅದು ಮೊದಲು ಕಾಣಿಸಿಕೊಳ್ಳುವುದು ಮಹಾಕವಿ ಕಾಳಿದಾಸನಲ್ಲಿ.[೧] ಅವನಿಗೂ ಪೂರ್ವದಲ್ಲಿ ಅದೊಂದು ಜನಾಂಗದ ಪರಿಪೂರ್ಣ ಕಲ್ಪನೆಯಾಗಿ ಬೆಳೆದು ಬಂದಿತ್ತೆಂಬುದಕ್ಕೆ, ಆರ್ಯರಿಗಿಂತಲೂ ಪೂರ್ವದಲ್ಲಿಯೇ ಈ ನೆಲದಲ್ಲಿ ನೆಲಸಿ ಸಂಸ್ಕೃತಿಯ ಔನ್ನತ್ಯವನ್ನು ಮೆರೆದ ಆ ಶೈವ ಜನಾಂಗದ ಇತಿಹಾಸದಲ್ಲಿ ಹಲವು ದಾಖಲೆಗಳು ದೊರೆಯುತ್ತವೆ.[೨]

ಈ ಅಭಿಪ್ರಾಯವನ್ನೇ ಪ್ರತಿಪಾದಿಸುತ್ತ ಶ್ರೀ ಎಸ್. ಕೆ. ಚಟರ್ಜಿಯವರು "ಆರ್ಯರ ಭೌತಿಕ ದೇವರುಗಳಿಗಿಂತ ದ್ರಾವಿಡರ ಅರ್ಧನಾರೀಶ್ವರನ ಕಲ್ಪನೆ ವಿಶ್ವವ್ಯಾಪಕವಾದ, ಬಹು ಆಳವಾದ ಆಧ್ಯಾತ್ಮಿಕ ಅನುಭಾವದಿಂದ ತುಂಬಿದೆಯಲ್ಲದೆ ಆ ಗಂಡು ಹೆಣ್ಣು ದೇವರುಗಳಲ್ಲಿ ಸೃಷ್ಟಿಯ ಮೂಲಶಕ್ತಿಯನ್ನೇ ಕಂಡ ಅವರ ದೃಷ್ಟಿ ಅತ್ಯಂತ ಕಾವ್ಯಮಯವಾಗಿದೆ"[೩] ಎಂದಿದ್ದಾರೆ. ಇದೇ ಅಭಿಪ್ರಾಯವನ್ನು ಸ್ಪಷ್ಟಪಡಿಸುವ ಮಾತು ಬೃಹದಾರಣ್ಯಕೋಪನಿಷತ್ತಿನಲ್ಲಿ ಬರುತ್ತದೆ.[೪]

ಏಕಾಕಿಯಾಗಿದ್ದ ಶಿವ-ಶಕ್ತಿ ತನ್ನ ಲೀಲೆಗಾಗಿ ಒಂದಳಿದು ಎರಡಾಗಿ ನಿಂತು, ಅವುಗಳ ಸಮ್ಮಿಲನದಿಂದ ಸೃಷ್ಟಿಯಾಯಿತೆಂಬ ಮಾತು ಇಲ್ಲಿ ಅರ್ಧ ನಾರೀಶ್ವರನ ಕಲ್ಪನೆಗೆ ಹೊಳಪು ಹಾಕಿದೆ. ಉಪನಿಷತ್ತಿನ ಮಾತನ್ನೇ ಧೃಡೀಕರಿಸುತ್ತ, ಡಾ. ರಾಧಾಕೃಷ್ಣನ್ ಅವರು "ಒಂಟಿಗನಾಗಿದ್ದ ಶಿವನು ತನ್ನ ಲೀಲೆಗಾಗಿ ಒಡೆದು ಎರಡಾಗಿ ನಿಂತ ಸಂಕೇತವು, ಲೌಕಿಕವಲ್ಲಿ ಆದರ್ಶ ದಾಂಪತ್ಯ ಜೀವನದ ಪರಮೋಚ್ಚ ಪ್ರತೀಕವಾಗಿದ್ದು. ಸ್ತ್ರೀ ಇಲ್ಲದೆ ಪುರುಷ ಪರಿಪೂರ್ಣನಾಗಲಾರ, ಅವಳು ಅವನ ಅರ್ಧಾಂಗಿಯೆಂಬುದು ಒಂದೇ ಮಾಂಸದ

---

೧. ಕಾಳಿದಾಸನ ರಘುವಂಶದ ನಾಂದೀಪದ್ಯ.

೨. "It thus appeals that Siva was one of the principal deties of the people along with the Mother God." "The Vedic age" P. 191. —S. K. Chetarji. P. 158.

೩. "The Vedic age" —Dr. K: M. Munshi.

೪. "ಸ-ಇಮ ಮೇವಾತ್ಮಾನಂ ದ್ವೇಧಾಪಾತಯುತ್ ತತಃ ಪತಿಶ್ಚ ಪತ್ನೀ ಚಾ ಭವತಾಮ್" (೧-೪. ೩.)

ಮುದ್ದೆ ಎಂಬರ್ಥದಲ್ಲಲ್ಲ. ಅವರು ಮೂಲಭೂತವಾದ ಒಂದೇ ಜೀವ ಶಕ್ತಿಯ ಅಥವಾ ಚಿರಂತನ ಚೈತನ್ಯದ ಪ್ರತಿರೂಪ" ಎಂದು ಮುಂತಾಗಿ ಹೇಳುತ್ತಾರೆ.[೫]

ಉಪನಿಷತ್ಕಾಲದ ನಂತರ ಈ ವಿಚಾರಗಳು ಹಲವಾರು ಸಣ್ಣಪುಟ್ಟ ವ್ಯತ್ಯಾಸಗಳನ್ನು ಹೊಂದುತ್ತ, ಪದ್ಮಪುರಾಣ, ಲಿಂಗಪುರಾಣ, ಸ್ಕಾಂದಪುರಾಣ, ಸೌರಪುರಾಣ, ಶಿವಪುರಾಣಗಳಲ್ಲಿ ಈ ಕಥೆಯು ಕಾಣಿಸಿಕೊಳ್ಳುತ್ತದೆ.[೬]

ಮಹಾಕವಿಯೊಬ್ಬನ ಕಾವ್ಯಕ್ಕೆ ರಮ್ಯ ವಸ್ತುವಾಗಬಲ್ಲ ಈ ಕಥೆಯು ಕಾಳಿದಾಸನು ಬರುವ ಮೊದಲೇ ಸಿದ್ಧವಾಗಿ ನಿಂತಿತ್ತು. ಅದನ್ನೆತ್ತಿಕೊಂಡು ಒಂದು ರಸಘಟ್ಟಿಯನ್ನಾಗಿ ಪರಿವರ್ತಿಸಿದ ಮೊದಲ ಶ್ರೇಯಸ್ಸು ಮಹಾಕವಿ ಕಾಳಿದಾಸನಿಗೆ ಸಲ್ಲುತ್ತದೆ.

ಕಾಳಿದಾಸನ ತರುವಾಯವೂ ಈ ವಸ್ತು ಅಲ್ಲಲ್ಲಿ ಕಾಣಿಸಿಕೊಂಡಂತಿದೆ.[೭] ಆದರೆ ಕನ್ನಡ ಸಾಹಿತ್ಯದಲ್ಲಿ ಸಮಗ್ರರೂಪದಲ್ಲಿ ಮೊದಲು ಕಾಣುವುದು ಹರಿಹರ ದೇವನಲ್ಲಿ.[೮] ಅವನಿಗೂ ಹಿಂದೆ ಕನ್ನಡದಲ್ಲಿ ಈ ವಸ್ತುವಿನ ಸುಳುಹುದೊರದೇ ಇಲ್ಲ. ಜಯಕೀರ್ತಿಯ ಛಂದೋನುಶಾಸನದಲ್ಲಿ ಬರುವ "ಅಸಗಾಖ್ಯ ಕವೀನಾಂ ಪ್ರತಿಪಾದಿತಂ ನನು ಕರ್ಣಾಟಕುಮಾರ ಸಂಭವಕಾವ್ಯೇ" "ಛಂದೋಪತಂಸ ನಾಮೇತಿ ಚತುಷ್ಪಾದಿಕಾ ಸಂದೃಷ್ಟಾ ಸೌ ಕುಮಾರ ಸಂಭವಾದೌ" ಎಂಬ ಮಾತುಗಳಿಂದ ಅಸಗಕವಿ (ಕ್ರಿ. ಶ. ೮೫೩) ಕನ್ನಡದಲ್ಲಿ 'ಕುಮಾರ ಸಂಭವ' ಕಾವ್ಯವನ್ನು ಬರೆದನೆಂದು ತಿಳಿಯುತ್ತದೆ.[೯]

ಶಿವ ಪಾರ್ವತಿಯರ ವಿವಾಹಕ್ಕೆ ಸಂಬಂಧಿಸಿದ ಕೆಲವು ಪದ್ಯಗಳು ನಾಗ ವರ್ಮನ 'ಕಾವ್ಯವಲೋಕನ', ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ', ಕೇಶಿ ರಾಜನ 'ಶಬ್ದಮಣಿ ದರ್ಪಣ'ಗಳಲ್ಲಿ[೧೦], ಮತ್ತು ಜನಪದ ಸಾಹಿತ್ಯದಲ್ಲಿ ದೊರೆಯುತ್ತವೆ.[೧೧]

ಇವನ್ನು ಬಿಟ್ಟರೆ ಕನ್ನಡದಲ್ಲಿ ಈ ವಸ್ತುವಿನ ಸ್ವತಂತ್ರ ಕೃತಿ ಆವಿಷ್ಕಾರ ಸ್ಪಷ್ಟವಾಗಿ ಕಾಣುವುದು ಹರಿಹರನಲ್ಲಿಯೇ. ಹರಿಹರನಿಗೆ ಕೆಲ ಅಂಶಗಳಲ್ಲಿ

---

೫. "Religion and Society" Dr. Radhakrishan. P. 157.

೬. ಈ ಪುರಾಣಗಳು ಕಾಳಿದಾಸನ ನಂತರ ಬಂದುವೆಂದು ಒಂದು ವಾದ ಉಂಟು. ಗಿ. ಕ. ಸಂ. ಶ್ರೀ ದೊಡ್ಡವೀರಪ್ಪ - ದೇಜಗೌ. ಪೀಠಿಕೆ- ಪು. xxxi

೭. ಗಿ. ಕ. ಸಂ. ಅಡಿ ಟಿಪ್ಪಣಿ. ಶ್ರೀ ದೇವೀರಪ್ಪ - ದೇಜಗೌ. ಪೀಠಿಕೆ- ಪು. xxxi

೮. ಗಿ. ಕ. ಡಾ. ಸಿ. ಚ. ನಂದೀಮಠ. ಆ. ೧೦. ಪ. ೮೪.

೯. ಈ ವಿಚಾರದತ್ತ ನನ್ನ ಗಮನ ಸೆಳೆದ ನನ್ನ ಗುರುಗಳಾದ ಡಾ. ಎಂ. ಎಂ. ಕಲಬುರ್ಗಿ ಯವರಿಗೆ ಕೃತಜ್ಞನಾಗಿದ್ದೇನೆ.

೧೦. ಇವು ಯಾವ ಕೃತಿಯಿಂದ ಆಯ್ದುಕೊಂಡುವೆಂದು ಹೇಳಬರುವಂತಿಲ್ಲ.

೧೧. 'ನಾಡ ಪದಗಳು' ಶ್ರೀ ಎಲ್. ಗುಂಡಪ್ಪ ಪು. ೧೯೨ - ೧೯೭.

ಕಾಳಿದಾಸನ ' ಕುಮಾರ ಸಂಭವ ' ಪ್ರೇರಣೆಯೆಂಬಲ್ಲಿ ಸಂದೇಹವಿಲ್ಲ. ಆದರೆ ಈ ಇಬ್ಬರು ಮಹಾಕವಿಗಳ ಕಾವ್ಯ ತುಳಿದ ದಾರಿ ಭಿನ್ನ ಭಿನ್ನ. ಒಂದು ಕುಮಾರನ ಸಂಭವವಾದರೆ, ಇನ್ನೊಂದು ಗಿರಿಜೆಯ ಕಲ್ಯಾಣ.

ಹೀಗೆ ಪರಂಪರೆಯಿಂದ ನಡೆದು ಬಂದ ಈ ಅರ್ಧನಾರೀಶ್ವರನ ವಸ್ತುವಿಗೆ ಪ್ರತಿಯಾಗಿ ಮತ ವ್ಯಾಮೋಹದ ಯುಗದಲ್ಲಿ ಬಾಳಿದ ಕನ್ನಡದ ಜೈನ ಕವಿಗಳಲ್ಲಿ ' ಅರವಣ್ಣಿನ ' ಕಲ್ಪನೆ ಕಣ್ಣುತೆರೆಯಿತು. ಕವಿಯ ಕೃತಿಯು ಮೂಡಿ ಬರಲು ಯುಗಧರ್ಮ ಹಿನ್ನೆಲೆಯಾಗಿರುತ್ತದೆಂಬ ಮಾತನ್ನು ನೆನೆದರೆ ಈ ಬಗೆಯ ನವೀನ ಕಲ್ಪನೆಗೆ ಮೂಲ ಕಾರಣವಾದ ರಾಜಕೀಯ, ಧಾರ್ಮಿಕ, ಸಾಮಾಜಿಕ ಹಿನ್ನೆಲೆಯ ಬೆಳಕಿನಲ್ಲಿ ಕವಿ ಮನೋಧರ್ಮವನ್ನು ವಿಶ್ಲೇಷಿಸುವುದು ಅವಶ್ಯವೆನ್ನಿಸುತ್ತದೆ.

ಅಂದಿನ ಕನ್ನಡ ನಾಡಿನ ರಾಜಕೀಯ ಪರಿಸ್ಥಿತಿ ಹಲವು ವಿಷಮತೆಗಳಿಂದ ಕೂಡಿದ್ದಿತು. ಚಾಲುಕ್ಯ ಅರಸು ಮನೆತನಗಳ ಆಂತರಿಕ ಕಲಹ, ಚೋಳ ಅರಸರ ನಿರಂತರ ದಾಳಿ, ಹೊಯ್ಸಳ ಬಿಟ್ಟಿದೇವ ಸ್ವತಂತ್ರನಾದುದು, ಚಾಲುಕ್ಯ ಮನೆತನ ಇಳಿಮುಖವಾಗಿ ಕಲಚೂರ್ಯರು ಮೇಲೆದ್ದು ಬಂದುದು.[೧೨] ಅಲ್ಲದೆ ಕದಂಬ ಮತ್ತು ಹೊಯ್ಸಳರಲ್ಲಿ ನಿರಂತರ ಕದನ ನಡೆಯುತ್ತಿದ್ದುದು.[೧೩] ಇವು ಅಂದಿನ ಕರ್ಣಾಟಕದ ರಾಜಕೀಯದ ಬಿರುಗಾಳಿಗಳು.

ಧಾರ್ಮಿಕ ಕ್ಷೇತ್ರದಲ್ಲಿ, ಜೈನ, ವೈಷ್ಣವ, ಶೈವ, ವೀರಶೈವ ಧರ್ಮಗಳು ಪ್ರಮುಖವಾಗಿದ್ದುವಲ್ಲದೆ, ಬಹುದಿನಗಳಿಂದ ನೆಲೆನಿಂತ ಬೌದ್ಧ ಧರ್ಮವು ಹೇಳ ಹೆಸರಿಲ್ಲದಂತಾಗಿತ್ತು.[೧೪] ಶೈವ, ವೈಷ್ಣವ ಧರ್ಮಗಳ ಸ್ಪರ್ಧೆಯಲ್ಲಿ ಜೈನಧರ್ಮ ಇಳಿಮುಖವಾಗುತ್ತಲಿದ್ದಿತು. ಈ ವೇಳೆಗೆ ವೀರಶೈವ ಧರ್ಮದ ಆಂದೋಲನದಿಂದಾಗಿ ಜನತೆಯಲ್ಲಿ ನವಮನ್ವಂತರ ಉದಯಿಸಿತಲ್ಲದೆ, ಜೈನ ದೊರೆ ಹೊಯ್ಸಳ ಬಿಟ್ಟಿದೇವ ರಾಮಾನುಜರಿಂದ ಶ್ರೀ ವೈಷ್ಣವ ಮತಕ್ಕೆ ಮತಾಂತರ ಹೊಂದಿದುದು ಜೈನ ಧರ್ಮಕ್ಕೆ ಇನ್ನೂ ಆಘಾತವನ್ನುಂಟು ಮಾಡಿತು.[೧೫]

ಇಹದ ಬಾಳನ್ನು ಮರೆತು ಜನತೆಯ ಆಶೋತ್ತರಗಳನ್ನು ಗಮನಿಸದೆ ಕರ್ಮಕಾಂಡದಲ್ಲಿ ಮೈಮರೆತ ವೈದಿಕಮತ, ವಾಮಾಚಾರದಲ್ಲಿ ತೊಡಗಿದ ಶೈವಮತ,ಜನಸಾಮಾನ್ಯರ ಆಚರಣೆಗೆ ಗಹನವಾದ ಜೈನಮತ ಮೊದಲಾದುವನ್ನು

೧೨. ಚನ್ನಬಸವಣ್ಣನವರು. (ಚರಿತ್ರೆ, ತತ್ವ, ಸಾಹಿತ್ಯ ವಿವೇಚನೆ.)
ಡಾ. ಆರ್. ಸಿ. ಹಿರೇಮಠ ಪು. ೪-೧೧

೧೩. ' ಕಬ್ಬಿಗರ ಕಾವಂ ' -ದೇ.ಜಗೌ ಪೀಠಿಕೆ ಪು. xvi - xviii

೧೪. ಚನ್ನಬಸವಣ್ಣನವರು. (ಚ. ತ. ಸಾ. ವಿವೇಚನೆ.)
ಡಾ. ಆರ್. ಸಿ. ಹಿರೇಮಠ ಪು. ೧೬.

೧೫. ,, ,, ಡಾ. ಆರ್. ಸಿ. ಹಿರೇಮಠ ಪು. ೧೭.

ಹಿಂದೆ ಹಾಕಿ, ವೀರಶೈವ ಬದುಕಿಗೆ ಭರವಸೆಯನ್ನು ನೀಡಿತಲ್ಲದೆ ಅತ್ಯಂತ ಜನಪ್ರಿಯವಾಯಿತು.

ಶರಣರ ಆಂದೋಲನದ ಭರತಿ ಬಂದಿಳಿದ ತರುವಾಯ, ಹರಿಹರ – ರಾಘವಾಂಕರಂಥ ಮಹಾಕವಿಗಳು ಶರಣ ಪಥದಲ್ಲೇ ಮುನ್ನಡೆದು ಅಪೂರ್ವ ಸಾಹಿತ್ಯ ನಿರ್ಮಿಸಿದರು. ಗಿರಿಜಾ ಕಲ್ಯಾಣದಂಥ ಕಾಮದಹನದ ವಸ್ತುವನ್ನೊಳಗೊಂಡ ಕಾವ್ಯವನ್ನು ಹರಿಹರ ತೀರ ಪ್ರಭಾವಿಯಾಗಿ ಚಿತ್ರಿಸಿದ. ಮನುಜರ ಮೇಲೆ ಕಾವ್ಯವನ್ನು ಬರೆಯದೆ ಶಿವನಿಗೆ ನಾಲಿಗೆಯನ್ನು ಮೀಸಲು ಹಿಡಿದ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಹೊಯ್ಸಳ ದೊರೆ ವೀರ ಬಲ್ಲಾಳನ ಆಸ್ಥಾನದಲ್ಲಿದ್ದ ರುದ್ರಭಟ್ಟನು ದೊರೆಯನ್ನು ಶ್ಲೇಷೆಯಿಂದ ಶಿವನಿಗೆ ಹೋಲಿಸಿ 'ಜಗನ್ನಾಥ ವಿಜಯ' ಕಾವ್ಯದಲ್ಲಿ 'ಉಮಾ ಕಾಮಿನೀ ಜೀವಿತೇಶ' 'ಅರಿಕಾಮ ಧ್ವಂಸಿ' 'ಯುದ್ಧರಂಗ ತ್ರಿಣೇತ್ರ' ಎಂದು ಹೊಗಳಿದ. ಹೊಯ್ಸಳನನ್ನು ನಿಂದಿಸುವ ನೆವದಿಂದ ಆಂಡಯ್ಯನು ಹೊಯ್ಸಳನ ವೈರಿಯೂ ತನ್ನ ಆಶ್ರಯದಾತನೂ ಆದ ಕದಂಬ ಕಾಮನನ್ನು ಶಿವರಿಪು ಕಾಮನನ್ನಾಗಿ ಚಿತ್ರಿಸಿದಂತಿದೆ.[೧೬]

ಆಶ್ರಯ ನೀಡಿದ ದೊರೆಯನ್ನು ತಗುಲಿಟ್ಟು ಹೇಳುವ ಕಾವ್ಯ ಪರಂಪರೆ ಕನ್ನಡ ಸಾಹಿತ್ಯದಲ್ಲಿ ಮೊದಲನೆಯ ಗುಣವರ್ಮನಷ್ಟು ಪ್ರಾಚೀನ. ಶ್ರೀ ಮುಳಿಯ ತಿಮ್ಮಪ್ಪಯ್ಯನವರು 'ಕಬ್ಬಿಗರ ಕಾವ' ದಲ್ಲಿಯ ರಾಜಕೀಯ ಅಂಶಗಳನ್ನು ಹೆಕ್ಕಿ ತೆಗೆದ ಮೇಲೆ ಕವಿ ಆಶ್ರಯ ಕೊಟ್ಟ ದೊರೆ ಕದಂಬ ಕಾಮದೇವನ ಗೆಲುವನ್ನು ಹೇಳುತ್ತಿದ್ದಾನೆಂದು ನಂಬುವಲ್ಲಿ ಸಂಶಯ ಉಳಿದಿಲ್ಲ.[೧೭] ಈ ವಸ್ತು ಸಮಗ್ರ ರೂಪದಲ್ಲಿ ಆಂಡಯ್ಯನಲ್ಲಿ ಕಂಡು ಬಂದರೂ ಅವನಿಗೂ ಪೂರ್ವದ ಕೆಲ ಜೈನ ಕವಿಗಳಲ್ಲಿ ಈ ವಿಷಯ ಮಸುಕು ಮಸುಕಾಗಿ ಕಾಣಿಸಿಕೊಂಡಿದೆ. "ಆ ವೇಶ್ಯಾ ವಾಟದೊಳ್ ಧೂರ್ಜಟಿಯ ನೊಸಲ ಕಣ್ಣಿಂ ಸ್ಮರಂ ನಂದೆ ಪೊಯ್ದಂ" ಎಂಬ ನಾಗಚಂದ್ರನ ಒಂದೇ ಒಂದು ಮಾತು ತರುವಾಯ ಬ್ರಹ್ಮ ಶಿವ ವೃತ್ತವಿಲಾಸದಲ್ಲಿ ಮುಂದುವರಿದು, ನೇಮಿಚಂದ್ರನಲ್ಲಿ[೧೮] ರೂಹು ದಳೆದು ಆಂಡಯ್ಯನಲ್ಲಿ ಒಂದು ಕಾವ್ಯವಾಗಿ ಕಳಸವಿಟ್ಟಿದೆ.

---

೧೬. 'ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ'
— ಸದಾನಂದ ನಾಯಕ. ಪು. ೧೨೭.

೧೭. 'ಆಂಡಯ್ಯನೂ ಕನ್ನಡ ಮೆನಿಪಾನಾಡೂ'
— ಮುಳಿಯ ತಿಮ್ಮಪ್ಪಯ್ಯ. (ಕ. ಸಾ. ಪ. ೧೨ – ೩)

೧೮. ನೇಮಿಚಂದ್ರ. —ಡಾ. ಬಿ. ಎಸ್. ಕುಲಕರ್ಣಿ. (ಕ. ಕಾ. ವಿ.) ಪು. ೫೧.

ಇದರಿಂದ ಕನ್ನಡ ಸಾಹಿತ್ಯಕ್ಕೆ ಒಂದು ನವೀನ ಕಲ್ಪನೆ ಸಂದಿತೆನ್ನುವಲ್ಲಿ ಸಂದೇಹವಿಲ್ಲ. ಆದರೆ ಆ ವಿಡಂಬನೆ ಆಂಡಯ್ಯನ ಕಾವ್ಯದಲ್ಲಿ ಅವನಿಗರಿವಿಲ್ಲದೆಯೇ ವಿಫಲವಾಗಿದೆಂಬುದನ್ನು ಗಮನಿಸಬೇಕು.

ತಪಗೈಯ್ಯುತ್ತಿದ್ದ ಶಿವನ ಮೇಲೆ ಕಾಮನು ಪಂಚಬಾಣಗಳಿಂದ ದಾಳಿ ಮಾಡುತ್ತಾನೆ. ಕಾಮನ ಬಾಣಗಳಿಂದ 'ಕಾಳಗದೆಡೆಯೊಳ್ ತೊಟ್ಟನೆ ಮಾದೇವಿಯುರಸ' ಆರವೆಣ್ಣಾಗುತ್ತಾನೆ. ಕಾಮನ ಬಾಣಗಳಿಂದ ಘಾತಿಗೊಂಡ ಶಿವನು ಪ್ರತಿಯಾಗಿ ಶಾಪಕೊಡುತ್ತಾನೆ. "ಮುಂದೆನಿಂದು ಪಿರಿಯರೆಂಬುದಂ ಬಗೆಯದುರ್ಕಿಂದೆನ್ನೊಳ್ ಕಾದಿದೆ, ಅಂತದಱಿಂ ನಿನ್ನೋಪಳಂ ಕೂಡವೆ ಪೇಱರಱೆಯದಂತೆಲ್ಲಿಯಾದೊಡಂ ನಾಂ ಕಾವನೆಂಬುದಂ ಮಱೆದಿರ್ ಎಂದು ಬೇಗದೆ ಪೂಗಣೆಯಂಗೆ ಸಾಪಮನಿತ್ತುದಂ...."[೧೯] ಎಂಬುದನ್ನು ಗಮನಿಸಿದರೆ ಆಂಡಯ್ಯನ ಆಶಯದಂತೆ ಶಿವನು ಕಾಮನ ಬಾಣಗಳಿಗೆ ತುತ್ತಾಗಿ ಅರವೆಣ್ಣಾದ. ತನಗಾದ ಸೋಲನ್ನನುಭವಿಸುತ್ತ ಶಿವನು ಕಾಮನಿಗೆ ಶಾಪವನ್ನು ನೀಡಿದ. ಶಾಪಕ್ಕೆ ತುತ್ತಾದ ಕಾಮ ತಲೆಮರೆಸಿಕೊಂಡಿರುವಂತಾಯಿತು. ಕನಸಿನಲ್ಲಾದರೂ ಸರಿ ಅರುಹಂತನಲ್ಲದೆ ಅನ್ಯ ದೇವರಿಗೆರಗದ ಆದಿ ಆಂಡಯ್ಯನ ಮೊಮ್ಮಗನಾದ ಕವಿ ಶಿವನ ಸೋಲು ಪ್ರತಿಪಾದನೆಗಾಗಿ 'ಕಾವನಗೆಲ್ಲ' ವನ್ನು ಬರೆಯುತ್ತಿರುವನೆಂಬುದರಲ್ಲಿ ಸಂದೇಹವಿಲ್ಲ. ಅದರೊಂದಿಗೆ ಆಶ್ರಯ ನೀಡಿದ ಕದಂಬ ಕಾಮದೇವನ ಕೀರ್ತಿಯೂ ಚಿರಸ್ಥಾಯಿಯಾಗಬೇಕೆಂದು ಕವಿಯ ಉದ್ದೇಶ. ಈ ಉದ್ದೇಶಗಳಿಂದ ಪ್ರಭಾವಿತನಾಗಿ ಕಾವ್ಯ ನಿರ್ಮಿಸಿದ ಆಂಡಯ್ಯ, ಕಾಮನಂಥ ಸಮರ್ಥ ಬಡಗೊರವನ ಶಾಪಕ್ಕೆ ತುತ್ತಾಗಿ ತಲೆಮರೆಸಿಕೊಂಡಿದ್ದನೆಂಬುದನ್ನು ಚಿತ್ರಿಸುವುದರ ಔಚಿತ್ಯವೇನು? ಇದಲ್ಲದೆ ವಿರೋಧಿ ನಾಯಕ ವೀರಬಲ್ಲಾಳನ ಪರಾಕ್ರಮಕ್ಕೆ ಕದಂಬ ಕಾಮದೇವ ಹಿಮ್ಮೆಟ್ಟಿ ತಲೆಮರೆಸಿಕೊಂಡಿದ್ದನೆಂಬುದನ್ನಂತೂ ಕವಿ ಒಪ್ಪುವಂತಿಲ್ಲ. ಹೀಗಾಗಿ ಕಾಮನು ಅನಂಗನೆಂಬ ಸಂಪ್ರದಾಯವನ್ನು ಉಳಿಸಿಕೊಳ್ಳುವ ಭರದಲ್ಲಿ ಕವಿ ತನ್ನ ಕಾವ್ಯೋದ್ದೇಶದಿಂದ ವಿಫಲನಾದನೆಂದು ಹೇಳಬೇಕಾಗುತ್ತದೆ.

★ ಪ್ರಭುಸ್ವಾಮಿಮಠ

---

೧೯. 'ಕಬ್ಬಿಗರ ಕಾವಂ' ದೇಜಗೌ. ಪು. ೭೩. ಗ.

ಕೊಲೊಂಬೊ ಯೋಜನೆ

ಕೊಲೊಂಬೊ ಯೋಜನೆ ಆರಂಭವಾಗಿ ೨ ದಶಕಗಳಾಯಿತು. ಈ ಯೋಜನೆಯು ದಕ್ಷಿಣ ಮತ್ತು ಆಗ್ನೇಯ ಏಷ್ಯಾ ದೇಶಗಳ ಆರ್ಥಿಕಾಭಿವೃದ್ಧಿಗೆ ಸಂಬಂಧಪಟ್ಟದ್ದು. ಇದರಲ್ಲಿ ಇಂಡಿಯಾ ಮಹತ್ವದ ಪಾತ್ರ ವಹಿಸಿದೆ ಎಂಬುದು ಅನೇಕರ ಅಭಿಪ್ರಾಯವಾದಾಗ್ಯೂ. ಇಂಡಿಯಾ ದೇಶವೆ ಬೇರೆ ದೇಶಗಳ ಸಹಾಯದಿಂದ ತನ್ನ ಆರ್ಥಿಕಾಭಿವೃದ್ಧಿಯನ್ನು ಸಾಧಿಸುತ್ತಿರುವಾಗ, ಬೇರೆ ದೇಶಗಳ ಆರ್ಥಿಕಾಭಿವೃದ್ಧಿಗೆ ಇದು ಹೇಗೆ ಸಹಾಯ ಮಾಡಬಲ್ಲುದು ಎಂಬುದು ಜಟಿಲ ಪ್ರಶ್ನೆಯಾಗಿದೆ. ಆದುದರಿಂದ ಯಾವ ರೀತಿ ಇಂಡಿಯಾ ಇತರ ಏಷ್ಯಾ ವಲಯದ ದೇಶಗಳ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡುತ್ತಿದೆ ಎಂಬುದನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಇಂಡಿಯಾದ ಪಾತ್ರವನ್ನು ಚರ್ಚಿಸುವುದಕ್ಕೆ ಮುನ್ನ ಕೊಲೊಂಬೊ ಯೋಜನೆ ಎಂದರೇನು ? ಅದರ ವ್ಯಾಪ್ತಿ ಎಷ್ಟಿದೆ ? ಅದರ ಪ್ರಭಾವವೇನು ? ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ.

ಕೊಲೊಂಬೊ ಯೋಜನೆ ಎಂದರೇನು ?

ಇಂಡಿಯಾದ ಪಂಚವಾರ್ಷಿಕ ಯೋಜನೆ ಎಂಬ ಪದ ಉಪಯೋಗಿಸಿದಾಗಲೆಲ್ಲಾ ನಮ್ಮ ಮನಸ್ಸಿನಲ್ಲಿ ಈ ಕೆಳಗೆ ಕಂಡ ಭಾವನೆಗಳು ಉಂಟಾಗುತ್ತವೆ. (೧) ಯೋಜನೆಯನ್ನು ರೂಪಿಸಲು ಮತ್ತು ನಿಯಂತ್ರಿಸಲು ಒಂದು ಕೇಂದ್ರ ಸಂಸ್ಥೆ ಇದೆ. (೨) ಯೋಜನೆಯಲ್ಲಿ ನಿರೂಪಿಸಿರುವ ಕಾರ್ಯಕ್ರಮಗಳನ್ನು ಜಾರಿಗೆ ತರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹೊಣೆ. (೩) ಯೋಜನೆಯ ಕಾರ್ಯಕ್ರಮಗಳನ್ನು ಕೇಂದ್ರ ಸಂಸ್ಥೆಯ ಆದೇಶದಂತೆಯೇ ನಡೆಸಬೇಕು. (೪) ಇವುಗಳ ವೆಚ್ಚಕ್ಕಾಗಿ ಪ್ರತ್ಯೇಕ ನಿಧಿ ಇದೆ. (೫) ಕೇಂದ್ರ ಯೋಜನಾ ಸಮಿತಿಯ ಆದೇಶವಿಲ್ಲದೆ ಯಾವ ಕಾರ್ಯಗಳನ್ನೂ ಪ್ರಾರಂಭಿಸುವಂತಿಲ್ಲ.

ಆದರೆ ಕೊಲೊಂಬೊ ಯೋಜನೆಯನ್ನು ಈ ದೃಷ್ಟಿಯಿಂದ ಪರಿಶೀಲಿಸಿದಾಗ ಅದೊಂದು ಯೋಜನೆಯಲ್ಲ ಎನ್ನಬಹುದು. ಇದು ದಕ್ಷಿಣ ಮತ್ತು ಆಗ್ನೇಯ ಏಷ್ಯಾ ದೇಶಗಳಿಗೆಲ್ಲಾ ಅನ್ವಯಿಸುವಂತೆ ರಚಿಸಿರುವ ಸಮಗ್ರ ಯೋಜನೆಯೂ ಅಲ್ಲ. ಏಷ್ಯಾ ದೇಶಗಳ ಆರ್ಥಿಕ ಅಭಿವೃದ್ಧಿಯಲ್ಲಿ ಪರಸ್ಪರ ಸಹಕಾರ ಮತ್ತು ಕೆಲವು ವಿದೇಶಿ ಸರ್ಕಾರಗಳ ನೆರವನ್ನು ಸೂಚಿಸುವ ಯೋಜನೆ ಎಂದು ಇದನ್ನು ಬಣ್ಣಿಸಬಹುದು. ಈ ಯೋಜನೆಗೆ ಸೇರಲೇಬೇಕೆಂದು

ಯಾವ ರಾಷ್ಟ್ರದ ಮೇಲೂ ಒತ್ತಾಯವಿಲ್ಲ. ಈ ಯೋಜನೆಯು ವೆಚ್ಚಕ್ಕೆ ಹಣ ಒದಗಿಸಲು ಯಾವ ವಿಧವಾದ ಕೇಂದ್ರ ನಿಧಿಯನ್ನೂ ಸ್ಥಾಪಿಸಿಲ್ಲ. ದಕ್ಷಿಣ ಮತ್ತು ಆಗ್ನೇಯ ಏಷ್ಯಾ ವಲಯದಲ್ಲಿರುವ ದೇಶಗಳು ತಮ್ಮೊಳಗೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಂಡು ಆ ಒಪ್ಪಂದದ ಪ್ರಕಾರ ತಮ್ಮ ದೇಶಗಳ ಆರ್ಥಿಕಾಭಿವೃದ್ಧಿಯಲ್ಲಿ ಪರಸ್ಪರ ಸಹಕರಿಸುವುದೇ ಈ ಯೋಜನೆಯ ಮುಖ್ಯ ಲಕ್ಷಣವೆನ್ನಬಹುದು. ಈ ವಲಯದಲ್ಲಿರುವ ಯಾವುದಾದರೂ ದೇಶಕ್ಕೆ ಆರ್ಥಿಕಾಭಿವೃದ್ಧಿ ವಿಷಯದಲ್ಲಿ ಸಹಾಯ ಬೇಕಾದರೆ, ಮತ್ತೊಂದು ದೇಶವನ್ನು ಸಹಾಯ ಮಾಡುವಂತೆ ತಾನೇ ನೇರವಾಗಿ ಕೇಳಿಕೊಳ್ಳುತ್ತದೆ. ಈ ಕೋರಿಕೆಗೆ ಮತ್ತೊಂದು ದೇಶವು ಮನ್ನಣೆ ಕೊಟ್ಟರೆ ಅವುಗಳ ಮಧ್ಯ ಸಹಕಾರ ಆರಂಭವಾಗುತ್ತದೆ. ಸಹಾಯವನ್ನು ಕೋರಿದ ದೇಶ ಯಾವ ರೀತಿಯಲ್ಲೇ ಆಗಲಿ ತನ್ನ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಿಲ್ಲ. ಅದೇ ರೀತಿ ಸಹಾಯ ಒದಗಿಸಲು ಒಪ್ಪಿಕೊಂಡ ದೇಶ ಮತ್ತೊಂದು ದೇಶದ ಮೇಲೆ ತನ್ನ ಅಧಿಕಾರವನ್ನು ಚಲಾಯಿಸುವಂತಿಲ್ಲ. ಇಂತಹ ಉತ್ತಮ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವುದೇ ಈ ಯೋಜನೆಯ ಯಶಸ್ಸಿಗೆ ಮುಖ್ಯ ಕಾರಣ ಎನ್ನಬಹುದು.

ಕೊಲೊಂಬೊ ಯೋಜನೆ ಉದಯ

ಕೊಲಂಬೊ ನಗರದಲ್ಲಿ ನಡೆದ ಒಂದು ಸಮ್ಮೇಳನದ ಫಲವಾಗಿ ಮೇಲೆ ವಿವರಿಸಿರುವಂತಹ ಯೋಜನೆ ಆರಂಭವಾಯಿತು. ೧೯೫೦ರಲ್ಲಿ ಸಿಲೋನಿನ ರಾಜಧಾನಿಯಾದ ಕೊಲೊಂಬೊ ನಗರದಲ್ಲಿ ಬ್ರಿಟಿಷ್ ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶಾಂಗ ಸಚಿವರುಗಳ ಸಮ್ಮೇಳನ ನಡೆಯಿತು. ಆ ವೇಳೆಗೆ ಏಷ್ಯಾದ ಅನೇಕ ದೇಶಗಳಿಗೆ ರಾಜಕೀಯ ಸ್ವಾತಂತ್ರ್ಯ ದೊರೆತಿದ್ದಿತು. ಈ ದೇಶಗಳು ತಮ್ಮ ಆರ್ಥಿಕಾಭಿವೃದ್ಧಿಯನ್ನು ಸಾಧಿಸಲು ಹಾತೊರೆಯುತ್ತಿದ್ದವು. ಈ ದೇಶಗಳ ಆರ್ಥಿಕಾಭಿವೃದ್ಧಿಗೆ ಯಾವ ರೀತಿ ಸಹಕಾರ ನೀಡಬೇಕೆಂಬ ಪ್ರಶ್ನೆ ಕಾಮನ್‌ವೆಲ್ತ್ ವಿದೇಶಾಂಗ ಸಚಿವರುಗಳ ಸಮ್ಮೇಳನದಲ್ಲಿ ಬಂದಾಗ ಆಸ್ಟ್ರೇಲಿಯಾದ ಸಚಿವರು ಕೊಲೊಂಬೊ ಯೋಜನೆಯ ಸಲಹೆ ಮುಂಡಿಸಿದರು. ಕಾಮನ್‌ವೆಲ್ತ್ ರಾಷ್ಟ್ರಗಳ ಪೈಕಿ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಕೆನಡಾ ಮತ್ತು ಬ್ರಿಟನ್ ಅಭಿವೃದ್ಧಿ ಹೊಂದಿರುವ ದೇಶಗಳಾದುದರಿಂದ ಅವು ಉಳಿದ ಏಷ್ಯಾ ವಲಯದಲ್ಲಿರುವ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಆರ್ಥಿಕಾಭಿವೃದ್ಧಿ ವಿಷಯದಲ್ಲಿ ಸಹಾಯ ಮಾಡಬೇಕು ಎಂದು ಆಸ್ಟ್ರೇಲಿಯಾದ ಸಚಿವರು ವಾದಿಸಿದರು. ಈ ಸಲಹೆಯನ್ನು ಅಲ್ಲಿ ನೆರೆದಿದ್ದ ಎಲ್ಲಾ ದೇಶಗಳ ಸಚಿವರು ಒಪ್ಪಿಕೊಂಡರು. ಜೊತೆಗೆ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲದೆ, ಉಳಿದ ಏಷ್ಯಾ ದೇಶಗಳೂ ಇಂತಹ ಸಹಾಯ

ವನ್ನು ಪಡೆಯುಬಹುದೆಂಬ ತತ್ವವನ್ನು ಎಲ್ಲರೂ ಒಪ್ಪಿಕೊಂಡರು. ಅದೇ ರೀತಿ ಅಭಿವೃದ್ಧಿ ಹೊಂದಿರುವ ಬೇರೆ ಯಾವುದಾದರೂ ರಾಷ್ಟ್ರವು ಈ ವಲಯದ ರಾಷ್ಟ್ರಗಳಿಗೆ ಸಹಾಯ ಒದಗಿಸಲು ಮುಂದೆ ಬಂದರೆ ಅದನ್ನೂ ಒಪ್ಪಿಕೊಳ್ಳಬಹುದು ಎಂಬ ತೀರ್ಮಾನಕ್ಕೆ ಬರಲಾಯಿತು. ಹೀಗೆ ಪರಸ್ಪರ ಸಹಕಾರ ನೀಡಲು ಕಾಮನ್‌ವೆಲ್ತ್ ರಾಷ್ಟ್ರಗಳ ಮಧ್ಯೆ ಮಾಡಿಕೊಂಡ ಒಪ್ಪಂದವನ್ನೇ ಕೊಲೊಂಬೋ ಯೋಜನೆ ಎಂದು ಕರೆಯಲಾಯಿತು, ೧೯೫೦ ರಲ್ಲಿ ಏಳು ಕಾಮನ್‌ವೆಲ್ತ್ ರಾಷ್ಟ್ರಗಳ ಸಹಕಾರದಿಂದ ಆರಂಭವಾದ ಯೋಜನೆ ಇಂದು ೨೪ ರಾಷ್ಟ್ರಗಳನ್ನು ಒಳಗೊಂಡಿದೆ. ಈ ಯೋಜನೆಯ ಘನ ಉದ್ದೇಶವನ್ನು ನೋಡಿ ಅನೇಕ ಏಷ್ಯಾ ದೇಶಗಳು ಮತ್ತು ಏಷ್ಯಾದ ಹೊರಗಿನ ದೇಶಗಳು ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಕ್ರಮೇಣ ಮುಂದೆ ಬಂದವು. ಈಗಿರುವ ೨೪ ಸದಸ್ಯರಾಷ್ಟ್ರಗಳ ಪೈಕಿ, ೯ ಮಾತ್ರ ಕಾಮನ್‌ವೆಲ್ತ್‌ರಾಷ್ಟ್ರಗಳು. ಉಳಿದವು ಏಷ್ಯಾಕ್ಕೆ ಸೇರಿದ ಮತ್ತು ಏಷ್ಯಾದ ಹೊರಗಿನ ರಾಷ್ಟ್ರಗಳು.

— ಕೊಲೊಂಬೊ ಯೋಜನೆಯಲ್ಲಿ ಪಾಲ್ಗೊಂಡಿರುವ ರಾಷ್ಟ್ರಗಳು ಮತ್ತು ಈ ಯೋಜನೆಯ ಕಾರ್ಯಕ್ರಮಗಳು

ಈ ಯೋಜನೆಯಲ್ಲಿ ಪಾಲ್ಗೊಂಡಿರುವ ರಾಷ್ಟ್ರಗಳನ್ನು ಎರಡು ಗುಂಪಾಗಿ ವಿಂಗಡಿಸಬಹುದು ; (೧) ಯೋಜನೆಯ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಲು ನೆರವು ನೀಡುವ ದೇಶಗಳು; (೨) ಯೋಜನೆಯಿಂದ ನೆರವು ಪಡೆಯುವ ದೇಶಗಳು.

ಮೊದಲನೆ ಗುಂಪಿಗೆ ಸೇರಿರುವ ದೇಶಗಳು; (೧) ಆಸ್ಟ್ರೇಲಿಯ (೨) ಬ್ರಿಟನ್ (೩) ಕೆನಡಾ (೪) ಜಪಾನ್ (೫) ನ್ಯೂಜಿಲೆಂಡ್, ಮತ್ತು (೬) ಅಮೆರಿಕಾದ ಸಂಯುಕ್ತ ಸಂಸ್ಥಾನಗಳು.

ಎರಡನೆಯ ಗುಂಪಿಗೆ ಸೇರಿರುವ ದೇಶಗಳು: ೧) ಆಫ್ಘಾನಿಸ್ತಾನ ೨) ಭೂತಾನ ೩) ಬರ್ಮಾ ೪) ಕ್ಯಾಂಬೋಡಿಯ ೫) ಸಿಲೋನ್ ೬) ಇಂಡಿಯಾ ೭) ಇಂಡೋನೇಷಿಯಾ ೮) ಇರಾನ್ ೯) ದಕ್ಷಿಣ ಕೋರಿಯಾ ೧೦) ಲಾವೋಸ್ ೧೧) ಮಲೇಷಿಯಾ ೧೨) ಮಾಲ್ಡಿವ್ ದ್ವೀಪಗಳು ೧೩) ನೇಪಾಳ ೧೪) ಪಾಕಿಸ್ತಾನ ೧೫) ಫಿಲಿಪೈನ್ಸ್ ೧೬) ಸಿಂಗಪುರ ೧೭) ಥೈಲ್ಯಾಂಡ್ ೧೮) ದಕ್ಷಿಣ ವಿಯಟ್ನಾಂ.

ನೆರವು ನೀಡುವ ದೇಶಗಳು ತಮ್ಮ ಶಕ್ತ್ಯಾನುಸಾರವಾಗಿ ತಮಗೆ ಇಷ್ಟ ಬಂದ ದೇಶಗಳಿಗೆ ಎರಡು ರೀತಿಯಲ್ಲಿ ಸಹಾಯ ಒದಗಿಸುತ್ತವೆ : ೧] ಸಾಲದ ರೂಪದಲ್ಲಿ ಅಥವಾ ಧನ ಸಹಾಯದ ರೂಪದಲ್ಲಿ ಏಷ್ಯಾದ ದೇಶಗಳಿಗೆ ಬಂಡ

ವಾಳ ಒದಗಿಸುತ್ತವೆ. ಇದಲ್ಲದೆ ಆಹಾರಧಾನ್ಯಗಳು, ಕೃತಕಗೊಬ್ಬರಗಳು, ಯಂತ್ರೋಪಕರಣಗಳು ಮತ್ತು ಸಾರಿಗೆ ವಾಹನಗಳನ್ನು ಒದಗಿಸುವುದರ ಮೂಲಕವೂ ಸಹಾಯನೀಡುತ್ತವೆ. ೨] ತಾಂತ್ರಿಕ ಸಹಾಯ ಒದಗಿಸುತ್ತವೆ.

ಎರಡನೆ ಗುಂಪಿನ ದೇಶಗಳು ಮೊದಲನೆ ಗುಂಪಿಗೆ ಸೇರಿದ ದೇಶಗಳಿಂದ ನೆರವನ್ನು ಪಡೆಯುತ್ತವೆ. ಆದರೆ ಇವುಗಳಲ್ಲಿ ಸ್ವಲ್ಪಮಟ್ಟಿಗೆ ಅಭಿವೃದ್ಧಿ ಹೊಂದಿರುವ ದೇಶಗಳು ತಮ್ಮ ಅಕ್ಕಪಕ್ಕದ ರಾಷ್ಟ್ರಗಳಾದ ಇತರ ಏಷ್ಯಾ ದೇಶಗಳಿಗೆ ತಮ್ಮ ಕೈಲಾದ ನೆರವನ್ನು ನೀಡಿ ಅವುಗಳ ಆರ್ಥಿಕಾಭಿವೃದ್ಧಿಗೆ ಸಹಾಯಮಾಡುತ್ತವೆ. ಬರ್ಮಾ, ಸಿಲೋನ್, ಇಂಡಿಯಾ, ದಕ್ಷಿಣ ಕೋರಿಯಾ, ಮಲೇಷಿಯಾ, ಪಾಕಿಸ್ತಾನ, ಫಿಲಿಫೈನ್ಸ್, ಸಿಂಗಪುರ ಮತ್ತು ಥೈಲ್ಯಾಂಡ್‌ದೇಶಗಳು ತಮ್ಮ ಶಕ್ತ್ಯಾನುಸಾರವಾಗಿ ಉಳಿದ ಏಷ್ಯಾ ದೇಶಗಳಿಗೆ ಸಹಾಯ ಮಾಡುತ್ತಿವೆ.

ಏಷ್ಯಾದ ದೇಶಗಳಲ್ಲಿ ಜನಸಂಖ್ಯೆಯ ಒತ್ತಡ ಬಹಳ ಇರುವುದರಿಂದ ಮತ್ತು ಆಹಾರಧಾನ್ಯಗಳ ಕೊರತೆ ಇರುವುದರಿಂದ ಆಹಾರಧಾನ್ಯಗಳ ಉತ್ಪನ್ನ ಹೆಚ್ಚಿಸಲು ಕೊಲೊಂಬೊ ಯೋಜನೆಯ ಕಾರ್ಯಕ್ರಮಗಳಲ್ಲಿ ಮೊದಲನೆ ಪ್ರಾಶಸ್ತ್ಯಕೊಡಲಾಗಿದೆ. ಇದಲ್ಲದೆ ಕೈಗಾರಿಕಾಭಿವೃದ್ಧಿ, ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಗಳ ಅಭಿವೃದ್ಧಿಗೂ ಸಾಕಷ್ಟು ಪ್ರಾಶಸ್ತ್ಯ ನೀಡಲಾಗಿದೆ. ಏಷ್ಯಾದೇಶಗಳ ವಿದ್ಯಾರ್ಥಿಗಳಿಗೆ ತಾಂತ್ರಿಕ ಜ್ಞಾನವನ್ನು ಒದಗಿಸಲು ಮತ್ತು ಆಡಳಿತಗಾರರಿಗೆ ಹೆಚ್ಚಿನ ತರಬೇತಿ ನೀಡಲು ಬಹಳ ಗಮನ ನೀಡಲಾಗಿದೆ.

ಎರಡು ದಶಕಗಳ ಅವಧಿಯಲ್ಲಿ [೧೯೫೦-೭೦] ಆಸ್ಟ್ರೇಲಿಯಾ, ಬ್ರಿಟನ್, ಕೆನಡಾ, ಜಪಾನ್, ನ್ಯೂಜಿಲೆಂಡ್ ಮತ್ತು ಅಮೇರಿಕಾದ ಸಂಯುಕ್ತ ಸಂಸ್ಥಾನಗಳಿಂದ ಏಷ್ಯಾದ ದೇಶಗಳಿಗೆ ದೊರೆತಿರುವ ನೆರವಿನ ಮೊತ್ತ ೨೭,೪೯೫ ದಶಲಕ್ಷ ಅಮೇರಿಕನ್ ಡಾಲರುಗಳಷ್ಟಿದೆ [೨೦,೬೨೧ ಕೋಟಿ ರೂಪಾಯಿಗಳು]. ಇದರ ಪೈಕಿ ತಾಂತ್ರಿಕ ತರಬೇತಿ ಕಾರ್ಯಕ್ರಮಗಳಿಗೆ ೧,೨೦೦ ದಶಲಕ್ಷ ಅಮೇರಿಕನ್ ಡಾಲರುಗಳನ್ನು ವೆಚ್ಚಮಾಡಲಾಗಿದೆ.

ತಾಂತ್ರಿಕ ತರಬೇತಿ ಕಾರ್ಯಕ್ರಮಗಳಿಗಾಗಿ ಒದಗಿಸಿದ ಒಟ್ಟು ಹಣದ ಪೈಕಿ ಶೇಕಡಾ ೧೮ರಷ್ಟು ವಿದ್ಯಾರ್ಥಿಗಳ ತರಬೇತಿಗಾಗಿ, ಶೇಕಡಾ ೪೮ರಷ್ಟು ತಾಂತ್ರಿಕ ನಿಪುಣರ ಮತ್ತು ಅಧ್ಯಾಪಕರ ಸೇವೆ ಒದಗಿಸುವುದಕ್ಕಾಗಿ ಮತ್ತು ಶೇಕಡಾ ೩೪ರಷ್ಟು ತಾಂತ್ರಿಕ ಸಲಕರಣೆಗಳನ್ನು ಒದಗಿಸುವುದಕ್ಕಾಗಿ, ವೆಚ್ಚ ಮಾಡಲಾಗಿದೆ.[೧]

---

೧ The Colombo Plan : The Colombo plan Bureau Colombo : Aug, 1970.

ಏಷ್ಯಾದ ದೇಶಗಳಲ್ಲಿಯೆ ೯,೦೦೦ ಜನರಿಗೆ ತರಬೇತಿ ಕೊಡಲು ಏರ್ಪಾಡು ಮಾಡಲಾಗಿದೆ. ಈ ತರಬೇತಿಗೆ ಅವಕಾಶ ಮಾಡಿಕೊಟ್ಟ ದೇಶಗಳ ಪೈಕಿ ಇಂಡಿಯಾ ಮೊದಲನೆ ಸ್ಥಾನ ಪಡೆದಿದೆ. ಪಾಕಿಸ್ತಾನ, ದಕ್ಷಿಣ ಕೋರಿಯಾ, ಸಿಂಗಪುರ, ಥೈಲ್ಯಾಂಡ್, ಮಲೇಷಿಯಾ, ಸಿಲೋನ ಮತ್ತು ಫಿಲಿಫೈನ್ಸ್ ದೇಶಗಳು ತರಬೇತಿಗೆ ಅವಕಾಶಮಾಡಿಕೊಟ್ಟ ಇತರ ದೇಶಗಳಾಗಿವೆ.

ಇದುವರೆಗೆ ಈ ಯೋಜನೆಯು ಆಶ್ರಯದಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳಿಂದ ಏಷ್ಯಾದ ದೇಶಗಳಿಗೆ ಒಂದು ಭರವಸೆ ದೊರೆತಂತಾಗಿದೆ. ನಿಷ್ಠೆಯಿಂದ ಪ್ರತಿಯೊಂದು ದೇಶವೂ ಕಾರ್ಯಕ್ರಮವನ್ನು ಜಾರಿಗೆ ತಂದರೆ ಅಭಿವೃದ್ಧಿ ಸಾಧಿಸಬಹುದೆಂಬ ಧೃಢ ನಂಬಿಕೆ ಅವುಗಳಲ್ಲಿ ಉಂಟಾಗಿದೆ.

ಆದರೆ ಏಷ್ಯಾದ ದೇಶಗಳು ಒಂದು ಪ್ರಮುಖ ಸಮಸ್ಯೆಯನ್ನು ಎದುರಿಸುತ್ತಿವೆ. ಈ ದೇಶಗಳಲ್ಲಿ ಜನಸಂಖ್ಯೆಯು ಬೆಳವಣಿಗೆ ಮತ್ತು ಅನುಭೋಗಿ ವಸ್ತುಗಳ ಉತ್ಪಾದನೆಯು ನಡುವೆ ಪಂಕದ ಓಟ ನಡೆಯುತ್ತಿದೆ. ಜನಸಂಖ್ಯೆಯು ಬೆಳವಣಿಗೆ ಉತ್ಪಾದನೆಗಿಂತ ಮುಂದಿದೆ. ಕೇವಲ ೫ ವರ್ಷಗಳ ಅವಧಿಯಲ್ಲಿ (೧೯೬೫-೧೯೭೦) ಈ ಯೋಜನೆಗೆ ಒಳಗೊಂಡಿರುವ ಏಷ್ಯಾ ದೇಶಗಳ ಜನಸಂಖ್ಯೆ ೯೧.೫ ಕೋಟಿಗಳಿಂದ ೧೦೬.೨ ಕೋಟಿಗಳಿಗೆ ಏರಿದೆ. ಅಂದರೆ ಜನಸಂಖ್ಯೆಯು ಬೆಳವಣಿಗೆ ಪ್ರತಿ ವರ್ಷ ಶೇಕಡಾ ೨.೬ ರಷ್ಟಿದೆ.[೨] ಇಂತಹ ಸಮಸ್ಯೆ ಇರುವುದರಿಂದಲೇ ಈ ದೇಶಗಳ ಜನರಿಗೆ ಆರ್ಥಿಕ ಅಭಿವೃದ್ಧಿ ವಿಷಯದಲ್ಲಿ ಅಸಮಾಧಾನ ಉಂಟಾಗಲು ಕಾರಣವಾಗಿದೆ. ತಾವು ಸಾಧಿಸಿರುವ ಆರ್ಥಿಕಾಭಿವೃದ್ಧಿ ವಿಷಯದಲ್ಲಿ ಜನರಿಗೆ ಮನದಟ್ಟಾಗಬೇಕಾದರೆ ಜನಸಂಖ್ಯೆಯು ಏರಿಕೆಯ ಮೇಲೆ ಹತೋಟಿ ಇಟ್ಟುಕೊಳ್ಳಬೇಕೆಂಬ ನಿರ್ಧಾರಕ್ಕೆ ಏಷ್ಯಾ ದೇಶಗಳು ಬಂದಿವೆ. ಇದನ್ನು ಸಾಧಿಸಲು ಏಷ್ಯಾ ದೇಶಗಳು ಜನನ ನಿಯಂತ್ರಣ ಕಾರ್ಯಕ್ರಮಗಳನ್ನು ಆರಂಭಿಸಿವೆ. ಇದರಲ್ಲಿ ಜಯ ಪಡೆಯಲು ಪರಸ್ಪರ ಸಹಕರಿಸುತ್ತಿವೆ. ಮತ್ತು ವಿದೇಶಿ ನೇರವನ್ನು ಪಡೆಯುತ್ತಿವೆ.

ಕೊಲೊಂಬೊ ಯೋಜನೆಯನ್ನು ಯಶಸ್ವಿಗೊಳಿಸುವುದರಲ್ಲಿ ಇಂಡಿಯಾದ ಪಾತ್ರ

ಆರ್ಥಿಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪೈಕಿ ಒಂದಾದ ಇಂಡಿಯಾವು ಕೊಲಂಬೊ ಯೋಜನೆಯಲ್ಲಿ ಸಕ್ರೀಯವಾದ ಪಾತ್ರವನ್ನು

---

೨. World Population Estimates : Population Reference Bureau, Washington, D. C. 1970.

ವಹಿಸುತ್ತಿರುವದರಲ್ಲಿ ಇಂಡಿಯಾ ಏಷ್ಯಾ ದೇಶಗಳ ಪೈಕಿ ಅಗ್ರಸ್ಥಾನವನ್ನು ಪಡೆದಿದೆ. ತನ್ನ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಇಂಡಿಯಾ ಹೋರಾಡುತ್ತಿದ್ದರೂ, ತನಗಿಂತಲೂ ಬಲಹೀನವಾದ ರಾಷ್ಟ್ರಗಳ ಆರ್ಥಿಕಾಭಿ-ವೃದ್ಧಿಗೆ ತನ್ನ ಕೈಲಾದ ಸಹಾಯಮಾಡಲು ಮುಂದೆ ಬಂದಿದೆ. ಎಲ್ಲಾ ಆರ್ಥಿಕ ಕ್ಷೇತ್ರಗಳಲ್ಲೂ ಇಂಡಿಯಾಕ್ಕೆ ಪ್ರಗತಿ ಸಾಧಿಸಲು ಸಾಧ್ಯವಾಗಿಲ್ಲ. ಆದರೆ ಎಲ್ಲೆಲ್ಲಿ ಸಾಕಷ್ಟು ಪ್ರಮಾಣದಲ್ಲಿ ಪ್ರಗತಿ ಸಾಧಿಸಿದೆಯೋ ಆ ಕ್ಷೇತ್ರಗಳಲ್ಲಿ ಪಡೆದಿರುವ ಅನುಭವ ಮತ್ತು ಲಾಭವನ್ನು ತನ್ನ ನೆರೆಯ ಏಷ್ಯಾ ರಾಷ್ಟ್ರಗಳೊಂದಿಗೆ ಹಂಚಿ ಕೊಳ್ಳಲು ಮುಂದೆ ಬಂದಿದೆ.

ಏಷ್ಯಾದ ಎಲ್ಲಾ ದೇಶಗಳಿಗೂ ತಾಂತ್ರಿಕ ಸಹಾಯವನ್ನು ಇಂಡಿಯಾ ಒದಗಿಸುತ್ತಿದೆ. ಏಷ್ಯಾ ದೇಶಗಳ ವಿದ್ಯಾರ್ಥಿಗಳು ಮತ್ತು ಅಧಿಕಾರಿಗಳು ಇಂಡಿಯಾದ ವಿವಿಧ ಭಾಗಗಳಲ್ಲಿ ತಾಂತ್ರಿಕ ತರಬೇತಿ ಪಡೆಯುತ್ತಿದ್ದಾರೆ. ಇದಲ್ಲದೆ ಇಂಡಿಯಾದ ತಾಂತ್ರಿಕ ನಿಪುಣರು ಆ ದೇಶಗಳಿಗೆ ಹೋಗಿ ಸ್ಥಳೀಯ ಅಧಿಕಾರಿಗಳೊಂದಿಗೆ ಕಲೆತು ಅಲ್ಲಿಯೆ ತಾಂತ್ರಿಕ ತರಬೇತಿ ಕೊಡುತ್ತಿದ್ದಾರೆ. ಕೆಲವು ದೇಶಗಳಿಗೆ ಉಪಕರಣಗಳನ್ನು ಒದಗಿಸಲಾಗಿದೆ.

೧೯೭೦ರ ಕೊನೆ ವೇಳೆಗೆ ೪೬೭೪ ಜನರಿಗೆ ಇಂಡಿಯಾದಲ್ಲಿ ತರಬೇತಿ ಸೌಕರ್ಯ ಕಲ್ಪಿಸಿಕೊಡಲಾಗಿತ್ತು. ಇದರಲ್ಲಿ ಅರ್ಧದಷ್ಟು ನೇಪಾಳಿಗಳಿದ್ದರು. ಉಳಿದ ದೇಶಗಳಿಂದ ಬಂದಿದ್ದ ಅಭ್ಯರ್ಥಿಗಳ ಸಂಖ್ಯೆ ಹೀಗಿದೆ: ಸಿಲೋನ್ ೫೪೧, ಮಲೇಷಿಯ ೪೨೦, ಥೈಲ್ಯಾಂಡ್ ೩೪೬, ಫಿಲಿಫೈನ್ಸ್ ೭೧೫, ಅಫ್‌ಘಾನಿಸ್ಥಾನ ೧೯೯, ಇಂಡೋನೇಷಿಯ ೧೧೩, ಬರ್ಮಾ ೧೦೮, ಇನ್ನುಳಿದ ಅಭ್ಯರ್ಥಿಗಳು ಇತರ ಏಷ್ಯಾದೇಶಗಳಿಗೆ ಸೇರಿದವರಾಗಿದ್ದಾರೆ.[೩]

ಇದಲ್ಲದೆ ಇಂಡಿಯಾದ ೨೦೦ ತಾಂತ್ರಿಕ ನಿಪುಣರು ಏಷ್ಯಾದ ಬೇರೆ ದೇಶಗಳಿಗೆ ಹೋಗಿ ಸೇವೆ ಸಲ್ಲಿಸಿದ್ದಾರೆ. ಅಫಘಾನಿಸ್ತಾನದ ಕೋರಿಕೆಯ ಪ್ರಕಾರ ಇಂಜನಿಯರುಗಳನ್ನು ಅಲ್ಲಿಗೆ ಕಳುಹಿಸಲಾಯಿತು. ಇವರುಗಳು ಖಾನಾಬಾದ, ಅಲ್‌ಚಿನ್ ಮತ್ತು ಗೋರಾಬಂದ್ ಯೋಜನೆಗಳ ಪರೀಕ್ಷೆ ನಡೆಸಿ ಸೂಕ್ತ ಸಲಹೆಯನ್ನಿತ್ತರು. ಈ ಯೋಜನೆಗಳಿಗೆ ಸೇರಿದಂತೆ ಕಾಲುವೆಗಳ ರಚನೆ ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆ ವಿಷಯದಲ್ಲಿ ತೆಗೆದುಕೊಳ್ಳಬೇಕಾದ ಕಾರ್ಯಕ್ರಮಗಳನ್ನು ರೂಪಿಸಿಕೊಟ್ಟರು. ಕಾಬೂಲ ನಗರಕ್ಕೆ ಅನ್ವಯಿಸುವ ವಿದ್ಯುತ ಹಂಚಿಕೆ ಯೋಜನೆಯನ್ನು ತಯಾರಿಸಿಕೊಟ್ಟರು.

---

೩. Colombo plan's 20th Anniversary– The Participant, July 1971, P. 23.

ಕ್ಯಾಂಬೋಡಿಯು ಸರಕಾರದ ಕೋರಿಕೆ ಮೇರೆಗೆ ಇಂಡಿಯಾದ ಇಂಜನಿಯುರುಗಳು ಪ್ರವಾಹ ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆಯನ್ನು ಮೆಕಾಂಗ್ ನದಿ ಜಲಾನಯನ ಪ್ರದೇಶದಲ್ಲಿ ಸ್ಥಾಪಿಸಿದ್ದಾರೆ.

ಥೈಲ್ಯಾಂಡ್ ಮತ್ತು ಫಿಲಿಫೈನ್ಸ್ ಸರಕಾರಗಳ ಕೋರಿಕೆ ಮೇರೆಗೆ ಇಂಡಿಯಾದ ರೈಲ್ವೆ ಇಂಜನಿಯರುಗಳು ಆ ದೇಶಗಳ ರೈಲ್ವೆ ಪುನರ್ವ್ಯವಸ್ಥೆಯು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ಹೀಗೆ ವಿವಿಧ ದೇಶಗಳಿಗೆ [೧೯೭೦ರ ಕೊನೆ ವೇಳೆಗೆ] ಇಂಡಿಯಾ ನೀಡಿದ ತಾಂತ್ರಿಕ ನೆರವಿನ ಮೊತ್ತ ೪·೧೨ ಕೋಟಿ ರೂಪಾಯಿಗಳಷ್ಟಾಗಿದೆ.

ಇಂಡಿಯಾದಿಂದ ದೊರೆತಿರುವ ಆರ್ಥಿಕ ಸಹಾಯದ ಪೈಕಿ ಅತ್ಯಧಿಕ ಪಾಲು ನೇಪಾಳಕ್ಕೆ ಹೋಗಿದೆ. ೧೯೬೯ರ ಕೊನೆ ವೇಳೆಗೆ ೬೦ ಕೋಟಿ ರೂ. ಮೊತ್ತದ ನೆರವು ನೇಪಾಳಕ್ಕೆ ಕೊಡಲ್ಪಟ್ಟಿದೆ. ಇದರ ಪೈಕಿ ೨೬ ಕೋಟಿ ರೂಪಾಯಿಯನ್ನು ರಸ್ತೆಗಳ ನಿರ್ಮಾಣ ಮತ್ತು ವಿಮಾನ ನಿಲ್ದಾಣದ ರಚನೆಗಾಗಿ ಕೊಡಲಾಗಿದೆ. ೨೨·೨೪ ಕೋಟಿ ರೂಪಾಯಿಯನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆಗೆ ಸಂಬಂಧಪಟ್ಟ ಯೋಜನೆಗಳಿಗೆ ಕೊಡಲಾಗಿದೆ. ಉಳಿದ ಹಣವನ್ನು ವಿದ್ಯಾಭ್ಯಾಸ ಮತ್ತು ವ್ಯವಸಾಯಕ್ಕೆ ಸಂಬಂಧಪಟ್ಟ ಅಭಿವೃದ್ಧಿ ಯೋಜನೆಗಳಿಗಾಗಿ ಕೊಡಲಾಗಿದೆ. ಇಂಡಿಯಾದ ಆರ್ಥಿಕ ಸಹಾಯದ ಪರಿಣಾಮವಾಗಿ ಈಗ ನೇಪಾಳದಲ್ಲಿ ಸುವ್ಯವಸ್ಥಿತ ಸಂಚಾರ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಹಿಮಾಲಯ ಪರ್ವತದ ಮಡಿಲಿನಲ್ಲಿರುವ ನೇಪಾಳದಲ್ಲಿ ರಸ್ತೆಗಳನ್ನು ರಚಿಸುವುದೆಂದರೆ ಅದೊಂದು ಅಗಾಧವಾದ ಕೆಲಸವಾಗಿತ್ತು. ಇಂತಹ ಕ್ಲಿಷ್ಟದಾಯಕವಾದ ಕಾರ್ಯವನ್ನು ನೇರವೇರಿಸುವುದರಲ್ಲಿ ಇಂಡಿಯಾ ಸಹಾಯ ನೀಡಿದೆ.

ನೇಪಾಳವಲ್ಲದೆ ಅತಿ ಹೆಚ್ಚಿನ ಸಹಾಯ ಪಡೆದ ಮತ್ತೊಂದು ದೇಶ ಭೂತಾನ. ಭೂತಾನಿನ ಎರಡನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ [೧೯೬೬-೭೧] ೨೦ ಕೋಟಿ ರೂಪಾಯಿ ಮೊತ್ತದ ನೆರವನ್ನು ಆದೇಶಕ್ಕೆ ಒದಗಿಸಲು ಇಂಡಿಯಾ ಒಪ್ಪಿಕೊಂಡಿದೆ.

ಮೇಲ್ಕಂಡ ವಿವರಗಳನ್ನು ಪರಿಶೀಲಿಸಿದಾಗ ಕೊಲೊಂಬೋ ಯೋಜನೆಯ ತತ್ವಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಇಂಡಿಯಾ ಮಹತ್ವಪಾತ್ರ ವಹಿಸಿದೆ ಎನ್ನಬಹುದು.

ಕಳೆದ ಎರಡು ದಶಕಗಳ ಹಿನ್ನೆಲೆಯಲ್ಲಿ ಕೊಲೊಂಬೊ ಯೋಜನೆಯ ಸಾಧನೆಗಳನ್ನು ಪರಿಶೀಲಿಸಿದಾಗ, ಇದರಿಂದ ಏಷ್ಯಾದೇಶಗಳ ಆರ್ಥಿಕಾಭಿವೃದ್ಧಿ

ಮೇಲೆ ಸಾಕಷ್ಟು ಪರಿಣಾಮ ಉಂಟಾಗಿರುವುದು ಸ್ಪಷ್ಟವಾಗುತ್ತದೆ. ಏಷ್ಯಾದ ದೇಶಗಳಲ್ಲಿ ಸಾಧಿಸಬೇಕಾದದ್ದು ಇನ್ನೂ ಅಗಾಧವಾಗಿದ್ದರೂ, ಪರಸ್ಪರ ಸಹಕಾರದಿಂದ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದೆಂಬ ದೃಢನಂಬಿಕೆ ಈ ದೇಶಗಳಲ್ಲಿ ಉಂಟಾಗಿದೆ. ಆದುದರಿಂದ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲು ಏಷ್ಯಾದ ದೇಶಗಳು ಒಮ್ಮತದಿಂದ ಸಮ್ಮತ ಸೂಚಿಸಿವೆ.

★ ಎನ್. ಪ್ರಭುಸ್ವಾಮಿ

ಗಂಡ ಯಾರು? ಅಣ್ಣ ಯಾರು?

ಧನಂಜಯನೆಂಬುವನೊಬ್ಬನಿದ್ದ ಬ್ರಾಹ್ಮಣ
ಅವ್ಗ ಚಿಕ್ಕಂದ್ಲೇ ಆಗಿತ್ತು ಲಗ್ನ
ಬರ್ಬರತ ಬಂತೋ ಬಡತನ
ಸ್ಥಿರವಿಲ್ಲೋ... ಯಾರೀ....ಗಿ ಕಡಿತಾನ ॥ ಪಲ್ಲ ॥

ಕರೀಲಾಕ ಹೋಗಿದ್ದ ಹೆಣ್ತೀನ
ಅತ್ತಿ ಮಾವ ಅಂದ್ರೋ ಇಂತಾಮಾತನ್ನ : ॥ ಅನುಪಲ್ಲ ॥

" ಧನಿಕನಂತ ತಿಳ್ದು ನಾವು ಕನ್ಯಾದಾನ ಕೊಟ್ಟಿದ್ದೇವು.
ಅನ್ನ ಕಾಣಧಾಂಗಾಯ್ತೋ ನಿನ್ನ... ಮನಿತಾನ. " ॥ ಕೂಡುಪಲ್ಲ ॥

(ನಿರು ಧ್ವನಿ.)

ಕರಿಲಾಕ ಹ್ವಾದ್ರೂ ನೂರಾರು ಸಾರಿ । ಸುಳ್ಳೇ ಹಾಕಿಧಾಂಗಾಯ್ತು ಫೇರಿ ।
ಮಗಳ್ನ ಕೊಡ್ಲಿಲ್ಲ ಅವ್ನ ಕೈಸೆರಿ । ಜರ ತೋರ್ಸಲಿಲ್ಲ ಆಕಿ ಮಾರಿ ।
ಸುಮ್ನೇ ಏರಿಧಾಂಗಾಗಿತ್ತು ಹಿರಿ ಕುದ್ರಿ । ದುರ್ದೈವಕ್ಕೇನು ಮಾಡ್ತೀರಿ ? ।
ಮತ್ತೆ ಅತ್ತಿ ಮಾವನ ಕೇಳಿದ್ರ । ನೆತ್ತಿ ನೆತ್ತಿ ಬಡದೇವಂದ್ರು ।
ಹತ್ತು ಮಂದ್ಯಾಗಾದಾ... ಅವ ಭೀಮಾರಿ ॥ ಜೀs... ॥

ಆದ್ರೂ ಹೋಗ್ಬೇಕು ಮತ್ತೆ ಒಂದು ಸಾರಿ । ಅಂತ ತಂದು ಕಟ್ಟ್ಯಾನ
ಭಾಡ್ಗಿ ಕುದ್ರಿ ।
ಕೋಟುಜಾಕೀಟು ಹಾಕಿ ಸವರಿ । ಹೋಗಲಿಕ್ಕ ನಿಂತ ತರಾತುರಿ ।
ಕಾಳಿಕಾ ಭವಾನಿ ಗುಡಿಗೆ ಊರು ಸವ ದಾರಿ । ಸಣ್ಣ ಗಚ್ಚು ಮಾಡಿತ್ತು
ಗುಡಿಗ ಲಾಜವಾರಿ ।
ಆ ತಂಪಿನ ಜಾಗ ನೋಡಿ ಜರಾ । ಕಣ್ಣೀಗಿ ಜಂಪು ಬಂದ್ಹಾಂಗಾಯ್ತು ಅವ್ಗ ।
ಗುಂಪು ಮಲ್ಲೀಗಿ ಕಂಪು... ತಲಿಗೇರಿ ॥ ಜೀs... ॥

ಎದ್ದು ನೋಡಿದ ದೇವಿ ಮಾರಿ । ಕೇಳಿದ ಕುಂತು ಮುಂಡಿಯೂರಿ ।
ಹೋದಗಳಿಗೆ ಹೇಣ್ತಿ ಬಂದ್ರೆ ಸರ ಸರಿ । ತನ್ನ ತಂದಿತಾಯಿ ಮಾತು ಮೀರಿ ।
ನಿಮ್ಮುಂದೆ ಹಾಯ್ಕೊಳ್ತಿ ಗಂಡಗತ್ತರಿ । ಅಂತ ಬೇಡಿಕೊಂಡಾನಿಂತಾಪರಿ ।
ಶಿರಕೊಡುವೆ ನಿನಗೆ ಶಂಕರಿ । ಅಂದು ಒಡಿದ ಊರ ದಾರಿ ।
ದೂರದಿಂದ ನೋಡಿದ ಜೀಗ ಬಂದು... ಒಡಿದ ಕುದ್ರಿ ॥ ಜೀ... ॥

(ಇಳುವು ಧ್ವನಿ)

ನೂರ್ಯಾಕ್ಶಾ ಹೋದ್ರೂ ನೀರುಕೊಟ್ಟಿದ್ದಿಲ್ಲೊಂದು ದಿನ ।
ಪರಾಮರ್ಶಿ ಮ್ಯಾಡ್ಯಾರ ದೇವಿದಾಯ್ತು ಅಂತಃಕರುಣ ।
ಹಾಸ್ಯಾರೊ...ಜಾಡಿ ಜಮಖಾನ ।
ಅಳಿಯಾಗ ಮಾಡ್ಯಾರ ಮಾನಾಪಾನ ।
ಸಂಜಿ ಊಟಕ ನೀಡ್ಯಾರ ಪಂಚಾಮೃತ ಭೋಜನ ॥ ಜೀ... ॥

ಮೈನೆರೆದ ಮಗಳು ಇರಬಾರ್ದು ಮನಿಯಾಗ ಭಾಳ ದಿನ ।
ಸ್ಥಿರವಿಲ್ಲೋ ಯಾರಿಗಿ...ದೌಳೇತಾನ–ಬಡತಾನ ।
ಕರಕೊಂಡು ಹೋಗೋ ಹೆಣ್ತೇನ ।
ಅಂತ ಹೇಳ್ಯಾರ ಅಳಿಯಾಗ ಸಮಾಧಾನ ।
ಈ ತಿಂಗ್ಳದೊಳಗ ಮಾಡಿಕೊಳ್ಳೋ...ಶೋಭನ ॥ ಜೀ... ॥

ಮುಂಜಾನೆದ್ದು ಧನಂಜಯ ತಯ್ಯಾರಾಗ್ಯಾನ ।
ಹಾಕಿ ಸಜ್ಜು ಮಾಡ್ಯಾನ ಕುದ್ರೀಗಿ ಜೀನ ॥
ತಕ್ಕ ಮಟ್ಟಿಗೆ ಕೊಟ್ಟು...ದಾಗಿನ ।
ಮ್ಯಾಲಕೊಬ್ರಿಕುಬ್ಸ ಇಟ್ಟು ತಂಗೀನ ।
ಹೊಂಟು ನಿಂತಾನ ಬೇಗ ಕಳುಪ್ರಲಾಕ ಊರ್ಯಾನ ॥ ಜೀ... ॥

ಹೋಗಿ ಬರ್ತೀವೆಂದು ಸರ್ವದೈವಕ ಮಾಡಿ ಶರಣ ।
ಹಾದಿ ಹಿಡದಾರ ಅಗ ಬ್ಯಾಸ್ಗಿ ದಿನ ।
ನಡಿನಡೀತ ನೀರಡಿಸಿ ಅವ್ರೀಗಿ ಆರಿತಲ್ಲಾಣ ।
ಎಲ್ಲೆಲ್ಲೂ ನೀರಿಂದು ಇಲ್ಲ ದರುಶನ ।
ಆಗ್ಯಾರ ಹುಡ್ಕಿ ಹುಡ್ಕೀs... ಹೈರಾಣ ॥ ಜೀ... ॥

ಕಾಳಿಕಾಭವಾನಿ ಗುಡಿಗೆ ಹೋಗೋಣ ।
ಅಲ್ಲೇ ನಮಗ ನೀರಿಂದು ದರುಶನ ।
ಬೇಕಿದ್ರಲ್ಲಿ ನಡೀಲಿ ನಿಮ್ಮ ಪಾರಾಯಣ ।
ಮಾಡುವ ನಾ...ಸ್ನಾನ–ಪಾನ ।
ಅಂತ ಧನಂಜಯ ಮುಂದಾಗ್ಯಾನ ॥ ಜೀ... ॥

“ಧನಿಕನಂತ ತಿಳ್ದು ನಾವು ಕನ್ಯಾದಾನ ಕೊಟ್ಟೆವೇವು ॥ ೧ ॥

ಅನ್ನ ಕಾಣಧಾಂಗಾಯ್ತೊ ನಿನ್ನ...ಮಸೀತಾನ ॥ ಕೂಡುಪಲ್ಲ ॥

(ಏರುಧ್ವನಿ)

ಇಲ್ಲೇ ಕೂಡ್ರಿ ಹೋಗಿ ಬರ್ತೇನಿ । ನಾ ದೇವಿ ಹಂತೇಲಿ ।
ಅಂದು ಮುಂದಕ್ಕ ಹೆಂಗೋಗಲಿ ? । ಅಂತ ಒಂದು ಕ್ಷಣ ನೋಡ್ಯಾನ ಹೊರಳಿ ।
ಈ ಹೇಣ್ತೇನ ಹೆಂಗ ಅಗಲಲಿ ? । ಅಂದಾನ ಮನಸ್ಸಿನಲ್ಲಿ ।
ಹೋಗಿ ನಿಂತಾನ ದೇವಿ ಎದ್ರೇಲಿ । ಗಟ್ಟಿಮಾಡಿ, ಗಂಡಗತ್ರಿ ಕೊರಳಲ್ಲಿ ।
ಹಾಯ್ಕೊಂಡ; ರುಂಡ ಬಿತ್ತು ದೇವಿ... ಪಾದವಲ್ಲಿ ॥ಜೀ...॥

ಬೀಗ ಬರ್ಲಿಲ್ಲ ಬಾ ತಂಗಿ । ಕುಂದ್ರು ಬಾಯಿಮ್ಯಾಲ ।
ನೋಡಿ ಬರ್ತೀನಿ ಮುಬಾಜಿಲಿ । ಅಂದ್ಹೋಗಿ ನಿಂತ ದೇವಿ ಬಳ್ಳಿ ।
ದಿಂಬ-ರುಂಡ ನೋಡ್ಯಾನ ಕಣ್ಣೇಲಿ । ಇವಾ ಬಂದಾನ ಬೀಗನ ಕೊಲ್ಲಿ ।
ಹೀಂಗನ್ನುವರು ನಮ್ಮ ಗ್ರಾಮದಲ್ಲಿ । ಗಂಡಗತ್ತಿ ಹಾಯ್ಕೊಂಡು ತಾನೂ ಅಲ್ಲಿ ।
ಕಂಡಗಣ್ಣಿನ ಕಾಳಿ ಮುಂದ ರುಂಡಹಾರಿಬಿತ್ತೊ...ಒಂದೇ ತಪ್ಲಿ ॥ಜೀ...॥

ಅಣ್ಣ ಬರ್ಲಿಲ್ಲಂತ ತಂಗಿ ಬಂದಾಳ । ಒಂದು ತಾಸಿನ ಮ್ಯಾಲಿ ।
ಅಯ್ಯೋ ಏಂತದು ಬಂತು ಹೂಲಿ । ಇಕಿ ಬಂದಾಳ ಗಂಡ ಅಣ್ಣನ ಕೊಲ್ಲಿ ।
ಹೀಂಗಂತ ಹೊರ್ಲಾರೆ ಜನ್ರ ಅರಲಿ । ಫಲವೇನೋ ಗಂಡ ಹ್ಯಾದವ್ಯಾಲಿ ।
ರಂಡಿಸೆರಗ ಹೆಂಗ ಬೀಸಲಿ ? । ಬದುಕಿ ಏನು ಮಾಡಲಿ ? ।
ಊರೀಗಿ ಮಾರಿ ಹೆಂಗ ನಾ...ತೋರಿಸಲಿ ॥ಜೀs....॥

(ಇಳವು ಧ್ವನಿ)

ಗಂಡಗತ್ರಿತೊಗಂಡು ಹಾಕಿಕೊಂಡಾಳೊ ತನ್ನ ಕೊರಳೀಗಿ ।
ಥರಥರಾ ನಡುಗೊತ ನಿಂತಾಳ ದೇವಿ ಎದುರೀಗಿ ।
ಅರುವಾಯ್ತೊ... ಆಗ ದೇವೀಗಿ ।
ಪ್ರತ್ಯಕ್ಷ ಆಗ್ಯಾಳ ಆಕೀಗಿ ।
" ನಿನ್ನ ಭಾವಕ್ಕ ಮೆಚ್ಚೀನಿ ಕೊಯ್ಕೋಬ್ಯಾಡ...ಕುತ್ತೀಗಿ ॥ ಜೀs...॥

' ಏನು ಬೇಡ್ತಿ ಬೇಡವ್ವಾ ಕೊಡುವೆ ನಿನ್ನ ಭಕ್ತೀಗಿ । "
" ನನ್ನ ಗಂಡ-ಅಣ್ಣಂದು ಪ್ರಾಣ ನೀಡವ್ವ ಮೊದಲೀಗಿ ।
ಯಾರೀಗಿ ಬೇಕು ಹೆಚ್ಚೀಗಿ ।
ಮುತ್ತೈದುತನ ಸ್ಥಿರವಾಗಿ ।
ಹೋಗಬಾರ್ದು ಸೂರ್ಯಚಂದ್ರ ಇರೋವರೆಗೆ" ॥ಜೀs....॥

" ಎರಡುದಿಂಬಕ್ಕ ತಂದು ಇಡಪ್ಪ ರುಂಡ ಸಮನಾಗಿ |
ಮೇಲ್ಪುಸುಕು ಹಾಕು ಅಪ್ಪ ಶಲ್ಯ ತಗೆದು ಅವ್ರೀಗಿ |
ನೀ ಹೋಗಿ ನಿಂದ್ರು ಬಯ್ಲೀಗಿ |
ಅಪ್ಪ ಏಳ್ಲಾಕ ಬೇಕೊಂದು ಗಳಿಗಿ |
ಮಜ್ಜನದ ನೀರು ತಂದು ಹೊಡಿಯಪ್ಪ ಅವರಿಗ್ಹೀಗಿ " || ಜೀs...||

ಹಿಂಗಂತ ಆಕಿಗಿ ಅಂಬಾ ಮಾಡ್ಯಾಳ ಸೂಚನ |
"ಮಾಡಬ್ಯಾಡ ಯೋಚನ ಇದು ನನ್ನ ವಚನ |
ಮತ್ಯಾಕ ನಿಂತಿ ಸುಮ್ಮನ |
ಹೇಳಿದಪ್ಪ ಮಾಡಿ ನೀನ |
ಪಡಿಯಪ್ಪ ಮತ್ತೆ ನೀನವರ ಪ್ರಾಣ ನ್ನs"... || ಜೀs... ||

ಎಲ್ಲ ಕೇಳ್ಯಾಳ ಅಂಬಾಬಾಯಿ ಮಾತನ್ನ |
ಅಣ್ಣಗಿಟ್ಟು ಗಂಡನಗೋಣ: ಗಂಡಗಿಟ್ಟು ಅಣ್ಣನ ಗೋಣ |
ಅದಕಿದಕ ಒಂದೇಸವನ |
ಮಾಡಿ ಹೊಚ್ಚ್ಯಾಳ ಶಲ್ಯನ |
ಹೊರಗ್ಹೋಗಿ ನಿಂತಾಳ ಒಂದೇ... ಕ್ಷಣs.... || ಜೀs... ||

"ಧನಿಕನಂತ ತಿಳ್ದು ನಾವು ಕನ್ಯಾದಾನ ಕೊಟ್ಟಿದ್ದೇವು || ೨ ||

ಅನ್ನ ಕಾಣಧಾಂಗಾಯ್ತೋ ನಿನ್ನ...ಮನಿತಾನ" || ಜೀ.... ||

(ಏರುಧ್ವನಿ)

ಎದ್ದುಕುಂತ ಇಬ್ರೀಗೂ ತಿಳಿವೊಲ್ದು ದಿಕ್ಕು | ಮನ್ಸಾಗವೊಲ್ದು ನಿಲುಕು |
ಅಂತಾರಿದೇನ ಕೌತುಕ | ನೋಡ್ತಾರ ತೆಳ್ಯಾಕವ್ಯಾಕ |
ಆಕೀನೂ ಬಂದಾಳ ಒಳ್ಗಾಕ | ನೊಡ್ಯಾಳ ಅವರ್ನ ಮಲ್ಲಕ |
ಗಂಡಂತ ಯಾರೀಗಿ ಕರೀಬೇಕ ? | ಅಣ್ಣಂತ ಯಾರೀಗಿ ಅನ್ನಬೇಕ ? |
ಅಂತ ಚಿಂತೀಸಿ ಏರಿ ಮಾಡ್ಯಾಳ....ಆಕಿ ದುಃಖ || ಜೀs... ||

ಉಂಗುರ ಉಡುದಾರ ಸಂದು | ಅಂಗಿ ಧೋತರ ಸಂದು |
ಮಲ್ಕ್ಯೊರುವು ಮೆಟ್ಟು ಸಂದು | ರುಮಾಲು ಶಲ್ಯಸಂದು |
ಹಾಕ್ಯಾಡಿಕೋಂತ ಹೊಂಟಾರ ಊರಾಕ | ಹೋಗಿ ಹಾಕ್ಯಾರ ನ್ಯಾಯಕ |
ಆಕಿ ಹೇಳ್ಯಾಳ ಸಕಲ ಜನಕ | ದೇವಿಗುಡಿಯಾಗಾದ ಕೌತುಕ |
ಅಂತಳ ಬಂದಾದ ನನ್ನ...ಪಣೆಬರಕ ||ಜೀ...||

ಅಣ್ಣನ ರುಂಡ ಗಂಡನ ದೇಹಕ | ಗಂಡನ ರುಂಡ ಅಣ್ಣನ ದೇಹಕ ।
ಈ ತಪ್ಪ ನನ್ನ ಕಡಿಯಾಕ | ಬಂದಾದ ತೊಂದ್ರಿ ಈಗ ಕರಿಲಾಕ ।
ಅಣ್ಣಂತ ಯಾರೀಗಿ ಕರೀಬೇಕ ? | ಗಂಡಂತ ಯಾರೀಗಿ ಕರೀಬೇಕ ? ।
ಬಲ್ಲವರು ಮಾಡ್ಲೀ ಳ್ರಿ ತೂಕ | ಸರಿಬಂದಿರಬೇಕ ನಾಕು ಜನಕ ।
ಕೇಳಿದವರು ಹೌದೌದು....ಅಂದಿರಬೇಕು." || ಜೀs.... ||

(ಇಳುವು ಧ್ವನಿ)

ಪ್ರಶ್ನೆ :

"ಮುಖಚಿಸ್ತನೋಡಿ ಗಂಡಂಗ ಹೇಳ್ತೀರಿ ನನಗ |
ಈ ಮಾತೀಗಿ ರಾಜಿಯಾಗಿ ಕೇಳ್ತೀನಿ ನಿಮಗ |
ಹ್ಯಾಂಗ ಮಾಡಬೇಕು ಸಂಭೋಗ ? |
ಅಣ್ಣನ ಶರೀರದಲ್ಲೀಗ |
ಗರ್ಭ ಉತ್ಪನ್ನ ಆದ್ರ ಏನನ್ನಬೇಕು ಹುಟ್ಟಿದವ್ಗ ? " || ಜೀs.... ||

ಕತಿ ಹೇಳಿ ಬೇತಾಳ, ಭಟ್ಟ ವಿಕ್ರಮಗ |
ಕೇಳ್ತಾದ "ಉತ್ತರ ಗೊತ್ತೇನ ನಿನಗ ? |
ಗೊತ್ತಿದ್ರ ಹೇಳು ಬೇಗ |
ಮುಚ್ಚಿಟ್ಟುಕೊಂಡ್ರೆ ಹಾಂಗ |
ಆಗ್ತಾದ ಶಿರ ಸಾಸಿರ ಹೋಳು ನಿನಗ" || ಜೀs.... ||

ಅವನ್ಯಾಪುರ ಎಂಬೋದು ಮಿಗಿಲ ದೇಶದೊಳಗ |
ಕವಿ ಈರಣ್ಣ ಮ್ಯಾಡ್ಯಾನಿದನ ಗಳಿಗ್ಯಾಗ |
ಭಾಳಸುಲಭ ಆಡಬಲ್ಲವಗ |
ಇದು ಇರೋದು ಅನುಭವದಾಗೆ |
ಮತ್ತೆ ಕೇಳ್ಯಾನ-ಸರ್ವ...ಸಭದಾಗ || ಜೀs... ||

"ಕಲ್ತಿಯವರು ಕೂಡೀರಪ್ಪ ಭಾಳ ಜನಾ |
ಹೇಳ್ರಿಪ್ಪ ಈ ಕಥೀಗಿ ಉತ್ತರನ |
ಕೂಡ್ರಿ ಹೋಗಿ ಗಂಡಹೇಣ್ತೀನ್ನ |
ಹೇಳ್ರಿ ಅವ್ರೀಗಿ ಸಮಾಧಾನ |
ತಿಳೀತಾದ ನಿಮ್ಮೆಲ್ಲರ...ಶ್ಯಾಣೇತಾನ" || ಜೀs... ||

ಉತ್ತರ :

ಭಟ್ಟ ವಿಕ್ರಮ ಪೇಳ್ತಾನ ಬೇತಾಳಗ |
ಶಿರವೆ ಪ್ರಧಾನ ನರಜನ್ಮದಾಗ |
ಬೇಕಿದ್ರ ಮುಂದಿನ ಜನ್ಮದಾಗ |
ಬರಲಿ ನವಿಲು ರೂಪಿನಾಗ |
ಕಣ್ಣೀರಿನಿಂದ್ಲೇ ಆಗ......ಸಂಭೋಗ ||

ಧನಿಕನಂತ ತಿಳ್ದು ನಾವು ಕನ್ಯಾದಾನ ಮಾಡಿದೇವು | ||೩||

ಅನ್ನ ಕಾಣ್ದಾಂಗ ಆಯ್ತೋ ನಿನ್ನ...ಮನಿತಾನ ||ಕೂಡುಪಲ್ಲ||

ಸಂಗ್ರಾಹಕರು : **ಲಿಂಗಣ್ಣ ಸತ್ಯಂಪೇಟೆ**

ಹಾಡಿದವರು : **ಶ್ರೀ ವೆಂಕಪ್ಪ; ಇಮಾಮುದ್ದೀನ ಹಾಗೂ ಚಂದ್ರಶೇಖರ**

ಮಾನಸಿಕ ದೂರ

(ಒಂದು ವಿವೇಚನೆ)

'ಎಡ್ವರ್ಡ್ ಬುಲ್ಲೋ' ಅವರ 'ಮಾನಸಿಕ ದೂರ' (Psychical distance) ಎಂಬ ತತ್ವವು ಸೌಂದರ್ಯಾನುಭೂತಿಯ ರಹಸ್ಯವನ್ನು ಭೇದಿಸುವಲ್ಲಿ ಅತ್ಯಂತ ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸುತ್ತದೆ. ಇದು ೧೦ ನೆಯ ಶತಮಾನದ ಭಾರತೀಯ ಆಲಂಕಾರಿಕ ಅಭಿನವಗುಪ್ತನ 'ಸಾಧಾರಣೀಕರಣ' ತತ್ವವನ್ನು ಬಹುಮಟ್ಟಿಗೆ ಹೋಲುತ್ತದೆ. ಇದಲ್ಲದೆ ಪಾಶ್ಚಾತ್ಯ ಸೌಂದರ್ಯ ಮೀಮಾಂಸೆಯು ಮುಟ್ಟಿದ ಮಹತ್ವಪೂರ್ಣವಾದ ಅತ್ಯಾಧುನಿಕ ಘಟ್ಟವನ್ನು 'ಬುಲ್ಲೋ' ಅವರ ತತ್ವವು ಸಂಕೇತಿಸುವುದು ಗಮನಾರ್ಹವಾದ ಸಂಗತಿ. 'ಮಾನಸಿಕ ದೂರ' ತತ್ವದ ಸ್ಥೂಲ ವಿವೇಚನ ಈ ಲೇಖನದ ಉದ್ದೇಶ.

'ಮಾನಸಿಕ ದೂರ' ತತ್ವವನ್ನು ತಿಳಿದುಕೊಳ್ಳಲು ಪೂರ್ವಭಾವಿಯಾಗಿ ನಾವು ಒಂದೆರಡು ವಿಚಾರಗಳ ಸತ್ಯವನ್ನು ಆವಿಷ್ಕರಿಸಿಕೊಳ್ಳಬೇಕಾಗುತ್ತದೆ. ಪ್ರಪ್ರಥಮವಾಗಿ ನಾವು ಗಮನಿಸಬೇಕಾದುದು ಮಾನವನಲ್ಲಿ ಸೌಂದರ್ಯ ಪ್ರಜ್ಞೆಯ ಅಸ್ತಿತ್ವವನ್ನು. ಮಾನವನವ್ಯಕ್ತಿತ್ವವೊಂದುಅನಂತಶಕ್ತಿಗಳಸಮಷ್ಟಿ ಸೌಂದರ್ಯ ಪ್ರಜ್ಞೆ ಅವನಲ್ಲಿ ಹುಟ್ಟಿನಿಂದಲೇ ಬೆಳೆದುಬರುವ ಒಂದು ವಿಶಿಷ್ಟಶಕ್ತಿ. ಬಾಹ್ಯ ಜಗತ್ತನ್ನು ಅವನು ಪ್ರಮುಖವಾಗಿ ನಾಲ್ಕು ದೃಷ್ಟಿಗಳಿಂದ ಎದುರಿಸುತ್ತಾನೆ. ವ್ಯಾವಹಾರಿಕ, ಸೌಂದರ್ಯ, ವೈಜ್ಞಾನಿಕ ಹಾಗೂ ನೈತಿಕ ದೃಷ್ಟಿಗಳು ಪರಸ್ಪರ ಭಿನ್ನ ಸ್ವರೂಪದವುಗಳಾಗಿದ್ದು, ಅವು ದರ್ಶಿಸುವ ಸತ್ಯವೂ ಭಿನ್ನ ಸ್ವರೂಪದ್ದು ಎನ್ನುವುದು ಗಮನಾರ್ಹವಾದ ವಿಚಾರವಾಗಿದೆ. ವ್ಯಾವಹಾರಿಕ ದೃಷ್ಟಿ ಯಾವಾಗಲೂ ವೈಯಕ್ತಿಕ ಬೇಕು ಬೇಡಗಳ, ಇಷ್ಟಾನಿಷ್ಟಗಳ ಪರಿಧಿಯಲ್ಲಿಯೇ ನಿಲ್ಲುವಂತಹದು. ವೈಜ್ಞಾನಿಕ, ನೈತಿಕ ದೃಷ್ಟಿಗಳು ಕ್ರಮವಾಗಿ ವೈಜ್ಞಾನಿಕ ಹಾಗೂ ನೈತಿಕ ಮೌಲ್ಯಗಳನ್ನು ಆವಿಷ್ಕರಿಸುತ್ತವೆ. ಹೀಗೆ ಮಾಡುವಲ್ಲಿ ಅವು ವಸ್ತುನಿಷ್ಠವಾದ ಸತ್ಯವನ್ನು ಸ್ವತಂತ್ರವಾಗಿ ಗ್ರಹಿಸದೆ ಬೇರೆ ಉದ್ದೇಶಗಳಿಗೆ ಅದನ್ನು ಅಡಿಯಾಳಾಗಿಸುತ್ತವೆ. ವೈಜ್ಞಾನಿಕ ದೃಷ್ಟಿಯುಳ್ಳವನು ಒಂದು ವಸ್ತುವನ್ನು ನೋಡುವಾಗ ಅದನ್ನು ಅದೇ ರೀತಿಯ ಇನ್ನೂ ಅನೇಕ ವಸ್ತುಗಳ ಒಂದು ಘಟಕವೆಂದು ಭಾವಿಸುತ್ತಾನೆ. ನೈತಿಕ ದೃಷ್ಟಿಯುಳ್ಳವನು ಒಂದು ವಸ್ತುವಿನ ನಡೆವಳಿಕೆಯ ನಿಯಮಾವಳಿಯನ್ನು, ಕಂಡುಕೊಳ್ಳುವಲ್ಲಿ ಅದೇ ಬಗೆಯ ನಿಯಮಾವಳಿಯನ್ನು ಹೊಂದಿದ ವಸ್ತು ಸಮೂಹದ ಒಂದು ಘಟಕವೆಂದೇ ಭಾವಿಸುತ್ತಾನೆ. ಆದುದರಿಂದ ಇವೆರಡೂ ದೃಷ್ಟಿಯುಳ್ಳವರು ವಸ್ತುವಿಗೆ ಸಂಪೂರ್ಣ ಸ್ವತಂತ್ರವಾದ ಅಸ್ತಿತ್ವವಿದೆಯೆನ್ನು

ವುದನ್ನು ಗ್ರಹಿಸದೆ, ಅನ್ಯ ಉದ್ದೇಶಗಳಿಂದ ಪ್ರೇರಿತರಾಗಿ ಅದನ್ನು ನೋಡುತ್ತಾರೆ. ಆದರೆ ಸೌಂದರ್ಯದೃಷ್ಟಿಯ ವಿಧಾನವೇ ಬೇರೆ. ಅದು ವಸ್ತುವನ್ನು ಪರಿಭಾವಿಸುವುದು ಅದರಲ್ಲಿನ ಸೌಂದರ್ಯವನ್ನು ಗ್ರಹಿಸುವದಕ್ಕಾಗಿ; ಉಳಿದೆರಡು ದೃಷ್ಟಿಗಳಂತೆ ಇದಕ್ಕೆ ಸೌಂದರ್ಯವನ್ನು ಬಿಟ್ಟು ಅನ್ಯ ಪ್ರಯೋಜನ (Utterior ends) ಗಳನ್ನು ಪಡೆಯುವ ವಿಚಾರದ ಲವಲೇಶವೂ ಇರುವದಿಲ್ಲ.

ಸೌಂದರ್ಯದೃಷ್ಟಿ ಹಾಗೂ ವ್ಯಾವಹಾರಿಕ ದೃಷ್ಟಿಗಳಂತೂ ಪರಸ್ಪರ ವಿರುದ್ಧವಾದವುಗಳು: ವೈಯಕ್ತಿಕ ಬೇಕು ಬೇಡಗಳೇ ವ್ಯಾವಹಾರಿಕ ದೃಷ್ಟಿಯ ಮೂಲಚೂಲಗಳು. ದೃಗ್ಗೋಚರವಾದ ಜಗತ್ತನ್ನು ದರ್ಶಿಸಿದಾಗ ನಮ್ಮ ಇಂದ್ರಿಯಗಳು ಸ್ವಾಭಾವಿಕವಾಗಿ ಪಡಿಮಿಡಿಯುತ್ತವೆ; ಕ್ರಿಯಾಶೀಲವಾಗುತ್ತವೆ. ವಸ್ತುಗಳು ಹಿತವಾದ ಅನುಭವವನ್ನಿತ್ತರೆ ಅವು ಸುಂದರವೆಂದೂ, ಅಹಿತವಾದ ಅನುಭವವಾದರೆ ಅವು ಸುಂದರವಲ್ಲವೆಂದೂ ಭಾವಿಸುತ್ತೇವೆ. ಸಾಮಾನ್ಯವಾಗಿ ವಸ್ತುಗಳು ನಮ್ಮ ಇಂದ್ರಿಯಗಳ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರುತ್ತವೆ. ಆದರೆ ಸೌಂದರ್ಯದೃಷ್ಟಿ ಜಾಗೃತವಾದ ವಿಶಿಷ್ಟಕ್ಷಣದಲ್ಲಿ, ಅವೇ ವಸ್ತು ಸನ್ನಿವೇಶಗಳನ್ನು ಇಂದ್ರಿಯಗಳ ವ್ಯಾವಹಾರಿಕ ಬೇಕು ಬೇಡಗಳಿಂದ ಬಿಡಿಸಿಕೊಂಡು ಪರಿಭಾವಿಸುವುದು ಸಾಧ್ಯವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ವಸ್ತುವನ್ನು ವೈಯಕ್ತಿಕ ಸಂವೇದನೆಗಳ ವಲಯದಿಂದ ದೂರದಲ್ಲಿರಿಸಿ ವಸ್ತುನಿಷ್ಠವಾಗಿ ಅದರ ಅನುಭವವನ್ನು ಪಡೆಯುತ್ತೇವೆ. ಎಂದರೆ ಸೌಂದರ್ಯದ ಅನುಭವ ಉಂಟಾಗಲು ಯೋಗ್ಯವಾಗುವಂತಹ ಒಂದು ನಿಯತವಾದ ಅಂತರ ಇಲ್ಲವೆ ದೂರದಲ್ಲಿ ನಮ್ಮ ಮನಸ್ಸನ್ನು ನಿಲ್ಲಿಸಿ ನೋಡಬೇಕಾಗುತ್ತದೆ. ಸೌಂದರ್ಯಾನುಭವಕ್ಕೆ ಮೂಲ ಭಿತ್ತಿಯನ್ನು ಸಮೆಯಲು ಸಾಧ್ಯವಾಗುವಂತಹ ಮನಸ್ಸು ಹಾಗೂ ವಸ್ತುಗಳ ನಡುವಿನ ವಿಶಿಷ್ಟವಾದ ಅಂತರವನ್ನೇ 'ಎಡ್ವರ್ಡ ಬುಲ್ಲೋ' ಅವರು 'ಮಾನಸಿಕ ದೂರ' (Psychical distance) ಎಂದು ಕರೆಯುತ್ತಾರೆ. "ಯಾವ ಒಂದು ನೆಲೆಯಲ್ಲಿ ಕಲಾಕೃತಿಯಿಂದಾಗಲಿ, ಲೋಕ ವಸ್ತುವಿನಿಂದಾಗಲಿ ನಾವು ಸೌಂದರ್ಯವನ್ನು ಪಡೆಯಲು ಸಾಧ್ಯವೋ ಅಂತಹ ಒಂದು ನಿಲುವಿನಲ್ಲಿ ನಮ್ಮನ್ನು ಹಾಗೂ ವಸ್ತುವನ್ನು ನಿಲಿಸಿಕೊಳ್ಳುವ ಕೌಶಲವೇ ಮಾನಸಿಕ ದೂರ."[೧].

'ಮಾನಸಿಕ ದೂರ'ದ ಸ್ವರೂಪ

ಮಾನಸಿಕ ದೂರ ತತ್ವವನ್ನು 'ಬುಲ್ಲೋ' ಅವರು ಒಂದು ಉದಾಹರಣೆಯಿಂದ ಸ್ಪಷ್ಟಗೊಳಿಸುತ್ತಾರೆ: ಮಂಜಿನಿಂದ ಆಚ್ಛಾದಿತವಾದ ಸಮುದ್ರದಲ್ಲಿದ್ದೇವೆ ಎಂದು ಭಾವಿಸೋಣ. ಅನೇಕ ಜನರಿಗೆ ಇಂತಹ ಸನ್ನಿವೇಶವೆಂದರೆ ಭೈಪಿ

೧. ಡಾ. ಜಿ. ಎಸ್. ಶಿವರುದ್ರಪ್ಪ 'ಸೌಂದರ್ಯ ಸಮೀಕ್ಷೆ' ಪು. ೮೮

ಕವಾಗಿ, ಮಾನಸಿಕವಾಗಿ ಅತ್ಯಂತ ಗೊಂದಲದಾಯಕವಾದುದು, ಮನಸ್ಸಿಗೆ ಒಂದು ತರಹದ ಕಳವಳ, ಭಯದ ಅನುಭವ ಉಂಟಾಗಿ ನಿರ್ವಿಣ್ಣರಾಗಿ ಬಿಡುತ್ತೇವೆ. ಸಾಗರದ ಮೌನವಾತಾವರಣವನ್ನು ಛೇದಿಸಿಕೊಂಡು ಬರುವ ಹಡಗಿನ ವಿಚಿತ್ರ ಸಂಕೇತಗಳು ನಮ್ಮ ಭಯವನ್ನು ಇನ್ನೂ ದಟ್ಟಗೊಳಿಸುತ್ತವೆ. ಆ ಭಯಾನಕ ವಾತಾವರಣದಲ್ಲಿ ವೈಯಕ್ತಿಕವಾಗಿ ಸಿಕ್ಕುಬಿದ್ದ ನಮಗೆ ಉಂಟಾಗುವ ಮಾನಸಿಕ ವೇದನೆ ಅಸಹನೀಯವಾದುದು, ಆದರೆ ಇದೇ ಸನ್ನಿವೇಶದಲ್ಲಿ ನಾವು ಪರ್ವತದ ನೆತ್ತಿಯಮೇಲೆ ನಿಂತುಕೊಂಡರೆ ನಮ್ಮ ಮನಸ್ಸಿನ ಮೇಲೆ ಉಂಟಾಗುವ ಪರಿಣಾಮವೇ ಬೇರೆ. ಮಂಜಿನ ಶುಭ್ರವಾದ ಭಿತ್ತಿ ಭೌತವಸ್ತುಗಳನ್ನು ಆವರಿಸಿ, ಅವಕ್ಕೆ ಎಲ್ಲಿಲ್ಲದ ಒಂದು ಬಗೆಯ ಅತೀಂದ್ರಿಯ ಸೊಬಗನ್ನು ತಂದು ಕೊಡುತ್ತದೆ. ಜಗತ್ತಿನಿಂದ ಬಹುದೂರವಾದ ಪರ್ವತ ಪ್ರಾಂತದ ಶಾಂತ ವಾತಾವರಣದಲ್ಲಿ ಕಣ್ಣೆದುರಿಗಿನ ಭೌತ ಜಗತ್ತು ಅಪೂರ್ವ ಸೌಂದರ್ಯದ ವಸ್ತುವಾಗಿ ಗೋಚರಿಸುತ್ತದೆ. ಇಡೀ ಸನ್ನಿವೇಶವು ಸೌಂದರ್ಯದಿಂದ ನಮ್ಮ ಮನವನ್ನು ಮುಗ್ಧಗೊಳಿಸಿ ಬಿಡುತ್ತದೆ. ಕೇವಲ ಪ್ರೇಕ್ಷಕರಾಗಿ ಆ ಸನ್ನಿವೇಶದ ಸೌಂದರ್ಯವನ್ನು ಅನುಭವಿಸುತ್ತೇವೆ.

ಮೇಲೆ ವಿವರಿಸಿದ ಒಂದೇ ಸನ್ನಿವೇಶವು ವೈಯಕ್ತಿಕ ನೆಲೆಯಲ್ಲಿ ಭಯಾನಕ, ದುಃಖದಾಯಕ; ಪ್ರೇಕ್ಷಕತ್ವದ ನೆಲೆಯಲ್ಲಿ ಸೌಂದರ್ಯಪೂರ್ಣ, ಆನಂದದಾಯಕ—ಈ ರೀತಿಯ ಪರಿವರ್ತನೆಗೆ 'ಮಾನಸಿಕ ದೂರ' ತತ್ವವು ಅನ್ವಯಿತವಾದುದೇ ಕಾರಣವೆಂದು 'ಬುಲ್ಲೋ' ಅವರು ಹೇಳುತ್ತಾರೆ. 'ಮಾನಸಿಕ ದೂರ'ವು ಸಾಮಾನ್ಯವಾಗಿ ಮನಸ್ಸು ಹಾಗೂ ಅದಕ್ಕೆ ಗಟ್ಟಿಯಾಗಿ ಅಂಟಿಕೊಂಡಿರುವ ಇಂದ್ರಿಯಗಳ ನಡುವೆ. ಕೆಲವೊಮ್ಮೆ ವಿಶೇಷವಾಗಿ ವ್ಯಕ್ತಿಯ ಮನಸ್ಸು ಹಾಗೂ ವಸ್ತುವಿನ ನಡುವೆ, ವ್ಯವಹರಿಸುತ್ತದೆ. 'ಮಾನಸಿಕ ದೂರ'ವು ಹುಟ್ಟಲು ವಸ್ತುವನ್ನು ಸಂಪೂರ್ಣವಾಗಿ ವೈಯಕ್ತಿಕ ನೆಲೆಯಿಂದ ಮುಕ್ತಗೊಳಿಸಿ ವಸ್ತುನಿಷ್ಠವಾಗಿ ಪರಿಭಾವಿಸಬೇಕಷ್ಟೆ ಅಲ್ಲ; ವ್ಯಕ್ತಿನಿಷ್ಠ ಅನಿಸಿಕೆಗಳನ್ನು ಕೂಡ ನಮ್ಮ ವ್ಯಕ್ತಿತ್ವದ ಸ್ತರಗಳೆಂದು ಭಾವಿಸದೆ, ವಸ್ತುವಿನ ಲಕ್ಷಣವೆಂದೇ ಭಾವಿಸಬೇಕಾಗುತ್ತದೆ. ಎಂಬ ಮಾತುಗಳು ಮನನೀಯವಾದವುಗಳು.

" .. Distance is produced .. by putting the phenomenon, so to speak, out of gear with our practical, actual self; by allowing it to stand out side the contact of our personal needs and ends.. and by interpreting even our subjective affections not as modes of our being but rather as charateristics of the phenomenon "[೧]

೧. Edward Bullough "The British Journal of Psychology" Vol V 1912-13. P. 89.

'ಮಾನಸಿಕ ದೂರ' ತತ್ವಕ್ಕೆ ನಿಷೇಧಾತ್ಮಕ, ಅಂಗೀಕಾರಾತ್ಮಕವೆಂದು ಎರಡು ಮುಖಗಳಿವೆ. ನಿಷೇಧಾತ್ಮಕ ದೃಷ್ಟಿಯು - ವಸ್ತುಗಳ ವ್ಯಾವಹಾರಿಕ ಅಂಶಗಳನ್ನು ಕತ್ತರಿಸಿ ಹಾಕುವದೊಂದು, ವ್ಯಾವಹಾರಿಕ ಅಂಶಗಳಿಂದ ಮನವನ್ನು ವಿಮುಖಗೊಳಿಸುವದಿನ್ನೊಂದು — ಹೀಗೆ ಎರಡು ಕ್ರಿಯೆಗಳನ್ನು ಒಳಗೊಳ್ಳುತ್ತದೆ. ಹೀಗಾದಾಗ ವಸ್ತು ಹಾಗೂ ಮನಸ್ಸು ಎರಡೂ ಪರಿಶುದ್ಧವಾಗಿ, ಸೌಂದರ್ಯಾನುಭವಕ್ಕೆ ಬೇಕಾಗುವ ಭೂಮಿಕೆ ಸಿದ್ಧವಾಗುತ್ತದೆ. ಅಂಗೀಕಾರಾತ್ಮಕ ಮುಖದಲ್ಲಿ ಪರೆಗಳಿಚಿದ ಹಾವಿನಂತೆ ವ್ಯಾವಹಾರಿಕ ಅಂಶಗಳನ್ನು ಕಳೆದುಕೊಂಡ ವಸ್ತು ಮನಸ್ಸುಗಳ ಮಧುರ ಸಾಮರಸ್ಯದಲ್ಲಿ ಸೌಂದರ್ಯಾನುಭವದ ಪರಿಧಿ ಹಿಗ್ಗಲಿಸಲ್ಪಟ್ಟು ವ್ಯಾಪಕವಾಗುತ್ತದೆ. ಈ ಕ್ರಿಯೆ ಮಾನಸಿಕವಾಗಿದ್ದು ಅತ್ಯಂತ ಸಂಕೀರ್ಣವಾದುದಾಗಿದೆ. 'ಮಾನಸಿಕ ದೂರ'ವು ಅನ್ವಯಿತವಾದ ಅವಸ್ಥೆಯಲ್ಲಿ ಮನಸ್ಸು ವಸ್ತುವಿನ ಸೌಂದರ್ಯವನ್ನು ಥಟ್ಟನೇ ಗ್ರಹಿಸುತ್ತದೆ. ವಸ್ತು ಸೌಂದರ್ಯವು ತಾನೇ ತಾನಾಗಿ ಮಿಂಚಿನೋಪಾದಿಯಲ್ಲಿ ಹೊಳೆದಾಡುತ್ತದೆ. ಸೌಂದರ್ಯದರ್ಶನದ ದಿವ್ಯ ಕ್ಷಣದಲ್ಲಿ ಉಂಟಾಗುವ ಅನುಭವವು ಕಲಾಕ್ಷೇತ್ರಕ್ಕೆ ಸೇರುವುದರಿಂದ 'ಮಾನಸಿಕ ದೂರ' ವೆನ್ನುವುದು ಒಂದು ಕಲಾತತ್ವ (aesthetic principle) ಎಂಬ ಸತ್ಯವು-ಸ್ವಯಂ ವೇದ್ಯವಾಗುತ್ತದೆ.

ವಿರೋಧಾಭಾಸವನ್ನುಂಟು ಮಾಡುವ ಪದಗಳು

ಸೌಂದರ್ಯ ದೃಷ್ಟಿಯನ್ನು ವಸ್ತುನಿಷ್ಠವೆಂದು ವಿವರಿಸುವದು ಸರ್ವಸಾಮಾನ್ಯವಾಗಿದೆ. ಇದಕ್ಕೆ ಸಂಪೂರ್ಣ ವಿರುದ್ಧ ಅರ್ಥ ಉಳ್ಳದ್ದು 'ವ್ಯಕ್ತಿನಿಷ್ಠ' ವೆಂಬ ಪದ. ಸಾಮಾನ್ಯ ಅರ್ಥದಲ್ಲಿ 'ಷೇಕ್ಸಪಿಯರ' ವಸ್ತುನಿಷ್ಠ ಕಲೆಗಾರನಾದರೆ, 'ಶೆಲ್ಲಿ' 'ವ್ಯಕ್ತಿನಿಷ್ಠ' ಕವಿ. ಸಾಹಿತ್ಯ ರೂಪವನ್ನು ಮನ ದಂಡರೆ ನಾಟಕ 'ವಸ್ತುನಿಷ್ಠ'; ಭಾವಗೀತೆ 'ವ್ಯಕ್ತಿನಿಷ್ಠ'. ಆದರೆ ವಿಜ್ಞಾನ ಹಾಗೂ ಇತಿಹಾಸಗಳು ಯಾವ ಅರ್ಥದಲ್ಲಿ ವಸ್ತುನಿಷ್ಠವಾದವುಗಳೋ ಆ ಅರ್ಥದಲ್ಲಿ ಕಲಾಕೃತಿಗಳು ಆಗಲಾರವು. ವೈಯಕ್ತಿಕ ಸಂವೇದನೆ, ವ್ಯಕ್ತಿಯ ನಂಬಿಕೆ, ಅಶೋತ್ತರಗಳ ನೇರ ಹೇಳಿಕೆ, ಭಾವನಾತ್ಮಕ ಕೂಗು ಇವು ಯಾವ ಅರ್ಥದಲ್ಲಿ ವ್ಯಕ್ತಿನಿಷ್ಠವಾದವುಗಳೋ ಆ ಅರ್ಥದಲ್ಲಿ ಭಾವಗೀತೆ ವ್ಯಕ್ತಿನಿಷ್ಠವಾಗಲಾರದು. ಪರಸ್ಪರ ವಿರುದ್ಧ ಅರ್ಥಗಳನ್ನು ಕೊಡುವ, ಅಲ್ಲದೆ ಭಿನ್ನ ಉದ್ದೇಶಗಳಿಗೆ ಸೃಷ್ಟಿತವಾದ ಇಂತಹ ಪದಗಳನ್ನು ಕಲಾಕ್ಷೇತ್ರಕ್ಕೆ ಅನ್ವಯಿಸುವುದರಿಂದುಂಟಾಗುವ ಗೊಂದಲವನ್ನು ನಿವಾರಿಸಬೇಕಾಗುತ್ತದೆ. ಕಲಾವಿಮರ್ಶೆಯಲ್ಲಿ ಬಳಕೆಗೊಳ್ಳುವ ಇಂತಹ ಸಂದಿಗ್ಧ ಪದಗಳ ಅರ್ಥವನ್ನು ವಿವರಿಸುವಲ್ಲಿ ಅನೇಕ ತತ್ವಗಳು ಹೊಯ್ದಾಡಿವೆ. 'ಮಾನಸಿಕ ದೂರ' ತತ್ವವು

ಇಂತಹ ವಿರೋಧಾತ್ಮಕ ಅರ್ಥವನ್ನು ಹೋಗಲಾಡಿಸಿ ಒಂದು ವಿಧವಾದ ಸಮನ್ವಯ ಸೂತ್ರವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಗುತ್ತದೆ. ಆದುದರಿಂದ ಇದನ್ನು ಕಲಾದರ್ಶನದ ಮೂಲಭೂತ ತತ್ವವೆಂದು ಪರಿಗಣಿಸಲೇಬೇಕಾಗುತ್ತದೆ ಎಂದು 'ಎಡ್ವರ್ಡ ಬುಲ್ಲೋ' ಅಭಿಪ್ರಾಯಪಡುತ್ತಾರೆ.

ಮಾನಸಿಕ ದೂರ ತತ್ವವು ವಸ್ತುವನ್ನು ವೈಯಕ್ತಿಕ, ವ್ಯಾವಹಾರಿಕ ಮನೋವಲಯದಿಂದ ದೂರವಿರಿಸಿದಾಗ ಅನುಭವಕ್ಕೆ ಬರುತ್ತವೆ ಎಂದು ಈ ಮೊದಲೇ ವಿವರಿಸಲಾಗಿದೆ. ಹೀಗಾದಾಗ ವಸ್ತು ಮನಸ್ಸುಗಳ ನಡುವಿನ ವ್ಯಾವಹಾರಿಕ ಸೂತ್ರ ಕಡಿದು ಬೀಳುತ್ತದೆಯೇ ಹೊರತು ಅವುಗಳ ಸೌಂದರ್ಯ ಸೂತ್ರವಲ್ಲ. ಆಗ ಮನಸ್ಸಿನಲ್ಲಿ ಸೌಂದರ್ಯದ ಒಲವು ಮಾತ್ರ ಅಬಾಧಿತವಾಗಿ ಅಚ್ಚಳಿಯದೆ ಉಳಿಯುತ್ತದೆ. 'ಎಡ್ವರ್ಡ ಬುಲ್ಲೋ' ಹೇಳುವಂತೆ ವ್ಯಕ್ತಿಗತ (personal) ಹಾಗೂ ವ್ಯಕ್ತ್ಯತೀತ(Impersonal)ಗಳಲ್ಲಿ ವ್ಯಕ್ತ್ಯತೀತ ಸ್ಥಿತಿಯೇ ಹೆಚ್ಚು ಸಮೀಪವರ್ತಿ ಎನ್ನಿಸಬಹುದು. ಆದರೆ ವ್ಯಕ್ತ್ಯತೀತವೆಂದರೆ ವ್ಯಕ್ತಿಯು ಸಂಪೂರ್ಣ ಸಂಬಂಧವನ್ನು ಕಡಿದುಕೊಳ್ಳುವದಲ್ಲ. ವ್ಯಕ್ತಿ ವಸ್ತುಗಳ ನಡುವಿನ ಸಂಬಂಧ ಕೇವಲ ವ್ಯಾವಹಾರಿಕ ಒಂದೇ ಅಲ್ಲ. ವ್ಯಕ್ತಿಯಲ್ಲಿ ವ್ಯಾವಹಾರಿಕ ದೃಷ್ಟಿಯಂತೆ ಸೌಂದರ್ಯ ದೃಷ್ಟಿಯೂ ಇದೆ. ಆದುದರಿಂದ ವ್ಯಕ್ತ್ಯತೀತವೆಂದರೆ ವ್ಯಕ್ತಿ ವಿದೂರತೆಯಲ್ಲ; ಸೌಂದರ್ಯ ದೃಷ್ಟಿಯು ವೈಯಕ್ತಿಕತೆ ಹಾಗೂ ವಸ್ತುವಿನ ನೈಜ ಸೌಂದರ್ಯವನ್ನು ಸಮನ್ವಯಿಸಿಕೊಂಡು ಬೆಳೆದು ನಿಲ್ಲುವ ವಿಶಿಷ್ಟ ವ್ಯಕ್ತಿತ್ವವೆಂದು ಅರ್ಥೈಸಬೇಕಾಗುತ್ತದೆ. ಆಗ ವಿಶಿಷ್ಟ ವ್ಯಕ್ತಿತ್ವವೆನ್ನುವುದು ವಸ್ತುವ್ಯಕ್ತಿಗಳ ವ್ಯಾವಹಾರಿಕತೆಯ ಅಂಶಗಳನ್ನು ಕಳೆದುಳಿದ ವಿಶುದ್ಧ ಕಲಾವ್ಯಕ್ತಿತ್ವವೆನ್ನುವ ಸತ್ಯವು ಗೋಚರಿಸುತ್ತದೆ.

ತೋರಿಕೆಯ ಅಸಂಗತಿಗಳ ಸಮನ್ವಯ

ನಾಟಕದ ಪರಿಭಾವನೆಯಲ್ಲಿ "ಮಾನಸಿಕ ದೂರ" ತತ್ವವು ಬಹುಬೇಗ ಅನುಭವಕ್ಕೆ ಬರುತ್ತದೆ ಎನ್ನುತ್ತಾರೆ "ಎಡ್ವರ್ಡ ಬುಲ್ಲೋ". ಭಾರತೀಯರು "ಸಾಧಾರಣೀಕರಣ" ತತ್ವವನ್ನು ನಾಟಕದ ಉದಾಹರಣೆಯಿಂದಲೇ ವಿವರಿಸಿದುದು ಲಕ್ಷ್ಯಾರ್ಹವಾದುದು. ನಾಟಕದಲ್ಲಿನ ಸಂಗತಿಗಳು ಹಾಗೂ ಪಾತ್ರಗಳು ವ್ಯಾವಹಾರಿಕ ಜಗತ್ತಿನ ಸಂಗತಿ ವ್ಯಕ್ತವಾದಂತೆ ಭಾಸವಾಗುವದಿಲ್ಲ. ಅಲ್ಲಿ ನಡೆಯುವದೆಲ್ಲ ಕಾಲ್ಪನಿಕ, ಅವಾಸ್ತವಿಕ, ಇಲ್ಲವೆ ಅರೆವಾಸ್ತವಿಕ ಜಗತ್ತಿಗೆ ಸೇರುವ ಸತ್ಯವೆನ್ನುವದು ಸಾಮಾನ್ಯ ಅಭಿಪ್ರಾಯವಾಗಿದೆ. ವಾಸ್ತವಿಕ ಜಗತ್ತಿನ ಕಾಲ, ದೇಶ, ಪರಿಸರಗಳ ಪ್ರಜ್ಞೆಯನ್ನು ಮೀರಿದ ಸಾಮಾನ್ಯ

ಪ್ರಜ್ಞೆಯ ಪಾತಳಿಯ ಮೇಲೆ ಅವುಗಳ ಸತ್ಯವನ್ನು ಗ್ರಹಿಸಬೇಕಾಗುತ್ತದೆ. ಹೀಗಾಗಬೇಕಾದರೆ "ಬುಲ್ಲೋ" ಹೇಳುವಂತೆ "ಮಾನಸಿಕ ದೂರ"ದ ನಿಲುವಿನಲ್ಲಿ ನಿಂತು ನೋಡಬೇಕಾಗುತ್ತದೆ. ಆದರೆ ಇಲ್ಲಿ ಒಂದು ಸಂಗತಿಯನ್ನು ಅವಶ್ಯ ಗಮನಿಸಬೇಕು. ನಾಟಕದ ಪಾತ್ರ ಸನ್ನಿವೇಶಗಳನ್ನು ಪರಿಭಾವಿಸುವಾಗ "ಮಾನಸಿಕ ದೂರ"ವು ವ್ಯವಹರಿಸುವುದರಿಂದ ಅವುಗಳ ಬಗೆಗೆ ನಾವು ತೋರುವ ಆಸಕ್ತಿ ಪ್ರತಿಕ್ರಿಯೆಗಳು ವ್ಯಾವಹಾರಿಕವಲ್ಲ, ಕಲಾತ್ಮಕವಾದವುಗಳು. ಕಲಾಪ್ರಜ್ಞೆಯಲ್ಲಿ ಅವು ಸಾಮಾನ್ಯತೆಯನ್ನು ಪಡೆದರೂ ತಮ್ಮ ವಿಶಿಷ್ಟ ವೈಯಕ್ತಿಕತೆಯನ್ನು ಕಳೆದುಕೊಳ್ಳುವದಿಲ್ಲ. ಉದಾಹರಣೆಗಾಗಿ ಸೀತೆ ಡೇಸ್ಡಿಮೋನಾ, ಜ್ಯೂಲಿಯಟ್ ಹಾಗೂ ದ್ರೌಪದಿಯರ ಪಾತ್ರಗಳನ್ನು ನಾಟಕದಲ್ಲಿ ಪರಿಭಾವಿಸಿದಾಗ ವ್ಯಕ್ತಿ ವೈಶಿಷ್ಟಗಳೆಲ್ಲ ಇಲ್ಲದಂತಾಗಿ ಅವರೆಲ್ಲ ಕೇವಲ ನಾರೀತ್ವದ ಸಾಮಾನ್ಯ ಸ್ವರೂಪದಲ್ಲಿ ಕಾಣಿಸಿಕೊಂಡರೆ, ಅವರೆಲ್ಲರೂ ವ್ಯಕ್ತಿವೈಶಿಷ್ಟ್ಯ, ವೈವಧ್ಯಗಳಿಲ್ಲದ ಸಾಮಾನ್ಯತೆಯ ಅಸ್ಥಿಪಂಜರಗಳಾಗ ಬೇಕಾದೀತು! ಆದುದರಿಂದ ಕಲೆ ಒಂದರ್ಥದಲ್ಲಿ ವೈಯುಕ್ತಿಕವೂ ಹೌದು; ಅದೇ ಕಾಲಕ್ಕೆ ಸಾಮಾನ್ಯವೂ ಹೌದು. ತೋರಿಕೆಯಲ್ಲಿ ಈ ಹೇಳಿಕೆ ವಿರೋಧ ವನ್ನೊಳಗೊಂಡಿದೆ. ಆದರೆ ಕಲಾಕ್ಷೇತ್ರದಲ್ಲಿ ಈ ವಿರೋಧವು ಆಭಾಸವಾಗಿ ತೋರಿದರೆ ಆಶ್ಚರ್ಯವಿಲ್ಲ. 'ಎಡ್ವರ್ಡ ಬುಲ್ಲೋ' ಅವರು ಕಲೆಯ ಇಂತಹ ವಿಚಿತ್ರ ಸತ್ಯವನ್ನು ಮಾನಸಿಕ ದೂರದ ಭಾವ ವಿರೋಧ (Antinomy of distance) ವೆಂದು ಹೆಸರಿಸಿದ್ದಾರೆ.

"This personal, but distanced relation (as I will venture to call this nameless character of our view) directs attention to a strange fact which appears to be one of the fundamental paradoxes of Art: it is what I propose to call the antinomy of distance"[೧].

ದೂರ ಭಂಗ (The loss of distance)

'ಮಾನಸಿಕ ದೂರ' ವು ಕಾವ್ಯಸೃಷ್ಟಿ ಕ್ರಿಯೆಯಲ್ಲಿ ತೊಡಗಿದ ಕವಿ ಹಾಗೂ ಕಾವ್ಯಕೃತಿಯನ್ನು ಪರಿಭಾವಿಸುವ ಸಹೃದಯ ಇಬ್ಬರಿಗೂ ಒಂದೇ ಬಗೆಯಲ್ಲಿ ಅನ್ವಿತವಾಗುತ್ತದೆ. ಕವಿಯಾದವನು ಕೃತಿಯಲ್ಲಿ ತನ್ನ ವೈಯುಕ್ತಿಕ (Qua personal) ಅನುಭವದಿಂದ ಭಿನ್ನವಾದ ಕಾವ್ಯಾನುಭವವನ್ನು ಮಾತ್ರ ಎರಕ ಹೊಯ್ಯಬೇಕು. ಸಹೃದಯನು ಕೂಡ ಅಂತಹುದೇ ಮನಸ್ಥಿತಿಯನ್ನಿಟ್ಟು

೧. Edward Bullough: The British Journal of Psychology Vol. V. 1912-13 - P. 92

ಕೊಂಡು ಕಾವ್ಯಕೃತಿಯನ್ನು ಪರಿಭಾವಿಸಬೇಕು. ವೈಯಕ್ತಿಕ ರಾಗದ್ವೇಷಗಳ ದೃಷ್ಟಿಯಿಂದ ನೋಡಿದರೆ ಅವನು ಪಡೆಯುವ ಅನುಭವವೂ ಕೇವಲ ಲೌಕಿಕ ಪ್ರತಿಕ್ರಿಯೆಯಾಗಿ ಕಾವ್ಯಾನುಭವವನ್ನು ಶೂನ್ಯಗೊಳಿಸುವದು. ಸೌಂದರ್ಯಾನುಭೂತಿಗೆ ಇಬ್ಬರಲ್ಲಿಯೂ ಒಂದು ಬಗೆಯ ಪಟುತ್ವ ಇಲ್ಲವೆ ಯೋಗ್ಯತೆ ಬೇಕು. ಆ ಪಟುತ್ವ ಇಲ್ಲವೆ ಕೌಶಲವೇ ಮಾನಸಿಕ ದೂರ. ಸೌಂದರ್ಯಾನುಭವಕ್ಕೆ ಅನುಕೂಲವಾಗುವಂತೆ ಮಾನಸಿಕ ದೂರವನ್ನು ನಿಯಮಿತಗೊಳಿಸಬೇಕು. ಇದರಲ್ಲಿ ಅಲ್ಪ ವ್ಯತ್ಯಾಸವಾದರೂ ದೂರಭಂಗವಾಗುತ್ತದೆ. ದೂರ ಭಂಗವು ಎರಡು ವಿಧವಾದುದು : ವೈಯಕ್ತಿಕತೆಯ (Qua personal) ಕಡೆ ವಾಲಿದರೆ 'ದೂರಾವಪಾತ' (Under distance), ಸಾಮಾನ್ಯದ ಕಡೆ ವಾಲಿದರೆ 'ದೂರಾಧಿಕ್ಯ' (Over distacne) ಎಂಬ ದೋಷಗಳಾಗುತ್ತವೆ. ತಾತ್ವಿಕವಾಗಿ ಮಾನಸಿಕ ದೂರದ ನಿಲುಗಡೆಯನ್ನು ನಿಶ್ಚಿತಪಡಿಸುವದು ಸುಲಭ ಸಾಧ್ಯವಲ್ಲ. ಇಡೀ ಸೌಂದರ್ಯಾನುಭವವೇ ಅಮೂರ್ತದ (Abstract) ಅಗಮ್ಯ ಕ್ಷೇತ್ರವಾದುದರಿಂದ ಅದರ ಅನುಭೂತಿಗೆ ಅನುಕೂಲ ನೆಲೆಯೇ ಮಾನಸಿಕ ದೂರದ ನಿಲುಗಡೆ. ಉತ್ತಮ ಕಲಾವಿದರು ಮಾತ್ರ ಅದನ್ನು ಕಾಯ್ದುಕೊಳ್ಳುವದರಲ್ಲಿ ಪಟುತ್ವ ಹೊಂದಿರುತ್ತಾರೆ. ದೂರಮಿತಿ (Distance limit) ಯನ್ನು ಕಳೆದುಕೊಂಡು ವ್ಯಾವಹಾರಿಕ ವೈಯಕ್ತಿಕತೆಯ ಕಡೆಗೆ ವಾಲುವದು ಜನಸಾಮಾನ್ಯರ ದೃಷ್ಟಿಯ ಸಹಜ ಗುಣ. ಆದುದರಿಂದ ಕಲಾವಿದ ಹಾಗೂ ಸಾಮಾನ್ಯರಿಬ್ಬರೂ ಮಾನಸಿಕ ದೂರವನ್ನು ಕಲಾನುಭವಕಾರಿಯಾಗುವಂತೆ ಕಡಿಮೆಗೊಳಿಸಬೇಕೆ ವಿನಃ ಅದು ಸಂಪೂರ್ಣ ಇಲ್ಲವಾದರೆ ಕಲಾನುಭವವೇ ಇಲ್ಲವಾಗುತ್ತದೆ.

"What is therefore, both in appreciation and production, most desirable is the utmost decrease of distance without its disappearence"೧.

ದೂರ ವಿಭಿನ್ನತೆ (Variability of distance)

'ಮಾನಸಿಕ ದೂರ' ದಲ್ಲಿ ಭಿನ್ನ ಶ್ರೇಣಿಗಳಿದ್ದು ಅದು ವಸ್ತುವಿನ ಸ್ವಭಾವಕ್ಕನುಗುಣವಾಗಿ ಬದಲಾಗುವಂತೆ ವ್ಯಕ್ತಿಯ ದೂರ ಕಾಯ್ದುಕೊಳ್ಳುವ ಶಕ್ತಿಯನ್ನು ಅವಲಂಬಿಸಿ ಭಿನ್ನತೆಯನ್ನು ವ್ಯಕ್ತಪಡಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಗೆ ತನ್ನದೇ ಆದ ಒಂದು ಸ್ವಾಭಾವಿಕ ದೂರ ಪರಿಮಾಣ (Habitual measure of distance) ವು ಇರುತ್ತದೆ. ಈ ದೂರ ಪರಿಮಾಣವು

---

೧. Edward Bullough : The British Journal of Psychology vol. V. 1912-13 P. 94

ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗುವದಲ್ಲದೆ ಒಬ್ಬನೇ ವ್ಯಕ್ತಿಯು ದೂರ ಪರಿಮಾಣವು ಭಿನ್ನ ವಸ್ತುಗಳು ಹಾಗೂ ಭಿನ್ನ ಕಲೆಗಳ ಪರಿಭಾವನೆಯಲ್ಲಿ ಭಿನ್ನವಾಗುತ್ತದೆ. ವಸ್ತುವಿನ ಸೌಂದರ್ಯ ಶಕ್ತಿ ಹಾಗೂ ವ್ಯಕ್ತಿಯು ಸೌಂದರ್ಯಾನುಭವವನ್ನು ಪಡೆಯುವ ಶಕ್ತಿಗಳೆರಡೂ ಮೇಳವಿಸಿದಾಗ ಸೌಂದರ್ಯ ದರ್ಶನವಾಗುವದರಿಂದ ಈ ರೀತಿಯ ಸಮನ್ವಯದ ಪೂರ್ಣತೆಯನ್ನು ಅವಲಂಬಿಸಿ, ಸೌಂದರ್ಯಾನುಭವದಲ್ಲಿಯೂ ತರತಮವೇರ್ಪಟ್ಟು ಭಿನ್ನತೆ ವ್ಯಕ್ತವಾಗುತ್ತದೆ.

ಮಾನಸಿಕ ದೂರು, ಅನುಕರಣೆ

ಕಲೆಯು ಜಗತ್ತು ವ್ಯಾವಹಾರಿಕ ಜಗತ್ತಿನಿಂದ ಭಿನ್ನವೆಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕಲಾಕೃತಿಗಳಲ್ಲಿ ನೈತಿಕ, ಧಾರ್ಮಿಕ, ಅನುಭಾವಿಕ ವಿಚಾರಗಳು ಒಮ್ಮೊಮ್ಮೆ ವ್ಯಕ್ತವಾಗಬಹುದಾದರೂ ಅವೆಲ್ಲ ಕಲೆಯಿಂದ ದೊರೆಯುವ ಅನ್ಯ ಪ್ರಯೋಜನಗಳು, ಕಲೆ ದರ್ಶಿಸುವದು ಅನುಭೂತಿ ಪ್ರದಾಯಕ ಸೌಂದರ್ಯವನ್ನು. ಸೌಂದರ್ಯವೇ ಸಕಲ ಕಲೆಗಳ ಗುರಿ, ಪರಮೋದ್ದೇಶವಾಗಿದೆ. ಈ ವಿಷಯದಲ್ಲಿ ಪಾಶ್ಚಾತ್ಯ ವಿಮರ್ಶಕರಲ್ಲಿ ಸುದೀರ್ಘವಾದ ಚರ್ಚೆ ನಡೆದು, ಕಲಾ ಪ್ರಪಂಚವು ವಾಸ್ತವಿಕ ಪ್ರಪಂಚದಿಂದ ಭಿನ್ನವಾದ ಸರ್ವ ಸ್ವತಂತ್ರವಾದ ಕ್ಷೇತ್ರವೆಂಬ ವಿಚಾರದ ನಿಲುಗಡೆಯನ್ನು ತಲುಪಿದೆ. 'ಎ.ಸಿ. ಬ್ರಾಡ್ಲೆ' ಅವರು ಕಾವ್ಯದ ಬಗೆಗೆ ಹೇಳಿದ ಮಾತುಗಳು ಇಡೀ ಕಲಾ ಸಮುದಾಯಕ್ಕೆ ಅನ್ವಿತವಾಗುತ್ತವೆ.

"....For its nature is to be not a part, nor yet a copy of the real world (as we commonly understand that phrase), but to be a world by itself, independant, complete, autonomous ;...."೧.

'ಎಡ್ವರ್ಡ ಬುಲ್ಲೋ' ಅವರ ಕಲಾಜಗತ್ತಿನ ಬಗೆಗಿನ ಅಭಿಪ್ರಾಯವು ಇದೇ ಬಗೆಯದಾಗಿದೆ. ಕಲೆ ಜಗತ್ತಿನ ಅನುಕರಣವೆಂಬ ಮಾತನ್ನು ಅವರು ಅಲ್ಲಗಳೆಯುತ್ತಾರೆ. ಕಲಾವಿದನು ವಾಸ್ತವಿಕ ಜಗತ್ತನ್ನು ಪರಿಭಾವಿಸುವದು 'ಮಾನಸಿಕ ದೂರ'ದಿಂದ. 'ಮಾನಸಿಕ ದೂರ'ವು ಅನ್ವಿತವಾದ ದಿವ್ಯಕ್ಷಣದಲ್ಲಿ ಮನಸ್ಸು ವ್ಯಾವಹಾರಿಕ ಜಗತ್ತಿನ, ವ್ಯಾವಹಾರಿಕ ಅಂಶಗಳಿಂದ ಹಿಂದೆಗೆದು ಹೊಸದೊಂದು ಜಗತ್ತನ್ನೇ ನಿರ್ಮಾಣಗೊಳಿಸುತ್ತದೆ. ಇದು ಕವಿಪ್ರತಿಭೆ 'ಮಾನಸಿಕ ದೂರ'ದ ನಿಲುವಿನಲ್ಲಿ ನಿಂತು ದರ್ಶಿಸಿದ ಕಲಾಲೋಕವಾದುದರಿಂದ ಸಾಮಾನ್ಯ ಅರ್ಥದಲ್ಲಿ ಪ್ರಕೃತಿಯ ಅನುಕರಣೆಯಾಗಲಾರದು.

---

೧. A. C. Bradley : Oxford Lectures on Poetry.

ಮಾನಸಿಕ ದೂರ, ಸೌಂದರ್ಯಾನುಭವ

'ಮಾನಸಿಕ ದೂರ' ವು ಒಂದು ಕಲಾ ತತ್ತ್ವವೆನ್ನುವದನ್ನು ಈ ಮೊದಲೇ ನೋಡಲಾಗಿದೆ. ಆದುದರಿಂದ ಇದು ಕೊಡುವ ಅನುಭವವೂ ಆನಂದದಾಯಕ ವಾದುದು. "A thing of Beauty is joy for ever" ಎಂಬ ಮಾತಿನಲ್ಲಿ ಇದೇ ಸತ್ಯವಡಗಿದೆ. ಭೋಗಪ್ರಧಾನ ಸೌಂದರ್ಯವಾದ (aesthetic Hedonism) ದಲ್ಲಿ ಹುರುಳಿಲ್ಲವೆಂಬುದನ್ನು 'ಬುಲ್ಲೋ' ಎತ್ತಿ ತೋರಿಸುತ್ತಾರೆ. ಸೌಂದರ್ಯವು ಆನಂದದಾಯಕವಾದರೂ, ಆನಂದದಾಯಕವಾದುದೆಲ್ಲವೂ ಸುಂದರವಲ್ಲ. ನಿಜ ವಾದ ಸೌಂದರ್ಯವು ನೀಡುವದು ಅತೀಂದ್ರಿಯ ಲೋಕದ ಅನುಭವವನ್ನು ಮಾತ್ರ. ಇಂದ್ರಿಯಗಳಿಗೆ ಹಿತವನ್ನುಂಟುಮಾಡಿ ವ್ಯಾವಹಾರಿಕ ವಲಯ ದಲ್ಲಿಯೇ ವಿರಮಿಸುವ ದೃಷ್ಟಿಯನ್ನು, 'ಬುಲ್ಲೋ' ಅವರು 'ಮೋದನೀಯ' (agreeable) ಎಂದು ಕರೆದು ಇದು 'ರಮಣೀಯ' ವಾದುದಕ್ಕೆ (Beauty) ವಿರುದ್ಧವಾದುದು ಎನ್ನುತ್ತಾರೆ.

"...... the agreeable is a non distanced pleasure. Beauty in the widest sense of aesthetic value is impossible without the insertion of distance".[೧]

'agreeable' ಇಂದ್ರಿಯಗಮ್ಯ ಅನುಭವವಾದರೆ, 'Beauty' ಇಂದ್ರಿಯಾ ತೀತದ ಅನುಭವ. 'ಮಾನಸಿಕ ದೂರ' ವಿಲ್ಲದ 'agreeable' ವ್ಯಾವಹಾರಿಕ ಸುಖವನ್ನು ಮಾತ್ರ ಕೊಟ್ಟರೆ 'ಮಾನಸಿಕ ದೂರ' ದ ನಿಲುವಿನಲ್ಲಿ ಆವಿಷ್ಕಾರ ವಾಗುವ ಸೌಂದರ್ಯವು ಸೌಂದರ್ಯಾನುಭವ (aesthetic pleasure) ಅರ್ಥಾತ್ ರಸಾನುಭವಕಾರಿಯಾದುದು.

"......the agreeable is felt as an affection of our concrete practical self; the centre of gravity of agreeable experience lies in the self which experiences the agreeable. The aesthetic experience, on the contrary, has its centre of gravity in itself or in the object mediating it, not in the self which has been distanced out of the field of the inner vision of the experiencer; 'not the fruit but the experience itself, is the end".[೨]

ಮೇಲಿನ ಅವತರಣಿಕೆಯಲ್ಲಿ 'ಮಾನಸಿಕ ದೂರ' ತತ್ತ್ವದ ಉಜ್ವಲ ನಿರೂ- ಪಣೆ ಇದೆ. 'agreeable' ದ ಅನುಭವಕ್ಕೆ ವ್ಯಾವಹಾರಿಕ ವ್ಯಕ್ತಿತ್ವವು

---

೧. Edward Bullough The British Journal of Psychology. Vol. V. 1912-13. P. 108.

೨. *Ibid.* P–108.

ಕೇಂದ್ರವಾದರೆ, ಸೌಂದರ್ಯಾನುಭೂತಿಯ ಕೇಂದ್ರಬಿಂದುವು ಸೌಂದರ್ಯದಲ್ಲಿ ಇಲ್ಲವೆ ಸೌಂದರ್ಯಕ್ಕೆ ಮಾಧ್ಯಮವಾಗುವ ವಸ್ತುವಿನಲ್ಲಿ ಇರುತ್ತದೆ. ವೈಯು-ಕ್ತಿಕ ಸುಖವು 'agreeable' ದ ಗುರಿಗಮ್ಯವಾದರೆ, ಸೌಂದರ್ಯಕ್ಕೆ ಸೌಂದರ್ಯವೇ ಮೊದಲು, ಕೊನೆ. ಏಕೇದರೆ ಸೌಂದರ್ಯ ದೃಷ್ಟಿಯಲ್ಲಿ ವ್ಯಾವಹಾರಿಕತೆಯೆಲ್ಲ 'ಮಾನಸಿಕ ದೂರ' ದ ವ್ಯವಹೃತಿಯಿಂದ ಅನುಭವಿಸುವವನ ವೈಯುಕ್ತಿಕ ಅಂತರ್ದರ್ಶನದ ಹೊರಗುಳಿಯುವದರಿಂದ ಇಂತಹ ಕೇವಲ ಸೌಂದರ್ಯಾನು-ಭವದ ಉನ್ನತ ನೆಲೆ ಸಾಧಿತವಾಗುತ್ತದೆ. ಇದು ವೈಯುಕ್ತಿಕ ವ್ಯಾವಹಾರಿಕ ಪ್ರಜ್ಞೆಯ ನೆಲೆಯಲ್ಲಿ ನಡೆಯುದ ಅಧಿಮಾನಸ ಪ್ರಜ್ಞೆಯ (trancedental) ಕ್ಷೇತ್ರದ ಅನುಭವ.

ಮಾನಸಿಕ ದೂರ, ಸೃಷ್ಟಿಕ್ರಿಯೆ (Creative Process) :

ಕಲಾಸೃಸ್ಟಿಕ್ರಿಯೆಯಲ್ಲಿ 'ಮಾನಸಿಕ ದೂರ' ವು ಅತ್ಯಂತ ಪ್ರಭಾವಿ ಹಾಗೂ ಮೂಲಭೂತ ಅಂಶವಾಗಿ ಗೋಚರಿಸುತ್ತದೆ. ಅನುಕರಣವಾದದ ಅಸಮಂಜಸತೆಯನ್ನು ಈಗಾಗಲೇ ಎತ್ತಿ ತೋರಿಸಲಾಗಿದೆ. ಕಲೆಯನ್ನು ಕಲಾವಿದನ ವ್ಯಕ್ತಿತ್ವದ ಅಭಿವ್ಯಕ್ತಿಯೆಂದು ವರ್ಣಿಸುವದು ಕೂಡ ಅಸಮರ್ಪಕವಾದುದು. ಏಕೆಂದರೆ ಕಲೆಯಲ್ಲಿ ವ್ಯಾವಹಾರಿಕ ವ್ಯಕ್ತಿತ್ವದ ಅಭಿವ್ಯಕ್ತಿ ಇದ್ದರೆ 'ಮಾನಸಿಕ ದೂರ' ವು ಇಲ್ಲವಾಗುತ್ತದೆ. 'ಎಡ್ವರ್ಡ ಬುಲ್ಲೋ' ಅವರು ಕಲಾವಿದನ ವ್ಯಕ್ತಿತ್ವದಲ್ಲಿ ಭಿನ್ನಸ್ತರಗಳನ್ನು ಗುರುತಿಸಿರುವದು ಅತ್ಯಂತ ಸಮರ್ಪಕವಾಗಿದೆ. ವ್ಯಾವಹಾರಿಕ ಪ್ರಜ್ಞೆ ಹಾಗೂ ಸೌಂದರ್ಯ ಪ್ರಜ್ಞೆಗಳಿಂದ ಘಟಿತವಾದ ಸಂಕೀರ್ಣ ವ್ಯಕ್ತಿತ್ವವೊಂದು ಕಲಾವಿದನಿಗೆ ಇರುತ್ತವೆ. ಸೃಷ್ಟಿ-ಕ್ರಿಯೆಯಲ್ಲಿ ಅಭಿವ್ಯಕ್ತಿ ಪಡೆಯುವದು 'ಮಾನಸಿಕ ದೂರ' ವನ್ನು ಒಳಗೊಂಡ ಅವನ ಕಲಾವ್ಯಕ್ತಿತ್ವ ಮಾತ್ರ. ಆಗ ಕಲಾವಿದನ ಮನಸ್ಸು ಮಾನವಕುಲದ ಸಮಷ್ಟಿ ಪ್ರಜ್ಞೆಯ (collective Conciousess) ದರ್ಶನವನ್ನು ಅಭಿವ್ಯಕ್ತಿಗೆ ಒಳಪಡಿಸುತ್ತದೆ.

"..... there is the interpolation of distance which stands between the artist's conception and the man's. For the artist himself is already distanced from the concrete, historical personality who ate and drank and did the ordinary business of life"[೧]

ಕಲೆಯನ್ನು ಕಲಾವಿದನ ಸ್ವಂತ ವೈಯುಕ್ತಿಕತೆಯ ಅಭಿವ್ಯಕ್ತಿಯೆಂದು ವರ್ಣಿಸಿದರೆ ಅವನ ಕಲಾವ್ಯಕ್ತಿತ್ವ (Artist.) ಹಾಗೂ ಸ್ವಂತ ವೈಯುಕ್ತಿ

೧, Edward Bullough. "The British Journal of psychology Vol. V, 1912 - 13 P. 114

ಕತೆಯನ್ನು (Man) ಏಕೀಭೂತಗೊಳಿಸಿದಂತೆ ಆಗುತ್ತದೆ. ವೈಯಕ್ತಿಕ ಅನು-ಭವದಲ್ಲಿ ಅಭಿವ್ಯಕ್ತಿಗೊಳಿಸಬಾರದ ಅಂಶಗಳು ಅನೇಕ ಇರುತ್ತವೆ. ಸ್ವಂತ ವೈಯಕ್ತಿಕತೆಯನ್ನೇ ಅಭಿವ್ಯಕ್ತಿಗೊಳಿಸಲು ಹೇಳುವುದೆಂದರೆ, ಒಬ್ಬ ಗೌರವಾನ್ವಿತ ನಾಗರಿಕನನ್ನು ಓಣಿಯಲ್ಲಿ ಬತ್ತಲೆಯಾಗಿ ಆಡ್ಡಾಡಲು ಹೇಳಿದಂತೆಯೇ ಎಂದು 'ಬುಲ್ಲೋ' ಅವರು ಹೇಳುವುದು ಮಾರ್ಮಿಕವಾದುದು. ಕಲಾಸೃಷ್ಟಿ ಕ್ರಿಯೆಯಲ್ಲಿ ವ್ಯಾವಹಾರಿಕ ವ್ಯಕ್ತಿತ್ವದ ಅನಿಸಿಕೆಗಳು 'ಮಾನಸಿಕ ದೂರ' ದ ಅನ್ವಯದಿಂದ ವಸ್ತುನಿಷ್ಠವಾಗಿ ಮಾರ್ಪಟ್ಟು ಅಭಿವ್ಯಕ್ತಗೊಳ್ಳುತ್ತವೆ. ಈ ಮಾತನ್ನು 'ಬುಲ್ಲೋ' ಒಬ್ಬ ಕಲಾವಿದನ ಅನುಭವದ ಆಧಾರದ ಮೇಲೆ ವಿವರಿಸುತ್ತಾರೆ: :ಸೃಷ್ಟಿಕ್ರಿಯೆಯಲ್ಲಿ ಮೊದಲು ಮೂಡುವುದು ಭಾವನಾತ್ಮಕ ವಿಚಾರ. (Emotional idea) ಇದು ಕಲಾಸೃಷ್ಟಿಯ ಮೊದಲ ಘಟ್ಟ. ದ್ವಿತೀಯ ಘಟ್ಟದಲ್ಲಿ ಕಲಾವಿದನ ಕಲ್ಪನೆಯಲ್ಲಿ ಪಾತ್ರಗಳು ರೂಪುಗೊಳ್ಳುತ್ತವೆ. ಭಾವನಾತ್ಮಕ ವಿಚಾರ ಹಾಗೂ ಪ್ರತಿಭಾ ನಿರ್ಮಿತ ಪಾತ್ರಗಳಲ್ಲಿ ಹುಟ್ಟು ಸಾವಿನ ಹೋರಾಟವೇರ್ಪಡುವದು ಕಲಾನಿರ್ಮಿತಿಯ ತೃತೀಯ ಹಂತದಲ್ಲಿ. ಈ ಹೋರಾಟದಲ್ಲಿ ಮೂಲಭಾವನೆಗೆ ಜಯ ದೊರೆತರೆ ಕಲಾಸೃಷ್ಟಿ ನಿತಂತೆಯೇ. ಪಾತ್ರಗಳು ಮೂಲಭಾವನೆಯನ್ನು ಸಂಪೂರ್ಣವಾಗಿ ಹೀರಿ ಜಯಗಳಿಸಿದರೆ, ಕಲಾಸೃಷ್ಟಿ ನಿರಾತಂಕವಾಗಿ ಮುಂದುವರಿಯುತ್ತದೆ. ಇಲ್ಲಿನ 'emotional idea' ವ್ಯಕ್ತಿಯದು; ಪಾತ್ರಗಳು ಕಲಾವ್ಯಕ್ತಿಯವು. ಕಲಾಸೃಷ್ಟಿಯಲ್ಲಿ ವ್ಯಾವಹಾರಿಕ ವ್ಯಕ್ತಿ ಸತ್ತು, ಕಲಾವ್ಯಕ್ತಿ ಉದಯಿಸಬೇಕು. 'ಮಾನಸಿಕ ದೂರ'ವು ವ್ಯಾವಹಾರಿಕ ವ್ಯಕ್ತಿತ್ವವನ್ನು ಇಲ್ಲಗೈದು ಕಲಾವ್ಯಕ್ತಿ ವಿಕಸನಕ್ಕೆ ದಾರಿಮಾಡಿ ಕೊಡುವದರ ಮೂಲಕ ಕಲಾಕೃತಿಯ ಜನನಕ್ಕೆ ಕಾರಣವಾಗುತ್ತದೆ.

★ ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕದ ಅಗ್ರಹಾರಗಳು

ಅಗ್ರಹಾರ ಲೊಕ್ಕಿಗುಂಡಿ

ಲಕ್ಕುಂಡಿ ಈಗ ಒಂದು ಚಿಕ್ಕ ಗ್ರಾಮ. ಇದು ಧಾರವಾಡ ಜಿಲ್ಲೆಯ ಗದಗ ತಾಲೂಕಿನಲ್ಲಿದೆ. ಲೊಕ್ಕಿಗುಂಡಿ ಎಂದು ಕರೆಯಲ್ಪಡುತ್ತಿದ್ದ ಈ ಲಕ್ಕುಂಡಿಯು ಸುಮಾರು ೧೦–೧೧ ನೆಯ ಶತಮಾನದ ಹೊತ್ತಿಗೆ ಕರ್ನಾಟಕದ ಒಂದು ಪ್ರಮುಖ ವಾದ ಸ್ಥಳವಾಗಿದ್ದಿತು. ಅಂದಿನ ಅದರ ವೈಭವ ಇಂದು ಕಣ್ಮರೆಯಾಗಿದೆ. ಆದರೂ ಇಂದು ನಾವು ಅಲ್ಲಿ ಕಾಣುವ ಹಾಳುಬಿದ್ದ ದೇವಸ್ಥಾನಗಳು ಮತ್ತು ಶಿಲಾಶಾಸನಗಳು ಅದರ ಹಿಂದಿನ ವೈಭವದ ಕಥೆಯನ್ನು ಸಾರಿ ತಿಳಿಸುತ್ತವೆ. ೧೦ ರಿಂದ ೧೨ ನೆಯ ಶತಮಾನದವರೆಗೆ ಆಳಿದ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇದೊಂದು ಬಲವಾದ ದುರ್ಗವಾಗಿದ್ದಿತು. ನಂತರ ಸ್ವಲ್ಪ ಸಮಯ ಹೊಯ್ಸಳರ ವಶದಲ್ಲಿದ್ದಿತು. ಆದರೆ ಸೇವುಣ ಸಿಂಘಣನು ಬೆಳ್ವೊಲನಾಡನ್ನು ಅದರ ದಕ್ಷಿಣಭಾಗದಲ್ಲಿದ್ದ ಹಲವು ಭಾಗ-ಗಳನ್ನೂ ಗೆದ್ದುಕೊಂಡಾಗ ಇದು ಸೇವುಣ ರಾಜ್ಯದ ಒಂದು ಮುಖ್ಯ ಸ್ಥಳವಾಗಿ ಪರಿವರ್ತಿತವಾಯಿತು. ಹೀಗೆ ಲೊಕ್ಕಿಗುಂಡಿಯು ಚಾಲುಕ್ಯರ, ಸೇವುಣರ ಹಾಗೂ ಹೊಯ್ಸಳರ ಕಾಲದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿದ್ದಿತು.

ಲೊಕ್ಕಿಗುಂಡಿ ಎನ್ನುವ ಹೆಸರು ಇಲ್ಲಿ ಹೇರಳವಾಗಿದ್ದ ಲೊಕ್ಕಿ ಎನ್ನುವ ಗಿಡ ಗಳಿಂದ ಬಂದಿತ್ತೆನ್ನಬಹುದು. (ಲೊಕ್ಕಿ ಅಂದರೆ ಒಂದು ರೀತಿಯ ಗಿಡ ಮತ್ತು ಗುಂಡಿ ಎಂದರೆ ತಗ್ಗಾದ ಪ್ರದೇಶ) ಇದರ ಪ್ರಾಚೀನತೆಯನ್ನು ಕುರಿತು ಹೇಳುವುದಾದರೆ ಇದು ದಶರಥನಿಂದ ವಿನಿರ್ಮಿತವಾದ ಗ್ರಾಮವೆಂಬ ಒಂದು ಐತಿಹ್ಯವು ಶಾಸನಗಳಲ್ಲಿ ಉಕ್ತವಾಗಿದೆ. ಪೌರಾಣಿಕ ವ್ಯಕ್ತಿ (ಜನಮೇಜಯ, ಪರಶುರಾಮ, ಹರಿಶ್ಚಂದ್ರ ಮುಂತಾದವರು) ಗಳಿಂದ ನಿರ್ಮಿತವಾದವುಗಳೆನ್ನಿಸಿಕೊಂಡ ಹಲವು ಅಗ್ರಹಾರಗಳು ನಮ್ಮಲ್ಲಿವೆ. ಅಂಥವುಗಳಲ್ಲಿ ಒಂದು ಲೊಕ್ಕಿಗುಂಡಿ. ಇದು ಶ್ರೀರಾಮನಿಂದ ಅಗ್ರಹಾರ ವೆಂದು ಹೇಳಿ, ಶಾಸನಗಳು. ಇದನ್ನು ಶ್ರೀರಾಮರದತ್ತಿ ಅಗ್ರಹಾರವೆಂದು ಶಾಸನ ಗಳು ಕರೆಯುತ್ತವೆ. ಬಹುಶಃ ಪ್ರಾಚೀನತೆಯನ್ನು ಸಾರಿಕೊಳ್ಳಲೋ ಅಥವಾ ಪುಣ್ಯ ಪುರುಷರ ಸಂಪರ್ಕದಿಂದ ಪವಿತ್ರವಾದುದೆಂದು ತಿಳಿಸುವುದಕ್ಕಾಗಿಯೋ ಹೀಗೆ ಪೌರಾಣಿಕ ವ್ಯಕ್ತಿಗಳಿಂದ ಸ್ಥಾಪಿತವಾದವುಗಳೆಂದು ಹಲವು ಅಗ್ರಹಾರಗಳನ್ನು ಹೀಗೆ ಹೆಸರಿಸುತ್ತಿದ್ದ ರೆಂದು ಹೇಳಬಹುದು.

ಈ ಅಗ್ರಹಾರದ ಬಹುಮುಖ ಪ್ರತಿಭೆಯ ವರ್ಣನೆಯು ನಮಗೆ ಶಾಸನಗಳಿಂದ ದೊರೆಯುತ್ತದೆ. ಇಂದ್ರನ ಅಮರಾವತಿಯೋ ಅಥವಾ ಅಳಕಾಪುರವೊ ಅಥವಾ

ನಾಗಲೋಕದ ಭೋಗಾವತಿಯೋ ಎಂಬಂತೆ ಇದು ಕಾಣುತ್ತಿತ್ತೆಂದು[೧] ಒಂದು ಕಡೆ ಇದರ ವರ್ಣನೆ ಬಂದಲ್ಲಿ ಮತ್ತೊಂದು ಕಡೆ ಇದು–

"ಗ್ರಾಮೋ ರಾಜತಿ ಲೊಕ್ಕಿ ಗುಂಡಿರಿತಿ ಯೋ ಭೂದೇವ ಪುಣ್ಯಾಕರಃ
ಕ್ಷೋಣೀ ಮಂಡಳ ಮಂಡನಂ ಕಲಿಬಲ ಛೇದಕ್ರಿಯಾ ಕೋವಿದಃ
ಯತ್ರ ವ್ಯೋಮ ಸಮಾವೃತಂ ಸುರಗೃಹ ಶ್ರೇಣಿ ಪತಾಕೋತ್ಕರೈಃ
ಸಂಕೀರ್ಣ್ಣ ಪೃಥ್ವೀ ಮುಖಾಳಿವಿಳಸದ್ರೂಪೈರ್ರೈಃ ಪಾರ್ಶ್ವೈರಪಿ"[೨]

ಎಂದು ವರ್ಣಿಸಲ್ಪಟ್ಟಿದೆ.

ಅನೇಕ ಸ್ಥಳಗಳನ್ನು ನಿರ್ಮಿಸುವುದರಲ್ಲಿ ತನ್ನ ನೈಪುಣ್ಯವನ್ನು ತೋರಿದ ಬ್ರಹ್ಮನು ಇಲ್ಲಿ ಇದನ್ನು ನಿರ್ಮಿಸಿದ ತರುವಾಯ ಬೇರೆ ಯಾವುದನ್ನೂ ನಿರ್ಮಿಸುವ ಶ್ರಮವನ್ನು ತೆಗೆದುಕೊಳ್ಳಲಿಲ್ಲವೆಂದು ಕವಿ ಹೇಳುತ್ತಾನೆ.[೩] ಇದಕ್ಕೆ ಸಮನಾದುದು ಅತಿವಿರಳವೆಂದೂ ಹೇಳಲಾಗಿದೆ. ಇದರ ವೈಭವ ಬಗೆ ಕೇಳಿದ ವ್ಯಕ್ತಿಯಂ ಅದನ್ನು ಕಾಣಲು ಆತುರಗೊಳ್ಳುತ್ತಾನೆಂತಲೂ, ನೋಡಿದವನು ಅಲ್ಲಿ ವಾಸಿಸಬೇಕೆಂಬ ಉತ್ಕಟೇಚ್ಛೆಯುಳ್ಳವನಾಗುತ್ತಾನೆಂದೂ. ಅಲ್ಲಿ ವಾಸಿಸಿದವನು ಅದನ್ನು ಬಿಟ್ಟು ಹೋಗುವ ಮನಸ್ಸಿಲ್ಲದವನಾಗಿಯೂ ದುರದೃಷ್ಟವಶಾತ ಅದನ್ನು ಬಿಡಬೇಕಾಗಿ ಬಂದಲ್ಲಿ ಅವನು ಶಾಶ್ವತವಾದ ದುಃಖಕೊಳ್ಳಗಾದವನಾಗಿ ಅಲ್ಲಿನ ತನ್ನ ವೈಭವದ ಗತ ಜೀವನದ ನೆನಪಿನಿಂದ ಸಿಟ್ಟುಗೊಳ್ಳುತ್ತಾನೆಂದೂ ಶಾಸನದಲ್ಲಿ ಇದರ ಬಗೆಗಿನ ವರ್ಣನೆ ನಮಗೆ ದೊರೆಯುತ್ತದೆ.

ಕವಿಯು ತನ್ನ ವರ್ಣನೆಯನ್ನು ಇನ್ನೂ ಮುಂದುವರಿಸಿ ಹೀಗೆ ಹೇಳುತ್ತಾನೆ– ಒಮ್ಮೆ ಬ್ರಹ್ಮನು ಅಮರಾವತಿ ಮತ್ತು ಲೊಕ್ಕಿಗುಂಡಿ ಈ ಎರಡು ಪಟ್ಟಣಗಳ ಘನತೆಯನ್ನು ಪರೀಕ್ಷಿಸುವ ಸಲುವಾಗಿ ಎರಡನ್ನೂ ತಕ್ಕಡಿಯಲ್ಲಿಟ್ಟು ತೂಗಿ ನೋಡಿದನಂತೆ. ಆಗ ಹಗುರವಾಗಿದ್ದ ಅಮರಾವತಿಯು ಮೇಲಕ್ಕೆ ಏರಿದರೆ ಭಾರವಾಗಿದ್ದ ಲೊಕ್ಕಿಗುಂಡಿಯು ಕೆಳಗೇ ಉಳಿಯಿತಂತೆ. ಜಗತ್ತಿನ ಆಭರಣದಂತಿದ್ದ ಇದರ ಮಹತ್ವವನ್ನು ಮತ್ತು ಅದರ ಸಾಂದ್ರತೆಯನ್ನು ವರ್ಣಿಸಲು ಯಾರಿಂದಾದೀತು ಎನ್ನುತ್ತಾನೆ ಶಾಸನದ ಕವಿ. ಕವಿಯ ವರ್ಣನೆಗೆ ಸಾಟಿಯುಂಟೆ ?

---

೧. E I, xv, V 68,
"ಚಾಲುಕ್ಯ ರಾಜ್ಯ ವರ್ಧಮಾನಂ ಅಮರೇಂದ್ರನೊಪ್ಪುವಮರಾವತಿ ಮೇಣಳಕಾಪುರಂ
ಫಣೀಂದ್ರನ ನೆಲೆಯಪ್ಪ ಭೋಗಾವತಿ ತಾನೆನೆ ರಾಜಿಸುಗುಂ"

೨. ಅದೇ, V. 57.

೩. ಅದೇ, V. 64.

ಶ್ರೀ ರಾಮನಿಂದ ನಿರ್ಮಿತವಾಯಿತೆಂದು ಹೇಳಲಾದ ಈ ರಾಮುರದತ್ತಿ ಅಗ್ರಹಾರ ಲೊಕ್ಕಿಗುಂಡಿಯು ೧೧ನೆಯ ಶತಮಾನದಲ್ಲಿ ಒಂದು ಹೆಸರಾಂತ ವಿದ್ಯಾಕೇಂದ್ರವಾಗಿದ್ದಿತು. ಇದರ ಪ್ರಭಾವ ಎಷ್ಟಿತ್ತೆಂದರೆ ಸ್ವಸ್ಥಳದ ವಿದ್ಯಾರ್ಥಿಗಳೇ ಅಲ್ಲದೆ ಪರಸ್ಥಳಗಳಿಂದಲೂ ವಿದ್ಯಾರ್ಥಿಗಳು ಇಲ್ಲಿಗೆ ಶಿಕ್ಷಣವನ್ನು ಪಡೆಯುವ ಸಲುವಾಗಿ ಬರುತ್ತಿದ್ದರು. ಹಲವು ಅಗ್ರಹಾರಗಳಲ್ಲಿ ಕೆಲವು ವಿಷಯಗಳಲ್ಲಿ ಮಾತ್ರ ಹೆಚ್ಚಿನ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಪ್ರಾಚೀನ ಕರ್ನಾಟಕದಲ್ಲಿದ್ದಿತು. ಲೊಕ್ಕಿಗುಂಡಿಯು ಅಂಥಹ ಒಂದು ಕೇಂದ್ರವಾಗಿದ್ದಿತು. ಇಲ್ಲಿ ಪ್ರಾಭಾಕರವನ್ನು ಹೇಳಿಕೊಡುವ ಏರ್ಪಾಡನ್ನು ಮಾಡಲಾಗಿದ್ದಿತು.[೪]

ಚಾಲುಕ್ಯ ವಿಕ್ರಮಾದಿತ್ಯನು ಸೋಮನಾಥ ದಂಡನಾಯಕನೆಂಬವನನ್ನು ತನ್ನ ರಾಜ್ಯದ ಮಂತ್ರಿಯನ್ನಾಗಿಯೂ ಹಾಗೂ ಧಾರ್ಮಿಕ ಕಾರ್ಯಗಳ ಮೇಲಿನ ವ್ಯವಸ್ಥಾಪಕನನ್ನಾಗಿಯೂ ನಿಯಮಿಸಿದನೆಂದು ೧೯೮ರ ಶಾಸನದಿಂದ ತಿಳಿದುಬರುತ್ತದೆ. ಸೋಮನಾಥಾರಾಧ್ಯನೆಂದೂ ಕರೆಯಲ್ಪಟ್ಟಿರುವ ಈ ಸೋಮನಾಥನು ತನ್ನ ಪಂಥವನ್ನು ಈ ಭೂಮಿಯ ಮೇಲೆ ಶಾಶ್ವತವಾಗಿ ನಿಲ್ಲಿಸುವ ಸಲುವಾಗಿ ಲೊಕ್ಕಿಗುಂಡಿಯನ್ನು ಆರಿಸಿಕೊಂಡನೆಂದು ಅದೇ ಶಾಸನವು ತಿಳಿಸುತ್ತದೆ.[೫] ಸೋಮನಾಥನು ತಮ್ಮ ಪ್ರತಿಭೆಯಲ್ಲಿ ೧೦೦೦ ಸೂರ್ಯರೇನೋ ಎನ್ನುವಂತಿದ್ದ ಅಲ್ಲಿನ ೧೦೦೦ ಮಹಾಜನರ ಪ್ರತಿಭೆಯನ್ನು ನೋಡಿ ಪ್ರಾಭಾಕರಕ್ಕಾಗಿ ದಾನವನ್ನು ಮಾಡಿ ಹೆಸರನ್ನು ಪಡೆದನೆಂದು ತಿಳಿದು ಬರುತ್ತದೆ. ಇಲ್ಲಿ ಸೋಮನಾಥನು ಪ್ರಾಭಾಕರವನ್ನು ಹೇಳಿಕೊಡುವ ಸಲುವಾಗಿ ಒಂದು ವ್ಯಾಖ್ಯಾನ ಶಾಲೆಯನ್ನು ನಿರ್ಮಿಸಿ ಅಲ್ಲಿ ಒಬ್ಬ ಗುರುವಿಗೂ ಮತ್ತು ಅಲ್ಲಿನ ಛಾತ್ರಗಣಕ್ಕೂ, ಅವರ ಜೀವನೋಪಾಯಕ್ಕಾಗಿ ದತ್ತಿಗಳನ್ನು ಬಿಟ್ಟುಕೊಟ್ಟನು. ಅಲ್ಲಿ ಕಲಿಸುವ ಉಪಾಧ್ಯಾಯರಿಗೂ ದತ್ತಿಗಳನ್ನು ಕೊಟ್ಟುದಲ್ಲದೆ ಅಲ್ಲಿ ಅಭ್ಯಾಸಮಾಡುವ "ಪ್ರಾವಾಸಿಗ ಛಾತ್ರ"ರ ಊಟದ ವ್ಯವಸ್ಥೆಯನ್ನೂ ಮಾಡಿದನೆಂದು ತಿಳಿದು ಬರುತ್ತದೆ. ಶಾಸನದ ಈ ಭಾಗವು ಒಡೆದು ಹೋಗಿರುವುದರಿಂದ ದಾನವ ವಿವರಗಳು ತಿಳಿದು ಬರುವುದಿಲ್ಲ. ೧೫೦ ಪೊನ್ನಿನಿಂದ ಬಂದ ಬಡ್ಡಿಯೊಳಗೆ ಉಪಾಧ್ಯಾಯರಿಗೆ ಪ್ರತಿವರ್ಷ ದಕ್ಷಿಣೆಯೆಂದು ಅದೇ ರೀತಿ ಅಧ್ಯಾಪಕರಿಗೂ ತಿಂಗಳಿಗೆ ೧ ಪಣದಂತೆ ಪ್ರತಿವರ್ಷ ಕೊಡುತ್ತಿದ್ದುದರ ಬಗೆಗೆ ಶಾಸನವೊಂದು ಸೂಚಿಸುತ್ತದೆ.[೬]

ಇಲ್ಲಿ ಗಮನಾರ್ಹವಾದ ಒಂದು ಅಂಶವೆಂದರೆ ಶಾಸನವು ಅಲ್ಲಿನ ವಿದ್ಯಾರ್ಥಿಗಳನ್ನು ಪ್ರಾವಾಸಿಗ ಛಾತ್ರರು ಎಂದು ಕರೆದುದು. ಮೇಲೆ ಹೇಳಿದಂತೆ ಪ್ರಾವಾಸಿಗ

---

೪. ಅದೇ, V. 74.

೫. ಅದೇ, V. 56.

೬. Arsie, 1932-33, No. 177.

ಛಾತ್ರರು ಎಂದಲ್ಲಿ ಬೇರೆ ಬೇರೆ ಸ್ಥಳಗಳಿಂದ ಇಲ್ಲಿಗೆ ವಿದ್ಯಾಭ್ಯಾಸದ ನಿಮಿತ್ತ ಬರುತ್ತಿದ್ದ ವಿದ್ಯಾರ್ಥಿಗಳೆಂದಲ್ಲಿ ತಪ್ಪಾಗಲಾರದು. ಇವರ ಊಟದ ವ್ಯವಸ್ಥೆಗೆ ಸೋಮನಾಥನು ಬಿಟ್ಟ ದತ್ತಿಗಳ ವಿವರಗಳು ತಿಳಿದು ಬರುವುದಿಲ್ಲ.

ಸೂತ್ರ ಚರ್ಚೆ[೭] ಎಂಬ ಗ್ರಂಥದ ಬಗೆಗೂ ಈ ಶಾಸನವು ಸೂಚಿಸುವುದು ಒಂದು ಗಮನಾರ್ಹವಾದ ವಿಷಯ. ಶಾಸನವು ಈ ಭಾಗದಲ್ಲಿ ಹಾಳಾಗಿರುವುದರಿಂದ ಇದರ ಪೂರ್ಣವಾದ ವಿವರಗಳು ನಮಗೆ ದೊರೆಯುವುದಿಲ್ಲ. ಇವೆಲ್ಲವುಗಳಿಂದ ಲೊಕ್ಕಿಗುಂಡಿಯು ಪ್ರಾಚೀನ ಕರ್ನಾಟಕದ ಒಂದು ಹೆಸರಾಂತ ವಿದ್ಯಾಕೇಂದ್ರವಾಗಿದ್ದಿತೆಂದು ಹೇಳಬಹುದು.

ಅಲ್ಲಿನ ೧೦೦೦ ಜನ ಮಹಾಜನರನ್ನು ಊರೊಡೆಯರೆಂದು ಶಾಸನಗಳು ಕರೆಯುತ್ತವೆ. ಇವರ ಪ್ರತಿಭೆಯನ್ನು ಕಂಡ ಸೋಮನಾಥನು ಪ್ರಾಭಾಕರ ಶಾಲೆಯನ್ನು ಇಲ್ಲಿ ಸ್ಥಾಪಿಸಲು ಯೋಚಿಸಿದ ಬಗೆ ಮೇಲೆ ಹೇಳಿದೆ. ಇವರು ಬಹುಮುಖ ಪ್ರತಿಭೆಯುಳ್ಳವರು. ಇವರು ಸ್ವಸ್ತಿ ಯಮನಿಯಮಧ್ಯಾಯ–ಧ್ಯಾನ–ಧಾರಣ, ಮೌನಾನುಷ್ಠಾನ ಜಪಸಮಾಧಿ ಶೀಳ ಸಂಪನ್ನರು ಸಮಸ್ತ ಗುಣಗಣಾಳಂಕೃತರೂ ವಿದಿತ ವೇದಾರ್ಥ ವಿದ್ಯಾಪಾರಗರು ಷಟ್ಕರ್ಮನಿರತರು ಸಪ್ತಸೋಮ ಸಂಸ್ಥಾವಭೃತಾವಗಾಹನ ಪವಿತ್ರೀಕೃತ ಶರೀರರು ಚತುರ್ವೇದ ಪಾರಗರಷ್ಟಾ ದಶ ಧರ್ಮಶಾಸ್ತ್ರ ಕುಶಲರ ಚಳಿ ತ ಧೈರ್ಯರು ಧೈರ್ಯಪರಾಕ್ರಮರಾಶ್ರಿತಜನ ಕಲ್ಪವೃಕ್ಷರಹಿತ ಪಕ್ಷಯಿಕರು ಕಲಿಯುಗ ಗಾಂಗೇಯರು ಪರಮಪರೋಪಕಾರಿಗಳೂ ಆ ಹವದುರಂಧರರು ಶಾಪಾನುಗ್ರಹ ಸಮರ್ಥರು...ಎಂದು ಒಂದು ಶಾಸನವು ವರ್ಣಿಸುತ್ತದೆ.[೮]

ನಗರದ ಆಡಳಿತದಲ್ಲಿಯೂ ಅವರ ಪಾತ್ರವಿದ್ದಿತೆನ್ನಬಹುದು. ಅವರು ಪ್ರತಿಭಾವಂತರಾಗಿದ್ದುದಷ್ಟೇ ಅಲ್ಲದೆ. ಎಲ್ಲಾ ಧರ್ಮಗಳ ಬಗೆಗೂ ಉದಾರತೆಯುನ್ನುಳ್ಳವರಾಗಿದ್ದರು. ಇವರನ್ನು,

ಪ್ರವರ್ಥ ವರ್ಗಸ್ಯ ಸುಸಾಧನಾನಿ ಯತ್ಸಂತಿ ತತ್ರಾತಿ ಬಹೂನಿ ತಸ್ಮಾತ್ |
ಗ್ರಿಷ್ಟ: ಸದಾಭೀಷ್ಟ ಪ್ರವರ್ಥಸಿದ್ಧ :
ಸರ್ಭೋಜನೋವೇತ್ತಿ ನಜಾತು ದುಃಖಂ ||[೯]

ಎಂದು ಶಾಸನವು ವರ್ಣಿಸುತ್ತದೆ. ಇವರು ಎಲ್ಲಾ ಧರ್ಮಕ್ಕೆ ಸೇರಿದ ದೇವಸ್ಥಾನಗಳಿಗೆ ಬಿಟ್ಟಿರುವ ದತ್ತಿಗಳೇ ಇವರ ಸರ್ವಧರ್ಮ ಸಮನ್ವಯತೆಯನ್ನು ಪುಷ್ಟೀಕರಿಸುತ್ತವೆ.

ಲೊಕ್ಕಿಗುಂಡಿಯು ವಿದ್ಯಾಕೇಂದ್ರವಾಗಿದ್ದುದಷ್ಟೆ ಅಲ್ಲದೆ ಇತರ ಕ್ಷೇತ್ರಗಳಲ್ಲಿಯೂ ಹೆಸರನ್ನು ಪಡೆದ ಅಗ್ರಹಾರವಾಗಿದ್ದಿತು. ಇದು ಸಮೃದ್ಧಿಯಿಂದ ಕೂಡಿದ ಪಟ್ಟಣ

೭. ಅದೇ,

೮. E. I. XV, L. 70.

೯. ಅದೇ, V 62.

ಂಕ
ಗಳು
ಯು
ಂಕರ
ದ್ದವ

ಾಡಾಗ
ಯಿತು.
ಧಿಕಾರ
ಧಿಕಾರ
ಪರಿಬ್ಬರ
ಸೊರ-
ಲ್ಪಕಾಲ
ಎರಡನೇ
ನಗರದ

ಹೀಗೆ ಲೊಕ್ಕಿಗುಂಡಿಯು ವಿದ್ಯಾಕೇಂದ್ರವಾಗಿದ್ದುದಲ್ಲದೆ, ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಒಂದು ಮಹತ್ವವಾದ ಪಾತ್ರವನ್ನು ವಹಿಸಿ ೯ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಒಂದು ಉನ್ನತಮಟ್ಟವಾದ ಅಗ್ರಹಾರವಾಗಿದ್ದಿತೆಂದು ಹೇಳಬಹುದು.

★ ಎಸ್. ಎಲ್. ಶಾಂತಕುಮಾರಿ

ಸ್ಫೂರ್ತಿ.

ಇವಳು ಮುಟ್ಟಲ ಮುರಕಿಯಂತೆ
ಹಿಡಿಯ ಹೋದರೆ ನಾಚಿ ನೀರಾಗಿ
ದೂರ ದೂರಕ್ಕೆ ಓಡುತ್ತಾಳೆ.
ಸಿಕ್ಕರೂ ಬಟ್ಟೆ ಬಣಜಿಗನಂತೆ
ಪಟ್ಟು ಹಿಡಿದು ಮೈ ಮುದುರುತ್ತಾಳೆ
Poetry is nothing but practice !
ಕೈಲಿ ಪೆನ್ನನು ಹಿಡಿದು ಹಾಳೆಗಳ
ಕಟ್ಟನು ಹರಡಿ ಕೋಣೆಯ ಕದಹಾಕಿ
ಕವಿತೆ ಬರೆ. ಇದು ಕಾವ್ಯ ವ್ಯಾಖ್ಯೆ !
ಬನದ ಮಲ್ಲಿಗೆ ಮೊಗ್ಗು ವಿಕಸಿಸಿ
ಅರಳುವಂತೆ ಮನತುಂಬಲು ಕವಿತೆ.
ಕಲ್ಪನೆಯ ಕಿಡಿಗೇಡಿ ಭಾವದ ಕೆರೆಗೆ
ಕಿರಿದೊಂದು ಬಿರುಕನ್ನುಂಟು ಮಾಡೆ
ಪ್ರವಾಹ ಮುನ್ನುಗ್ಗಿ ಪ್ರವಹಿಸಿತು
ಕವಿತೆ.......................
ನಾನು ಕೇಳಿಪರೆ ಅವಳು ಬರಳು
ಅವಳಿಗಾಗಿ ಕಾಯುವವೂ ಮರುಳು
ಬಂದರೇನಂತೆ? ಅವಳಿಗೆ ಸ್ವಾಗತ

★ ಕಣವಿ ಮಹಾದೇವ

ಪಾಯಿತು. ಸೌರಾಷ್ಟ್ರ ಸೋಮೇಶ್ವರ ಆದಯ್ಯನ ಅಚಲ ಭಕ್ತಿಗೆ ಮೆಚ್ಚಿದ; ಮಣಿದ. ಒನ್ನೆಲೆಯಲ್ಲಿ ನಿಂತು ಪದ್ಮಾವತಿ ಮಾಡಿದ ತಪಸ್ಸಿಗೆ ಪ್ರತಿಫಲವೆಂಬಂತೆ ಆದಯ್ಯನ ಪ್ರತಿಜ್ಞೆ ನೆರವೇರಿತು. ಶೈವಧರ್ಮದ ಉಳಿವಿಗಾಗಿ ಜೈನ ಧರ್ಮದೊಡನೆ ಹೋರಾಡಿ ಗೆದ್ದನು. ತನ್ನೆಲ್ಲ ಕಾರ್ಯ ಕೈಗೂಡಿದ ಮೇಲೆ "ಪದುಮಾವತಿ ಸಹಿತನಾಗಿ" ಐಕ್ಯನಾದನು.

ಆದಯ್ಯನ 'ಸಮಯ ನಿಷ್ಠೆ' ಗೆ ಬೆಂಬಲವಾಗಿ ಪದ್ಮಾವತಿ ನಿಂತಂತೆ ಹರಿಶ್ಚಂದ್ರನ 'ಸತ್ಯನಿಷ್ಠೆ' ಗೆ ಚೇತನವಾಗಿ ನಿಂತವಳು ಚಂದ್ರಮತಿ. ವಸಿಷ್ಠ ವಿಶ್ವಾಮಿತ್ರರ ಹುರುಡಿನಾಟಕ್ಕೆ ಗುರಿಯಾದವನು ಚಕ್ರವರ್ತಿ ಹರಿಶ್ಚಂದ್ರ. ಮುಂಬರುವ ಕಷ್ಟಪರಂಪರೆಗೆ ಮುನ್ಸೂಚನೆಯೋ ಎಂಬಂತೆ ದುಃಸ್ವಪ್ನವಾಗುತ್ತದೆ. ಮುಂಗಾಣದೆ ಕಂಗೆಟ್ಟ ಪತಿಗೆ ಧೈರ್ಯ ತುಂಬಿ ಸಂತೈಸುತ್ತಾಳೆ. "ಮಂತ್ರಿಗೆ ಮಗಂಗೆನಗೆ ರಾಜ್ಯಕ್ಕೆ ಚತುರಂಗ ಸೇನೆಗೆ ಸಕಲ ಭಾಂಡಾರಕೆ ನಗರಕ್ಕೆ ಸರ್ವ ಪರಿವಾರಕ್ಕೆ ತೇಜದೇಳ್ಗೆಗೆ ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿ, ಮಿಗೆ ಸತ್ಯಮಂ ಬಿಟ್ಟು ಕೆಡದಿರುವನೀಶ" ಎಂದು ಕರ್ತವ್ಯದ ನೆನಪು ಮಾಡಿಕೊಡುತ್ತಾಳೆ.

ನಿಷ್ಕರುಣಿ ವಿಶ್ವಾಮಿತ್ರನ ಕೋಪಾಗ್ನಿಗೆ ತುತ್ತಾದ ರಾಜಪರಿವಾರ ಸಾಲದ ಋಣ ಹೊತ್ತು ಕಾಶಿಯೆಡೆಗೆ ಪಯಣ ಮಾಡುತ್ತದೆ. "ಬಸವಳಿಯುತು ಸುರಲಮ್ಮದ ಪತಿಗೆ ಕೈಕೊಟ್ಟು, ಹಸಿದಳುವ ತನಯಂಗೆ ಹಣು ಹಗಿನನಿತ್ತು" ಸಂತೈಸುತ್ತಾ ತನ್ನ ನೋವನ್ನು ಮರೆಯುತ್ತಾಳೆ, ಚಂದ್ರಮತಿ. ವಿಶ್ವಾಮಿತ್ರ ಕೊಟ್ಟ ಅವಧಿ ತೀರುತ್ತ ಬಂದಾಗ ಸಾಲದ ಋಣ ತೀರದಾದಾಗ "ಚಿಂತಾಗ್ನಿಯುರಿಯ ಹೊಯ್ಲಿಂ ಕರಗಿ" ಹೋಗುತ್ತಿರುವ ಪತಿಗೆ, ಮಂತ್ರಿಯಾಗಿ ಸಲಹೆ ನೀಡುತ್ತಾಳೆ— "ಸರ್ವಕ್ಕೆ ಮೊದಲು ಸತಿಸುತರು, ತನ್ನ ಒಡಲು ಕಡೆ......... ಲಜ್ಜಿಗಡದೆಮ್ಮ ಮಾಱು". ಒಲ್ಲದ ಮನದಿಂದ ಹರಿಶ್ಚಂದ್ರ, ಕಾಶಿಯಲ್ಲಿ ಪತ್ನಿ ಮತ್ತು ಪುತ್ರರನ್ನು ಮಾರುತ್ತಾನೆ. ತನ್ನನ್ನೂ ಮಾರಿಕೊಂಡು ವಿಶ್ವಾಮಿತ್ರನ ಸಾಲವನ್ನು ತೀರಿಸುತ್ತಾನೆ.

ಅರಸಿಯಾಗಿದ್ದ ಚಂದ್ರಮತಿ ಆಳಾಗಿ ದುಡಿಯುತ್ತಿದ್ದ ಚಿತ್ರ ಮನಕರಗಿಸುತ್ತದೆ. ಒಡೆಯ ಒಡತಿಯರು ಕೊಡುವ ಕಷ್ಟವನ್ನು ಹೇಗಾದರೂ ಸಹಿಸಿಯಾಳು: ಅವಳ ದುರದೃಷ್ಟಕ್ಕೆ ನೆರೆಮನೆಯವರೂ ಅವಳನ್ನು ನಿಂದಿಸುವರು; ಪಶುಗಳೂ ಗೋಳಿಡಿಸುತ್ತಿದ್ದುವು ! "ಸಾಯಬಾರದು ಬದುಕಬಾರದು" ಎಂಬ ಸ್ಥಿತಿಯಲ್ಲಿದ್ದರೂ ಅವಳು ಜೀವ ಹಿಡಿದಿದ್ದುದು ಲೋಹಿತನ ಸಲುವಾಗಿ. ಅವಳ ಬದುಕಿನ ಒಂದೇ ಆಶಾಕಿರಣ ಲೋಹಿತ. ವಿಶ್ವಾಮಿತ್ರನ ಮಾಯೆಯಿಂದ ಅವನೂ "ಘಾತಿಂದು ಜೀವಂಗಳೆದ". ವಿಷಯ ತಿಳಿದ ಒಡೆಯನ ಪ್ರತಿಕ್ರಿಯೆ "ಮಡಿದರೆ ಮಡಿದನ್" ಎಂಬ ಧೋರಣೆಯ ಮಾತುಗಳು ! ಶವಸಂಸ್ಕಾರ ಮಾಡಿ ಬರುವೆನೆಂದು ಕೇಳಿದಾಗ "ಕೆಲಸಮಂ ಬಿಟ್ಟು ಪರಿಯದೆ ಇರ್ದವನು ಎಯ್ದಿ ಗೆಯ್ದುಹೋಗು" ಎಂಬ ಸಹಾನುಭೂತಿ !

ಕಾರಿರುಳಲ್ಲಿ ಪುತ್ರ ವಿಯೋಗದಿಂದ ಜರ್ಝರಿತಳಾದ ಹೆಣ್ಣು ಪುತ್ರನ ಶವವನ್ನರಸುತ್ತಾ ಕಾಡಿನಲ್ಲಿ ನಡೆಯುತ್ತಾಳೆ. ವಿಷವೇರಿ ಮೈಹಸುರಾಗಿದ್ದ ಮಗನನ್ನು ಕಂಡು ಕಣ್ಣೀರಿಡುತ್ತಾಳೆ. ಕಲ್ಲುಮನದಿಂದ ಸಂಸ್ಕಾರವಿಧಿಗಾಗಿ ಮಸಣಕ್ಕೆ ಹೊತ್ತು ತರುತ್ತಾಳೆ. ಸುಡುಗಾಡು ಕಾಯುತ್ತಿದ್ದವನು ಪತಿ ಹರಿಶ್ಚಂದ್ರ ಎಂದು ತಿಳಿದಾಗ ಸಿಡಿಲೆರಗಿದಂತಾಗುತ್ತದೆ. ಮಸಣದ ಹಾಗವನ್ನು ಕೊಟ್ಟಲ್ಲದೆ ಸಂಸ್ಕಾರಕ್ಕೆ ಎಡೆಯಿಲ್ಲವೆಂದಾಗ ಒಡೆಯನಲ್ಲಿ ಬೇಡಿ ತರಲು ಹೊರಟ ಹಾದಿಯಲ್ಲಿ ಹಸುಗೂಸೊಂದರ ಆಕ್ರಂದನವನ್ನು ಕೇಳಿ ಕೈಗೆತ್ತಿಕೊಳ್ಳುತ್ತಾಳೆ. ಕಣ್ಮರೆಯಾದ ಕಾಶೀರಾಜ ಪುತ್ರನನ್ನು ಅರಸುತ್ತ ಬಂದ ರಾಜಭಟರ ಕಣ್ಣಿಗೆ ಚಂದ್ರಮತಿಯ ತೋಳ್ತೆಕ್ಕೆಯಲ್ಲಿದ್ದ ಅಸು ನೀಗಿದ ರಾಜಕುಮಾರ ಕಾಣುತ್ತಾನೆ. ಹಂತಕಿ ಎಂಬ ನಿಂದೆಗೆ ಗುರಿಯಾಗುತ್ತಾಳೆ.

ನೋಡ ನೋಡುತ್ತಿದ್ದಂತೆಯೇ ರಾಜ್ಯಕೋಶಗಳು ಕಣ್ಮರೆಯಾದವು; ಭೋಗ ಭಾಗ್ಯಗಳು ಎರವಾದವು; ಪತಿಯಿಂದ ದೂರಾದಳು; ಪರರ ಜೀತ ಮಾಡಿದಳು; ಮಗನನ್ನೂ ಕಳೆದುಕೊಂಡಳು. ಪತಿ ಎಂದಾದರೂ ಒಮ್ಮೆ ಬಂದು ತನ್ನನ್ನು ಕರೆದೊಯ್ಯುವನೆಂಬ ದೂರದಾಸೆ ಇತ್ತು ; ಆದರೆ ಅವನೂ ಪರರ ಜೀತದಾಳಾದುದು ತಿಳಿದಾಗ ನಿರಾಶೆಗೊಂಡಳು; ಯಾರಿಗಾಗಿ ಬದುಕಬೇಕು ? ಚಂದ್ರಮತಿಯ ಸಹನೆ ಎಲ್ಲೆ ಮೀರಿತು. ತಾನೇ ಕೊಲೆಗಡುಕಿ ಎಂದು ಒಪ್ಪಿಕೊಂಡು ಮರಣದಂಡನೆಯನ್ನು ಸಂತಸದಿಂದ ಸ್ವಾಗತಿಸುತ್ತಾಳೆ. ಒಡೆಯನಾಣತಿಯಂತೆ ಚಂದ್ರಮತಿಯ ಕೊರಳ ಮೇಲೆ ಹರಿಶ್ಚಂದ್ರ ಕತ್ತಿ ಇಳಿಸಿದಾಗ ಶಿವ ಪ್ರತ್ಯಕ್ಷನಾಗುತ್ತಾನೆ. ಕಷ್ಟಗಳೆಲ್ಲಾ ಪರಿಹಾರವಾಗುತ್ತವೆ. ಹರಿಶ್ಚಂದ್ರನ ಸತ್ಯ ನಿಷ್ಠೆಗೆ ಮೆಚ್ಚಿದ ಶಿವ ವರವೀಯುತ್ತಾನೆ.

ಸತ್ಯನಿಷ್ಠೆಗಾಗಿ ಹರಿಶ್ಚಂದ್ರ ಹೋರಾಡುತ್ತಾನೆ; ಯಶಸ್ವಿಯಾಗುತ್ತಾನೆ; ನಿಜ. ಆದರೆ ಹರಿಶ್ಚಂದ್ರನಿಗೆ ಹೆಗಲೆಣೆಯಾಗಿ ನಿಂತ ಚಂದ್ರಮತಿಯನ್ನು ಕೊನೆಗೆ ಎಲ್ಲರೂ ಮರೆಯುತ್ತಾರೆ. ಪತಿಯ ಕಷ್ಟನಷ್ಟಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಪಾಲು ಅನುಭವಿಸಿದ ಸಾಧ್ವಿಯ ಬಗೆಗೆ ಒಂದೇ ಒಂದು ಪ್ರಶಂಸೆಯ ಮಾತು ಕೇಳಿಬರುವುದಿಲ್ಲ. ಶಿವನ ಮಾತಂತಿರಲಿ, ಶಿವನೊಡನೆ ಪ್ರತ್ಯಕ್ಷಳಾಗಿದ್ದ ಶಿವೆಯೂ ಮೌನ ತಳೆದಿರುವುದು ಆಶ್ಚರ್ಯಕರ. ಶಿವ–ಶಿವೆಯರು ಹೇಗಾದರೂ ಇರಲಿ; ಪಾತ್ರಕರ್ತೃ ರಾಘವಾಂಕ ಮರೆತರೂ ಮರೆಯಲಿ: ಸಹೃದಯನಂತೂ ಮನದುಂಬಿ ಹೊಗಳಿ ಹಾಡುತ್ತಾನೆ ಎಂಬುದು ನಿಶ್ಚಿತ.

ಪದ್ಮಾವತಿ–ಚಂದ್ರಮತಿ–ಎರಡು ವಿರುದ್ಧ ಭಾವದ ಪಾತ್ರಗಳನ್ನು ತನ್ನ ಕಲಾ ಕೌಶಲದಿಂದ ಸೃಜಿಸಿದ ರಾಘವಾಂಕ, ಪರಿಸರ–ಸಂದರ್ಭಗಳಿಗೆ ತಕ್ಕಂತೆ ಆ ಪಾತ್ರಗಳು ನಡೆದುಕೊಳ್ಳುವ ರೀತಿಯನ್ನೂ ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಎಸಳುಂಗಂಗಳ ಸೋರ್ಮುಡಿಯ ಹೊಳೆವ ಕದಪುಗಳ |
ಅಸಿಯ ಸೆಳ್ಳುಗುರ ಸುಲಿಪಲ್ಲ ಬಿಂಬಾಧರದ |
ನೊಸಲ ತಿಲಕದ ನಸುನಗೆಯ ವೃತ್ತಕುಚದ ಪಲ್ಲವಪದದ ಸುಳಿನಾಭಿಯ ||

ಶಶಿಮುಖದ ಎಳೆವಾಳೆದೊಡೆಯು ಪಟ್ಟದಗುರುಳ |
ಪಸರಿಸಿದ ಪೀನ ಮಂಜುಳ ನಿತಂಬದ ಚೆಲ್ವು |
ಮಿಸುಪ ಬಾಸೆಯು ಸಿಂಹಮಧ್ಯದ ಸುಭಗೆಯಿರ್ದಳೀ ಪೊಗಳ್ವೆ ಪದ್ಮಾವತಿ ||
(ಸೋ. ಚಾ. ೨-೪೭)

ಕಾಮನ ಕೈಯ ಸರಳಿನಂತಿದ್ದ ಪದ್ಮಾವತಿ ಚೆಲುವಿನ ಸೆಲೆಯಾಗಿದ್ದಳು. "ಇವಳಾರ ಮಗಳ್, ಆವ ಕುಲ, ಆವ ಸಮಯ" ಎಂಬ ವಿವೇಚನೆಗೆ ಎಡೆ ಇಲ್ಲದಂತೆ ಆದಯ್ಯ ಅವಳಲ್ಲಿ ಅನುರಕ್ತನಾಗಬೇಕಾದರೆ ಆ ಹೆಣ್ಣಿನ ಸೌಂದರ್ಯವೇನು ಸಾಮಾನ್ಯವೆ ? ಈ ಸೌಂದರ್ಯದ ಖನಿಯನ್ನು ರಾಘವಾಂಕ ನಖಶಿಖಾಂತ ಬಣ್ಣಿಸಿದ್ದಾನೆ.

ವರರೂಪಿನೊಳು ರತಿಗೆ ಹೊಣಕೆ ಸೌಭಾಗ್ಯದೊಳು |
ಸಿರಿಗೆ ಹೊಯಿಕೈ ಜಾಣಿನೊಳು ವಾಣಿಗಿಮ್ಮಿಗಿಲು |
ಚರಿತದೊಳು ಗಂಗೆಗಲಗಣಸು ಪತಿಭಕ್ತಿಯೊಳರುಂಧತಿಗೆ ಸರಿಜಸದೊಳು |
ಪರಮರೋಹಿಣಿಗೆ ಹೆಗಲೆಣೆ ಪುಣ್ಯದೊಳುಸ್ವಧಾ |
ತರುಣಿಗೋರಗೆ ವಂದ್ಯತೆಯೊಳು ಗಾಯಿತ್ರಿಗೊರೆ |
ದೊರೆಯೆನಿಸಿ ಮೆಱೆವಳು ಹರಿಶ್ಚಂದ್ರನೃಪನರಸಿ ಚಂದ್ರಮತಿ... ||

ಚಂದ್ರಮತಿ, ಷಟ್ಖಂಡಾವನಿಯೊಡೆಯ ಹರಿಶ್ಚಂದ್ರನರಸಿ; ಲೋಹಿತನ ಮಮತೆಯ ಮಾತೆ; ಅಂತೆಯೇ ಅವಳ ವರ್ಣನೆ ಕೇವಲ ಸೌಂದರ್ಯಕ್ಕೆ ಸೀಮಿತವಾಗದೆ ಗುಣ ವರ್ಣನೆಯಾಗಿದೆ. ಪದ್ಮಾವತಿಯ ಪಾತ್ರ ಅಭಿಮಾನವನ್ನು ಮೂಡಿಸಿದರೆ, ಚಂದ್ರ ಮತಿಯ ಪಾತ್ರ ಗೌರವದಿಂದ ತಲೆಬಾಗುವಂತೆ ಮಾಡುತ್ತದೆ. ಸೊಬಗಿನ ಗಣಿ ಎನಿಸಿದ ಪದ್ಮಾವತಿಯನ್ನು ಒಮ್ಮೆ ನೋಡಿ ತಣಿಯಬೇಕೆಂಬ ಬಯಕೆಯಾದರೆ, ಗುಣಿಗಳ ಶಿರೋಮಣಿ ಚಂದ್ರಮತಿಯ ಆದರ್ಶಗಳನ್ನು ಅನುಸರಿಸಬೇಕೆಂಬ ಹಂಬಲ ತಲೆದೋರುತ್ತದೆ. ಕಾಮದ ಸೆಳೆತಕ್ಕೆ ಸಿಲುಕಿದ ಪ್ರಣಯಿನಿಯಾಗಿ ಪದ್ಮಾವತಿ ಮೊಟ್ಟ ಮೊದಲಿಗೆ ಕಂಡುಬಂದರೆ ಪ್ರೇಮದ ಸಾಕಾರಮೂರ್ತಿಯಾಗಿ ಗೋಚರಿಸು ತ್ತಾಳೆ ಚಂದ್ರಮತಿ.

ಪದ್ಮಾವತಿ ಸ್ವಾಭಿಮಾನಿ; ಛಲಗಾತಿ. ತನ್ನ ಇಚ್ಛೆಗೆ ವಿರುದ್ಧವಾದುದನ್ನು ಪ್ರತಿಭಟಿಸಿ ನಿಲ್ಲುವ ಕೆಚ್ಚು ಅವಳಲ್ಲಿದೆ. ಆದಯ್ಯನೊಡನೆ ಕಾಮಕೇಳಿಯಾಡಿದುದು ತಪ್ಪು ಎಂಬ ಅರಿವಾದರೂ ಇಟ್ಟ ಹೆಜ್ಜೆಯನ್ನು ಹಿಂತೆಗೆಯದ ದಿಟ್ಟತನ ಅವಳಲ್ಲಿದೆ. "ಮೃಡಭಕ್ತೆಯಾಗು ಎಂದುದಂ ಮಾಣ್ಬೆಂ" ಎಂದು ಆದಯ್ಯ ಮತ ಪರಿವರ್ತನೆಯ ಪರಿಹಾರವನ್ನು ಮುಂದಿಡುತ್ತಾನೆ. ಪದ್ಮಾವತಿ ಪರಸಮಯ ಎಂದು ತಿಳಿದ ಮೇಲೆ ಆದಯ್ಯ ದೂರಾಗುವ ಉಪಾಯ ಹೂಡುತ್ತಾನೆ. ಶೈವ ಮತ್ತು ಜೈನ ಮತಗಳಿಗೆ ಘರ್ಷಣೆ ನಡೆಯುತ್ತಿದ್ದ ಕಾಲವದು. ಪರಸ್ಪರರಲ್ಲಿ ಅಸಹನೆ ತಾಂಡವವಾಡುತ್ತಿದ್ದ ಯುಗದಲ್ಲಿ ಮತಪರಿವರ್ತನೆಯ ಮಾತಂತೂ ದೂರವೇ ಉಳಿದಿತ್ತು. ಪದ್ಮಾವತಿ

ಇವಕ್ಕೆ ಒಪ್ಪಲಾರಳೆಂಬ ನಂಬಿಕೆ ಆದಯ್ಯನದಾಗಿತ್ತು. ಮೂರ್ಖತನದಿಂದಲೋ ದಿಟ್ಟತನದಿಂದಲೋ ಅಜ್ಞಾನದಿಂದಲೋ ಒಮ್ಮೆ ಇಟ್ಟ ಹೆಜ್ಜೆಯನ್ನು ಹಿಂತೆಗೆದುಕೊಳ್ಳಲು ಅವಳ ಸ್ವಾಭಿಮಾನ ಒಪ್ಪಲಿಲ್ಲ. ಸಮಾಜವನ್ನು ತಾಯ್ತಂದೆಯರನ್ನು ಎದುರಿಸಿ ನಿಂತು ಆದಯ್ಯನನ್ನು ವರಿಸುತ್ತಾಳೆ.

ಚಂದ್ರಮತಿ ಶಾಂತಮೂರ್ತಿ; ಏನೇ ಬಂದರೂ ಮಾತಿಲ್ಲದೆ ಅನುಭವಿಸುವ ಸಹನಶೀಲೆ; ಜೀವನ ಹೇಗೆ ಬಂದರೆ ಹಾಗೆಯೇ ಸ್ವಾಗತಿಸುವ ಸ್ವೀಕರಿಸುವ ಮನೋದಾರ್ಢ್ಯವುಳ್ಳವಳು. ತನ್ನದಾದ ಯಾವ ತಪ್ಪೂ ಇಲ್ಲದೆಯೆ ಕಷ್ಟಪರಂಪರೆಯನ್ನೇ ಎದುರಿಸಬೇಕಾದ ಸಂದರ್ಭ ಒದಗುತ್ತದೆ. ರಾಜ್ಯ–ಕೋಶ, ಅಂತಸ್ತು–ಅಧಿಕಾರ, ಭೋಗ–ಭಾಗ್ಯ ಎಲ್ಲವನ್ನೂ ಕಳೆದುಕೊಳ್ಳುವಳು. ಅಷ್ಟೇ ಅಲ್ಲದೆ ಸಾಮ್ರಾಜ್ಞಿಯಾಗಿದ್ದವಳು ಒಡಿಕೂಳಿಗೆ ಕೈಚಾಚುವ ಪ್ರಸಂಗ ಒದಗಿತು. ನಿರಪರಾಧಿಯಾಗಿದ್ದರೂ ಹಾತಕಿ ಎಂದು ಮರಣದಂಡನೆ ವಿಧಿಸಿದರು; ಆಗಲೂ ಚಕಾರವೆತ್ತಲಿಲ್ಲ. ವಿಧಿಲಿಖಿತವಲ್ಲಿ ನಂಬಿಕೆಯಿಟ್ಟು ಮೌನಿಯಾಗಿ ಮುನ್ನಡೆಯುತ್ತಾಳೆ.

ಪದ್ಮಾವತಿ ಮುಂಗೋಪಿ: ಮುಡುಕು ಸ್ವಭಾವದವಳು. ಮತಾಂತರವಾಗಿ ಆದಯ್ಯನ ಕೈಹಿಡಿಯಲು ಸಿದ್ಧಳಾಗಿದ್ದ ಮಗಳನ್ನು ತಂದೆ ಖಂಡಿಸುತ್ತಾನೆ: ಬುದ್ಧಿ ಹೇಳುತ್ತಾನೆ: ಪದ್ಮಾವತಿಯ ನಿರ್ಧಾರ ಬದಲಾಗುವುದಿಲ್ಲ. ತನ್ನ ಹಾದಿಗೆ ಅಡ್ಡವಾದ ತಂದೆಯನ್ನು ಮನಬಂದಂತೆ ಬೈದು ಅಪಮಾನಗೊಳಿಸುತ್ತಾಳೆ. ತಪ್ಪು ತಿದ್ದಲು ಪ್ರಯತ್ನಿಸಿದ ತಂದೆಗೆ ಮಗಳ ಪುರಸ್ಕಾರ ಇದು ! ಅದೇ ತಾನೇ ಸಂಸಾರನೊಗಕ್ಕೆ ಹೆಗಲು ಕೊಟ್ಟ ಪದ್ಮಾವತಿಗೆ ಅನುಭವ ಕಡಿಮೆ. ಸಂಸಾರದ ತೇರನ್ನು ಮುನ್ನಡೆಸಿ ಲೋಹಿತನೆಂಬ ಫಲವನ್ನೂ ಪಡೆದಿದ್ದ ಪರಿಪಕ್ವ ಜೀವ ಚಂದ್ರಮತಿ. ತನ್ನೆಲ್ಲಾ ಕಷ್ಟಗಳಿಗೆ ಕಾರಣನಾದ ವಿಶ್ವಾಮಿತ್ರನನ್ನು ದಂಡಿಸುವುದಿರಲಿ: ಒಮ್ಮೆಯಾದರೂ ಒಂದು ಅಸಹನೆಯ ಮಾತನ್ನಾಡುವುದಿಲ್ಲ. ಬದಲಾಗಿ ಶುಭ ಕೋರುತ್ತಾಳೆ. ತನ್ನ ಕೊನೆಗಳಿಗೆಯಲ್ಲಿ ಹರಿಶ್ಚಂದ್ರನು " ನಾರಿ ಹರಕೆಗಳನವಧರಿಸು " ಎಂದಾಗ " ವಿಶ್ವಾಮಿತ್ರ ನಿತ್ಯನಾಗಲಿ..." ಎಂದು ಹಾರೈಸುತ್ತಾಳೆ.

ಪದ್ಮಾವತಿಯ ಶ್ರೀಮಂತಿಕೆಗೆ ಭೋಗಭಾಗ್ಯಕ್ಕೆ ಯಾವ ಧಕ್ಕೆಯೂ ಬರಲಿಲ್ಲ. ಆಗರ್ಭ ಶ್ರೀಮಂತ ಕುವರಿ. ಅವಳ ಮಾತಿಗೆ ಎದುರಿಲ್ಲ; ಅವಳ ಕಾರ್ಯಕ್ಕೆ ಅಡ್ಡಿಯಿಲ್ಲ. ಬೇರೆಲ್ಲಾ ಅಂತಿರಲಿ, ಪರಪುರುಷನೊಡನೆ ನಡೆಸಿದ ಪ್ರಣಯ ಸಲ್ಲಾಪಕ್ಕೂ ತಂದೆ ಎದುರಾಡಲಿಲ್ಲ. ಮತಪರಿವರ್ತನೆಗೆ ಸಹ ಪರೋಕ್ಷವಾದ ಒಪ್ಪಿಗೆ ಕೊಟ್ಟ. ಮಗಳು ಸುಖವಾಗಿ ತನ್ನ ಕಣ್ಮುಂದಿದ್ದರೆ ಸಾಕು ಎಂಬಷ್ಟು ಗಾಢವಾದ ಪ್ರೀತಿಯುಳ್ಳ ತಂದೆ ; ತಾನೇ ಮೆಚ್ಚಿ ಮದುವೆಯಾದ ಪತಿ ; ಪದ್ಮಾವತಿಗೆ ಯಾವ ಕೊರತೆಯೂ ಇರಲಿಲ್ಲ. ಆದರೆ ಚಂದ್ರಮತಿ ? ಅತಿ ಗಾಳಿ, ಚಳಿ, ಬಿಸಿಲುಗಳಿಗೆ ಮೈಯೊಡ್ಡದ ಸುಕುಮಾರ ಶರೀರಕ್ಕೆ ಹಣ್ಣಾರು

ಪೆಯೊಂದೇ ರಕ್ಷಣೆ, ಹಸಿವೆಂದರೇನೆಂಬುದನ್ನೇ ಕಂಡರಿಯದವಳಿಗೆ ತಿನ್ನಲೂ ಗತಿಯಿಲ್ಲ. ಮೃದುವಾದ ರತ್ನಗಂಬಳಿಯ ಮೇಲೆಯೇ ನಡೆದು ಅಭ್ಯಾಸವಾದ ಕೋಮಲ ಪಾದಗಳು ಮೆಟ್ಟಲು ಪಾದರಕ್ಷೆಗಳಿಲ್ಲದೆ ಕಲ್ಲುಮುಳ್ಳುಗಳ ಕಾಡುಹಾದಿಯಲ್ಲಿ ಮೈಲುಗಟ್ಟಲೆ ನಡೆಯಬೇಕು. ಕೇವಲ ಒಂದು ಕಣ್ಣಸನ್ನೆಗೇ ಓಗೊಡುವ ನೂರಾರು ಸೇವಕರಿಂದ ಸುತ್ತುವರಿದಿದ್ದವಳಿಗೆ ಎಡೆಯ ಸಂಬಳಕೆ ಹೊನ್ನಿಲ್ಲ. ಇದೆಂಥ ವಿಧಿಯ ಮಾಟ! ಸುಖದ ಸುಪ್ಪತ್ತಿಗೆಯಲ್ಲಿ ಓಲಾಡುತ್ತಿದ್ದವಳು ಒಮ್ಮೆಲೆ ಭಿಕಾರಿಯಾಗಬೇಕಾಯಿತು.

ಚಂದ್ರಮತಿ ಪತಿಯೊಡನಿದ್ದು ಕಷ್ಟಗಳಲ್ಲಿ ಸಮಭಾಗಿಯಾದರೆ ಪದ್ಮಾವತಿ ಹಿನ್ನೆಲೆಯಲ್ಲಿಯೇ ನಿಂತು ಯಶ ಕೋರುತ್ತಾಳೆ, ಅರ್ಧಾಂಗಿಯಾದ ತನಗೆ ಪತಿಯ ಯಶಸ್ಸಿನಲ್ಲಿ ಹೇಗೆ ಪಾಲುಂಟೋ ಅಂತೆಯೇ ಅವನ ಪ್ರತಿಜ್ಞೆಯಲ್ಲಿಯೂ ಪಾಲುಗೊಳ್ಳುತ್ತಾಳೆ.

> ಎಂದು ಸೋಮಯ್ಯನಂ ಕೊಂಡು ನೀ ಬಪ್ಪೆ ಬ |
> ಪ್ಪಂದು ತನಕುಂಡೋಲೆಗಳ ತಿರಿವಿದೊಡೆಳಸಿ
> ಮಿಂದೊಡುಟ್ಟಿವ ಮೈಲಿಗೆಗಳೆದೊಡೆಲೆಗಚ್ಚಿದೊಡೆ
> ತುಱುಬನಳಿದಿಟ್ಟೊಡೆ ||
>
> ತಂದೆ ತಾಯ್ಗಳ ಕೂಡೆ ನುಡಿದೊಡೆ ಬಳಿಕ್ಕವೆ |
> ನ್ನಿಂದೆ ಖಳರುಂಟೆ ನಿನ್ನಂತಪ್ಪ ಪತಿಯನಾ |
> ನೆಂದುಪುಂ ಕಾಣದಿರಲೆಂದಾಣೆಯಿಟ್ಟುಕೊಂಡಳು ಜಾಣೆ ಪದ್ಮಾವತಿ ||

"ಸೌರಾಷ್ಟ್ರಮಂದಿರ ಸುಖಾಸೀನನಂ ತಹೆನು........ತಂದಲ್ಲದುಣ್ಣೆನ್" ಎಂಬ ಪತಿಯ ಪ್ರತಿಜ್ಞೆಗೆ ಪ್ರತಿಯಾಗಿ ಪದ್ಮಾವತಿ, "ಎಂದು ಸೋಮಯ್ಯನಂ ಕೊಂಡು ನೀ ಬಪ್ಪೆ ಬಪ್ಪಂದು ತನಕುಂಡೊಡೆ...ಆಣೆ" ಎಂದು ಆಣೆಯಿಟ್ಟುಕೊಳ್ಳುತ್ತಾಳೆ. ಆದಯ್ಯ ಕಾಡೊಳಗೆ ಅಲೆದು ಸೌರಾಷ್ಟ್ರವನ್ನು ಮುಟ್ಟಬೇಕು. ಕುಡಿಯಲು ನೀರು ದೊರೆಯುವುದೇ ಕಷ್ಟವಾದಾಗ ಮಿಂಹಕ್ಕೆ ಹೇಗೆ ಸಾಧ್ಯ? ಅದೂ ಅಲ್ಲದೆ ಸಮಯದ ಅವಧಿ ಅಲ್ಪವಾದುದರಿಂದ ಮಿಂಹಕ್ಕೆಂದು ವೇಳೆ ಕಳೆಯಲಾದೀತೆ? ಪತಿ ಹೀಗಿರುವಾಗ ತನಗೂ ಅವುಗಳ ಗೊಡವೆ ಬೇಡವೆಂದು ಪದ್ಮಾವತಿ "ಎಳಸಿ ಮಿಂದೊಡೆ ಉಟ್ಟಿರ್ದ ಮೈಲಿಗೆಗಳೆದೊಡೆ....ಆಣೆ" ಎನ್ನುತ್ತಾಳೆ. ಪ್ರಿಯಕರನ ಸಂತೋಷಕ್ಕೆಂದೇ ಪ್ರೇಯಸಿಯ ಅಲಂಕಾರ. ಅವನೇ ಇಲ್ಲದಿರೆ ಅಲಂಕಾರ ಸಂತಸಭೋಗಗಳು ಬೇಡವೆಂದು "ಎಲೆಗಚ್ಚಿದಡೆ....ಆಣೆ" "ತುಱುಬನಳಿದಿಟ್ಟೊಡೆ... ಆಣೆ" ಎಂದು ತನ್ನೆಲ್ಲಾ ವಿಲಾಸಗಳನ್ನೂ ಬದಿಗೊತ್ತುತ್ತಾಳೆ. "ತಂದೆ ತಾಯ್ಗಳ ಕೂಡೆ ನುಡಿದಡೆ ಬಳಿಕ್ಕವೆನ್ನಿಂದೆ ಖಳರುಂಟೆ"–ತಂದೆ ತಾಯ್ಗಳ ಬಲವಂತದಿಂದ "ಶರಣರಿಗೆ ಒಪ್ಪದಲಿ ಮಾಡಿದ ಮಹಾದ್ರೋಹವಿಲ್ಲವಂ" ಸರ್ವಾಂಗೆಂದು ಕೊಂಡೊಯ್ದುದರ ಫಲವಾಗಿ ಆದಯ್ಯ ಮುನಿದನು. ಸಮಾ

ಘಾಸ ಮಾಡಲು ಬಂದ ತಂದೆಯೇ ಪಾದಬೆಳೆಸಿ ಅದಯ್ಯನನ್ನು ರೊಚ್ಚಿಗೆಬ್ಬಿಸಿದನು. ಜೈನರ ಸೊಕ್ಕು ಮುರಿಯಲೆಂದು ಆದಯ್ಯ ಸೋಮಯ್ಯನನ್ನು ಕರೆತರಲು ಹೊರಟಿದ್ದನು. ಪತಿಯಿಂದ ತನ್ನನ್ನಗಲಿಸಿದ, ಪತಿ ಕಷ್ಟಪರಂಪರೆಯನ್ನೆದುರಿಸುವಂತೆ ಮಾಡಿದವರನ್ನು ನೋಡುವುದೂ, ಅವರೊಡನೆ ನುಡಿಯುವುದೂ ಮಹಾಪಾಪ ಎಂದು ಪದ್ಮಾವತಿ ಆಣೆಯಿಟ್ಟುಕೊಂಡಳು. ಪತಿ ತನ್ನಿಂದ ದೂರವಿದ್ದರೂ ಅವನ ಯಶಸ್ಸಿಗೆ ತಪಸ್ಸು ಮಾಡಿದಳು.

ಪದ್ಮಾವತಿಯ ಕಷ್ಟ ಸ್ವನಿರ್ಮಿತ: ಸ್ವಧರ್ಮದ ಅಗ್ಗಳಿಕೆಗೆ ಪಣತೊಟ್ಟ ಆದಯ್ಯನಿಗೆ ಪದ್ಮಾವತಿ ನೆರವಿತ್ತಳು. ಚಂದ್ರಮತಿ ಎದುರಿಸಿದುದು ವಿಧಿಲಿಖಿತ; ವಿಶ್ವಾಮಿತ್ರ–ವಸಿಷ್ಠರ ಛಲದ ಹೋರಾಟಕ್ಕೆ ತುತ್ತಾದವನು ಮೂರನೆಯವನಾದ ಹರಿಶ್ಚಂದ್ರ; ಕಷ್ಟಗಳಲ್ಲಿ ಸಮಭಾಗಿಯಾದವಳು ನಿರಪರಾಧಿ ಚಂದ್ರಮತಿ.

ಪದ್ಮಾವತಿ–ಚಂದ್ರಮತಿ ಇಬ್ಬರ ಗುಣಗಳಲ್ಲಿ ಇಷ್ಟು ವೈಷಮ್ಯವಿದ್ದರೂ ಸಾಮ್ಯಗಳಿಲ್ಲದಿಲ್ಲ. ಇಬ್ಬರ ಧ್ಯೇಯವೂ ಒಂದೇ: ಪತಿಯ ಕಷ್ಟಗಳಲ್ಲಿ ಸುಖಗಳಲ್ಲಿ ಸಮಭಾಗಿಗಳಾಗುವುದು. ಆದಯ್ಯ ಸೌರಾಷ್ಟ್ರಕ್ಕೆ ಹೊರಟು ನಿಂತಾಗ ಪದ್ಮಾವತಿಯ ಪ್ರತಿಕ್ರಿಯೆ ಏನು ?

ಹೋಗಬೇಡನ್ನೆನತಿದೂರ ನೆರವಿಲ್ಲದಟವಿ |
ಮೇಗೆಯುಪವಾಸ ಬೇಸಗೆಯ ಬಿಸಿಲು ಘನ ನಿಮ್ಮ
ಸಾಗಿಸುವರಿಲ್ಲ ಶಿವ ನಿಷ್ಕರುಣಿ ನಿರ್ಮೋಹಿ ಮೇಲೆ ತನ್ನವರೆಂದೊಡೆ ||
ಕೂಗಿಡಿಸಿ ಕಾಡುವನಪಕ್ಕೆ ತೆಕ್ಕದಿರಿ ತಲೆ |
ವಾಗದಿರಿ ಸೋಮಯ್ಯ ಬಾರದೊಡೆ ಬಾರದಿರಿ |
... ... ||

ತನ್ನನ್ನು ಒಂಟಿಯಾಗಿ ಬಿಟ್ಟು "ಹೋಗಬೇಡ" ಎನ್ನುವುದಿಲ್ಲ. "ಅತಿ ದೂರ ನೆರವಿಲ್ಲ ಅದವಿ ಮೇಗೆ ಉಪವಾಸ, ಬೇಸಗೆಯ ಬಿಸಿಲು ಘನ, ಸಾಗಿಸುವರಿಲ್ಲ" — ಮಹತ್ಕಾರ್ಯ ನಿರ್ವಹಣೆಗೆ ಏಕಾಂಗಿಯಾಗಿ ಹೊರಟ ಪತಿಗಾಗಿ ಮರುಗುತ್ತಾಳೆ; ಅವನ ಅಸಹಾಯಕತೆಗೆ ಕಳವಳಿಸುತ್ತಾಳೆ. ಚಿಂತಿಸುತ್ತಾಳೆ, "ಶಿವ ನಿಷ್ಕರುಣಿ ನಿರ್ಮೋಹಿ" ಅಂತಹವನನ್ನು ಒಲಿಸುವ ಯತ್ನಕ್ಕೆ ಕೈ ಹಾಕಿದ್ದಾನೆ: ಅದು ಅಸಾಧ್ಯವಲ್ಲದಿದ್ದರೂ ಕಷ್ಟ ಸಾಧ್ಯ ಎಂಬ ಅರಿವು ಪದ್ಮಾವತಿಗಿದೆ. ಆದುದರಿಂದಲೇ ಪತಿಯ ಕಾರ್ಯದ ಮಹತ್ವವನ್ನು ಮನದಟ್ಟು ಮಾಡುತ್ತಿದ್ದಾಳೆ. ಭಕ್ತರ ಇಚ್ಛೆಯನ್ನು ಶಿವ ಸುಲಭವಾಗಿ ಈಡೇರಿಸುವವನಲ್ಲ. "ತನ್ನವರೆಂದೊಡೆ ಕೂಗಿಡಿಸಿ ಕಾಡುವನು." ಕೇವಲ ನಾಲ್ಕಾರು ತಿಂಗಳುಗಳ ಶೈವಧರ್ಮದ ಪ್ರಭಾವದಿಂದ ಪದ್ಮಾವತಿ ಸಂಪೂರ್ಣ ಶೈವಳಾಗಿ ಮಾರ್ಪಟ್ಟಿದ್ದಾಳೆ. ಹುಟ್ಟು ಶೈವನಾದ ಆದಯ್ಯನಿಗೇ ಶಿವನ ಮತ್ತು ಅವನ ಧರ್ಮ ಪರೀಕ್ಷೆಯ ಬಗೆಗೆ ಎಚ್ಚರ ನೀಡುತ್ತಿದ್ದಾಳೆ.

ಚಂದ್ರಮತಿಯೂ ಇದೇ ರೀತಿ ಹರಿಶ್ಚಂದ್ರನಿಗೆ ಶಿವನ ಭಕ್ತ ಪರೀಕ್ಷೆಯ ಬಗೆಗೆ ತಿಳಿವು ನೀಡುತ್ತಾಳೆ. "ನೇಮಕ್ಕೆ ಸತ್ಯಕ್ಕೆ ಬಂಧನಕ್ಕೆಡೆಯ ಅಳುಪಲು ಶಿವ ಮಾಣ ನೋಟ್ಟಿಸ್ಸೆ" ಎಂದು ಸತ್ಯ ನಿಷ್ಠೆಗೆ ತಪ್ಪಬಾರದೆಂದು ಎಚ್ಚರ ಕೊಡುತ್ತಾಳೆ.

ಶಿವನ ಕೂಗಿಡಿಸಿ ಕಾಡುವ ಕಾಠಿಣ್ಯಕ್ಕೆ ಪತಿ ಎಲ್ಲಿ ಹೆದರಿ ಓಜರಿಯುವನೋ ಎಂಬ ಅಂಜಿಕೆ ಪದ್ಮಾವತಿಗೆ, ಮನದ ಮೂಲೆಯಲ್ಲಿ ಸುಳಿದ ಶಂಕೆಯ ನಿವಾರಣೆಗೆಂದೇ "ತೆಕ್ಕದಿರಿ, ತಲೆವಾಗದಿರಿ" ಎಂದು ಧೈರ್ಯ ತುಂಬುತ್ತಾಳೆ. "ಸೋಮಯ್ಯ ಬಾರದೊಡೆ ಬಾರದಿರಿ" – ಪ್ರತಿಜ್ಞೆ ನೆರವೇರದೆ ಬರಿಗೈಯಲ್ಲಿ ಬರುವುದಕ್ಕಿಂತ ಬಾರದಿರುವುದೇ ಲೇಸು ಎನ್ನುತ್ತಾಳೆ. ಯಾವ ಸತಿಯೂ ಪತಿಗೆ ಆಡಲಾರದಂತಹ ನುಡಿಗಳು! ಪತಿ ಎಂಥವನೇ ಇರಲಿ, ಹೇಗೆಯೇ ಇರಲಿ, ಹಿಡಿದ ಕಾರ್ಯದಲ್ಲಿ ಗೆಲ್ಲಲಿ, ಸೋಲಲಿ ಅವನು ಸತಿಗೆ ಪತಿಯೇ! ಅವನನ್ನು ದೂರ ಮಾಡಲು ಎಂದೂ ಒಪ್ಪಲಾರಳು. ಪದ್ಮಾವತಿಗೆ ಆದಯ್ಯನಲ್ಲಿ ಪ್ರೀತಿಯಿರಲಿಲ್ಲವೆಂದಲ್ಲ; ಅವಳ ಅಸಾಧಾರಣ ಪ್ರೀತಿಯೇ ಅವಳಿಂದ ಈ ಮಾತುಗಳನ್ನಾಡಿಸಿತು. ಆದಯ್ಯನಲ್ಲಿ ಹೊತ್ತಿಕೊಂಡಿದ್ದ ಛಲದ ಜ್ವಾಲೆಗೆ, ಅದರ ಪ್ರಖರತೆ ಪ್ರಕಾಶಗಳು ಹೆಚ್ಚುವಂತೆ ಗಾಳಿಯನ್ನೂದುತ್ತಾಳೆ, ಪದ್ಮಾವತಿ.

ಇದೇ ಬಗೆಯ ಪ್ರಚೋದನೆಯನ್ನು ಚಂದ್ರಮತಿಯೂ ಹರಿಶ್ಚಂದ್ರನಿಗೆ ಕೊಡುತ್ತಾಳೆ. "ಸತ್ಯಮಂ ಬಿಟ್ಟು ಕೆಡದಿರವನೀಶ" ಎಂದು ಕೈಮುಗಿದು ಬೇಡಿಕೊಳ್ಳುತ್ತಾಳೆ. ಪದ್ಮಾವತಿಯಲ್ಲಿ ಆಗ್ರಹಪೂರ್ವಕ ಆಜ್ಞೆಯಂತೆ ಕಂಡುಬಂದರೆ ಚಂದ್ರಮತಿಯಲ್ಲಿ ವಿನಯಪೂರ್ವಕ ವಿಜ್ಞಾಪನೆಯಂತೆ ಕಂಡುಬರುತ್ತದೆ. ಆದಯ್ಯ–ಹರಿಶ್ಚಂದ್ರರು ತಮ್ಮ ನಿಷ್ಠೆಗೆ ತಪ್ಪದಂತೆ ಎಚ್ಚರಿಸುವಂತಹ ಶಕ್ತಿಯುತ ಮಾತುಗಳನ್ನಾಡಿವರು. ಹೇಗಾದರೂ ಎಂತಾದರೂ ತಮ್ಮ ಕಾರ್ಯದಲ್ಲಿ ಅಲಸ್ಯ ತೋರಿದರೆ ಒಮ್ಮೆಲೇ ಬಡಿದೆಬ್ಬಿಸುವಂತಹ ಪ್ರಖರತೆ ಆ ಮಾತುಗಳಲ್ಲಿತ್ತು. ತನ್ನ ಮೋಹದ ಮಡದಿಯ ಪ್ರಚೋದಕ ನುಡಿಗಳಿಂದ ಆದಯ್ಯನ ಬಲ ಇಮ್ಮಡಿಯಾದಂತೆ, ತನ್ನ ಪ್ರಿಯ ಪತ್ನಿಯ ನುಡಿಗಳಿಂದ ಹರಿಶ್ಚಂದ್ರ ನವಚೈತನ್ಯ ಪಡೆದ.

ಹಸಿಮನದ ಬಿಸಿರಕ್ತದ ಜವ್ವನೆ ಪದ್ಮಾವತಿ; ಪಕ್ವಹೃದಯದ ಶಾಂತಭಾವದ ಪ್ರೌಢೆ ಚಂದ್ರಮತಿ—ಎರಡೂ ಪಾತ್ರಗಳನ್ನು ಸಮತೂಕವಾಗಿ ನಡೆಸಿಕೊಂಡು ಬಂದಿದ್ದಾನೆ ಕವಿ. ಎರಡೂ ವಿಭಿನ್ನ ಪಾತ್ರ ರಚನೆಯಲ್ಲಿ ರಾಘವಾಂಕ ಯಶಸ್ವಿಯಾಗಿದ್ದಾನೆ. ಚಂದ್ರಮತಿ–ಪದ್ಮಾವತಿಯರು ಸಾಧಾರಣ ಸ್ತ್ರೀಯರಾಗಿದ್ದರೆ ಹರಿಶ್ಚಂದ್ರ–ಆದಯ್ಯರು ಇಂದಿನ ಗೌರವ–ಪೂಜ್ಯತೆಗಳನ್ನು ಪಡೆಯುತ್ತಿದ್ದರೆಂಬುದು ಸಂದೇಹಾಸ್ಪದ—ಎನ್ನುವ ಮಟ್ಟದಲ್ಲಿ ಈ ಪಾತ್ರಗಳು ಚಿತ್ರಿತವಾಗಿವೆ

★ ಉಮಾದೇವಿ

ಗುರು ಗೊಹೇಶ್ವರ
ಪಾದಪಯೋಜಪೂಜಕ ಶತಕ

ಶತಕ ಗ್ರಂಥಗಳು ಕನ್ನಡ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಕವಿಗಳ ಸ್ವತಂತ್ರ ಭಾವನೆಯನ್ನು ಸಾರುವ ಪ್ರತೀಕಗಳಾದ ಇವು ಸುಮಾರು ಐದು ನೂರಕ್ಕೂ ಮೀರಿವೆ.

ಬರಹವ ಗುರುನಂಜೆಸ್ವಾಮಿ, ತನ್ನ ಶತಕಪದ್ಯ ಸಂಕಲನದಲ್ಲಿ 'ಗುರು ಗೊಹೇಶ್ವರ ಪಾದ ಪಯೋಜ ಪೂಜಕ' ಶತಕದ ಮೂರು ಪದ್ಯಗಳನ್ನು ಉಪಯೋಗಿಸಿಕೊಂಡಿದ್ದಾನೆ. ಈಗ ಈ ಶತಕದ ಪೂರ್ಣಭಾಗ ನಮಗೆ ದೊರೆತಿದ್ದರೂ ಇದರ ಕರ್ತೃ ಇನ್ನೂ ಅಜ್ಞಾತನಾಗಿಯೇ ಉಳಿದಿದ್ದಾನೆ, ಕೃತಿಯಲ್ಲಿ ಕರ್ತೃವಿನ ಬಗ್ಗೆ ಯಾವ ಸುಳಿವೂ ಸುಳಿಯದಾಗಿದೆ. ಒಟ್ಟಿನಲ್ಲಿ ಕವಿ ವೀರಶೈವ, ಮೇಲಾಗಿ ಅಲ್ಲಮಪ್ರಭುವಿನ ಭಕ್ತ.

ಭಕ್ತಿ, ಜ್ಞಾನ ಪ್ರಧಾನವಾದ ಈ ಶತಕವು ಶತಕಸಾಹಿತ್ಯದಲ್ಲಿ ತನ್ನದೇ ಆದ ಅಭಿವ್ಯಕ್ತದಿಂದ ಪ್ರತಿನಿಧಿಸುತ್ತದೆ. ಕವಿಗೆ ರಚನಾ ಸಾಮರ್ಥ್ಯವಿದ್ದರೂ ಯಾವುದೇ ಬಗೆಯ ಅಲಂಕಾರಗಳಿಗಾಗಲಿ, ಶ್ಲೇಷಗಳಿಗಾಗಲಿ, ಶಬ್ದ ಪ್ರಾಸಗಳಿಗಾಗಲಿ ಮನವೀಯದೆ, ನಿರಾಡಂಬರವಾಗಿಯೂ, ನಿರ್ದುಷ್ಟವಾಗಿಯೂ, ಲಲಿತವಾಗಿಯೂ ಈ ಶತಕವನ್ನು ರಚಿಸಿದ್ದಾನೆ. ಈ ಗುಣಗಳು ಕವಿಯ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತವೆ.

ಉ|| ಶ್ರೀಗುರುಲಿಂಗ ತತ್ತ್ವತನುವಾಗಿ ಸದಾಶಿವಲಿಂಗ ತತ್ತ್ವರೂ
ಪಾಗಿ ಪರಾಪರಾಮಲಸಮಾಹಿತ ಜಂಗಮಲಿಂಗ ತತ್ತ್ವನಾ |
ನಾ ಗುಣಮೂರ್ತಿಯಾಗಿ ಮೆರೆವಪ್ರತಿಮಂ ನಮಗೀಗೆ ಸೌಖ್ಯಸಂ
ಭೋಗಮನಕ್ಕಜಂ ಗುರುಗೊಹೇಶ್ವರಪಾದಪಯೋಜ ಪೂಜಕಂ || ೧ ||

ಚಂ|| ಗುರುಕರ ಪದ್ಮಜಾತನೆನಿಸಲ್ ಪ್ರಿಯನಾದ ಮಹೋತ್ತಮಂ ಮೊದಲ್
ಪರಿಕಿಸಿ ತಾನಿದೆತ್ತಣವನೆತ್ತಣದೀಜಗವೆತ್ತಣ ಪ್ರಭಂ |
ಘುರು ಸುಖದುಃಖವೆಂದು ಮನದೊಳ್ ತಿಳಿದಿಚ್ಛೆಯೊಳೊಪ್ಪುತಿಪ್ಪ ಸ
ಚ್ಚರಿತ್ರೆಯನುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨ ||

ಈ ಶತಕವನ್ನು ಪರಿಷ್ಕರಿಸುವಲ್ಲಿ ನೆರವಾದ ಹಿರಿಯರಾದ ಶ್ರೀಮಾನ್ ಎಂ. ಎಸ್. ಬಸವರಾಜ ಶಾಸ್ತ್ರಿಯವರಿಗೆ ಋಣಿಯಾಗಿದ್ದೇನೆ. ಅಷ್ಟೇ ಆಸಕ್ತಿ ವಹಿಸಿ ಉತ್ತೇಜಿಸಿದ ಮಿತ್ರ ಎಸ್. ಶಿವಣ್ಣನವರಿಗೂ ವಂದನೆಗಳು.

ಉ॥ ಗಾರುಡ ಮಂತ್ರಮೂರ್ತಿಗೆ ಭುಜಂಗ ವಿಷಗ್ರಹಮುಂಟೆ ಪೇಳ್ಸುಧಾ
ವಾರಿಧಿ ವಾಸಿಗೇಂ ಕ್ಷುಧೆಯು ನಿಗ್ರಹಮುಂಟೆ ಗುರೂಪದೇಶ ಸಂ- |
ಚಾರಕನಾದವಂಗೆ ಭವಬಾಧೆಗಳುಂಟೆ ಜಿಡಿಲ್ಲವೆಂದು ನಿ-
ರ್ಧಾರಿಸಿ ಕಂಡವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೩ ॥

ಉ॥ ಭಕ್ತನೆ ಮತ್ತೆ ಮತ್ತೆ ಭವಕೋಟಿಗಳೊಳ್ ಬರುತಿಪ್ಪನೆಂಬ ಪಾ
ಸ್ತ್ರೋಕ್ತಿಯು ಸೊಲ್ಲ ನಾಗಮುವನೊಲ್ಲನದೇನುವನೊಲ್ಲನೊಲ್ಲನಾ |
ಭಕ್ತನೆ ಭಾವಿಪಂದು ಭವ ಭಂಜನನೆಂಬ ಗುರೂಪದೇಶ ಸಂ
ಯುಕ್ತಿಯನೊಂದುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೪ ॥

ಚಂ॥ ಭವಹರನೆಂದು ಭಕ್ತನ ಪೆಸರ್ತ್ರಿಜಗಂಗಳೊಳೊಂದಿ ಸಂದಿರಲ್
ಭವಭವಕೋಟಿ ಮತ್ತೆ ಶಿವಭಕ್ತನೊಳುಂಟೆನುತಿರ್ಪ ಮೂಢ ಮಾ |
ನವರನದೇನನೆಂಬೆನೆನುತಂ ಮನದೊಳ್ ಶಿವಭಕ್ತಿಮರ್ಮಮಂ
ವಿವರಿಸಿ ಕಾಣ್ಬವಂ ಗುರುಗೊಹೇಶ್ವರಪಾದ ಪಯೋಜ ಪೂಜಕಂ ॥ ೫ ॥

ಉ॥ ತಮಗರಿವಿಲ್ಲಯಿಲ್ಲದೊಡೆ ಬಲ್ಲವರೊಳ್ ಮಿಗೆ ಕೇಳ್ವೆನೆಂಬ ಸಂ
ಕ್ರಮ ಗತಿಯಿಲ್ಲವಿಲ್ಲದೊಡೆ ಸುಮ್ಮನೆ ನಾ ವಿರಬೇಕು ಯೆಂಬ ವಿ |
ಭ್ರಮಗುಣವಿಲ್ಲವಿಲ್ಲದವರೇತಱ ಬಲ್ಲವರೆಂಬ ಜಾಣ್ಮೆಯೊಳ್
ಮಮತೆಯನುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೬ ॥

ಉ॥ ನೀರೊಳಗೀಸುತಂ ಮುಳಿದು ನಿದ್ರೆಯಃ ನೈದುವ ಮೂರ್ಖನಂತೆ ಸಂ
ಸಾರವ ನಿರ್ಕುವಲ್ಲಿ ಗುರು ಸನ್ಮತವಂ ಪೇರದಿಪ್ಪ ದೊಪ್ಪ ಮೇ |
ಸಾರದ ಶಿಷ್ಯನಂ ಪವಣೆಯಲ್ಲಿನುತಂ ಶಿವಭಕ್ತಿಯುಕ್ತಿಯಿಂ
ಸಾರವ ನೈದುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೭ ॥

ಉ॥ ಕೋಪಿಯು ಜೂಜುಗಾಜನ ಕುಠಾರಿಯುನನ್ಯಕಾಮಿನೀ
ವ್ಯಾಪಿಯು ಟೇಂಟೆಕಾಱನ ಕೃತಘ್ನನ ಜೋರನ ನಿಂತು ಟಪ್ಪ ದು |
ಷ್ಪಾಪಿಗಳಂ ನಿವಾರಿಸುವ ಚಾರು ಚರಿತ್ರ ಮನಪ್ಪುದೈದು ನಿ
ರ್ಲೇಪ ಗುಣಾಧಿಕಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೮ ॥

ಚಂ॥ ಪುಸಿವವರಂ ವಿಭಾಡಿಸುವರಂ ವಿಧಿಗೊಂಬವರಂ ವಿಕಾರದಿಂ
ಮುಸಗುವರಂ ಕುಮಂತ್ರ ಕುಟಿಲಂಗಳಿನಾರ್ಜಿಸಿಕೊಂಡು ಬಾಳ್ವರಂ |
ಪಿಸುಣಿಗರಂ ಕೃತಘ್ನರೆನಿಸಿಪ್ಪ ದುರಾತ್ಮರೆಲ್ಲರಂ ಪಿವ
ರ್ಜಿಸುವ ಗುಣಾಧಿಪಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೯ ॥

---

೧. ಸಾ. ೩. ಅಾ, ೪. ನರ್ಜ.

ಉ॥ ಅನ್ನಿಗರೊಲ್ದು ಮಾಡಿಮುಪಚಾರಮುಮಂ ಮಱದಿಪ್ಪ ಪಾಪಿಯಂ
ತನ್ನಯ ದಾನ ಧರ್ಮದ ವಿಡಾಯಮುಮಂ ನೆನವಪ್ಪ ದೋಷಿಯಂ।
ಮನ್ನಿಸಿ ಕೊಟ್ಟು ದಂತಿರಿಗಿದೂಟಿಸಿ ಘಾಟಿಸಿಕೊಂಬ ಶಿಷ್ಯನಂ
ಮುನ್ನವೆ ಬಿಟ್ಟವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೦॥

ಉ॥ ಬಲ್ಲವರಲ್ಲಿ ಥಾಳಿಸಿ ಕರಂಗಳ ಲಾಲಿಸಿ ಕೇಳ್ದು ಕಲ್ತು ಮಾ
ತೆಲ್ಲವ ನಾಪ್ಯರುಕ್ತಿ ನಿಜ ಯುಕ್ತಿಮತಂ ಫಲವುಂಟೆನುತ್ತವಂ।
ಪಲ್ಲಟವಾಗಿ ನಾಡ ನುಡಿಯಂ ಪೊಸದೋಱುವ ಬಲ್ಲ ಜಿಲ್ಲಱಿಂ
ಸೊಲ್ಲಿಸಿ ಕೇಳ್ವನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೧॥

ಉ॥ ಎಂತಿರುತಿರ್ದಂತೆ ಪರಬೊಮ್ಮವೆನ್ನುತ್ತಿರುತಿರ್ಪ ತಾಮಸ
ಭ್ರಾಂತ ರನೇನನೆಂಬೆನಕಟಾ ಕ್ರಿಮಿಕೀಟಕ ಪಂದಿ ನಾಯ್ಗಳೆಂ।
ಬಂತುಟು ಬೊಮ್ಮವೇ ಶಿವ ಶಿವಾ ನುಡಿಗೇಳ್ವುದೆ ದೋಷಮೆಂದು ನಿ
ಶ್ಚಿಂತೆಯೊಳಿಪ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೨॥

ಚಂ॥ ಕರುಣಿಗಳಂ ಕಳಾನಿಪುಣರಂ ಗುಣವಂತರನಾಗ ಮಜ್ಞರಂ
ಪರಹಿತರಂ ವಿವೇಕಪರರಂ ಗುರು ಜಂಗಮ ಲಿಂಗ ಭಕ್ತಿಯೊಳ್।
ಪರಿಣತರಂ ಸಮೇಳವನೆ ಮಾಡುವೆನೆಂದೊಡದೆಂತುಟಪ್ಪ ಸ
ತ್ಪುರುಷನೆ ಲೋಕದೊಳ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೩॥

ಉ॥ ಹೊನ್ನಿನ ಪೆರ್ಮೆಯಂತೆ ನೆಱೆ ಕನ್ನೆಯರೊಲ್ಮೆಯತೀವ ಸಂಚಲಂ
ಕನ್ನೆಯರೊಲ್ಮೆಯಂತೆ ನೆಱೆ ಪೊನ್ನಿನ ಪೆರ್ಮೆಯ ತೀವ ಸಂಚಲಂ।
ಮನ್ನಿಸಿ ನೋಡಲೆಂದೆನುತಲಂ ತವಱೊಳ್ಸಲೆಸಂದ ಮೋಹಮಂ
ಮುನ್ನವೆ ಬಿಟ್ಟವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೪॥

ಚಂ॥ ಪರವನಿತಾ ನಿರೀಕ್ಷಣೆಗೆ ಚಿತ್ತವೆ ಚೇತನ ಮಾಗುತಿರ್ದಡಂ
ಪರವನಿತಾ ನಿರೀಕ್ಷಣೆಗೆ ಚಿತ್ತವೆ ಚೇತನ ಮಾಗುತಿಪ್ಪುದ।
ಚ್ಚರಿಯೆನಲೀ ಪ್ರಕಾರದೊಳಮರ್ದಿರುತಂ ನಿಜಚಿತ್ತಮಂ ಚಟು
ಳತ್ವರಿಸುವ ನಿಂತು ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೫॥

ಉ॥ ಮುಂದೆ ಪೊಗಳ್ದು ಪಿಂದೆ ಜಱವಾಡುವ ಘಾತಕನಲ್ಲಿ ಭಕ್ತಿಯಿಂ
ವಂದಿಸಿ ಮತ್ತೆ ನಿಂದಿಸುವ ಪಾತಕನಲ್ಲ ನಿಜಾತ್ಮಗರ್ವದಿಂ।
ನಿಂದು ವಿಡಾಯದಿಂ ಪೆಱರ ನೇಳಿಪ ಸೂತಕಿಯಲ್ಲ ಧೂರ್ತರಂ
ಹೊಂದುವನಲ್ಲ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೧೬॥

---

೪. ಕ್ಕ,
೫.ಭಾ, ೧೦

ಚಂ|| ಸಮುಚಿತ ಶಬ್ದವಲ್ಲದೆ ವೃಥಾ ವಚನಂಗಳ ನಾಡನಾರೊಳಂ
ಕ್ರಮಗತಿಯುಲ್ಲದಿರ್ದ್ದ ಬಱಿಯೈಕ್ಯಮನನ್ಯಜನಕ್ಕೆ ಬೋಧಿ ಸಂ |
ಶಮೆದಮೆ ಮುಖ್ಯವಾದ ಚರಿತಂಗಳನಲ್ಲದೆ ಬೀರನಾರೊಳಂ
ವಿಮಳ ಗುಣಾಧಿಪಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೧೭ ||

ಚಂ|| ಕಡುನಿಡಿದಪ್ಪ ನಾಲಗೆ ಕರಂ ತನಗುಂಟೆನು ತಾರನಾದಡಂ
ನುಡಿವವನಲ್ಲ ಮುಂಬರಿದು ಪ್ರಾರ್ಥಿಸಿ ಕೇಳ್ವ ಮಹಾಸುಶೀಲರೊಳ್ |
ನುಡಿವರೆ ಶುದ್ಧಸಿದ್ಧಮತವಲ್ಲದೆ ಮಾತಿನ ಬೊಮ್ಮಗಿಮ್ಮವಂ
ನುಡಿವವನಲ್ಲ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೧೮ ||

ಚಂ|| ನುಡಿಯುನ ಬದ್ಧವಂ ನುಡಿವನಾದರೆ ಶೋಧಿಸಿ ಶುದ್ಧಮಪ್ಪುದಂ
ನುಡಿವನದಂ ಪ್ರತಿಷ್ಠಿಸುವನಾ ನುಡಿಯುಂತೆ ಸುಶೀಲವೃತ್ತಿಯಿಂ |
ನಡೆವ ಸುಮಾರ್ಗವೆಂದೆನಿಸಿ ಯಾನಡೆಯಿಂ ಶಿವನಲ್ಲಿ ಸಿದ್ಧಿಯಂ
ಪಡೆವ ನಿರಂತ*ದೊಳ್ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೧೯||

ಉ|| ಓದದ ಕೇಳದುತ್ತಮಚರಿತ್ರದೊಳಿಪ್ಪಶುಕಂಗೆ ಬಂಧವೇ
ನಾದುದೆ ಪೋದಿ ಕೇಳಿ ನಿಜನಿಷ್ಠೆಯೊಳಿಪ್ಪ ಶುಕಂಗೆ ಮೋಕ್ಷಮೇ |
ನಾದುದೆ ಯಿಲ್ಲವಂತವರೊಳೆಂದು ಶಿವಸ್ಥಿತನಾಗಿ ಭಕ್ತಿಯಿಂ
ಸಾಧಿಸಿ ತೋಱುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೦ ||

ಉ|| ಅಂಗದ ಮೇಲೆ ಲಿಂಗವಿರಲಲ್ಲಿಯೆ ಬುದ್ಧಿಯು ನಿಕ್ಕಿ ಸರ್ವ ಸೌ
ಖ್ಯಂಗಳನಲ್ಲಿ ಸಾಧಿಸದೆ ಲೌಕಿಕರಂದದೊಳನ್ಯ ತೀರ್ಥ ಕ್ಷೇ |
ತ್ರಂಗಳಿಗೈದಿ ದುರ್ಭವಕೆ ಭಾಜನನಪ್ಪನೆಯುಲ್ಲ ಕೇಳು ಕೇಳ್
ಲಿಂಗ ಸುಸಂಗಿ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೧ ||

ಚಂ|| ಮಱೆದಱೆವಾದಡಂ ಭವಿಗಳತ್ತಣ ಚಿಂತೆಯು ನಾಡ ನಾಡ ವಂ
ಜಱೆಯುನು ಮಾರ್ಗದಲ್ಲಿ ಚರಿಸಂ ವಿಷಯವ್ಯಸಕ್ಕೆ ವಸ್ತುವಂ |
ತೊಱೆಯುನನೂನ ಸದ್ಗುಣ ಗುಣಾನ್ವಿತನಾಗಿರುತಿರ್ದ್ದ ಹೆಮ್ಮೆಯಿ
ಮೆಱೆವವನಲ್ಲ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೨ ||

ಚಂ|| ಕನಕ ಮನುಂಬವಂಗೆ ಘನ ಮಾಗದೆ ಮಾಣ್ಮದೆ ಪೇಳ್ಮರುಳ್ತನಂ
ಕನಕಮೆ ಜೀವ ಮಾಗಿಸಲಿ ಜೀವಿಸುವಂಗೆ ತದ ಪ್ರಕೋಪ ಮೋ |
ಹನಮತಿ ಪೆರ್ಚದಲ್ಲದೆ ವಿಹೀನತೆಯುಪ್ಪುದೆ ಎಂದು ಬಲ್ಲ ಸ
ಜ್ಜನತನಮುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೩ ||

---

*. ನಿರರ್ಥ.

ಉ|| ಎನ್ನವರನ್ನಿಗರ್ ಬಡವರರ್ಥಯುತರ್ ಮಿಗೆ ಕಷ್ಟಶಿಷ್ಟರೆಂ
ದೆನ್ನದೆ ನಲ್ಮೆಯಿಂದ ತಿಥಿಸಂತೆಯು[1] [ತಾಂ] ಸಮ ಭಾವ ಬುದ್ಧಿಯಿಂ |
ಪನ್ನ ಸುವರ್ಣ ವಸ್ತ್ರ ಗೃಹ ಮುಖ್ಯ ಸಮಸ್ತ ವಸ್ತುವನಿತ್ತು ಭಕ್ತಿಯಿಂ
ಮನ್ನಿಸುತಿಪ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೪ ||

ಚಂ|| ಗರುಡಿಯುಲಾಡುವಂಗೆ ರಣರಂಗದಲೆತ್ತಣ ವೀರವೃತ್ತಿಯಾ
ಪರಿಯು ನಿದಿರ್ಚಿ ತೋರ್ಪ ಗುರುಜಂಗಮ ಲಿಂಗದ ಸೇವೆಗಾಱದೋ |
ಸರಿಯೆ ಸುಮಾರ್ಗಮುಕ್ತಿಪಥವಿಲ್ಲೆನುತಾ ಶಿವಭಕ್ತಿಯೋಗದೊಳ್
ಪರಿಣತನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೫ ||

ಉ|| ಜಂಗಮ ಸೇವೆಯಂ ಮೊಗಸಿಮಾಡುವ ನಲ್ಮೆಯೊಳೆನ್ನಕಾಯಮೆ
ನ್ನಂಗನೆಯೆನ್ನವಸ್ತುಗಳಿವೆಂದು ವಿಮೋಹಿಸಿ ಲೋಭಲಾಭದಿಂ |
ಪಿಂಗದೆ ಸರ್ವಮಂ ಸಮು[2]ಯದಲ್ಲಿ ಸಮರ್ಪಿಸಿ ನಟ್ಟುನಿಂದ ನಿ
ಸ್ಸಂಗಿಯುಲಾ ಶಿವಾ ಗುರುಗೊಹೇಶ್ವರ ಪಾದಪಯೋಜಪೂಜಕಂ || ೨೬ ||

ಉ|| ಆವೆಡೆಯೊಳ್ ತನುತ್ರಯುದ ಕೋಟಲೆ ಮಾಣ್ಬುದು ಭಾವಿಸಲ್ಕೆ ಮ
ತ್ತಾವಡೆಯೊಳ್ ಮನಸ್ಸಿನ ವಿಕಾರತೆ ನಿಲ್ವುದು ನಿತ್ಯಸೌಖ್ಯವಿ |
ನ್ನಾವೆಡೆಯೊಳ್ ಸಮಂತು ದೊರಕೊಂಬುದು ತನ್ನೊಳೆನುತ್ತಮಿಪ್ಪಮಂ
ತ್ರಾವಹಮುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೭ ||

ಚಂ|| ನದಿಯು ತಟಾಕದೊಳ್ ಪಿರಿಯ ಪಾಸಱೆಯೊಳ್ ಪುಳಿನಸ್ಥಳಂಗಳೊಳ್
ಮುದಮನೊಡರ್ಚಿ ತೋರ್ಪ ವನದೊಳ್ಗಿರಿ ಗಹ್ವರದೊಳ್ ಸರಸಿನೊಳ್ |
ಸದಮಳ ಚಿತ್ತದೊಳ್ ಪುರದೊಳಾಲಯದೊಳ್ ಶಿವಲಿಂಗ ಪೂಜೆಯಂ
ಪದುಳದಿ ಮಾಡುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೨೮||

ಚಂ|| ಕರಕಮಲಂಗಳೊಳ್ ನಯನ ಪಂಕಜದೊಳ್ ವದನಾಂಬುಜಾತದೊಳ್
ವರ ಹೃದಯಾಬ್ಜದೊಳ್ ತನು ಸರೋಜದೊಳಂತಖಿಳಾಂಗ ಪದ್ಮದೊಳ್ |
ಪರಶಿವಲಿಂಗ ಭಾಸ್ಕರ ಕರಂಗಳ ನಾಂತಿತಿಪ್ಪ ಭಕ್ತಿ ಸ
ಚ್ಚರಿತೆಯನುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೯ ||

ಉ|| ಲಿಂಗವನೀಕ್ಷಿಪಲ್ಲಿ ಹರುಷಾಶ್ರು ಪೊಸರ್ವಡೆ ಲಿಂಗ ಸೋಂಕಿನೊಳ್
ಪಿಂಗದೆ ರೋಮರಾಜಿ ಸಲೆ ಸೀಗುರಿಸಿಪ್ಪಡೆ ಲಿಂಗಭಾವ ಸಂ |
ಸಂಗಗಳೈದೆ ಮೈಮಱೆದು ಮೂರ್ಛೆಯೊಳಿಪ್ಪರೆ ತನ್ಮಹಾತ್ಮಕಂ
ಲಿಂಗಸುಸಂಗಿ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೩೦||

---

೧. ತಯಂ, ೨. ಟು.

ಚಂ|| ಚಲಿಸುವ ನೀರೊಳಾತ್ಮತನುಭಾವವನೀಕ್ಷಿಸಿ ಕಂಡೆನೆಂಬ ಕೇ
ವಲ ಪರಮಾತ್ಮನಂ ಮಿಸುಗವೀ ಮನದಿಂದಱಿದಿರ್ಪೆನೆಂಬ ದು |
ರ್ಮಮತೆಯ ದೇಹಿಯಾಗಿರುತ ತಾನೆ ಸದಾಶಿವನಾದೆನೆಂಬ ಗಾ
ವಿಲರೊಡನಿಪ್ಪನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೨೧||

ಚಂ|| ಮನವೆ ಮಹೋಗ್ರಮೃತ್ಯು ಮನದಿಂದವೆ ಚಿಂತೆಯ ಶೀಘ್ರಮೃತ್ಯುವಾ
ಮನದಿನಮರ್ದ್ದ ಚಿಂತೆಗಳಿನತ್ಯಧಿಕಂ ಸುಡಿಯುಗ್ರಮೃತ್ಯುವಾ |
ಮನದಿ ವಿಚಿಂತೆಯಿಂ ಸುಡಿಯಿನಗ್ಗದಲ್ ಮೃತ್ಯು ಶರೀರಕೃತ್ಯಮೆಂ
ಬನ ಮತಿಯುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೨೨||

ಚಂ|| ಅಕಟಕಟಾ ವಿಚಾರಿಸೆ ವಿವೇಕಿಸೆ ಭಾವಿಸೆ ವೀರಶೈವದೊಳ್
ಸಕಲ ವಿರಕ್ತಿಯೇ ವಿಹಿತಮಲ್ಲದೆ ಸಂಸ್ರುತಿ ಸಂಗಮೆಂಬುದೇಂ |
ಸುಕರ ಗುರೂಕ್ತಿಯಿಂ ವಿಹಿತಮಾಪುದೆಯುಲ್ಲಮೆನುತ್ತವೆಲ್ಲವಂ
ಪ್ರಕಟಿಸಿ ಬಿಟ್ಟವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೨೩||

ಉ|| ಕಾಯದೆ ಪಂಚಕಾಕ್ಷರ ಪದಾರ್ಥಗಡಾಕೃಟ ಪಂಚಕಾಕ್ಷರ
ನ್ಯಾಯಮೆ ಶೈವ ಮಂತ್ರಗಡ ಮಂತ್ರಮೆ ಸದ್ಗುರು ಬೋಧಿಸಲ್ ನಿಜ ||
ಪ್ರಾಯದೊಳಿಪ್ಪುದೊಪ್ಪು ಗಡಮೆಂದಱಿವಾತ್ಮ ವಿಚಾರವಲ್ಲಿ ನಿ
ರ್ಮಾಯಕನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೨೪||

ಉ|| ಕನ್ನಡಿ ಲಿಂಗವಾಗಿ ನಯನಂ ಗುರುವಾಗಿ ಕರಂ ಮನಸ್ಸನೋ
ರನ್ನಮೆಯಾಗಿ ನೋಡುಪನುರಾಗಮೆ ಪಂಪನೆಯಾಗಿ ದೃಶ್ಯನಿ |
ರ್ಭಿನ್ನಮೆ ಯೋಗವಾಗಿ ಪರಿತುಷ್ಟಿಯನೈದುವ ಸರ್ವಸೌಖ್ಯ ಸಂ
ಪನ್ನತೆಯುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೫ ||

ಚಂ|| ಖಗ ಮೃಗ ಕೀಟಕಾದಿ ಪಶುಪಾಮರ ಜಾತಿಗಳಂತೆ ಪುಟ್ಟಿ ನೆ
ಟ್ಟಗೆ ತಿಳಿವೆಂಬುದಿಲ್ಲದೆ ಜಡಾತ್ಮತೆಯಿಂ ಮರುಳಾಗಿ ಕ್ಷುತ್ ಪಿಪಾ |
ಸೆಗೆ ಲಯಮಪ್ಪುದೇನುಚಿತಮೋ ಸುಡವೆಂದಱಿದಾ ಪ್ರಪಂಚಮಂ
ಪುಗದಿರುತಿಪ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೬ ||

ಉ|| ತಾಮಸ ಭಕ್ತಿಯಿಂ ಮನುಜ ದೇಹವನೈದುವನಲ್ಲ ರಾಜಸ
[೧೦]ಪ್ರೇಮದ ಭಕ್ತಿಯಿಂ ದಿವಿಜ ಕಾಯವನರ್ಜಿಪನಲ್ಲ ಸಾತ್ತ್ವಿಕ |
ಕ್ಷೇಮದ ಭಕ್ತಿಯಿಂ ಪರಮ ನಿತ್ಯ ಶರೀರವನ್ನಲ್ಲದೊಲ್ಲದು
ದ್ಧಾಮ ಗುಣಾನ್ವಿತಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೨೭ ||

---

೮. ಯದಗ ೯ ಸಿ ೧೦. ತ್ರೈ,

ಚಂ|| ಧನವಭಿಲಾಷೆಯುಳ್ಳವರೆ ವೈಷ್ಣವರಂಗನೆಯಾಸೆಯುಳ್ಳವರ್
ಮನಸಿಜಭಕ್ತರಂತೆ ಭಯವುಳ್ಳವರಂತಕನಾಳ್ಗಳಂತೆ ಯೀ[೧೧] |
ತನು ಮನೆಯೆಲ್ಲವಂ ಬಿಸುಟು ನಿಸ್ಪೃಹನಾವಡೆ ವೀರಶೈವ ನಾ
ತನೆ ಸಕಳಾಧಿಕಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೩೮ ||

ಚಂ|| ನುಡಿಸುವರೊಳ್ನಿರೀಕ್ಷಿಸುವರೊಳ್ ಶರಣೆಂ[೧೨]ಬವರೊಳ್ ಸಮಿಪರೊಳ್
ಕಡುನೆನಹಿಪ್ಪರೊಳ್ ಪೊಗಳ್ವರೊಳ್ ನೆಱೆ ನಂಬುವರೊಳ್ ನಿರಂತರಂ|
ಗಡಣದೊಳಿಪ್ಪರೊಳ್ ಸಕಲ ಸೌಖ್ಯಮನಿತ್ತು ವಿಶುದ್ಧ ಕೀರ್ತಿಯಂ
ಪಡೆದಿರುತಿಪ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೩೯ ||

ಚಂ|| ವಿನಯಮನುಕ್ತಿಯೊಳ್ ಧನಮನರ್ಥಿಗಳೊಳ್ ತನುವಂ ನಿಜೈಕ್ಯದೊಳ್
ಮನಮನಮರ್ದು ಲಿಂಗದೊಳಪೇಕ್ಷೆಯನತ್ಯಧಿಕ ಪ್ರಸಾದದೊಳ್|
ಘನಕೃಪೆಯಂ ಸಮಸ್ತ[ಸ]ಚರಾಚರದೊಳ್ ಸಮವೆತ್ತು ಲೋಕಪಾ
ವನಕರನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೪೦ ||

ಉ|| ಆಗಳೆ ಭಕ್ತನಾಗಳೆ ಮಹೇಶ್ವರನಾಗಳೆ ತಾಂ ಪ್ರಸಾದಿ ಮ
ತ್ತಾಗಳೆ ಪ್ರಾಣಲಿಂಗಿನೆಗಳಾಗಳೆ ತಾಂ ಶರಣಂ ವಚಸ್ಸಿನಿಂ|
ದಾಗಳೆ ಐಕ್ಯನೆಂದು ನೆಸದೆನ್ನದೆ ಸತ್ಯಶಿವೈಕ್ಯ ಸಂಗ ಸಂ
ಯೋಗವನೆಯ್ದುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೪೧ ||

ಉ|| ಮಾತಿನ ಜಾಣ್ಮೆಯಿಂ ವಿಧಿನಿಷೇಧ ವಿಧಂಗಳಿವೇಕೆ ಸುತ್ತಲ
ದ್ವೈತವನಾಡಿ ಮತ್ತೆ ಮದದಿಂ ಕ್ಷುಧೆ ನಿದ್ರೆಗಳುಗ್ರ ಬಾಧೆಯಂ|
ಘಾತಿಸಿಕೊಂಡು ಸತ್ತು ಸಲೆ ಪುಟ್ಟುವ ಖೂಳರನೊಪ್ಪುಗೊಂಬನೇ
ಭೂತಳದಲ್ಲಿ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೪೨ ||

ಉ|| ನಾಲಗೆ ತನ್ನೊಳೊಂದು ತನಗುಂಟೆನುತಂ ಮದಮುಚ್ಚರೈದು ದು
ಶ್ಶೀಲತಸಂಗಳಿಂದ ಪರತತ್ತ್ವಮೇ ತಾನೆ ನು ತಜ್ಞ ವೃತ್ತಿಯಿಂ|
ಕಾಲನ ಬಾಯ್ಗೆ ಬೀಳ್ವ ಭವರೋಗದ ಬಾರದ ಖೂಳ ದಿಟ್ಟರಂ
ಪಾಲಿಸೆ ಗೈವನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೪೩ ||

ಚಂ|| ದಿನಪತಿಗಂಧಕಾರವಲಂಗೆ ಹಿಮಂ ಸುರಪಂಗೆಡ ಸ್ವಧಾ
ವಸಧಿಗೆ ಕ್ಷುತ್ಪಿಪಾಸೆ ದಿವಿಜಾದ್ರಿಗೆ ಕಲ್ಮಷವೃತ್ತಿ ವಿಷ್ಣುವಾ|
ಹನನೆನಿಪಂಗೆ ಪನ್ನಗವಿಷಂ ಶರಣಂಗೆ ವಿನಾಶಮುಂಟುಯೆಂ
ಬನ ನುಡಿಗೆಳ್ವನೇ ಗುರುಗೋಹೇಶ್ವರ ಪಾದಪಯೋಜ ಪೂಜಕಂ || ೪೪ ||

---

೧೧. ನಿ, ೧೨. ಣಕೆ.

ಚಂ॥ ವಿಷವಮೃತಾನ್ನವಾಗಿ ಪಚಿಸಿದ್ದರೆ ನೋಡುವಡಂಧಕಾರ ಕ
ಲ್ಮಷವೆ ಬಿಸಿಲ್ಗೆ ಸಾಮ್ಯವೆನಿಸಿದ್ದರೆ ನಿದ್ರೆಯು ಮೂರ್ಛೆಯೊಳ್ಮನಂ।
ವಶಗತವಾಗದೆಚ್ಚರಿಕೆಯಿದ್ದರೆ ಮೆಚ್ಚುವನಂತುಟಪ್ಪ ಪೌ
ರುಷಗುಣವಿತ್ತನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೪೫॥

ಚಂ॥ ಗುದವದನಂಗಳಲ್ಲಿ ದಿವ ರಾತ್ರೆಗಳಲ್ಲಿ ಸುಖಸುಖಂಗಳಂ
ಬೊದವಿಕೆಯಲ್ಲಿ ಜಾಗರಣೆ ನಿದ್ರೆಗಳಲ್ಲಿ ವಿಷಾಮೃತಂಗಳಾ।
ಸ್ಪದಯುತದಲ್ಲಿ ಭೇಧವಿರುತಂ ಮಿಗೆ ತಾನೆ ನಿಜೈಕ್ಯವೆಂಬ ದು
ರ್ವಿದರೊಡನಿಪ್ಪನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೪೬॥

ಉ॥ ಕೆಚ್ಚಲ ಉಣ್ಣೆ ಪತ್ತಿ ನೆಱೆ ನೆತ್ತರನಲ್ಲದೆ ಪೀರ್ದು ಬಲ್ಲುದೇ
ನಚ್ಚಿನಿಪಾಲ ವಿಲ್ಲದವ ಸೇವೆಯಿಂ........
ದಚ್ಚಿಗ ಮುಪ್ಪಿದೆಂದು ತಿಳಿವಿಂ ಶಿವಯೋಗ ಮಹಾಸುಧಾಬ್ಧಿಯಂ
ಮಚ್ಚಿನಲೀಂಟುವಂ ಗುರುಗೋಹೇಶ್ವರ ಪಾದಪಯೋಜ ಪೂಜಕಂ ॥೪೭॥

ಚಂ॥ ಮರಗಿಡುವಳ್ಳಿಗುಲ್ಮ ಪೊಸಪುಲ್ಲಲಮಂ ಪರಿದಂತು ತಂದು ಸೌ
ವರಿಸಿ ಸಜೀ೧೩ವ ಧ್ಯಾನಚಯಮಂ ಮಿಗೆ ಮರ್ದಿಸಿ ಕುಟ್ಟಿ ಸುಟ್ಟು ನಿ।
ಷ್ಕರುಣನಿದಿನಿಂತು ಲಿಂಗದ ನೆವಂಗಳಲುಂಡು ವಿನಾಶವಪ್ಪನೇ
ನರಕದೊಳಿಪ್ಪನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೪೮॥

ಉ॥ ಸ್ಥಾವರ ಜಂಗಮಸ್ಥಿತಿಯ ಜೀವಗಳಂ ನೆಱೆ ಕೊಂದುತಿಂದು ತಾಂ
ಸಾವವನಲ್ಲ ವಸ್ಸದಯ ಅಚ್ಚಿನ ಪೆಚ್ಚಿದ ಬೇಗೆಯಲ್ಲಿ ತಾಂ।
ಬೇವವನಲ್ಲ ವಿಭ್ರಮಿಸಿ ತೋರ್ಪ ಸಮಸ್ತವನನ್ಯ ಬುದ್ಧಿಯಿಂ
ಭಾವಿಪನಲ್ಲ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೪೯ ॥

ಚಂ॥ ಅಡವಿಯ ಪತ್ರೆಯುಂ ಮಡುವಿನಗ್ಗಣಿಯುಂ ಬಹುಧಾನ್ಯಪಾಕಮಂ
ಗಿಡುವಿನ ಪುಷ್ಪವಿಂತೆನಿಸುವನ್ಯವನಿತ್ತಡದಕ್ಕೆ ತತ್ಫಲಂ।
ಬಿಡದೊಡಗೂಡುಗಲ್ಲದೆನಗಿಲ್ಲೆನುತರ್ಪಿಸಿ ತನ್ನನೆ [ಲಿಂಗ ಕೆಂ
ದೊಡರಿಪ ೧೪ ನೈಕ್ಯವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೫೦॥

ಚಂ॥ ಮಿದಿಮಿದಿದುಂಡು ತುಪ್ಪತೊಗೆಯೋಗರಮಂ ಕಡೆಯಲ್ಲಿ ಸತ್ತು ಪೋ
ಪುದು ಮತವಲ್ಲಮೆಂದಱಿದು ಮದ್ಗುರು ಕಾಣಿಸಿದಂತರಂಗದೊಳ್।
ಸದಮಲ ಯೋಗಿಯಾಗಿ ಪರಮಾಮೃತಮಂ ದಣಿಯುಂಡು ನಿತ್ಯಸಂ
ಪದ ತತಿಯಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥ ೫೧ ॥

---

೧೩. ೧೪. ತನಂ। ಗೊಡರಿಪ್ಪ.

ಉ|| ಎತ್ತಣದಾಗಿಯೆತ್ತಣದಹಂ ಮಮಕಾರತೆಯೆತ್ತಣೀ ಪ್ರಪಂ
ಚಿತ್ತಣಿದೆತ್ತ ಮೆನ್ನೊಳಿಡೆಗೊಂಡುದೆನುತ್ತ ದಱಿಂವ ಮೂಲಮಂ |
ಕಿತ್ತುಬಿಸುಟ್ಟು ಸದ್ಗುರುಮತ ಸ್ಥಿತಿಯಿಂ ನಿಜದಲ್ಲಿ ನಿಲ್ವ ಸ
ದ್ವರ್ತನನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೫೨ ||

ಉ|| ಪುಟ್ಟಿಸಮಸ್ತವಾದ ಸಚರಾಚರಜೀವಗಳೈದೆ ಸಾವುದೇ
ಕಟ್ಟಣೆಯಪ್ಪುದಾದೊಡವರಂತೆ ಸದಾಶಿವಲಿಂಗವಂತನೇಂ |
ಪುಟ್ಟುವನೇ ಮಗುಳ್ದು ನೆಱೆ ಪೊಂದುವನೇ ಭವ ಜೀವರಂತೆ ತಾಂ
ತೊಟ್ಟನೆ ತೊಳಲ್ವನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೫೩||

ಉ|| ಇವರ ಕೃತಂಗಳೊಂದೆನಿಸದಿದ್ದುದಱಿಂ ಭವಬಂಧವಾಯ್ತಲಾ
ಶಿವಯನುತಂ ಮನೋವಚನಕಾಯ ಕೃತಂಗಳ ನೊಂದುಮಾಡಿ ತೋ- |
ಱುವ ಗುರುಮಾರ್ಗದಿಂ ನಡೆದು ತತ್ವಮಮಂ ನೆಱೆನೀಗಿ ಭಕ್ತಿಯಿಂ
ದವನಿಯೊಳೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೫೪||

ಚಂ|| ಮಱೆದಡೆ ತೋಱಲೀಯದ ಮಹಂ ಭ್ರಮ ನಿಶ್ಚಯಮೆಂಬಮಾಳ್ಕೆಯಿಂ
ದಱಿವಡೆ ಪಾಱ ತಾಯದ ಮಹಂಭ್ರಮ ನಿರ್ಣಯದಿಂದೆನುತ್ತಲಾ |
ವಱಿವೆರೆ ಮಾಣ್ದುನಿಂದಱುವಿನೊಳ್ ನೆಲೆಗೊಂಡು ಗುರುಪ್ರಸಾದಿಂ
ನೆಟ್ಟನಿಜಾವಾದವಂ ಗುರುಗೊಹೇಶ್ವರ ಪಾದಪಯೊಜ ಪೂಜಕಂ ||೫೫||

ಉ|| ಪುಟ್ಟುವ ಸಂಚಮಂ ಮಗುಳ್ದು ಪೊಂದುವ ಜೀವಿಪ ಸಂಚಸೂತ್ರಮಂ
ನಿಟ್ಟಿಸಿ ಕಾಣದಜ್ಞ ತನಗೇಕೆನುತಂ ನಿಜಜೀವ ಮರ್ಮಮಂ |
ನೆಟ್ಟನೆ ಕಂಡು ನಿತ್ಯಸುಖಿಯಾಗಿ ನಿರಾಮಯನಾಗಿ ಮುಕ್ತಿಯಂ
ಮುಟ್ಟುವ ಚಿಹ್ನಮಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೫೬||

ಉ|| ಜೀವನ ಸಂಚಮಂ ಮೊಗಸಿ ಕಾಣದೆ ಹೋದ ಜಡೋಪಚಾರದಿಂ
ಸಾವುದು ಮಾಣ್ದುದೇ ಸುಡಲಿವೇತರ ಕೃತ್ರಿಮಮೆಂದು ಬಿಟ್ಟು ತ |
ಜ್ಜೀವನ ಮರ್ಮಮಂ ತಿಳಿದು ನಿರ್ಭಯ ನಿತ್ಯ ಶರೀರಿಯಾಗಿ ಸಂ
ಜೀವಿಸ ಬಲ್ಲವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೫೭ ||

ಉ|| ಶೂರನಾದರ್ ವಿಚಾರಿಸಿ ನಿಜೇಂದ್ರಿಯಮಂ ತಱಿದಿಕ್ಕಲಾರ್ಪವಂ
ಧೀರನದಾರ್ ನಿರೀಕ್ಷಿಸುವಷ್ಟ ಮದಂಗಳನಟ್ಟಿ ಸುಟ್ಟವಂ |
ವೀರನದಾರ್ ದಿಟಕ್ಕೆ ಮನಮಂ ಮುರಿದಿರ್ದವನೆಂದು ನೋಡಿ ನಿ
ರ್ಧಾರಿಸಿ ಕಂಡವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೫೮ ||

ಚಂ|| ಕಡೆಯದೆ ಪಾಲೊಳಂ ಘೃತಮನಲ್ಲದೆ ಸುಮ್ಮನಿರಲ್ಕೆ ಪಾಲ್ಗಿಟ
ಕ್ಕೊಡೆಯದೆ ಕಾಣ್ಬುದೇ ತುದಿಗನಿತ್ಯಮುದೀತನುಮೆಂದು ಭಕ್ತಿಯಿಂ |
ಪಿಡಿಯದೊಡೀ ಶರೀರಮುಳಿದಿರ್ಪುದೆ ಭಾವಿಸಲೆಂದು ಕಾಯಮಂ
ಕೆಡಿಸದೆ ನಿಲ್ವವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೫೯ ||

ಚಂ|| ಕನವರಿಸಿ ಪ್ರಳಾಪಿಸುವನಂ ಪೊಡೆದೆಬ್ಬಿಸುವಂತೆ ಮಾಯೆಯಿಂ-
ದನುದಿನಮಾವಗಂ ಭ್ರಮಿಸುತಿಪ್ಪವನಂ ನಿಜಧರ್ಮವರ್ಮ ಸೂ- |
ಚನೆಯನಮರ್ಚಿ ತದ್ಭ್ರಮೆಯನೈದೆ ನಿವಾರಿಸಿ ತತ್ಸುಪ್ರೈಕನೆಂ-
ದೆನಿಸುವನಾತನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೦ ||

ಚಂ|| ನಿಜಕರಣೇಂದ್ರಿಯ ಪ್ರತತಿಗಕ್ಕಟ ಸೇವಕನಾಗಿ ಜೀವರಿಂ
ತಜಿಗಿಜಿಯಾಗಿ ಕೆಟ್ಟುದದು ಸಾಕೆನುತಾ ಕರಣಂಗಳಿಂದ್ರಿಯ |
ವ್ರಜವತಿ ಭೃತ್ಯಭಾವನೆಯೊಳಪ್ಪವೊಲೊಪ್ಪುವ ರಾಜಯೋಗದಿಂ
ತ್ರಿಜಗದೊಳೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೧ ||

ಉ|| ನ್ಯಾಸದಲಂಗನ[೧೫] ಬಹಳ ದೇವತೆಯೆಂದು ಮಗುಳ್ದು[೧೬] ಕಾಯಮಂ
ಪೇಸಿಕೆಯೆಂದು ಕಲ್ಪಿಸುವ ಕರ್ಮಠನಲ್ಲ ಗುರುಪ್ರಸಾದದಿಂ- |
ಭಾಸುರ ಕಾಯಮಂ ಸಹಜ ಶಾಶ್ವತಲಿಂಗ ಶರೀರಿಯಾಗಲ
ಭ್ಯಾಸಿಸಿ ತೋಱುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೬೨||

ಉ|| ಆವಿಗೆಯಿಕ್ಕದೇಂ ಪಸಿಯ ಭಾಂಡದಲಟ್ಟುಣಲಾರ್ಗೆ ಶಕ್ಯ ಮೇಣ್
ಭಾವಿಸಿ ನೋ[೧೭]ಡಲಚ್ಚರಿಯ[೧೮]ನೈದಿದ ಭಕ್ತಿಯೊಳಂ ಪ್ರಸಾದಮಂ |
ಸೇವಿಸೆ ಸಾಧ್ಯಮೇ ಬಗೆವಡಿಲ್ಲೆನುತಂ ತಿಳಿದೈದಿ ಭಕ್ತಿಯಿಂ
ಪಾವನನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೩ ||

ಚಂ|| ಬರೆವರನೇಕ ಭಾವ ರಸ ಚಿತ್ರವನಲ್ಲದೆ ಬೆಱೆ ಜೀವಮಂ
ಬರೆವವರಿಲ್ಲಮಾಗಮದ ಪೇಳ್ಕೆಗಳಂದುಪದೇಶಮೆಂಬುದಂ |
ವಿರಚಿಪರಲ್ಲದೆಚ್ಚರೆನಗೀವವರಿಲವೆನುತ್ತಲೆಚ್ಚರಂ
ನೆರಪುವ ಬಲ್ಲಿದಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೪ ||

ಉ|| ಅಂಗವನಾವಗಂ ಬಿಡದೆ ನೋಡುವ ಮಾಡುವ ಭಕ್ತಿಯಿಂ ಬಹಿ
ಪ್ರಾಂಗದ ಕೃತ್ಯಮಂ ಕೆಡಿಸಿ ಸಜ್ಜಿವಯೋಗ ಸಮಾಧಿಯಿಂ ದಿಟಂ |
ಪಿಂಗಿಸಿಯಂತರಂಗದಜೀವಂ ಮಱೆವೆಂಬವನೀ ಪ್ರಕಾರದಿಂ
ಲಿಂಗವೆನಿಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೫ ||

---

೧೫. ಲಗ್ಗ, ೧೬. ಗುಳು. ೧೭. ಸಲೊ, ೧೮. ವ.

ಉ|| ಪಿಂಗದೆ ಮಂತ್ರಯೋಗ ಹಠಯೋಗ ಮಹಾಲಯಯೋಗ ರಾಜಯೋ
ಗಂಗಳನಳ್ತಿಯಿಂ ಸವೆದು ಸಾಧಕಭೇದಕ ಸಾಧ್ಯಸಿದ್ಧನೆಂ |
ಬಂಗ ಚತುರ್ವಿಧಕ್ಕೆ ನೆಲೆಯಾಗಿ ಸಮಸ್ತ ಪಿಕಾರ ದೋಷಮಂ
ಭಂಗಿಸಿದುತ್ತಮಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೬ ||

ಚಂ|| ಹೊರಗಣ ಕರ್ಮಮಂ ಮೊಗಸಿಮಾಡುವನೇ ಮಳಗುಳ್ಳ ಭಕ್ತಿಯಿಂ
ತೊಱವನೆನಟ್ಟಿಮಟ್ಟಿ ಶಿವಯೋಗ ಭವಾಮೃತ ಸುಪ್ರಸಾದ ಮಂ |
ಸುಱಿಯದೆ ಸೂರೆಯಾಗಿ ತಿಳಿಪಿಲ್ಲಿದೆಮೋಪನೆ ನಿತ್ಯಕಾಯದಿಂ
ಮೆಟ್ಟಿಯದೆಮಾಣ್ಬನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೬೭||

ಉ|| ಕ್ಷುತ್ತೃಷೆ ನಿದ್ರೆಯಂ ನಿಲಿಸಿ ನಿತ್ಯಮನೈದುವರೈದಿ ತಮ್ಮವ
ಸ್ಥಾತ್ರಯದೊಳ್ ತನುತ್ರಯ ಗುಣತ್ರಯದೊಳ್ ಸವೆದಿಕ್ಕದಾತ್ಮ ಬಿಂ |
ದುತ್ರಯಮಂ ಸುಷುಮ್ನೆಗೆ ನಿವೇದಿಸಿ ಪಾವನ ತತ್ಪ್ರಸಾದಮಂ
ಧಾತ್ರಿಯೊಳೊಪ್ಪುವಂ ಗುರುಗೊಹೇಶ್ವರ ಪಾದಪಯೋಜಪೂಜಕಂ || ೬೮ ||

ಉ|| ಪಳ್ಳದನೀರ್ ನಿರರ್ಥಗತಮಾಗುತಿರಲ್ ಕೆಱೆಗಟ್ಟಿ ಕಾಲ್ವೆಯಿಂ
ದೊಳ್ಪಿಹ ಮೇಲೆನಿಪ್ಪನೆಲದೊಳ್ ಬೆಳೆಗೊಂಭವನಂತೆ ಬಂದುವಂ |
ಮೆಲ್ಲನೆ ಕಟ್ಟಿ ಮಾರ್ಗತಿರಿಗಿಕ್ಕಿ ಸುಷುಮ್ನೆಯೊಳಾದ ಭೋಗವಂ
ಲಲ್ಲೆಯೊಳುಂಬವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೬೯ ||

ಉ|| ಬಿಂದುವಧೋಮುಖಕ್ಕಿಳಿವ ದುರ್ಗತಿ ತಾಂ ಭವಿಮಾರ್ಗವಿಸ್ಮೃತ||
ದ್ಬಿಂದುವದೂರ್ಧ್ವಗತಿಯನೈದಲದೇ ಶಿವಭಕ್ತಿ ಮಾರ್ಗಮಾ |
ಬಿಂದುವನಿಂತು ಮೇಲಣ ಸುಮುಮ್ನೆಗೆ ವೇಧಿಸಿ ಭಕ್ತಿಸಂಪದಾ
ನಂದವನೈದುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೭೦ ||

ಉ|| ಭಾವಿಸಲಂಧನುಂ ಹೆಳವನುಂ ಕಡುಗೂಡೆ ಗತಿಸ್ಥಿರಪ್ಪವೋಲ್ *
ಜೀವವ ಕಂಗಳಂ ನಡೆವಕಾದದ ಕಾಲ್ಗಳನೊಂದುಮಾಡುತಂ |
ತೀವಿ ಗುರೂಕ್ತಿಯಿಂ ತಿಳಿದು ಪಶ್ಚಿಮದಗ್ರ ಸುಷುಮ್ನೆಗಿಕ್ಕಿ ತಾಂ
ದೇವನೆನಿಪ್ಪ(ವ)ಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೭೧ ||

ಉ|| ಕಾಯಮೆ ಜೀವಮಾಗೆ(ಯೆ)ಸೆವಂಗಮೆಶಿಂಗೊಬ್ಬರವಾಗಿ ಸರ್ವಪಾ
ನೀಯಮೇ ವಾರಿಯಾಗಿ ಶಿವಭಕ್ತಿಯೆ ಧಾರುಣಿಯಾಗಿ ಶುದ್ಧಸು |
ಜ್ಞೇಯಮೇ ವೃಕ್ಷವಾಗಿ ಫಲಮೋ ನಿಜನಿತ್ಯ ಪದಾರ್ಥವಾಗಿ ಯಿೀ
ಕಾಯಕಮುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೭೨ ||

---

೬೯. ಸೂ ೭೦. ಗೆನ

ಉ|| ಜ್ಞಾನಮೆಯುಚ್ಚಕಿಚ್ಚು ತನುವೇ ನೆಱೆಕಟ್ಟಿಗೆ ಕರ್ಮಮೇ ಘಟ
ಸ್ಥಾನವನೂನಮಪ್ಪ ಮನವೇನವನೀತಮೆನಲ್ಕೆ ಯೋಗಸಲ್ ।
ತಾನೆನಲಾದ ತುಪ್ಪವಮೃತಂ ಮಿಗೆ ಭುಂಜಿಪ ಜೀವಮುಕ್ತನೆಂ
ದೀ ನಯಮುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೭೩ ||

ಉ|| ತೋರಶರೀರಮಂ ನಿಡವಸೂಕ್ಷ್ಮಶರೀರದೊಳಂತೆ ಸೂಕ್ಷ್ಮಶಾ
ರೀರವನಿಕ್ಕಿ ಕಾರಣಶರೀರದೊಳಾ ವಿಧದಿಂ ಗುರೂಕ್ತಿಯಿಂ ।
ಕಾರಣಕಾಯಮಂ ನಿರುಪಮಸ್ಥಿತ ಲಿಂಗದೊಳಿಟ್ಟು ತಾನೆ ನಿ
ರ್ಭಾರಕನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ || ೭೪ ||

ಉ|| ಸಂಧಿಸಿಕೂಡಿ ತತ್ವಮಸಿವಾಕ್ಯ ಪದಾರ್ಥವನಿಂತು ಸಚ್ಚಿದಾ
ನಂದ ವಿಧತ್ರಯಾಭಿಮತದೊಳ್ ನಿಗಳ್ದಾ ವಿಧದಿಂ ನಿರಂತರಂ ।
ಕುಂದದೆ ಕೂಡಿ ಕೂಟಮಳಿದಪ್ರತಿಮ ಪ್ರತಿಭಾ ಸ್ವರೂಪದಿಂ
ನಿಂಪ ನಿರಂಜನಂ ಗುರು ಗೊಹೇಶ್ವರ ಪಾದಪಯೋಜ ಪೂಜಕಂ || ೭೫ ||

ಚಂ|| ಕಳವಳ ಕಾಮ ಲೋಭ ಶಠೆ ಭೇದ ವಿಷಾದ ವಿಮೋಹ ಕಾಂಕ್ಷೆ ಸಂ
ಚಳಗುಣ ಚಿಂತೆ ಶೋಕ ಮದ ಮಚ್ಚರ ಭೀತಿ ರುಜಾದಿ ದೋಷಮಂ ।
ಕುಳಸಮವಾಗಿ[೭೦] ಸಂಹರಿಸಿ ತಾನೆನಿರಂತರ ನಿತ್ಯನಾಗಿ ನಿ
ರ್ಮಳತೆಯೊಳೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ| ೭೬ ||

ಉ|| ಆಶೆಯನಿಕ್ಕಿ ಅಟ್ಟಿ ದುರಿತಂಗಳನೋಡಿಸಿ ರೋಗವೆಂಬವಂ
ನಾಶವನೈದಿಸಟ್ಟಲವ ನಿದ್ರೆಯನಂದಿಸಿ ಮಿಕ್ಕಗಿಕ್ಕ ಸಂ |
ಕ್ಲೇಶವ [ಹೊದ್ದದೇ] ಸವರಿ ಸುಟ್ಟು ಸದಾ ಶುಚಿಯಾಗಿ ನಿಂದ ನಿ
ರ್ದೋಷವನುಳ್ಳವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೭೭ ||

ಉ|| ಕುಪ್ಪಸವಂ ವಿವರ್ಜಿಸುವನಂತೆ ಶರೀರವನುಜ್ಜಿತೋರ್ಪನಾ
ಕುಪ್ಪಸವಂ ಮಗುಳ್ದುತೊಡುವಂತೆ ಶರೀರವನಪ್ಪಿ ತೋರ್ಪನಾ |
ಕುಪ್ಪಸದಂತೆ ತತ್ತನು ವಶೀಕರಮಾಗಿರುತಿಪ್ಪುದೆಂದೊಡಂ
ತಿಪ್ಪ ಮಹಾತ್ಮನೊಳ್ಗುರು ಗೊಹೇಶ್ವರ ಪಾದಪಯೋಜ ಪೂಜಕಂ ||೭೮ ||

ಉ|| ಚಿಂತೆಗಳಿಲ್ಲ ನಷ್ಟಮವಿಲ್ಲದ ಭೀತಿಗಳಿಲ್ಲದುದ್ಭವ
ಭ್ರಾಂತಿಗಳಿಲ್ಲದನ್ಯಭವಿ ಭಾವನೆಯಿಲ್ಲದ ಶಂಕೆಯಿಲ್ಲದಾ |
ವ್ಯಂತತೆಯಿಲ್ಲದಂಗಗುಣವಿಲ್ಲದ ಪೆರ್ಮೆಯೊಳೊರ್ಪು ತಿರ್ಪ ಕಾ
ಲಾಂತಕನೆಮ್ಮ ಸದ್ಗುರು ಗೊಹೇಶ್ವರ ಪಾದಪಯೋಜ ಪೂಜಕಂ ||೭೯ ||

೭೦ ಮುಹಾ * ಈ ಪಾದದಲ್ಲಿ ಒಂದು ಲಘು ಅಧಿಕ

ಉ|| ಆಗುಳಿ ಕೆಮ್ಮು ಬಿಕ್ಕು ಮಲಮೂತ್ರವಿಸರ್ಜನೆ ಮೂರ್ಛೆಯುದ್ಗರಂ
ತೇಗೆವೆಯಾಟವಾಲಿಗಳ ಸಂಚಳ ರೇಚಕ ಪೂರಕಂಗಳಿಃ |
ದ್ವೋಗಮಿವಾದಿಯಾದ ತನುಕಂಟಕವೆಂಬ ವಿಕಾರಕೋಟಿಯುಂ
ನೀಗಿದ ಯೋಗಿ ಮದ್ಗುರು ಗೊಹೇಶ್ವರ ಪಾದಪಯೋಜ ಪೂಜಕಂ ||೮೦||

ಚಂ|| ದುರಿತ ಕುಳೋಗ್ರ ವೃತ್ತಗಜ ವಾಜಿ ವಿನಿಷ್ಠುರ ವಸ್ತುಕಾದ್ರಿ ಜ
ಜ್ವರಿತ ಮಹಾಪಟು ಪ್ರಬಲ ಪಂಚಮುಖಾಮರ ಲೋಕಪಾಲರಾ
ವರಸುಕೃತಾಬ್ಧ[೨೨]ವಾರ್ಧಿಪರಿವರ್ಧನ ಭಾಸ್ಕರ ಪೂರ್ಣ ಚಂದ್ರಮಂ[೨೩]
ಧರೆಗೆನಲೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೮೧||

ಉ|| ಭೀಕರದುಷ್ಟ ದೋಷ ಘನಕಾನನ ಮೇಘನಿಕಾಯ ಸಂಹರೋ
ದ್ರೇಕ ಲಸದ್ಗುರುಸ್ಮರಣ ಪಾಟನ ಪಾವಕ ತೀವ್ರ ಮಾರುತಂ |
ಶೋಕ ತಮೋಭುಜಂಗದಳನೋದ್ಭವ ಭಾಸ್ಕರ ಪೂರ್ಣನಾಶನಂ
ಲೋಕದೊಳಾವಗಂ ಗುರು ಗೊಹೇಶ್ವರ ಪಾವಪಯೋಜ ಪೂಜಕಂ ||೮೨||

ಉ|| ಇಲ್ಲದ ಕುತ್ತಮುಂ ಬಗೆಪಡಿಲ್ಲದ[೨೪] ಮಿಥ್ಯವನುಂಟುಮಾಡುವಂ
ತಿಲ್ಲದ ಮಾಯೆಯುಂ ಗೆಲುವಡನ್ಯರನರ್ಚಿಸಲೇಕೆನುತ್ತ ತ।
ನ್ನಲ್ಲಿಯೆ ತಾ ನಿರೀಕ್ಷಿಸುತಲಿ(ಯಿ)ಲ್ಲದ ಮಾಯೆ(ಯು) ನಿಲ್ಲದಂತೆ ಮಾ
ಳ್ಪಲ್ಲಿ ಬಲಾಢ್ಯನೈ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೮೩||

ಉ|| ಕಾರಣ ಮೂಲಮುಂ ಕಡೆಗೆ ಕಂಡವನಾದರೆ ಮತ್ತೆ ಮಾಡಿ ಸಂ-
ಸಾರದೊಳಿಪ್ಪನೇ ಸುಡಲವೇತರ ಖಿಲ್ಲತನಂಗಳೆಂದು ನಿ |
ರ್ಧಾರಿಸಿ ಕಂಡು ಸಂಸ್ಕೃತಿ[೨೫]ಯು ನೈದಿಪನಾಶಿಸಿ ಕಾರಣಕ್ಕೆ ತಾಂ
ಕಾರಣನಾದವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೮೪||

ಚಂ|| ಮನನವೆ ಚಿಂತೆ ಚಿಂತಿಸುವುದೇ ಮಮಕಾರತೆಯನ್ಯ ತತ್ತ್ವ ಮೋ
ಹನಮೆ ಮದಂ ಮದಸ್ಥಿತಿಯೆ ಮಚ್ಚರವಾ ಮದ ಮಚ್ಚರಂ ಪುನಃ |
ಪುನರಪಿ ದುಃಖಮೆಂದರಿದು ಕಾರಣ ಮೂಲ[೨೬]ವಿದೇಯೆನುತ್ತಲಾ
ಮನವನೆ ಮರ್ದಿಪಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೮೫||

ಚಂ|| ಕರಣ ಮುಖಕ್ಕೆ ಕಾಣಿಸುವುದೆಲ್ಲ[೨೭]ವಿಚಾರಿಸಿ ಮಿಥ್ಯೆಯೆಂದು ಸ-
ದ್ಗುರು ಮತವಿಂತಿರಲ್ಪೞಿದದಪ್ಪುದಿದಲ್ಲಹುದೆಂಬ ಭಾವನೋ |
ಚ್ಚರಣೆಯು ಪುಣ್ಯಪಾಪವಿದನಂಜುವುದಜ್ಞತೆಯೆಂದು ನಿಶ್ಚಯ
ಸ್ಮರಣೆಯುಲೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೮೬||

---

೨೨. ಭೀ, ೨೩. ನಂ, ೨೪. ತಿಡೆಲ್ಲಿಯ. ೨೫. ಸೌಶೃತಿ, ೨೬. ವೆಥೆ, ೨೭. ವೆ,

ಉ॥ ತಾಮಸಬುದ್ಧಿಯೊಳ್ ಸಕಳ ನಿಷ್ಕಳದಂತೆ ಬಹುಪ್ರಕಾರದಿಂ
ಭ್ರಾಮಕವಾಗಿ ತೋಱಿಸುವ ತೋರ್ಕೆ ವಿಚಾರಿಸಿ ಮಿಥ್ಯೆಯೆಂದೆನು।
ತ್ತಾ ಮದಭಾವಮಂ ತೊಱೆದು ತಾನಱಿದಾಶ್ವರಿಯ ಸ್ವಭಾವ ನಿ
ಸ್ಸೀಮೆಯಲಿಪ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೮೭॥

ಚಂ॥ ಮನಸಿಜನೆಂದು ಕಾಮನ ಪೆಸಿರ್ಗೆಡವಕ್ಕಟವೀಮನಸ್ಸಿನ
ಲ್ಮನು ಮುನಿಗಳ್ ವೃಥಾ ಸ್ಮರನನೇಕೆ ವಿರೋಧಿ[೧೮]ಸಲೆಂದು ಪೇಳ್ವರಾ।
ಮನವಿದೆಕಾಮನೆಂಬರೆನಿತಾಗಳಿದೇತಱ ಯುಕ್ತಿಯೆಂದು ತ
ನ್ಮನವನೆ ಮರ್ದಿಪಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೮೮॥

ಚಂ॥ ಮನವಿದು ತಾನಿದ್ದೈ ಮರುಳನ(ಂತಿರೆ) ವೋಲ್[೧೯] ಪ್ರತಿಭಾ ಸ್ವರೂಪಮೋ
ಘನಗಜದಾಕೃತಿ ಪ್ರಭೆಯೊ ಮೇಣ್ ಸಸಿಯಂ ಬಗೆಯಲ್ಕೆ ಸಾಧ್ಯಮೆಂ।
ದೆನುತಲಡರ್ದು ತನ್ಮನವನೇ ಮನದಿಂ ಮುಱಿದಾ ಮನಸ್ಸ ಲೇ[೨೦]
ಸೆನುತಿರ[೨೧]ಲಾರ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೮೯॥

ಉ॥ ಪೆಕ್ಕಳದಿಂದಿರ್ಜ ಸಕಲ ಭ್ರಮೆಯಂ ದಿಟದಂತೆ ಕಂಡು ಮುಂ
ದಿಕ್ಕುವ ತನ್ನಧೂರ್ತ ಮನವೇ ಪಗೆಯೆಂದು ಮನಸ್ಸನೆಲ್ಲವಂ।
ಮುಕ್ಕಿ ನಿಜೈಕ್ಯ ನಿತ್ಯತನುವಾಗಿ ನಿರಂತರ ವೀರಶೈವ ನಾ
ಮಕ್ಕೆಡೆಯಾದವಂ ಗುರುಗೋಹೇಶ್ವರ ಪಾದಪಯೋಜ ಪೂಜಕಂ ॥೯೦॥

ಚಂ॥ ವರಗುಣತುಂಗ ಸದ್ಗುರು ಪದಾಂಬುಜ ಭೃಂಗ ಸಮಸ್ತ ಮಾಯಿಕೋ-
ತ್ತರ ಭಯ ಭಂಗ ನಿತ್ಯ ಸುಖ ಸಂಗ ನಿರಂಜನಲಿಂಗ ಪಾಪಸಂ-।
ಹರ ವಿಮಳಾಂಗನೆಂದು ನಲವಿಂದೊಲವಿಂ ಜನಮೆಲ್ಲ ಕೀರ್ತಿಸು
ತ್ತಿರೆ ಕರವೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೯೧॥

ಉ॥ ಸಾಧಕ ಸಾಧ್ಯ ಸಿದ್ಧವೆನಿಪ ತ್ರಿವಿಧ ಸ್ಥಳ ಭಕ್ತಿಯೆಂದು ಸಂ
ಬೋಧಿತ ಮಾದುದೈದೆ ಧನಮಂ ತನುವಂ ಮನಮಂ ದಿಟಂ ನಿಜೋ।
ಪಾದಿಯೊಳಿತ್ತು ಜಂಗಮ ಲಸದ್ಗುರು ಲಿಂಗದೊಳಂತೆ ಗೈದು ಸ
ರ್ವಾಧಿಕನಾದವಂ ಗುರು ಗೊಹೇಶ್ವರ ಪಾದಪಯೋಜ ಪೂಜಕಂ ॥೯೨॥

ಚಂ॥ ಧನವನೆ ಜಂಗಮಕ್ಕೆ ಸವೆವಂ ತನುವಂ ಗುರು ಪೋದ ಮಾರ್ಗ ವ
ರ್ತನೆಯೊಳೆ ತೀರ್ಚುವಂ ಮನವನೇ ನಿಜಲಿಂಗದೊಳಿಕ್ಕಿ ಮುಕ್ಕುವಂ।
ತನಗಱ[೨೨]ವಿಲ್ಲದಂತೆ ಬಯಲಾಗಿ ತನುತ್ರಯವಿಲ್ಲದೊಪ್ಪುವಂ
ಘನಮಹಿಮಾಧಿಕಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ॥೯೩॥

---

೧೮. ರಚಿ, ೧೯. ಮೋ, ೨೦. ನೇ, ೨೧. ಸಿನತಿನ ೨೨ ಳು, (ಕ?)

ಚಂ|| ಕರತಳದಿಷ್ಟಲಿಂಗವನನಾರತವರ್ಚಿಸಿ ಭಕ್ತನಾಗಿ ಭಾ
ಸುರತರ ಪ್ರಾಣಲಿಂಗವವಧಾನದೊಳಂ ನೆಱೆಯುಕ್ತನಾಗಿ ಬಂ।
ಧುರತೆಯ ತೃಪ್ತಿ ಲಿಂಗಸಮಸಂಗತಿಯಿಂ ಮಿಗೆ ಮುಕ್ತನಾಗಿ ಗೋ
ಚರಿಸುವ ನಿರ್ಮ್ಮಳಂ ಗುರು ಗೊಹೇಶ್ವರ ಪಾದಪಯೋಜ ಪೂಜಕಂ ||೯೪||

ಉ|| ಬೇಡುವನಲ್ಲ ಬೇಡದೊಡನಾಯಾಸದಿಂ ಮಿಗೆ ಬಂದ ವಸ್ತುವಂ
ನೋಡುವನಲ್ಲ ಕ್ಷು*ತ್ತೃಷೆಯ ಬಲ್ಮೆಗ ನಲ್ಮೆಗೆ ಭೋಜನಂಗಳಂ।
ಮಾಡುವನಲ್ಲ ಕಾವಲವರಂತೆ[೩೩]ಮದಸ್ಥಿತನಾತ ನಿದ್ರೆಯಿಂ
ಕೂಡುವವನಲ್ಲ ಮದ್ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೯೫||

ಚಂ|| ಧರೆ ಜಲ ಕಿಚ್ಚು ಗಾಳಿ ಗಗನಾತ್ಮನೆನಿಪ್ಪ ಷಡಂಗ ಷಡ್ಗುಣೋ
ತ್ಕರದಸು ಮುಟ್ಟಿನೋಡೆ ಬಯಲಾಗಿರುತಿಪ್ಪುದೆ ಮೇಣ್ ಮರಿಚಿಕಾ।
ಸರನಿಧಿಯಂತೆ ತೋರ್ಪಡೆ ವಿಚಾರಿಸಲಾತನೆ ಷಟ್‌ಸ್ಥಲಾಖ್ಯನು
ರ್ವರೆಯೊಳನಾರತಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೯೬||

ಚಂ|| ನುಡಿದುದೆ ಮಂತ್ರ ವೀಕ್ಷಿಸಿದುದೇ ವರದೀಕ್ಷೆ ಯಥೇಷ್ಟ ವೃತ್ತಿಯಿಂ
ನಡದುದೆ ಯೋಗ[೩೪]ಮುಂ ಪಡೆದುದೇ ಪರಮಾರ್ಥತೆ ಸೋಂಕಿತೇ ಸುಖಂ।
ಪಿಡಿದುದೆ ಮುಕ್ತಿ ಮೆಟ್ಟಿದುದೆ ಪಾವನವಾಗಿ ಜಗದ್ಧಿತಾರ್ಥದಿಂ
ಪೊಡವಿಯೊಳೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೯೭||

ಚಂ|| ಗಗನದ ಗಾಳಿಯೊಳ್ನೆಗೆದ ಗಾಳಿಯ ತೇಜದ ಪೋಲ್ಸತೇಜದೊಳ್
ಪೊಗಸಿದ ಶೈತ್ಯದೊಳ್‌ಯುಳವ[೩೫]ಶೈತ್ಯದ ಕರ್ಪುರದಂಗ ಪಿಂಡದೋಲ್।
ಸೊಗಸುವ ಪಂಚಭೂತ ತನುವೆಂಬ ಪೊಗಳ್ತೆಗೆ ತೋಱೆ ತೊಱೆಸಂ
ಬಗೆಯಿ ನಿಜಾಂಗವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೯೮||

ಚಂ|| ನೆಲನಪೊಲಲ್ಲ ಪಿಂಡತನುವಪ್ಪುವಿನೋಲ್ ದ್ರವದೇಹಿಯಲ್ಲ ವಾ[೩೬]
ನಲನಪೊಲುಷ್ಣಕಾಯ ಮನುವಲ್ಲ ಸಮೀರಣನಂತೆ ಸಂತತಂ।
ಚಲಪ ಶರೀರಿಯಲ್ಲಮವನೊಯ್ಯನೆ ಜೀರ್ನಿಪ ತಾಂ ಮರೀಚಿಕಾ
ಜಲದಪೊಲೊಪ್ಪುವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೯೯||

ಚಂ|| ಉಸುರೆಡೆಯಾಟಮೇಂ ಮಱೆದು ಕೇವಲ ಕುಂಭಕಮಾಗಿನಿಲ್ವೊಡಂ
ಮಸದಡಿಯಿಟ್ಟೊಡಲ್ಲಿ ಸಿನೆ ಪಚ್ಚೆಯ ಚಿನ್ನಮದಿಲ್ಲದಿಪ್ಪಡಂ।
ಶಶಿರವಿ ಪಾವಕ ಪ್ರಭೆಯೊಳೀಕ್ಷಿಸೆ [ತ್ರ]ಸ್ನೆಳಲಲ್ಲಿಮಾದೊಡಂ
ಪೆಸರ್ಗೊಳಲಾತನೇ ಗುರುಗೊಹೇಶ್ವರ ಪಾದಪಯೋಜ ಪೂಜಕಂ ||೧೦೦||

---

೩೩ ಕಾಲವಡ * 'ಕ್ಷು' ಗುರುವಾಗಬೇಕು, ಹಿಂದಿನದೂ ಲಘುವಾಗಬೇಕು. ಆದರೆ ಹಾಗಿಲ್ಲ. ೩೪. ಯಾ, ೩೫. ಲೆವಿ. ೩೬. ವೊಲ್.

ಉ|| ಓಜೆಯಿಲೋದುವರ್ಗೆ [ಸು]ವಿವೇಕಿಸುವರ್ಗೆ[ಪರೊಳ್ಪದ]ರ್ಥಮಂ
ರಾಜಿಸಿ ಕಾಣ್ಬವಗೆ ಸುಖಮಂ ಪಡೆವರ್ಗೆ ಸುಸಾಧ್ಯಮಾಗಲುಂ |
ಪೂಜಕನಾಯುದಿಂದೆ ಶತವೃತ್ತಮ[ನ]ರ್ಥಿಸಿ ಪೇಳ್ದನಂತವಂ
ಯೋಜಿಸಲಾರ್ಪವಂ ಗುರುಗೊಹೇಶ್ವರ ಪಾದಪಯೋಜ ಪೂಜಕಂ|| ೧೦೧ ||

★ ಗು. ಅ. ಶಿವಲಿಂಗಯ್ಯ

ವರಕವಿ ಹುಯಿಲಗೋಳ ನಾರಾಯಣರಾಯರು

ಕೋಟಿ ಕೋಟಿ ಹೃದಯಗಳನ್ನು ಮಿಡಿದ "ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು" ಗೀತದ ಕರ್ತೃ ಹುಯಿಲಗೋಳ ನಾರಾಯಣರಾಯರು, ಕನ್ನಡಿಗರ ಹೃದಯದಲ್ಲಿ ಅವಿಸ್ಮರಣೀಯವಾಗಿ ನೆಲೆಸಿದ್ದಾರೆ. ಕನ್ನಡದ ಸಾರಸರ್ವಸ್ವವನ್ನು, ಹಿರಿಮೆಯನ್ನು ಗರಿಮೆಯನ್ನು, ಸಂಸ್ಕೃತಿಯನ್ನು, ಜನಜೀವನವನ್ನು, ಸಂಪತ್‌ಸಮೃದ್ಧಿಯನ್ನು ಕನ್ನಡಿಗರೆದುರು ಈ ಒಂದೇ ಒಂದು ಕವನ ಚಿತ್ರವತ್ತಾಗಿ ಹಿಡಿದು ನಿಲ್ಲಿಸಿ ಅವರನ್ನು ಪುಳಕಿತಗೊಳಿಸಿತು; ಸೆಳೆಮಿಂಚಿನಿಂದ ಸೆಳೆದು ಅವರನ್ನು ಅಚ್ಚರಿಗೊಳಿಸಿತು. ಭವ್ಯ ಕನ್ನಡ ನಾಡಿನ ಕಲ್ಪನೆಯನ್ನು ಅವರಿಗೆ ಮತ್ತೊಮ್ಮೆ ತಂದುಕೊಟ್ಟಿತು. ಇಂಥ ಚೆಲುವ ಕನ್ನಡ ನಾಡಿನ ನಿರ್ಮಾಣಕ್ಕೆ ದುಡಿಯಲು ಕನ್ನಡಿಗರನ್ನು ಪ್ರೇರಿಸಿತು; ಬಡಿದೆಬ್ಬಿಸಿತು. ನಿಜ, ಇಂಥದೊಂದು ಅಪೂರ್ವವಾದ ಕವನವನ್ನು ಕವಿ ರಚಿಸಿದುದು ನಿಜವಾಗಿ ಒಂದು ಯೋಗಾಯೋಗವೇ ಆಗಿರುವುದು. ಬೆಳಗಾವಿನಲ್ಲಿ ೧೯೨೪ ರಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನ ಕಾಲಕ್ಕೆ ಹಾಡಲು ಕನ್ನಡದ ಗೀತವೊಂದು ಬೇಕೆಂದು ಸ್ವಾಗತ ಸಮಿತಿಯವರು ಪ್ರಕಟಿಸಿದರು. ನಾರಾಯಣರಾಯರಿಗೆ ತಾವೂ ಏಕೆ ಕವನ ಕಳಿಸ ಬಾರದು ಎಂದು ಮನಸ್ಸಿನಲ್ಲಿ ಹಂಬಲ. ಆದರೆ ನಾನಾ ಎನ್ನುವ ಘನ ಪಂಡಿತರಿರುವಾಗ ತಾನೇಕೆ ಯತ್ನಿಸಬೇಕು! ಅದರಲ್ಲಿ ಯಶ ದೊರತೀತೆ ಎಂಬ ಶಂಕೆ. ಆದರೆ ಹೃದಯದ ಹಂಬಲವೇ ಬೇರೆ! ಈ ಬಗೆಯ ವಿಚಾರತಂದ್ರಿಯಲ್ಲಿರುವಾಗ ಅವರು ಮಲೇರಿಯಾ ಜ್ವರದಿಂದ ನರಳತೊಡಗಿದರು. ಸ್ವಭಾವತಃ ದೈವಭಕ್ತರಾದ ಅವರು ಈ ಜಾಡ್ಯ ದಲ್ಲಿಯೂ ಹಾಸಿಗೆಯ ಮೇಲೆ ಇದ್ದರೂ ದೇವರಧ್ಯಾನದಲ್ಲಿ ನಿರತರಾಗಿದ್ದರು. ಗದುಗಿನ ವೀರನಾರಾಯಣನ ಭಕ್ತರಾದ ಅವರು ಹೀಗೆ ಒಮ್ಮೆ ಧ್ಯಾನನಿರತರಾದ ಸಂದರ್ಭದಲ್ಲಿ "ಉದಯವಾಗಲಿ" ಪದವೊಂದು ಅವರಲ್ಲಿ ಸ್ಫುರಿಸಿತು. ಇದೇನು ಎಂದು ಅವರು ಮೊದಲಿಗೇ ಅಂದುಕೊಂಡರು. ಈ ಸ್ಫುರಣೆಯಲ್ಲಿ ವೀರನಾರಾಯಣನ ಒಂದು ಸಂಕೇತವಿದೆ ಎಂದುಕೊಂಡರು. ಈ ದೈವೀ ಸಂಕೇತದಿಂದಾಗಿ ಅವರು "ನಮ್ಮ ಚೆಲುವ ಕನ್ನಡ ನಾಡು" ಎಂದು ಅದನ್ನು ಪೂರೈಸಿದರು. ಕರ್ನಾಟಕ ಸಂಸ್ಕೃತಿ, ಜನಜೀವನ, ಪ್ರಾದೇಶಿಕ ವಿಸ್ತಾರ ಇತ್ಯಾದಿಗಳನ್ನು ತಮ್ಮ ಭವ್ಯ ಕಲ್ಪನೆಯಿಂದ ಹೆಣೆದು, ಈ ಕವನ ಕರ್ನಾಟಕದ ವೈಶಿಷ್ಟ್ಯಗಳನ್ನು ಒಳಗೊಳ್ಳುವಂತೆ ಪವಣಿಸಿದರು. ಅದನ್ನು ತಮ್ಮ ಅಧಿದೇವತೆಯಾದ ವೀರನಾರಾಯಣನಿಗೆ ಅರ್ಪಿಸಿ ಈ ಭಕ್ತಿಭಾವದಿಂದಲೇ ಸ್ವಾಗತ ಸಮಿತಿಗೆ ಕಳಿಸಿಬಿಟ್ಟರು. ನಾರಾಯಣರಾಯರು ಬೆಳಗಾವಿಗೆ ಹೋದುದು ಒಂದು ಬಗೆಯ ಕುತೂಹಲದಿಂದ; ತಮ್ಮ ಕವನವೇನಾದರೂ ಅಂಗೀಕೃತವಾಗಿದೆಯೋ ನೋಡೋಣ ಎಂದು. ಆ ಅಧಿವೇಶನ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಗೀತದಿಂದಲೇ ಪ್ರಾರಂಭವಾದಾಗ ಕವಿಹೃದಯ ತುಂಬಿಬಂದಿತು; ಮನಸ್ಸು ಅರಳಿ

ಮುದಗೊಂಡಿತು; ಪ್ರಫುಲ್ಲಿತವಾಯಿತು. ನಾರಾಯಣರಾಯರಿಗೆ ಹಿಡಿಸಲಾರದಷ್ಟು ಸಂತೋಷ, ಇಂಥ ಕೀರ್ತಿದಾಯಕ ಪದ್ಯವನ್ನು ಅವರು ಬರೆದಿದ್ದರೂ ಹಿಂದೆ ಇದ್ದು ಕೊಂಡೇ ಅವರು ಅಧಿವೇಶನಲ್ಲಿ ಪಾಲ್ಗೊಂಡರು. ಸ್ವಭಾವತಃ ಪ್ರಸಿದ್ಧಿ ವಿಮುಖ ರಾದವರು ಅವರು. ಹೀಗೆ ನಡೆದುಕೊಂಡುದರಲ್ಲಿ ಅಚ್ಚರಿಯೇನೂ ಇರಲಿಲ್ಲ. ಆದರೆ ಅವರಿಗೆ ಕೀರ್ತಿ ತಂದುಕೊಟ್ಟ ಈ ಗೀತ ನಾಡಿನ ಮೂಲೆ ಮೂಲೆಗೂ ಭವ್ಯ ಕನ್ನಡ ನಾಡಿನ ಸಂದೇಶವನ್ನು ಬೀರುತ್ತ ಕನ್ನಡದ ನಾಡಗೀತೆ ಎಂಬ ವಿಶೇಷ ಮನ್ನಣೆಯನ್ನು ಕನ್ನಡ ಜನಕೋಟಿಯಿಂದ ಪಡೆಯಿತು.

ನಾರಾಯಣರಾಯರು ಬರೆದುದು ಇದೇನು ಮೊದಲ ಕವನವಾಗಿರಲಿಲ್ಲ. ಗದುಗಿನವರಾದ ಅವರು ಕುಮಾರವ್ಯಾಸಭಾರತ ಓದಿ ಮುಗ್ಧರಾಗಿದ್ದರೂ ಅವನ ಈ ಭಾಮಿನಿ ಷಟ್ಪದಿ ಪ್ರಯೋಗ ಅವರಿಗೆ ತುಂಬ ಹಿಡಿಸಿತ್ತು. ಜೊತೆಗೆ ಅವರಲ್ಲಿ ಕಾವ್ಯಶಕ್ತಿಯನ್ನು ಸ್ಫುರಿಸಿತ್ತು. ೧೯೦೮ ರಷ್ಟು ಹಿಂದೆಯೇ ಅವರು ತಮ್ಮ ಇಪ್ಪತ್ತನಾಲ್ಕನೆಯ ವಯಸ್ಸಿನಲ್ಲಿ ಮೊದಲ ಕವನವನ್ನೂ ಬರೆದಿದ್ದು, ಅದರ ಹೆಸರು 'ಕನ್ನಡಮ್ಮ', ಭಾಮಿನಿಯಲ್ಲಿಯೇ ಅದು ರೂಪುಗೊಂಡಿತು. ಇವಾದ ಬಳಿಕ ಅವರು ಅನೇಕ ಕವನಗಳನ್ನೂ ರಚಿಸತೊಡಗಿದರು. ರಾಜಕೀಯಕ್ಕೆ ಸಂಬಂಧಿಸಿದ ಅವರ ಇನ್ನೊಂದು ಗೀತ 'ಹೂದೋಟ' ಕೂಡ ಭಾಮಿನಿ ಷಟ್ಪದಿಯಲ್ಲಿರುವುದು. ಕನ್ನಡ ಸಾಹಿತ್ಯ ಪರಿಷತ್ತಿನ ಬಗೆಗೇ ಅವರೊಂದು ಗೀತ ರಚಿಸಿದರು. ಅದು ೨೫ ಶ್ಲೋಕಗಳದು. ಕೆರೂರ ವಾಸದೇವಚಾರ್ಯರ "ಸಚಿತ್ರಭಾರತಿ" ಯಲ್ಲಿ ಅದು ಬೆಳಕು ಕಂಡಿತು. ಪ್ರಕೃತಿ ಸೌಂದರ್ಯವೂ ಅವರ ಕಾವ್ಯವಸ್ತುವಾಗಿರುವುದು. ಅಂಥ ಹಲವಾರು ಕವನಗಳಿವೆ. ಅನೇಕ ಸ್ವಾಗತ ಗೀತೆಗಳನ್ನೂ ರಚಿಸಿದ್ದಾರೆ. ದೇವರ ನಾಮುಗಳನ್ನೂ ನೂರಾರು ರಚಿಸಿದ್ದಾರೆ. ಆದರೆ ಅವು ಸಂಗ್ರಹದಲ್ಲಿ ಬರುವುದಿರಲಿ ಬಿಡಿಯಾಗಿಯೂ ಬಹಳಷ್ಟು ಬೆಳಕು ಕಂಡಿಲ್ಲ. ಅನೇಕರಿಗೆ ಅವರ ಈ ಕಾವ್ಯದ ಸೊಗಸನ್ನು ಸವಿಯುವುದು ಸಾಧ್ಯವಾಗಿಲ್ಲ. ಆದರೆ ಕವಿತ್ವಶಕ್ತಿಗೆ, ಕಾವ್ಯದ ಹಿರಿಮೆಗೆ "ಉದಯವಾಗಲಿ" ಗೀತವೊಂದೇ ಬೆಳಕು ಕಂಡುದು ಸಾಕು.

ಅವರು ಉತ್ತಮ ನಾಟಕಕಾರರು. ಹದಿಮೂರು ನಾಟಕಗಳನ್ನು ಅವರು ಬರೆದಿದ್ದರೂ ಬೆಳಕು ಕಂಡವು ಮಾತ್ರ ಮೂರು. ೧೯೧೦ ರಲ್ಲಿ ಅವರ ಮೊದಲ ನಾಟಕ " ವಜ್ರಮುಕುಟ " ರಚಿತವಾಯಿತು. ಮುಂದೆ ನಾಲ್ವತ್ತು ವರುಷಗಳಲ್ಲಿ ಅವರ ಹನ್ನೆರಡು ನಾಟಕಗಳು ರಚಿತವಾದವು. ಆದರೆ ೧೯೨೨ರ ವರೆಗೆ ಪ್ರತಿವರುಷ ಅವರು ಒಂದೊಂದು ನಾಟಕವನ್ನೂ ರಚಿಸಿದರು. ಮೊದಲು ನಾಟಕ " ವಜ್ರಮುಕುಟ " ದ ವಸ್ತು ಐತಿಹಾಸಿಕವೆಂದು ತೋರುವುದಾದರೂ ಅನೇಕ ಕಾಲ್ಪನಿಕ ಅಂಶಗಳನ್ನೂ ಒಳಗೊಂಡಿರುವುದು. ದುರ್ನೀತಿ ಎಂಬುವನು ರಾಜ್ಯ ಅಪಹರಿಸುವ ಉದ್ದೇಶದಿಂದ ವಿಜಯನಗರದ ಬುಕ್ಕರಾಯನ ವಜ್ರಮುಕುಟುವನ್ನೂ ಕಳವು ಮಾಡಿಸುವುದು. ಅದರ ಆಪಾದನೆ ಬುಕ್ಕರಾಯನ ಅಣ್ಣನ ಮಗ ಸಂಗಮನ ಮೇಲೆ ಬರುವುದು. ಓರಣಗಲ್ಲಿನ

ಪ್ರತಾಪರುದ್ರರಾಯನ ಮಗ ಕೃಷ್ಣರಾಯನು ಇದನ್ನೂ ಶೋಧಿಸಿ ಪತ್ತೇಹಚ್ಚಿಕೊಡುವನು. ಬುಕ್ಕರಾಯನ ಮಗಳು ಕಾಮಾಕ್ಷಿಯನ್ನು ಮದುವೆಯಾಗುವನು. ಮೋಹಲಹರಿ (೧೯೧೪) ಅಜ್ಞಾತವಾಸ (೧೯೧೫) ಪ್ರೇಮವಿಜಯ (೧೯೧೬) ಸಂಗೀತ–ಕುಮಾರರಾಮ ಚರಿತ್ರೆ (೧೯೧೭) ಅವರು ಬರೆದ ಐತಿಹಾಸಿಕ ನಾಟಕಗಳು. ಇವುಗಳಲ್ಲಿ ಮೊದಲಿನ ಮೂರು ವಿಜಯನಗರದ ಇತಿಹಾಸಕ್ಕೆ, ಹೆಚ್ಚಾಗಿ ಕೃಷ್ಣದೇವರಾಯನ ಕಾಲಕ್ಕೆ ಸಂಬಂಧಿಸಿದವು. ವಿಜಯನಗರದ ದೇವರಾಯನು ಪ್ರೀತಳೆಯ ಮೋಹಕ್ಕೊಳಗಾಗಿ ಅವಳನ್ನು ಮದುವೆಯಾಗಲು ಹವಣಿಸುವನು, ಆದರೆ ತಂದೆ ತಾಯಿಗಳ ಸುಳಿವಿಲ್ಲದೆ ಅವಳು ಒಪ್ಪುವದಿಲ್ಲ. ಇನ್ನೊಬ್ಬ ಅರಸು ಬಲ್ಲಾಳನೂ ಅವಳನ್ನು ಮೋಹಿಸಿರುವನು. ಮದುವೆಯಾಗಲು ಪ್ರೀತಳೆಗೆ ದುಂಬಾಲು ಬಿದ್ದಿರುವನು. ಬಲ್ಲಾಳ ಮತ್ತು ದೇವರಾಯರಲ್ಲಿ ಚಕಮಕಿ ನಡೆದಾಗ ದೇವರಾಯನು ಬಲ್ಲಾಳನಿಗೆ ಮಾತುಕೊಟ್ಟು ಪ್ರೀತಳೆಯ ಮೋಹ ತೊರೆಯುವನು. ಪ್ರೀತಳೆ ಅವನನ್ನು ಮದುವೆಯಾಗಲು ಒಪ್ಪುವ ಪ್ರಸಂಗದಲ್ಲಿ ದೇವರಾಯ ನಿರಾಕರಿಸಲು, ಅವಳು ಆಜನ್ಮ ಕುಮಾರಿಯಾಗಿರುವದಾಗಿ ಪ್ರತಿಜ್ಞೆಗೈದು ಬಲ್ಲಾಳನನ್ನೂ ನಿರಾಕರಿಸುವಳು. ದೇವರಾಯನು ಪ್ರೇಮದಿಂದ ಅಜ್ಞಾತ ರೂಪದಲ್ಲಿ ತನ್ನ ಸೇವೆಗೈದ ಬಲ್ಲಾಳನ ತಂಗಿ ನೇತ್ರಾ–ವತಿ (ಪೊನ್ನಳೆ) ಯನ್ನು ಮದುವೆಯಾಗುವನು. ಮೋಹವು ಎಬ್ಬಿಸಿದ ಲಹರಿ ಹೀಗೆ ಪರ್ಯವಸಾನಗೊಳ್ಳುವುದು. ವಿಜಯನಗರದ ಕೃಷ್ಣದೇವರಾಯನು ತನ್ನ ತಂದೆ ಅಚ್ಯುತರಾಯನ ಕೃಪಾಕಟಾಕ್ಷಕ್ಕೊಳಗಾಗಿ ಅಜ್ಞಾತವಾಸದಲ್ಲಿದ್ದಾಗ, ಸಂಕಟದಿಂದ ತಾನು ಪಾರು ಮಾಡಿದ ಯುವತಿ ಚಿನ್ನಾದೇವಿಯನ್ನು ವಿವಾಹವಾಗುವ ಪ್ರಸಂಗವು 'ಅಜ್ಞಾತವಾಸ' ನಾಟಕದ ಕಥಾವಸ್ತುವಾಗಿರುವುದು. ಆದೇ ಕೃಷ್ಣದೇವರಾಯನು ಸಿಂಹಾಸನವೇರಿದ ನಂತರ ಒಡ್ಡಿಯ ಪ್ರತಾಪರುದ್ರದೇವನನ್ನು ಸೋಲಿಸಿ, ದಿಕ್ಕುಪಾಲಾಗಿ ಓಡಿಸಿರುವನು. ಆ ಸೇಡುತೀರಿಸಿಕೊಳ್ಳಲು ಅವನ ಮಗಳು ಸಿಂಗಳೆ ಪುರುಷ ವೇಷದಿಂದ ಅರಮನೆ ಹೊಕ್ಕು ಕೃಷ್ಣದೇವರಾಯನನ್ನೂ ಕೊಲ್ಲಲು ಹೋದಾಗ ಸಿಕ್ಕುಬೀಳುವಳು. ಅವಳು ಸ್ತ್ರೀಯೆಂದು ತಿಳಿದು ಬಂಧನದಲ್ಲಿರಿಸುವನು. ಈ ಸಂದರ್ಭದಲ್ಲಿ ಅವರಿಬ್ಬರೂ ಪ್ರೇಮಪಾಶದಲ್ಲಿ ಬಂಧಿತರಾಗಿ ಮುಂದೆ ವಿವಾಹವಾಗುವರೆಂಬುದು 'ಪ್ರೇಮವಿಜಯ' ನಾಟಕದ ಕಥಾವಸ್ತುವಾಗಿದೆ. ಕಂಪಿಲನ ಮಗ ಕುಮಾರರಾಮನು ಮಲತಾಯಿಯ ಆಗ್ರಹಕ್ಕೊಳಗಾಗಿ ಅನುಭವಿಸಿದ ಸಂಕಷ್ಟಗಳ ಇತಿಹಾಸಪ್ರಸಿದ್ಧ ಕಥೆ ಸಂಗೀತಕುಮಾರರಾಮ ಚರಿತ್ರೆಯ ವಸ್ತುವಾಗಿದೆ.

ನಾರಾಯಣರಾಯರ ಈ ಐತಿಹಾಸಿಕ ನಾಟಕಗಳಲ್ಲಿ ಕಾಲ್ಪನಿಕ ಅಂಶಗಳು ಸೇರಿರುವದೂ ಕೆಲವನ್ನು ಭಿನ್ನರೂಪದಲ್ಲಿ ಬಣ್ಣಿಸಿರುವದನ್ನೂ ನಾವು ಕಾಣುತ್ತೇವೆ. ಪ್ರತಾಪರುದ್ರದೇವನ ಮಗಳು ವಿವಾಹವಾದ ತರುವಾಯ ಕೃಷ್ಣದೇವರಾಯನನ್ನು ಕೊಲ್ಲಲು ಹೋಗಿ, ಆಜನ್ಮ ಸೆರೆಮನೆವಾಸ ಅನುಭವಿಸಿದ್ದು ಇತಿಹಾಸದಲ್ಲಿ ಕಂಡು ಬರುತ್ತಿದ್ದರೂ ನಾರಾಯಣರಾಯರು ಅವನ್ನು "ಪ್ರೇಮ

ವಿಜಯ"ದಲ್ಲಿ ಮಾರ್ಪಡಿಸಿದ್ದಾರೆ. ಕುಮಾರರಾಮನಲ್ಲಿ ಭೂತದ ಪಾತ್ರಗಳನ್ನು ಸೃಷ್ಟಿಸಿ ರತ್ನಾಜಿ ಅವರಿಂದಾಗಿ ಪಶ್ಚಾತ್ತಾಪಗೊಳ್ಳುವಂತೆ ಮಾಡಿದ್ದಾರೆ. ಅವರು ಈ ನಾಟಕಗಳಲ್ಲಿ ಕಲ್ಪನಾಸೃಷ್ಟಿಯನ್ನೂ ಮೆರೆದಿರುವರಾದರೂ ನಾಟಕಗಳು ಇಡಿಯಾಗಿ ಪರಿಣಾಮಕಾರಿಯಾಗಿ ತೋರುವುದು, ಸಂಪೂರ್ಣವಾಗಿ ಅನಿಸುವುದು ಅವುಗಳ ಒಂದು ವಿಶೇಷ. ಅಲ್ಲದೇ ಐತಿಹಾಸಿಕ ಪರಿಸರವನ್ನು ಬಹು ಚೆನ್ನಾಗಿ ಸೃಷ್ಟಿಸಿದ್ದಾರೆ; ನಾರಾಯಣರಾಯರು ಇತಿಹಾಸದಲ್ಲಿ ಹೊಂದಿದ ಆಸ್ಥೆ, ಅವರ ಇತಿಹಾಸ ಪ್ರಜ್ಞೆಗಳನ್ನು ಈ ನಾಟಕಗಳು ನಮ್ಮ ನಿದರ್ಶನಕ್ಕೆ ತಂದು ಕೊಡುತ್ತವೆ.

ಭಾರತಸಂಧಾನ (೧೯೧೮) ಉತ್ತರ ಗೋಗ್ರಹಣದ (೧೯೨೨) ಇವೆರಡೂ ಅವರು ಬರೆದಿರುವ ಪೌರಾಣಿಕ ನಾಟಕಗಳು ಮಹಾಭಾರತದ ಕಥೆಗೆ ಸಂಬಂಧಿಸಿದವು. ಆದರೆ ನಿರೂಪಣೆ ಬಹುಮಟ್ಟಿಗೆ ಸಾಮಾಜಿಕ ರೂಪದ್ದು. ಇಲ್ಲಿಯ ಪಾತ್ರಗಳು ಪೌರಾಣಿಕವಾದರೂ ಅವು ಹೇಳುವ ಮಾತು, ನೀಡುವ ನೀತಿ ನಾರಾಯಣರಾಯರು ಆ ಕಾಲದ ಸಮಾಜದಲ್ಲಿ ಕಂಡು ಅನುಭವಿಸಿದ ಪರಿಸರದಿಂದ ಬಂದವು. ಪ್ರಮಾರ್ಜನ (೧೯೧೨) ಹಾಗೂ ಕನಕವಿಲಾಸ (೧೯೧೩) ಐತಿಹಾಸಿಕ ಪರಿಸರದ ಪಾತ್ರಗಳ ಸಂಪೂರ್ಣ ಕಾಲ್ಪನಿಕವಾದ ನಾಟಕಗಳು. ತಂದೆ ರಾಜನೆಂದು ಗೊತ್ತಾಗುವ ಪೂರ್ವದಲ್ಲಿ ರಾಜಕುಮಾರನೊಂದಿಗೆ ಅಸಡ್ಡೆಯಿಂದ ನಡೆದುಕೊಂಡು ಅವನ ಹಿರಿಮೆ ಗೊತ್ತಾದ ನಂತರ ತನ್ನ ಮಗಳನ್ನು ಕೊಡುವ ಸಾಮಂತನ ಚಿತ್ರ ಪ್ರಮಾರ್ಜನದಲ್ಲಿದ್ದರೆ ಕನಕದ ಹಂಬಲದಿಂದ ಎಂಥವನೂ ಎಂಥ ಹೀನ ಕೃತಿಯನ್ನೂ ಮಾಡಲು ಮುಂದಾಗುವನು ಎಂಬುದನ್ನು ಪುರೋಹಿತನ ಪಾತ್ರದಿಂದ ಮತ್ತು ಕೆಳವರ್ಗದಿಂದ ಬಂದು ರಾಣಿಯಾದವಳು ತನ್ನ ಪ್ರಸ್ಥವನ್ನೆ ಬೆಳೆಸಿಕೊಳ್ಳಲು ಹೀನಕೃತ್ಯಕ್ಕೆಳಸಿದ ನಿದ-ರ್ಶನವನ್ನು ನೀಡುವ ವಸ್ತುವನ್ನೂ ಕನಕ ವಿಲಾಸವು ಒಳಗೊಂಡಿರುವವು. ಈ ನಾಟಕಗಳಲ್ಲಿಯೂ ನಾವು ನಾರಾಯಣರಾಯರು ಆ ಕಾಲದಲ್ಲಿ ತಮ್ಮ ಮೇಲಾದ ಸಾಮಾಜಿಕ ಪರಿಸರದ ಪ್ರಭಾವವನ್ನೇ ಚಿತ್ರಿಸಿರುವುದನ್ನೂ ಕಾಣುತ್ತೇವೆ. ಕನಕವಿಲಾಸದಲ್ಲಿ ರಾಣಿಯೆದುರು ಗಾಯನಶಾಲೆಯಲ್ಲಿ ವಾರಾಂಗನೆಯರು ಪದಗಳನ್ನೂ ಹಾಡುವ ಹಾಗೂ ಪುರೋಹಿತನು ಅಲ್ಲಿ ರಾಣಿಯೊಂದಿಗೆ ಗುಪ್ತಾಲೋಚನೆ ನಡೆಸುವ ದೃಶ್ಯವೊಂದಿದೆ. ಆ ಸಮಯದಲ್ಲಿ ಸಾಮಾಜಿಕವಾಗಿ ಪದಗಳನ್ನೂ ಹಾಡುವುದು ವಾರಾಂಗನೆಯರದೇ ಕೆಲಸವಾಗಿತ್ತು. ಹೀಗಾಗಿ ನಾರಾಯಣರಾಯ ಆ ಪ್ರಸಂಗವನ್ನೂ ಬಳಸಿಕೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲವಾದರೂ ರಾಣಿಯ ಸಮ್ಮುಖದಲ್ಲಿ ಈ ಪ್ರಸಂಗವನ್ನೂ ತಪ್ಪಿಸಬಹುದಾಗಿತ್ತೇನೊ! ಇದೇ ನಾಟಕದಲ್ಲಿ ಮಡಿ–ಮೈಲಿಗೆಯ ಜಿಜ್ಞಾಸೆಯ ಪ್ರಸ್ತಾಪ ಬರುವುದು. ಪುರೋಹಿತನಿಗೆ ಅವನ ಹೊಸ ಸೇವಕ ಮಡಿಬಟ್ಟೆ ಮೈಲಿಗೆಯಾದ ಹೊಸ ಪರಿಯೊಂದನ್ನು ತಿಳಿಸುತ್ತ "ನಾನು ಕೋಲಿನ ಮೇಲಿಂದ ಎಳೆಯುವಷ್ಟರಲ್ಲಿ ಬೆಳಕಿಂಡಿಯ ಮೇಲಿಂದ ಒಂದು ಕಾಗೆಯು ಬಾಯಿಯಲ್ಲಿ ಮೈಲಿಗೆ ಅರಿವೆ ಹಿಡಿದುಕೊಂಡು ಹೋಯಿತು. ಅದರನೆರಳು

ಘಾಳಿ ಅದಕ್ಕೆ ತಾಗಿತು", ಎಂದು ಹೇಳುವನು. ಈ ಒಂದು ಮಾತಿನಲ್ಲಿ ನಾರಾಯಣರಾಯರ ಸೂಕ್ಷ್ಮ ಅವಲೋಕನವನ್ನು ಆ ಕಾಲದಲ್ಲಿ ಮಡಿ ಮೈಲಿಗೆಯ ಅತಿರೇಕತೆ ಇರುವದನ್ನು, ಬೆಳಕಿಂಡಿಯಿರುವ ಮನೆಗಳು ಹೆಚ್ಚಾಗಿರುವ ಅಂಶವನ್ನೂ ನಾವು ಕಾಣುತ್ತೇವೆ,

ಅವರು ಬರೆದು ಪ್ರಕಟವಾದ ಉಳಿದ ಮೂರು ನಾಟಕಗಳು ಸ್ತ್ರೀಧರ್ಮರಹಸ್ಯ (೧೯೨೦) ಶಿಕ್ಷಣ ಸಂಭ್ರಮ (೧೯೨೦) ಪತಿತೋದ್ಧಾರ (೧೯೨೬ ರಲ್ಲಿ ಬರೆಯಲು ಪ್ರಾರಂಭಿಸಿ ೧೯೩೭ ರಲ್ಲಿ ಪೂರ್ತಿಗೊಂಡುದು, ಅದಕ್ಕೊಂದು ಕಥೆಯೂ ಇದೆ) ಸಾಮಾಜಿಕ ನಾಟಕಗಳು.ಆದ್ಯ ಸಾಮಾಜಿಕ ನಾಟಕ ಕರ್ತೃಗಳೆನಿಸಿದ ನಾರಾಯಣರಾಯರು ಈ ನಾಟಕಗಳಲ್ಲಿ ಸಮಾಜ ಸುಧಾರಣೆ. ಸಮಾಜ ಲಕ್ಷಣಗಳನ್ನೇ ಮುಖ್ಯ ಉದ್ದೇಶ ವಾಗಿರಿಸಿಕೊಂಡಿದ್ದರು. ಸ್ತ್ರೀಯ ಕರ್ತವ್ಯ ಅವಳ ಧರ್ಮಗಳ ಬಗೆಗೆ ಸ್ತ್ರೀಧರ್ಮ ರಹಸ್ಯ ದಲ್ಲಿ ಸ್ಪಷ್ಟವಾದ ವಿವೇಚನೆ ನೀಡಿದ್ದರೆ, ಶಿಕ್ಷಣ ಸಂಭ್ರಮದಲ್ಲಿ ಪಾಶ್ಚಿಮಾತ್ಯ ಶಿಕ್ಷಣದ ವೈಪರೀತ್ಯಗಳನ್ನು ಅದು ನಮ್ಮ ಜನಜೀವನದ ಮೇಲೆ ಬೀರುವ ದುಷ್ಪರಿಣಾಮುಗಳನ್ನು ಚೆನ್ನಾಗಿ ಚಿತ್ರಿಸಿ ತೋರಿಸಿರುವದರೊಂದಿಗೆ ಈ ಶಿಕ್ಷಣದ ನಿಜವಾದ ಅರ್ಥ-ಮರ್ಮ ಗಳನ್ನೂ ನಾವು ಅರಿತುಕೊಂಡು ನಡೆಯಬೇಕು ಎಂದು ಮನಂಬುಗುವಂತೆ ಬಿಂಬಿಸಿದ್ದಾರೆ, ಪತಿತೋದ್ಧಾರವು ಹರಿಜನ ಉದ್ಧಾರದಲ್ಲಿ ಅಡಕವಾದ ತೊಂದರೆ, ಪರಿಹಾರದ ರೀತಿ ಗಳನ್ನು ತುಂಬ ಹೃದಯಂಗಮವಾಗಿ ಚಿತ್ರಿಸಿತೋರಿಸುತ್ತದೆ.

ಈ ಎಲ್ಲ ನಾಟಕಗಳಲ್ಲಿ ಅವರು ಅನೇಕ ಕವನಗಳನ್ನೂ ಜೋಡಿಸಿರುವರು. ಕೆಲವು ಭಾಮಿನಿ ಷಟ್ಪದಿಯಲ್ಲಿ, ಕಂದದಲ್ಲಿ ಮತ್ತು ವಿವಿಧ ವೃತ್ತಗಳಲ್ಲಿ ಅವು ಇರುವವು ನಾಟಕ ಪ್ರಾರಂಭಕ್ಕೆ ಸೂತ್ರಧಾರ, ನಟ ಇಲ್ಲವೇ ನಟಿ ಬಂದು ಪ್ರಸ್ತಾವನೆಯ ರೂಪ ದಲ್ಲಿ ಕೆಲ ಮಾತುಗಳನ್ನು ಹೇಳಿ ಹೋಗುವ ಸಂಪ್ರದಾಯವನ್ನೂ ಅವರು ಇಲ್ಲಿ ಬಳಸಿರುವರು. ಪ್ರಾರ್ಥನಾರೂಪಿ ಕವನದಲ್ಲಿಯೋ, ಪ್ರಸ್ತಾವನೆಯ ಮಾತಿನಲ್ಲಿಯೋ ವೀರನಾರಾಯಣನ ಸೇವಕ ನಾರಾಯಣರಾಯರು ಬರೆದುದು ಎಂದು ಹೇಳಿಸಿರುವರು. ವೀರನಾರಾಯಣನ ಸೇವಕ ಎಂಬುದು ಒಂದು ಸಂಕೇತರೂಪದಲ್ಲಿ ಇಲ್ಲಿ ಪ್ರಯೋಗ ವಾಗಿರುವದನ್ನು ಕಾಣಬಹುದು. ಇವೆಲ್ಲವು ಪರಿಪೂರ್ಣವಾದ ನಾಟಕಗಳು. ನಾಯಕ–ನಾಯಕಿಯರು ಪೋಷಕ ಪಾತ್ರಗಳು ಹೀಗೆ ವಿಸ್ತಾರವಾಗುತ್ತ ಬಂದಿವೆ. ಅಲ್ಲದೇ ಪ್ರತಿಯೊಂದೂ ಮೊದಲು ರಂಗಭೂಮಿಯ ಮೇಲೆ ಪ್ರಯೋಗವಾದವು. ಅವರೇ ಹೇಳಿರುವಂತೆ "ಪ್ರಯೋಗಕ್ಕಾಗಿಯೇ ಇವು ರಚಿತವಾಗಿ ನಿಂತವು". ಅದಕ್ಕಿಂತಲೂ ಏನೋ ಅವರ ನಾಟಕದ ಹಸ್ತಪ್ರತಿಗಳಲ್ಲಿ ಪಾತ್ರಗಳಿಗೆ ಬೇಕಾಗುವ ಉಡುಪು ತೊಡಪುಗಳ ಆಭರಣಗಳ ಮತ್ತಿತರ ಪರಿಕರಗಳ ವಿವರವಾಗಿರುವ ಉಲ್ಲೇಖವಿರುವ ದನ್ನು ಕಾಣುತ್ತೇವೆ.ಅವರಿಗೆ ಇವೆಲ್ಲವುಗಳ ಸಂಪೂರ್ಣ ಪರಿಚಯುವಿತ್ತು. ಪರಿಜ್ಞಾನವಿತ್ತು ಎಂಬುದು ಈ ಉಲ್ಲೇಖದ ಅಂಶದಿಂದ ಸ್ಪಷ್ಟವಾಗುವುದು, ಅಲ್ಲದೇ ರಂಗಭೂಮಿಯ

ವಿನ್ಯಾಸದ ಪರಿಜ್ಞಾನವೂ ನಾರಾಯಣರಾಯರಿಗಿತ್ತು ಎಂಬುದು ಒಂದು ಹಸ್ತಪ್ರತಿಯಲ್ಲಿ ಅವರು ಈ ಸಂಬಂಧವಾಗಿ ಬಿಡಿಸಿರುವ ವಿವಿಧ ನಕ್ಷೆಗಳಿಂದ ಕಂಡು ಬರುವುದು. ಅಲ್ಲದೇ ಸ್ವತಃ ಹಲವಾರು ನಾಟಕಗಳಲ್ಲಿ ತಾವು ಪಾತ್ರವಹಿಸಿರುವುದೂ ಉಂಟು. ನಾನು ಮೊದಲ ಸಲ ೧೯೫೬ ರಲ್ಲಿ ಅವರನ್ನು ಕಂಡಾಗ ನನ್ನ ತಂದೆಯವರಿಂದಲೂ ನಾಟಕದಲ್ಲಿ ಪಾತ್ರ ಮಾಡಿಸಿದ್ದರ ಪ್ರಸ್ತಾಪ ಮಾಡಿ, ತಮ್ಮ ಜೊತೆಗೆ ಅವರು ಒಳ್ಳೆಯ ಉತ್ತಮ ರೀತಿಯಲ್ಲಿ ಅಭಿನಯಿಸಿದ್ದನ್ನೂ ಸ್ಮರಿಸಿಕೊಂಡರು. ದುರ್ದೈವದಿಂದ ಅವರು ಬರೆದ ಹದಿಮೂರು ನಾಟಕಗಳಲ್ಲಿ ಮೂರು ಮಾತ್ರ ಪ್ರಕಟವಾಗಿದ್ದು ಉಳಿದವು ಪ್ರಕಟವಾಗಿಲ್ಲ, ಅಲ್ಲದೇ ಒಂದು ನಾಟಕದ ಹಸ್ತಪ್ರತಿ ಕೂಡ ಲಭ್ಯವಿರುವದಿಲ್ಲ. ಅದೇ ರೀತಿ ಅವರು ಬರೆದ ಅನೇಕ ದೇವರ ನಾಮಗಳು ಕೂಡ ಪ್ರಕಟವಾಗಿರುವದಿಲ್ಲ. ಇದೊಂದು ಕನ್ನಡಿಗರ ದುರ್ಭಾಗ್ಯವಲ್ಲದೇ ಇನ್ನೇನು ?

ನಾರಾಯಣರಾಯರು ವಕೀಲರು; ಕವಿ ನಾಟಕಕಾರರಾದುದು ಹೇಗೆ ಎಂದು ಅಚ್ಚರಿಯಾಗುವುದು ಸ್ವಾಭಾವಿಕ. ಆಗ ವಕೀಲರು ಹೆಚ್ಚಾಗಿ ರಾಜಕಾರಣದತ್ತ ಒಲವು ತೋರುತ್ತಿದ್ದರು. ಆದರೆ ನಾರಾಯಣರಾಯರು ರಾಷ್ಟ್ರೀಯ ಮನೋವೃತ್ತಿಯವ-ರಾಗಿದ್ದರೂ, ಖಾದಿಧಾರಿಗಳಾಗಿದ್ದರೂ, ಸ್ವಾತಂತ್ರ್ಯ ಅಂದೋಲನದಲ್ಲಿ ಭಾಗವಹಿಸಿ-ದ್ದರೂ ರಾಜಕಾರಣದಲ್ಲಿ ಎಂದಿಗೂ ಪ್ರವೇಶಿಸಲಿಲ್ಲ. ಬಾಲ್ಯದಲ್ಲಿ ಗೊಂಬೆಯಾಟ. ಕಿಳ್ಳಿಕೇತನ ಆಟ, ಬಯಲಾಟ. ಯಕ್ಷಗಾನದಾಟ, ದೊಡ್ಡಾಟಗಳು ಎಲ್ಲಿ ನಡೆದರೂ ಹೋಗಿಬರುತ್ತಿದ್ದರು. ಗೊಂಬೆಯಾಟ ಇವರ ಮೆಚ್ಚಿಕೆಯದು, ಹಿರಿಯರೊಂದಿಗೆ ಹಲವಾರು ನಾಟಕಗಳನ್ನೂ ಅವರು ನೋಡಿದ್ದರು. ಹತ್ತು ವರುಷದವರಿರುವಾಗಲೇ ಗೋಕಾಕದಲ್ಲಿರುವಾಗ ತಾವೇ ಒಂದು ನಾಟಕ ಬರೆದು ತಮ್ಮ ಸೋದರನ ನೆರವಿನಿಂದ ಪ್ರಯೋಗಿಸಿದ್ದರು. ಅದರ ಕಥೆ ಗರುಡ–ಗರ್ವಭಂಗಕ್ಕೆ ಸಂಬಂಧಿಸಿದ್ದು. ಎಳೆತನದ ಈ ಒಲವಿಗೆ ಕಾಲೇಜ ದಿನಗಳಲ್ಲಿ ನಡೆದ ಘಟನೆಗಳು ನೀರೆರೆದವು. ಅಲ್ಲಿಯ ಕನ್ನಡೇತರ, ಅದೇಕೆ ಕೆಲ ಅಭಿಮಾನಶೂನ್ಯ ಕನ್ನಡ ವಿದ್ಯಾರ್ಥಿಗಳೂ ಮರಾಠಿ ನಾಟಕಗಳನ್ನು ಕಂಡು, ಇಂಥವು ಕನ್ನಡದಲ್ಲಿವೆಯೇ ಎಂದು ಹೀಗಳೆಯುತ್ತಿದ್ದರು. ಅದಕ್ಕಾಗಿ ನಾರಾಯಣರಾಯರು ಹಲವಾರು ಮರಾಠಿ ನಾಟಕಗಳನ್ನು ನೋಡಿದರು. ಅಲ್ಲದೆ ಬಿ. ಎ. ಕ್ಕೆ ಓದುವ ದೃಷ್ಟಿಯಿಂದ ಶೆಕ್ಷಪಿಯರನ ನಾಟಕಗಳನ್ನು, ಸಂಸ್ಕೃತ ನಾಟಕಗಳನ್ನು ಓದಿದ್ದರು. ಧಾರವಾಡ–ಗದಗುಗಳಲ್ಲಿರುವಾಗ ಅಲ್ಲಿಯ ಸಾಹಿತ್ಯ ಪರಿಸರ ಪರಿಣಾಮ ಬೀರಿತಾದರೂ ಕನ್ನಡ ಕಂಪನಿಗಳು ಆಡುವ ನಾಟಕಗಳು ಒಳ್ಳೆಯವಿಲ್ಲ ಎಂಬ ಮಾತು ಅವರ ಮನಸ್ಸಿನಲ್ಲಿ ಕೊರೆಯತೊಡಗಿತು. ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಅವರು ಸ್ವತಃ ತಾವೇ ಒಂದು ನಾಟಕ ಬರೆಯಬಾರದೇಕೆ ಎಂದು ವಿಚಾರಿಸಿದರು. ಕಂಪನಿಯವರಿಗಾಗಿಯೇ ಅವರ 'ವಜ್ರಮುಕುಟ' ರಚಿತವಾಯಿತು. ಆದರೆ ಅದು ರಂಗಭೂಮಿಗೆ ಬರಲು ಕೆಲ ಕಾಲ ಹಿಡಿಯಿತು. ಹಿರಿಯರ ಮನ್ನಣೆ ದೊರೆಯಬೇಕಿತ್ತು. ಅವರ ಆಶೀರ್ವಾದ ಸಹಕಾರ ದೊರೆತೊಡನೆ ಗದುಗಿನ ' ಯಂಗ

ಮೆನ್ಸ್ ಫುಟ್‌ಬಾಲ್ ಕ್ಲಬ್ಬಿನ ' ಸದಸ್ಯರ ನೆರವಿನಿಂದ ಅದು ರಂಗಭೂಮಿಗೆ ಬಂದಿತು. ಅದು ತುಂಬ ಯಶಸ್ಸನ್ನು ಪಡೆಯಿತು. ಈ ಕ್ಲಬ್ಬಿನ ಸದಸ್ಯರು ನಾಟ್ಯವಿಲಾಸಿಗಳಾದರು. ನಾರಾಯಣರಾಯರು ನಾಟಕಗಳನ್ನು ಬರೆದುಕೊಡತೊಡಗಿದರು. ಅದರ ಜೊತೆಗೆ ಪಾತ್ರಧಾರಿಗಳಿಗೆ ಅಭಿನಯ, ಮಾತುಗಾರಿಕೆ ಹೇಳಿಕೊಡುವುದು ಮೊದಲಾಗಿ ರಂಗತಾಲೀಮನ್ನು ಮಾಡಿಸುತ್ತಿದ್ದರು. ತಿಂಗಳುಗಟ್ಲೆ ನಡೆದು ಎಲ್ಲವೂ ಅಣಿಯಾಗಿದೆಯೆಂದಾಗ ನಾಟಕ ರಂಗಭೂಮಿಯ ಮೇಲೆ ಬರುತ್ತಿತ್ತು.

ರಂಗಭೂಮಿ ಅವರ ಜೀವಾಳವಾಗಿತ್ತು. ಆ ಬಗೆಗೆ ಅವರು ತೋರುತ್ತಿದ್ದ ಕಳಕಳಿ ಅಪಾರ. ಇಳಿ ವಯಸ್ಸಿನಲ್ಲಿಯೂ ಅವರು ಅಷ್ಟೆ ಶ್ರದ್ಧೆಯಿಂದ ಈ ವಿಷಯವಾಗಿ ವಿಚಾರಿಸುತ್ತಿದ್ದರು. ರಂಗಭೂಮಿಯ ಬಗೆಗೆ ಯಾವುದೇ ಗ್ರಂಥ ಪ್ರಕಟವಾದರೂ ಅದನ್ನು ಅವರು ಓದುತ್ತಿದ್ದರು. ಆಸ್ಥೆಯಿಂದ ಪರಿಶೀಲಿಸಿ ವಿಚಾರ ವಿನಿಮಯ ನಡೆಸುತ್ತಿದ್ದರು. ಮಹಾರಾಷ್ಟ್ರ ರಂಗಭೂಮಿಯ ಬಗೆಗೆ ಗ್ರಂಥವೊಂದು ಪ್ರಕಟವಾಗಿದೆಯೆಂದು ತಿಳಿದಾಗ ಅವರು ನನ್ನ ಬಳಿಗೆ ಧಾವಿಸಿ ಬಂದಿದ್ದರು. ಆದರೆ ಅದಿನ್ನೂ ನನ್ನ ಕೈ ಸೇರಿರಲಿಲ್ಲ. ಅದನ್ನು ತರಿಸಿಕೊಡಬೇಕೆಂದು ನನಗೆ ತಿಳಿಸಿದ್ದರಲ್ಲದೇ ಆಗ್ರಹಪೂರ್ವಕವಾಗಿ ಸಂಬಂಧಿಸಿದವರಿಗೆ ಪತ್ರ ಬರೆಯಿಸಿ ಅದು ಬರುವವರೆಗೂ ವಿಚಾರಿಸಿದ್ದೇ ವಿಚಾರಿಸಿದ್ದು. ಅದರಲ್ಲಿ ಅಂಕುಡೊಂಕೇನು ಇಲ್ಲ; ಯಥಾರ್ಥ ಚಿತ್ರಣ ಬಂದಿದೆಯೆಂದು ಅವರು ನೋಡಿ ಮನವರಿಕೆ ಮಾಡಿಕೊಂಡಾಗಲೇ ಅವರಿಗೆ ಸಮಾಧಾನ.

ಅವರು ಪ್ರಸಿದ್ಧಿ–ಕೀರ್ತಿಗಳನ್ನು ಬಯಸಿದವರಲ್ಲ, ಸಭೆ ಸಮಾರಂಭಗಳಲ್ಲಿ ಭಾಗ ವಹಿಸಿದವರಲ್ಲ: ಅವು ಬೇಡ ಎಂದೆನ್ನುವವರು. ಆದರೆ ಜನ ಅವರನ್ನು ಬಿಡಲಿಲ್ಲ. ೧೯೩೪ರಲ್ಲಿ ವಿಜಾಪುರದಲ್ಲಿ ಸೇರಿದ ನಾಟ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಅವರಿಗೆ ನೀಡಲಾಗಿತ್ತು. ಧಾರವಾಡದ ಸಾಹಿತ್ಯ ಸಮ್ಮೇಳನ ಅಂಗವಾಗಿ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಕೊಡಮಾಡಲಾಗಿತ್ತು. ೧೯೫೭ರಲ್ಲಿ ಹೊಸ ಮೈಸೂರು ರಾಜ್ಯ ನಿರ್ಮಾಣವಾದ ನಂತರ ಕನ್ನಡದ ನಾಡಗೀತೆಯನ್ನು ನೀಡಿದ, ಕನ್ನಡಿಗರನ್ನು ಬಡಿದೆಬ್ಬಿಸಿದ ನಾರಾಯಣರಾಯರನ್ನು ರಾಜ್ಯ ಸರಕಾರ ರಾಜಧಾನಿಗೆ ಬರಮಾಡಿಕೊಂಡು ಬಹುಮಾನ ನೀಡಿ ಸತ್ಕರಿಸಿತು. ನನಗೆ ಅವರ ನಿಕಟ ಸಂಪರ್ಕ ಬಂದ ನಂತರ ಅವರು ಒಂದೇ ಒಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದನ್ನು ಕಂಡೆ. ಕನ್ನಡಿಗರಲ್ಲಿ ಸಾಹಿತ್ಯಾಭಿರುಚಿ ಮೂಡಿಸಿ ಕನ್ನಡದ ಕಣಜವನ್ನು ತಮ್ಮ ಹಲವಾರು ಕೃತಿಗಳಿಂದ ತುಂಬಿದ ದಿ. ಗಳಗನಾಥರ ಶತಾಬ್ದಿ ಸಮಾರಂಭದ ಅಧ್ಯಕ್ಷತೆಯನ್ನು ಈ ವರಕವಿ ನಾಟಕಕಾರ ವಹಿಸಿದ್ದರು. ಅವರಾಗ ಮಾತಾಡಿದ್ದು ಮುತ್ತಿನಂಥ ಎರಡೇ ಮಾತು. "ಗಳಗನಾಥ ಎಂದರೆ 'Master of Pen'. ಅವರ ಲೆಕ್ಕಣಿಕೆ ಕನ್ನಡಕ್ಕೆ ಪ್ರಭುತ್ವ ತಂದುಕೊಟ್ಟಿತು." ಗಳಗನಾಥರಿಗೆ ಇದಕ್ಕಿಂತ ಉಚಿತವಾದ ಗೌರವಾರ್ಪಣೆ ಉಂಟೆ ?

ನಾರಾಯಣರಾಯರು ತುಂಬ ಸರಳಜೀವಿಗಳು. ನಿರಾಡಂಬರರು, ರುಮಾಲು ಕೋಟು ಕಾಲಲ್ಲಿ ಚಪ್ಪಲಿ. ಪರಿಚಿತರನ್ನು ಕಂಡಾಗ ಕೈ ಮುಗಿದು ವಂದನೆ ಹೇಳಿ

ಮಾತನಾಡಿಸುವರು. ಇಳಿವಯಸ್ಸಿನಲ್ಲಿಯೂ ಅವರು ಕಟ್‌ಕಟ್ ಎಂದು ಕೋಲು ಊರುತ್ತ ನಡೆದುಕೊಂಡೇ ತಿರುಗಾಡುತ್ತಿದ್ದರು. ಹುಬ್ಬಳ್ಳಿಗೆ ಬಂದ ನಂತರ ದಿನಾಲು ಸಂಯುಕ್ತಕರ್ನಾಟಕ ಕಾರ್ಯಾಲಯದಲ್ಲಿ ಸಾಯಂಕಾಲದ ಒಂದೆರಡು ಗಂಟೆ ಕಳೆಯುತ್ತಿದ್ದರು, ಧಾರವಾಡದಲ್ಲಿದ್ದಾಗ ವಿದ್ಯಾವರ್ಧಕ ಸಂಘಕ್ಕೆ ಬಂದು ಕೂಡುತ್ತಿದ್ದರು. ಅಲ್ಲಿಗೆ ಬಂದವರೊಂದಿಗೆ ಕುಶಲ ಸಂಭಾಷಣೆ ನಡೆಸುತ್ತಿದ್ದರು. ಸಾಹಿತ್ಯಕ ಚರ್ಚೆ ನಡೆಸುತ್ತಿದ್ದರು. ನಮ್ಮ ಕಾರ್ಯಾಲಯಕ್ಕೆ ಬಂದು ಹೋಗುವ ಸಾಹಿತಿಗಳನ್ನೂ ಅವರ ಮಿತ್ರರನ್ನೂ ಕರೆದು ಕೂಡಿಸಿಕೊಳ್ಳುತ್ತಿದ್ದರು. ವಿವಿಧ ವಿಷಯವಾಗಿ ಮಾತನಾಡುತ್ತಿದ್ದರು. ಅವರಿಗೆ ಹೊಸ ಹೊಸದನ್ನು ಓದಬೇಕೆಂಬ ಹಂಬಲ ತುಂಬ, ಆದರೆ ಈ ಹೊಸದು ಆಧ್ಯಾತ್ಮಿಕವಾಗಿರಬೇಕಾಗುತ್ತಿತ್ತು; ರಂಗಭೂಮಿಗೆ ಸಂಬಂಧಿಸಿರಬೇಕಾಗಿತ್ತು. ಅವರ ಸರಳತೆ–ವಾತ್ಸಲ್ಯಕ್ಕೆ ಒಂದು ನಿದರ್ಶನವನ್ನೂ ನೋಡಬಹುದು. ಒಂದು ದಿನ ಅವಸರ ಕೆಲಸದ ನಿಮಿತ್ತ ನಾನು ಬೇಗ ಹೊರ ಹೊರಟಿದ್ದೆ. "ಯಾಕರೆಪಾ ಹೊಸದೇನಾರ ಕೊಡಬೇಕಾಗತದಂತ ತಪ್ಪಿಸಿ ಹೊರಟಿರೇನು?" ಎಂಬ ಧ್ವನಿ ಕೇಳಿ ನಾನು ಗಕ್ಕನೆ ನಿಂತೆ; ಆ ತುದಿಯಲ್ಲಿದ್ದ ನಾರಾಯಣರಾಯರು ಈ ತುದಿಯಲ್ಲಿದ್ದ ನನ್ನನ್ನು ಕೂಗುತ್ತಿರುವುದು ಕಂಡಾಗ ತುಂಬಾ ಅಚ್ಚರಿಯೆನಿಸಿತು; ಅವರ ದೃಷ್ಟಿಯ ಸ್ವಚ್ಛತೆಗಾಗಿ. ಜೊತೆಗೆ ಅವರಲ್ಲಿದ್ದ ವಾತ್ಸಲ್ಯಕ್ಕಾಗಿ. ನಾರಾಯಣರಾಯರು ಮನೆಯಲ್ಲಿರುವಾಗ ಒಂದು ಶರ್ಟು,ಚಳಿಯಿದ್ದಾಗ ಮೇಲೊಂದು ಸ್ವೆಟರ್ ಧರಿಸುತ್ತಿದ್ದರು. ಯಾರೇ ಅವರನ್ನು ಕಾಣಲು ಬರಲಿ, ಮಾತಾಡಿಸಲಿ ನಗುಮೊಗದಿಂದ ಬರಮಾಡಿಕೊಂಡು ಮಾತಾಡಿಸುತ್ತಿದ್ದರು: ಆಶೀರ್ವದಿಸುತ್ತಿದ್ದರು.

ನನ್ನೊಬ್ಬ ಸ್ನೇಹಿತನೊಂದಿಗೆ ಒಂದು ಸಲ ಅವರನ್ನು ಕಂಡಾಗ ಸಹಜವಾಗಿ "ಉದಯವಾಗಲಿ" ಗೀತವನ್ನು ಉದಯವಾಗಿದೆ ಎಂದು ಹಾಡುತ್ತಿದ್ದಾರಲ್ಲ ಈ ಪರಿವರ್ತನೆಗೆ ನೀವೇನು ಹೇಳುವಿರಿ ಎಂದು ಕೇಳಿದಾಗ ಅವರು ಬಹುದುಃಖದಿಂದ ಹೇಳಿದರು: "ಈ ಪರಿವರ್ತನೆ ಮಾಡಬಾರದು, ಮಾಡಬೇಡಿರಿ ಎಂದು ಅವರನ್ನು ನಾನು ಕೇಳಿಕೊಳ್ಳುವೆ. ನಾನು ಕನಸು ಕಂಡ ಕನ್ನಡನಾಡು ಇನ್ನೂ ಉದಯವಾಗಿಲ್ಲ. ಹಾಗೆ ಉದಯವಾಗುವ ವರೆಗೆ ಹೀಗೇ ಹಾಡಬೇಕು." ಎಂದರು. ಕನ್ನಡನಾಡು ಒಂದುಗೂಡಿದ್ದರೂ ಅಲ್ಲಿ ಸಮಗ್ರತೆ ಇರಲಿಲ್ಲ; ಏಕತೆ ಕಂಡು ಬರುತ್ತಿರಲಿಲ್ಲ; ಹೆಸರು ಕರ್ನಾಟಕವಾಗಿರಲಿಲ್ಲ ಎಂಬ ವ್ಯಥೆ ಆ ಅಳಲು ಅವರನ್ನು ಬಾಧಿಸುತ್ತಿತ್ತು.

ನಾರಾಯಣರಾಯರು ಕವಿ– ನಾಟಕಕಾರರಾಗಲು ಅವರು ಜನಿಸಿದ ನೆಲದ ಗುಣವೂ ಕೆಲಮಟ್ಟಿಗೆ ಕಾರಣವಾಗಿಲು ಸಾಕು. ಗದುಗಿನ ಅವರು ಇರುವ ಮನೆಯ ಭಾಗಕ್ಕೆ ಹಾಳುದಿಬ್ಬ ಎಂದು ಹೆಸರು. ಅದು ಜನಮೇಜಯ ರಾಜನು ಯಜ್ಞ ಮಾಡಿದ ಸ್ಥಳವೆಂದು ಆಖ್ಯಾಯಿಕೆಯಿದೆ. ಅದೇನೆ ಇದ್ದರೂ ಮಹಾಭಾರತದ ಕಾಲದಲ್ಲಿ ಗದಗು ಮಹತ್ವದ ಸ್ಥಾನ ಪಡೆದಿತ್ತೆನ್ನಬಹುದು. ಅಂಥ ಊರಲ್ಲಿ. ಕವಿ ಕುಮಾರವ್ಯಾಸನ ಕರ್ಮಭೂಮಿಯಲ್ಲಿ ನಾರಾಯಣರಾಯರು ೧೮೮೪ ಅಕ್ಟೋಬರ್ ೪

ರಂದು ಜನಿಸಿದರು. ತಾಯಿಯವರು ಹೇಳುವ ಕಥೆಗಳು, ಅಜ್ಜಿಯವರು ಗಮಕ ರೀತಿಯಲ್ಲಿ ಹಾಡುತ್ತಿದ್ದ ಕುಮಾರವ್ಯಾಸ ಭಾರತ ಇವರ ಮೇಲೆ ತುಂಬ ಪ್ರಭಾವ ಬೀರಿದವು. ತಂದೆಯವರು ಆಗಿನ ಮ್ಯಾಟ್ರಿಕ್ ಪಾಸಾದವರು. ಹೀಗಾಗಿ ಶಿಕ್ಷಣವೂ ವ್ಯವಸ್ಥಿತವಾಗಿ ನಡೆಯಿತು. ಗದಗದಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರೆ ಗದಗ ಗೋಕಾಕ ಧಾರವಾಡಗಳಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿದರು. ಪುಣೆಯ ಫರ್ಗುಸನ್ ಕಾಲೇಜ ದಲ್ಲಿ ಉಚ್ಚ ಶಿಕ್ಷಣ ಪೂರೈಸಿದರು. ಬಿ. ಎ.ಕ್ಕೆ ಸಂಸ್ಕೃತ ಮತ್ತು ಇಂಗ್ಲೀಷ ವಿಷಯ ಗಳನ್ನೂ ಆರಿಸಿಕೊಂಡಿದ್ದರು. ೧೯೦೭ ರಲ್ಲಿ ಬಿ. ಎ, ಪಾಸಾದ ನಂತರ ಅಸ್ವಸ್ಥವಾದು ರಿಂದ ಮುಂದಿನ ವರ್ಷ ಶಿಕ್ಷಣ ನಿಲ್ಲಿಸಿ ವಿಶ್ರಾಂತಿ ತೆಗೆದುಕೊಳ್ಳಬೇಕಾಯಿತು. ಈ ಸಮ ಯದಲ್ಲಿ ಅವರು ಕೆಲಕಾಲ ವಿಕ್ಟೋರಿಯಾ ಹಾಯಸ್ಕೂಲದಲ್ಲಿ ಶಿಕ್ಷಕರಾಗಿದ್ದರು. ಆದರೆ ಅವರಿಗೆ 'ಸಬ್‌ಜಜ್ ಆಗುವ ಆಸೆ ಬಲವತ್ತರವಿದ್ದಿತ್ತಾದ್ದರಿಂದ ' ಎಲ್.ಎಲ್.ಬಿ.ಗೆ ಹೋದರು. ೧೯೧೧ ರಲ್ಲಿ ಅದನ್ನೂ ಪೂರೈಸಿ ಬಂದು ವಕೀಲವೃತ್ತಿಯಲ್ಲಿ ತೊಡಗಿದರು. ಅದು ಅವರ ಜೀವನವೃತ್ತಿಯ ಮಾರ್ಗವಾಯಿತು.

ಅವರಿಗೆ ಅರು ಜನ ಮಕ್ಕಳು, ನಾಲ್ವರು ಗಂಡು ಮಕ್ಕಳು ಇಬ್ಬರು ಹೆಣ್ಣು ಮಕ್ಕಳು. ಹಿರಿಯ ಮಗ ತಂದೆ ಕಟ್ಟಿದ ವಿದ್ಯಾಮಂದಿರದಲ್ಲಿ ಶಿಕ್ಷಕರಾಗಿದ್ದಾರೆ. ಎರಡ ನೆಯ ಮಗ ಪೋಲಿಸ್ ಇನ್‌ಸ್ಪೆಕ್ಟರರು ಮೂರನೆಯವರು. ಆಹಾರ ವಿಭಾಗದಲ್ಲಿ ಶಿರಸ್ತೆದಾರರು. ನಾಲ್ಕನೆಯವರೂ ಸರಕಾರಿ ಹುದ್ದೆಯಲ್ಲಿದ್ದಾರೆ. ಒಬ್ಬರು ಅಳಿ- ಯಂದಿರು ಶಿಕ್ಷಕರು, ಮಾವನಂತೆ ಸಾಹಿತ್ಯದ ಒಲವಿನವರು.

ನಾರಾಯಣರಾಯರು, ಮನೆಯವರಿಗೆಲ್ಲ ನಾನಾ, ತುಂಬ ಮಮತೆಯವರು ವಾತ್ಸಲ್ಯಮಯಿ. ಅವರೆಂದಿಗೂ ಕುಪಿತರಾದುದನ್ನೂ ತಾವು ಕಂಡೇ ಇಲ್ಲವೆಂದು ಅವರ ಎರಡನೆಯ ಮಗ ನನ್ನೊಂದಿಗೆ ಮಾತಾಡುವಾಗ ಹೇಳಿದರು. ನಾನು ಕಂಡಂತೆ ಅವರ ಮುಖದಲ್ಲಿ ಸದಾ ನಗು ರಾರಾಜಿಸುತ್ತಿತ್ತು. ಬಹುಶಃ ಅವರ ಈ ಅಂತಃ ಕರಣದ, ವಾತ್ಸಲ್ಯದ ಸಾತ್ವಿಕ ಸ್ವಭಾವದಿಂದ ಸ್ನೇಹಿತರು ಅವರನ್ನು ಮುಕುರು ತ್ತಿದ್ದರು. ಅವರು ಸ್ನೇಹಿತರನ್ನು, ಯಂಗಮೆನ್ಸ ಫುಟ್‌ಬಾಲ್ ಕ್ಲಬ್ಬಿನ ಸದಸ್ಯರನ್ನು ನಾಟ್ಯವಿಲಾಸಿಗಳಾಗಿ ಪರಿವರ್ತಿಸಿದರು; ನಾಟಕವಾಡಿಸಿದರು. ಅದರಿಂದ ಇಂದು ಸಮಿತಿ ಹೈಸ್ಕೂಲ್ ಎಂದು ಗದುಗಿನಲ್ಲಿ ಹಿರಿಮೆಯಿಂದ ಮೆರೆವ ಶಿಕ್ಷಣ ಸಂಸ್ಥೆಯನ್ನೂ ನಿರ್ಮಿಸಿದರು. ಸಮಾಜವನ್ನೂ ತಿದ್ದುವ ನಾಟಕಗಳೊಂದಿಗೆ ಎಳೆಯರನ್ನೂ ತಿದ್ದುವ ವಿದ್ಯಾಮಂದಿರದ ರಚನೆ, ಇದು ನಾರಾಯಣರಾಯರ ಅಪೂರ್ವ ಸಾಧನೆ.

ನಾರಾಯಣರಾಯರು ಈಗ ನಮ್ಮೊಂದಿಗಿಲ್ಲ ನಿಜ. ನಾನು ಮಲೆನಾಡ ಪ್ರವಾಸಕ್ಕೆ ಹೊರಡುವ ಒಂದುವಾರ ಮೊದಲಷ್ಟೇ ಕಾರಿನಲ್ಲಿ ಬಂದು. "ಪಾಟೀಲರೇ ಏನಾದರೂ ಓದಲು ಬೇಕು, ನನಗಿನ್ನು ಅಡ್ಡಾಡಲು ಆಗುವದಿಲ್ಲ. ಏನಾಗುವದೋ ಏನೊ?" ಎಂದು ಅಳುಕನ್ನು ವ್ಯಕ್ತಪಡಿಸಿದ್ದರು. ನಾನು ಮರಳಿ ಬಂದ ತಿಂಗಳೊಪ್ಪತ್ತಿನಲ್ಲಿ ಅವರು ನಮ್ಮ

ನ್ನಗಲಿದರು. ಈ ಸುದ್ದಿಯನ್ನು ಕೇಳಿದ ನಂತರ, ಓದಿದ ನಂತರವೂ ಅವರ ಆಸರೆಗೋಲಿನ ಕಟ್‌ಕಟ್ ಸಪ್ಪಳ ನನಗೆ ಕೇಳಿ ಬಂದಂತೆಯೇ ಅನಿಸುವದು; ಅವರಿನ್ನೂ ಮಾತಾಡುತ್ತಿರುವಂತೆ ತೋರುವುದು, ಅವರು ದೈಹಿಕವಾಗಿ ಕಾಣದಿದ್ದರೂ ಮನದಾಳದಲ್ಲಿ ನೆಲೆನಿಂತು 'ಉದಯವಾಗಲಿ' ಎಂದು ಹಾಡುತ್ತಿರುವಂತೆ ತೋರುತ್ತದೆ. ಕನ್ನಡಿಗರು ಮನಃಪೂರ್ವಕವಾಗಿ ಒಂದುಗೂಡಲಿ. ಅವರ ಸಿರಿಸಂಪತ್ತು ವೃದ್ಧಿಯಾಗಲಿ. ಅಂಥ ಚೆಲುವ ನಾಡಾಗಲಿ ನಮ್ಮ ಕನ್ನಡ ನಾಡು ಎಂಬ ಆಶಯವನ್ನು ವ್ಯಕ್ತಪಡಿಸುತ್ತಿರುವಂತೆ ತೋರುವುದು.

★ **ಶಂಕರ ಪಾಟೀಲ, ಹುಬ್ಬಳ್ಳಿ**

ಅರವತ್ತುಮೂರು ಪುರಾತನರ ಚರಿತ್ರೆ

೫. ಅಮರ ನೀತಿ ನಾಯನಾರ್

(ಹಿಂದಿನ ಸಂಚಿಕೆಯಿಂದ)

ಚೋಳದೇಶದಲ್ಲಿ ಹೂದೋಟಗಳಿಂದ ಸುತ್ತುವರಿದ ಮತ್ತು ಸಿರಿಹೊಮ್ಮುವ ಬೀದಿಗಳನ್ನುಳ್ಳ ಪಳಯಾರೈ ಎಂಬ ನಗರವು ಶೋಭಿಸುತ್ತಿರುವುದು. ಆ ನಗರದಲ್ಲಿ ವಣಿಕರ ಕುಲದಲ್ಲಿ ಅಮರ ನೀತಿ ಎಂಬ ಶಿವಭಕ್ತರೊಬ್ಬರಿದ್ದರು. ಅವರ ಹೃದಯದಲ್ಲಿ ಯಾವಾಗಲೂ ಪರಶಿವನ ಅಡಿದಾವರೆಗಳೇ ಅರಳಿರುವುವು. ಬಂದ ಶಿವಶರಣರಿಗೆ ಅವರು ಉಣಬಡಿಸಿ ಉಡುಗೆಯನ್ನೂ ನಡುಪಟ್ಟಿಯನ್ನೂ ಕಚ್ಚುಟವನ್ನೂ ಉಡುಗೊರೆಯಾಗಿ ಕೊಡುತ್ತಿದ್ದರು. ಈ ಸೇವಾರ್ಥವೇ ಅವರ ಕಾಯಕವಾಗಿರುತ್ತಿತ್ತು ಎನ್ನಬಹುದು.

ಒಮ್ಮೆ ಅವರು ತಿರುನಲ್ಲೂರಿನ ನೀಲಕಂಠರ ಜಾತ್ರೆಯನ್ನು ಕಂಡು ದರ್ಶನ ಲಾಭ ಪಡೆಯಲು ಕುಟುಂಬ ಸಮೇತರಾಗಿ ತೆರಳಿದರು. ಅಲ್ಲಿಯ ತಮ್ಮ ತಿರುಮಠದಲ್ಲಿ ತಂಗಿದರು. ತಮ್ಮ ಸೇವಾರ್ಥವನ್ನು ನಡೆಸಿಕೊಂಡು ಬಂದರು. ಅಂದು ತಿರುನಲ್ಲೂರೊಡೆಯನು ಓರ್ವ ಬ್ರಾಹ್ಮಣ ಬ್ರಹ್ಮಚಾರಿಯ ರೂಪವನ್ನು ತಳೆದು ಅಲ್ಲಿಗೆ ಎಳ್ತಂದನು. ಅವರ ಮುಡಿಯ ಮೇಲಿನ ಶಿಖೆಯನ್ನೂ ಬೆಳ್ಳನೆಯ ವಿಭೂತಿ ಧರಿಸಿದ ಹಣೆಯನ್ನೂ, ವಕ್ಷ ಸ್ಥಳದಲ್ಲಿ ಕೃಷ್ಣಾಜಿನದೊಡನೆ ಮಿಳಿರ್ದಾಡುವ ಜನಿವಾರವನ್ನೂ ನೋಡಿದವರು ಇದು ಸೊಬಗಿನ ಬೀಡೋ ಎಂದು ಚಕಿತರಾದರು. ಅವರ ಕೈಯಲ್ಲಿದ್ದ ದಂಡದಲ್ಲಿ ವಿಭೂತಿಯ ಚೀಲವನ್ನೂ ಎರಡು ಕೌಪೀನಗಳನ್ನೂ ಕಟ್ಟಲಾಗಿತ್ತು.

ಅವರನ್ನು ಅಮರ ನೀತಿ ನಾಯನಾರರು ನೋಡಿದರು. ಅವರ ಹೃದಯಕ್ಕಿಂತಲೂ ಹೆಚ್ಚಾಗಿ ಅವರ ಮುಖ ಅರಳಿತು. ಕೂಡಲೆ ಅವರ ಸನಿಹಕ್ಕೆ ಬಂದು ಅವರಿಗೆರಗಿ ಮೈಯಿಕ್ಕಿದರು. " ಈ ಮಠದಲ್ಲಿ ಈವರೆವಿಗೂ ಕಾಣದ ಪರಿಯಲಿ ಬಂದಿರುವಿರಿ. ನೀವು ಇಲ್ಲಿಗೆ ಬಿಜಯಂಗೆಯ್ಯಲು ನಾನು ಮಾಡಿದ ಸುಕೃತವೇನೋ !" ಎಂದು ನುಡಿದು ವಿನಯದಿಂದ ಸ್ವಾಗತಿಸಿದರು. ಬಂದವರು ಮನದಲ್ಲಿ ಮುದಗೊಂಡು "ನೀವು ಶಿವ-ಶರಣರಿಗೆ ಉಣಬಡಿಸಿ, ಉಡುಗೆಯನ್ನೂ, ಚಿಂದಿಯನ್ನೂ, ನಡುಪಟ್ಟಿಯನ್ನೂ. ಕಚ್ಚುಟವನ್ನೂ, ಕೋವಣವನ್ನೂ, ನೀಡುತ್ತಿರುವಿರೆಂದು ಕೇಳಿದ್ದೇವೆ. ನಿಮ್ಮನ್ನು ಕಾಣಲು ತವಕದಿಂದ ಬಂದಿದ್ದೇವೆ " ಎಂದರು.

" ಇಲ್ಲಿ ಬ್ರಾಹ್ಮಣರಿಗೂ ಸಹ ಊಟಕ್ಕೆ ವಸತಿ ಮಾಡಿದ್ದೇವೆ. ತಾವು ಇಲ್ಲಿ ಆರೋಗಿಸಲು ದಯೆಗೈಯಬೇಕು " ಎಂದು ಬಿನ್ನವಿಸಿದರು. " ಒಳ್ಳೆಯದು. ಕಾವೇರಿಯಲ್ಲಿ ಮಿಂದು ಬರಲು ನಾವು ಹೋಗುವೆವು. ಒಂದು ವೇಳೆ ಮಳೆ ಬಂದೊಡೆ ಈ ಕೌಪೀನಗಳೆರಡೂ ನೆನೆದು ಹೋಗುವವು. ಆದ್ದರಿಂದ ಒಂದನ್ನು ನಿಮ್ಮಲ್ಲಿ ಕೊಡುತ್ತೇವೆ. ನಾವು ತಿರುಗಿ ಬರುವಾಗ ನಮಗೆ ಕೊಡಬೇಕು. ಇದರ ಹಿರಿಮೆಯನ್ನು ನಾವು ಬಿತ್ತಿ ಹೇಳಬೇಕಾದ ಅಗತ್ಯವಿರುವುದಿಲ್ಲ " ಎಂದು ಬ್ರಹ್ಮಚಾರಿಗಳು ನುಡಿದರು.

ಹೀಗೆಂದು ದಂಡದಲ್ಲಿದ್ದ ಕೌಪೀನಗಳಲ್ಲಿ ಒಂದನ್ನು ಬಿಚ್ಚಿ ಅಮರ ನೀತಿ ನಾಯನಾರರ ಕೈಗೆ ಕೊಟ್ಟು ಬೀಳ್ಕೊಂಡರು. ನಾಯನಾರರು ಕೋವಣವನ್ನು ಬೇರೆಯಾಗಿ ಒಂದೆಡೆಯಲ್ಲಿ ಜತನ ಮಾಡಿಟ್ಟರು.

ಪರಶಿವನ ಮಾಯೆಯಿಂದ ಅಮರನೀತಿಗಳಿಗೆ ಇತ್ತ ಕಚ್ಚುಟವು ಮಾಯವಾಯಿತು. ಬೀಳ್ಕೊಂಡು ಹೋದ ಬ್ರಹ್ಮಚಾರಿಗಳು ಕಾವೇರಿಯಲ್ಲಿ ಮಿಂದರೋ. ಗಂಗೆಯಲ್ಲಿ ಜಳಕ ಮಾಡಿದರೋ ಅರಿಯೆವು. ಮಳೆಯಲ್ಲಿ ತೊಯ್ದು ಬಂದರು. ಪಾಪ ! ಇಲ್ಲಿ ಅಮರನೀತಿಗಳ ಅಕ್ಕರೆಯಲ್ಲೂ ತೊಯ್ಯಬೇಕಾದೀತು ! ಅಮರನೀತಿ ನಾಯನಾರರು ಷಡ್ರಸ ಭೋಜನವನ್ನು ಸಿದ್ಧಪಡಿಸಿ ಕೈಮುಗಿದು ಬ್ರಾಹ್ಮಣರನ್ನು ಸ್ವಾಗತಿಸಿದರು.

ಬ್ರಹ್ಮಚಾರಿಗಳು ಮುಗುಳುನಗೆಯಿಂದ "ಮಳೆಯಲ್ಲಿ ನನೆದಿದ್ದೇವೆ. ಒದ್ದೆಯನ್ನು ಬದಲಾಯಿಸಬೇಕು. ದಂಡಿನಲ್ಲಿರುವ ಕೋವಣವೂ ಸಹ ಒದ್ದೆಯಾಗಿದೆ. ಆದುದರಿಂದ ನಾವು ಕೊಟ್ಟ ಕೌಪೀನವನ್ನು ತಳುವು ಮಾಡದೆ ತಂದುಕೊಡಿ" ಎಂದರು. ಬ್ರಹ್ಮಚಾರಿಗಳ ಕಪಟವರ್ತನೆಯನ್ನರಿಯದ ಅಮರನೀತಿ ನಾಯನಾರರು ತಾನು ಕೌಪೀನವನ್ನು ಇರಿಸಿದ್ದ ಸ್ಥಳದಲ್ಲಿ ಹೋಗಿ ನೋಡಿದರು. ಕಚ್ಚುಟವು ಅಲ್ಲಿ ಇರಲಿಲ್ಲ. ಬೇರೆಡೆಗಳೆಲ್ಲೂ ಹುಡುಕಿದರೂ ಸಿಗಲಿಲ್ಲ. ಅತ್ತ ಇತ್ತ ಓಡಾಡಿ ತಡಕಾಡಿದರು. ಏನೂ ಫಲವಿಲ್ಲ. ದಿಗಿಲುಬಿದ್ದಿತು. ಅವರ ಸತಿಯೂ ಇತರರೂ ಇದನ್ನರಿತು ಕಳವಳಗೊಂಡರು. ಅಮರನೀತಿಗಳು ಮಾಡುವುದೇನೆಂದರಿಯದೆ ಖಿನ್ನರಾಗಿ ನಿಂತಲ್ಲೇ ನಿಂತುಬಿಟ್ಟರು. ಆದರೆ ಹಾಗೆಯೇ ನಿಂದಿರಲು ಸಾಧ್ಯವೇ ? ಚೆಲುವಿನ ಹೊಸದೊಂದು ಕೋವಣವನ್ನು ತೆಗೆದುಕೊಂಡು ಬಂದರು.

"ಅಡಿಗಳೇ ! ತಾವು ಕೊಟ್ಟ ಕೌಪೀನವು ನಾನಿಟ್ಟಿದ್ದ ಸ್ಥಳದಿಂದ ಹೇಗೋ ಮಾಯವಾಗಿದೆ. ಅದನ್ನು ತೆಗೆದುಕೊಳ್ಳುವಂಥವರು ಯಾರೂ ಇರುವುದಿಲ್ಲ. ಇಂಥ ಸೋಜಿಗವನ್ನು ಈ ವರೆವಿಗೆ ನಾನು ಕಂಡಿಲ್ಲ. ಬೇರೆ ಒಳ್ಳೆಯ ಕೌಪೀನವನ್ನು ತಂದಿರುವೆನು. ಇದು ಬೇರೊಂದಿನಿಂದ ಹರಿದದ್ದಲ್ಲ. ಪ್ರತ್ಯೇಕವಾಗಿ ನೇಯ್ದದ್ದು. ಕೃಪೆ ಮಾಡಿ ಇದನ್ನು ಪತಿಕರಿಸಿ ನನ್ನ ಅಪರಾಧವನ್ನು ಕ್ಷಮಿಸಬೇಕು" ಎಂದು ಬಿನ್ನವಿಸಿಕೊಂಡರು. ಇದನ್ನು ಕೇಳಿದ ಬ್ರಹ್ಮಚಾರಿಗಳು ಕಡು ಮುಳಿದು "ಅಮರನೀತಿಗಳೇ! ನಿಮ್ಮ ನಿಲುವು ಬಲು ಚೆನ್ನಾಗಿದೆ ! ಕೌಪೀನವನ್ನು ನಿಮ್ಮಲ್ಲಿ ಇಂದು ಇಟ್ಟು ಹೋದೆವು. ಒಂದು ದಿವಸ ಸಹ ಕಳೆದಿಲ್ಲ. ನನ್ನ ಕೋವಣವನ್ನು ಕವರ್ದುಕೊಂಡು ಪ್ರತಿಯಾಗಿ ಬೇರೊಂದು ಕೋವಣವನ್ನು ಕೊಳ್ಳಿರೆನ್ನುವಿರಿ. ಚೆನ್ನು ! ಚೆನ್ನು !! ಅಂದದ ಕಚ್ಚುಟವನ್ನು ಈವೆನೆಂದು ಲೋಕಕ್ಕೆಲ್ಲಾ ಸಾರಿದುದು ನನ್ನ ಕೋವಣವನ್ನು ಅಪಹರಿಸಲೋಸುಗವೆಂದು ಕಾಣುತ್ತದೆ. ಇದು ಚೆಂದದ ವಾಣಿಜ್ಯವಯ್ಯ !" ಎಂದು ಆಕ್ರೋಶದಿಂದ ಜರೆದರು.

ಅಮರ ನೀತಿಗಳು ಈ ಮಾತುಗಳನ್ನು ಕೇಳಿ ಗಾಬರಿಗೊಂಡು ಬಸವಳಿದು ತಳ್ಳಂಕದಿಂದ ನಡುಗುತ್ತ, "ಅಡಿಗಳೇ! ಇದು ನಾನು ತಿಳಿದು ಮಾಡಿದ ತಪ್ಪಲ್ಲ.

ನನ್ನನ್ನು ದಯವಿಟ್ಟು ಕ್ಷಮಿಸಬೇಕು." ಎಂದು ವಟುರೂಪದ ಶಿವನ ಅಡಿಗಳಿಗೆರಗಿ ಮರುಗಿದರು. "ತಮಗೆ ಸಲ್ಲತಕ್ಕ ಸೇವೆಗಳನ್ನು ಯಾವ ಚ್ಯುತಿಯೂ ಇಲ್ಲದೆ ಮಾಡುವೆನು. ಈ ಹೊಸ ಕೌಪೀನದ ಜೊತೆಗೆ ಪೊನ್ನುಗಳಂ, ಮಣಿಗಳಂ, ಪಟ್ಟಾವಳಿಗಳಂ ಸಾಟಿಯಾಗೀವೆಂ. ಮುನಿವರ್ಯ. ಕೈಕೊಂಬುದು." ಎಂದು ಹಲವು ಬಾರಿ ಅವರ ಪಾದಕ್ಕೆರಗಿ ತತ್ತರಗುಟ್ಟುತ್ತ ಬೇಡಿದರು. ಹಾಗೆ ಮಣಿದ ಅಮರ ನೀತಿ ನಾಯನಾರರನ್ನು ನೋಡಿ ಬ್ರಹ್ಮಚಾರಿಗಳು ಕೋಪವಡಗಿದವರಂತೆ ಕಾಣಿಸಿಕೊಂಡು, "ನಮಗೆ ಹೊನ್ನುಗಳೇಕೆ ? ಮಣಿಗಳೇತಕ್ಕೆ ? ಪಟ್ಟಾವಳಿಗಳೇಕೆ ? ನಮ್ಮ ಕೋವಣಕ್ಕೆ ಸಾಟಿಯಾದ ಕೋವಣವನ್ನಿತ್ತರೆ ಸಾಕು." ಎಂದರು. ಇದನ್ನು ಕೇಳಿದ ಅಮರ ನೀತಿಗಳು ಮನದಲ್ಲಿ ಪ್ರಫುಲ್ಲಿತರಾಗಿ ಹರ್ಷದಿಂದ ನಿಡುಸುಯ್ದರು. "ಬ್ರಹ್ಮಚಾರಿಗಳೇ ! ನಿಮ್ಮ ಕೌಪೀನಕ್ಕೆ ಸಾಟಿಯಾದ ಕೌಪೀನವನ್ನು ನಾನು ಹೇಗೆ ಕೊಡತಕ್ಕದ್ದು ?" ಎಂದು ಪ್ರಶ್ನಿಸಿದರು. ಅದಕ್ಕೆ ಬ್ರಹ್ಮಚಾರಿಗಳು "ಇಗೋ ! ಈ ದಂಡದಲ್ಲಿರುವ ಕೌಪೀನವು ನೀವು ಕಳೆದುಕೊಂಡ ಕೌಪೀನಕ್ಕೆ ಎಣೆಯಾದದ್ದು. ಇದರ ತೂಕಕ್ಕೆ ಸಮವಾಗಿ ಕೌಪೀನವನ್ನು ನೀವು ಕೊಡತಕ್ಕದ್ದು," ಎಂದರು. ಇದನ್ನು ಕೇಳಿದ ಅಮರ ನೀತಿಗಳು ಒಳ್ಳಿತೆಂದು ಸಂತಸಗೊಂಡು ಒಂದು ತೂಗು ತೊಲೆಯನ್ನು ತಂದು ನಿಲ್ಲಿಸಿದರು. ತ್ರಾಸಿನ ಒಂದು ತಟ್ಟೆಯಲ್ಲಿ ಬ್ರಹ್ಮಚಾರಿಗಳು ತಮ್ಮ ದಂಡದಿಂದ ತೆಗೆದ ಕೌಪೀನವನ್ನಿಟ್ಟರು. ಅಮರ ನೀತಿ ನಾಯನಾರ್ ತನ್ನ ಕೈಯಲ್ಲಿದ್ದ ನೆಯ್ದ ಹೊಸ ಕೌಪೀನವನ್ನು ಮತ್ತೊಂದು ತಟ್ಟೆಯಲ್ಲಿಟ್ಟರು. ಸಮತೂಕವಾಗದೆ ಬ್ರಹ್ಮಚಾರಿಗಳ ಕೌಪೀನವಿದ್ದ ಬಟ್ಟಲು ನೆಲಕ್ಕೆ ಜೋಲುತ್ತಿತ್ತು. ಜಂಗಮರಿಗೆಂದು ಇಟ್ಟಿದ್ದ ಹೊಸ ಕೌಪೀನಗಳಲ್ಲಿ ಒಂದೊಂದಾಗಿ ತೆಗೆದು ಅಮರ ನೀತಿಗಳು ತಕ್ಕಡಿಯ ತಟ್ಟೆಯಲ್ಲಿಟ್ಟರು. ಆದಾಗ್ಯೂ ತೂಕ ಸಮವಾಗಲಿಲ್ಲ. ಹೊಸ ಕೌಪೀನಗಳನ್ನಿಟ್ಟಿದ್ದ ತಟ್ಟೆ ಮೇಲು ಮೇಲಕ್ಕೆ ಹೋಗುತ್ತಿತ್ತು. ಇದನ್ನು ಕಂಡ ನಾಯನಾರರು ಅಚ್ಚರಿಗೊಂಡರು. "ಇದೇನು ಮಾಯವೋ! ಬ್ರಹ್ಮಚಾರಿಗಳ ಈ ಕೌಪೀನಕ್ಕೆ ಹಲವು ಕೋವಣಗಳೂ ಸಾಟಿಯಿಲ್ಲವಲ್ಲಾ!" ಎಂದು ವಿಸ್ಮಯಗೊಂಡರು. ಪಟ್ಟಾವಳಿಗಳನ್ನು ತಂದು ತಕ್ಕಡಿಯ ಬಟ್ಟಲಲ್ಲಿಟ್ಟಾಗ್ಯೂ ಮುನ್ನಿನ ಮಾಳ್ಕೆಯಲ್ಲಿ ತಟ್ಟೆ ಮೇಲಕ್ಕೇರಿದುದನ್ನು ನೋಡಿ ಅಮರನೀತಿ ನಾಯನಾರರು ಹಂಸಾವಳಿ ನೇತ್ರಾವಳಿಗಳ ಹಿಂಡುಗಳನ್ನು ತರಿಸಿ ತಟ್ಟೆಯಲ್ಲಿಟ್ಟರು. ಆದರೂ ಸಹ ಪಟ್ಟಾವಳಿಗಳನ್ನು ಪೇರಿಸಿದ ಪರಡಿ ಮೇಲಕ್ಕೇಳಲು ಬ್ರಹ್ಮಚಾರಿಗಳ ಕೋವಣದ ಪರಡಿ ನೆಲಕ್ಕೆ ತಗ್ಗಿತು. ಇದನ್ನು ಕಂಡು ಅಮರನೀತಿ ನಾಯನಾರ್ ಅಳುಕಿದರು. ಬ್ರಹ್ಮಚಾರಿಗಳನ್ನು ನಮಸ್ಕರಿಸಿ, 'ಸ್ವಾಮಿ ! ಲೆಕ್ಕವಿಲ್ಲದ ಪಟ್ಟಾವಳಿಗಳನ್ನೂ ಹಂಸಾವಳಿ ದಿಂಡುಗಳನ್ನು ಇಟ್ಟರೂ ತಕ್ಕಡಿಯ ಬಟ್ಟಲು ಮೇಲೇಳುತ್ತಲೇ ಇರುವುದು. ಆದುದರಿಂದ ಸಮತೂಕ ಮಾಡಲು ನನ್ನ ಇತರ ಧನದ್ರವ್ಯಗಳನ್ನು ತಟ್ಟೆಯಲ್ಲಿಡಲು ಅಪ್ಪಣೆ ಕೊಡಬೇಕು ' ಎಂದು ಬೇಡಿದರು. ಅದಕ್ಕೆ ಬ್ರಹ್ಮಚಾರಿಗಳು 'ನಿಮ್ಮ ಮಾತಿಗೆ ಪ್ರತಿಯಾಗಿ ನಾವು ಹೇಳತಕ್ಕದ್ದು ಏನೂ ಇಲ್ಲ. ನಿಮ್ಮ ಧನವನ್ನಾದರೂ ಇಡಿ; ದ್ರವ್ಯಗಳ

ನ್ನಾದರೂ ಇರಿಸಿ ; ಅದು ಕೌಪೀನಕ್ಕೆ ಸಮ ತೂಕವಾಗಿರಬೇಕು' ಎಂದರು. ಆಗ ಅಮರ ನೀತಿಗಳು ತಮ್ಮಲ್ಲಿದ್ದ ಹೊನ್ನು ಬೆಳ್ಳಿಗಳನ್ನೂ ಇತರ ಲೋಹಗಳನ್ನೂ, ನವರತ್ನಗಳನ್ನೂ ಹೊರೆ ಹೊರೆಯಾಗಿ ತಕ್ಕಡಿಯ ಬಟ್ಟಲಲ್ಲಿ ತಂದೊಡ್ಡಿದರು. ಆದಾಗ್ಯೂ ಆ ಬಟ್ಟಲು ಮೇಲಕ್ಕೆ ನಿಂತಿತ್ತು.

ಇಂತು ತಮ್ಮ ಧನಕನಕಾದಿಗಳನ್ನು ಹಚ್ಚಿದರೂ ತೂಕ ಸಮವಾಗದಿರಲು ಅಮರ ನೀತಿ ನಾಯನಾರರು ಬ್ರಹ್ಮಚಾರಿಗಳನ್ನು ನೋಡಿ "ಅಡಿಗಳೇ ! ನನ್ನಲ್ಲಿರುವ ದ್ರವ್ಯಗಳನ್ನೆಲ್ಲಾ ತಂದಿಟ್ಟಿರುವೆನು. ನಾನೂ, ನನ್ನ ಸತಿಯೂ, ನನ್ನ ಸುತನೂ ಈಗ ಉಳಿದಿರುವೆವು. ತಕ್ಕಡಿಯ ಈ ತಟ್ಟೆಯ ಮೇಲೆ ಏರಲು ಈಗ ನಮಗೆ ಅಪ್ಪಣೆಯಾಗಬೇಕು." ಎಂದರು. ಯಥಾರ್ಥವಾದ ಜಂಗಮ ಸೇವೆ ಮಾಡುವ ಅಮರ ನೀತಿಗಳ ಭಕ್ತಿಯ ಫಲಕ್ಕೆ ಬ್ರಹ್ಮಚಾರಿ ರೂಪಿನ ಉಮಾಪತಿ ಮೆಚ್ಚಿ, ತ್ರಾಸಿನ ಮೂಲಕ ನಾಯನಾರರ ನಿಲುವನ್ನು ಎತ್ತರಿಸಬೇಕೆಂತಲೂ, ಇಹಲೋಕದ ತಾಪತ್ರಯಗಳಿಂದ ಅತನನ್ನು ಬಿಡಿಸಬೇಕೆಂತಲೂ ಬಗೆದು ಅಮರ ನೀತಿಗಳ ಮಾತಿಗೆ ಒಡಂಬಟ್ಟರು. ನಾಯನಾರರು ಸಂತಸಗೊಂಡು, ಬ್ರಹ್ಮಚಾರಿಗಳ ಅಡಿಗಳಿಗೆರಗಿ ಸತಿಸುತರ ಸಹಿತ ತ್ರಾಸನ್ನು ಬಲವಂದು "ನಾವು ಇದು ವರೆಗೆ ಶಿವಶರಣರಿಗೆ ಸಲ್ಲಿಸಿದ ಸೇವೆಯು ನಿರ್ದೋಷವೆಂಬುದು ಸತ್ಯವಾದರೆ ಈ ತೊಲೆಯು ಈಗ ಸಮದಂಡಿಯೊಳು ನಿಲ್ಲಲಿ" ಎಂದು ನುಡಿದು ಹರ್ಷಚಿತ್ತರಾಗಿ, ಪಂಚಾಕ್ಷರಿಯನ್ನು ಪಠಿಸುತ್ತ ತಕ್ಕಡಿಯ ತಟ್ಟೆಯ ಮೇಲೆ ಮೂವರೂ ಏರಿದರು. ಪರಶಿವನ ಕಚ್ಚುಟದ ಹಿರಿಮೆಯೂ ಅಮರ ನೀತಿಗಳ ಜಂಗಮ ಸೇವೆಯ ಹಿರಿಮೆಯೂ ಓರಂದವಾಗಿರಲು ತ್ರಾಸಿನ ಎರಡು ಪರಡಿಗಳೂ ಒಂದೇ ಸಮವಾಗಿದ್ದವು. ಈ ಅದ್ಭುತವನ್ನು ಕಂಡವರೆಲ್ಲರೂ ಅಮರನೀತಿ ನಾಯನಾರರನ್ನು ಕೊಂಡಾಡಿದರು. ದೇವತೆಗಳು ಅಲರ್ಮಳೆಗರೆದರು. ಮಹೇಶ್ವರನು ತಾನು ತಳೆದಿದ್ದ ಬ್ರಹ್ಮಚಾರಿಯ ರೂಪವನ್ನು ಕಳೆದು ಉಮೆಯೊಡನೆ ವೃಷಭಾರೂಢನಾಗಿ ಮೈದೋರಿದನು. ಪರಶಿವನ ಪರಮೂರ್ತಿಯನ್ನು ಕಂಡು ಅಮರನೀತಿನಾಯನಾರರು ಸತಿಸುತರೊಡಗೂಡಿ ಪರಮಾನಂದ ಹೊಂದಿ ಭಯಭಕ್ತಿಯಿಂದ ಕೈಗಳಂ ಮುಗಿದು ಪ್ರೊಡಮಟ್ಟು ಮುಕ್ಕಣ್ಣನನ್ನು ಸ್ತುತಿಸಿದರು. ತ್ರಾಸಿನ ಬಟ್ಟಲಲ್ಲಿ ನಿಂದು ಸ್ತುತಿಸುತ್ತಿರುವ ಮೂವರ ಮೇಲೆ ಮೃಡನು ಕರುಣಾ ಕಟಾಕ್ಷವನ್ನು ಬೀರಿ ಅವರಿಗೆ ಶಾಶ್ವತವಾದ ಗಣಪದವನ್ನಿತ್ತನು. ಶಿವಾನುಗ್ರಹದಿಂದ ಅಮರನೀತಿಗಳೇರಿದ್ದ ಬಟ್ಟಲು ದಿವ್ಯ ವಿಮಾನವಾಗಿ ಪರವರ್ತನೆಗೊಂಡು ಗಗನಕ್ಕೆ ಹಾರಿ ರಜತ ಗಿರಿಯನ್ನೈದಿತು. ಅಮರ ನೀತಿಗಳು ಕುಟುಂಬ ಸಮೇತರಾಗಿ ಕೈಲಾಸ ಸ್ಥಾನ ಮಂಟಪದೊಳು ಪ್ರಮಥರೊಡನೆ ಕೂಡಿ ನಿತ್ಯಾನಂದವನ್ನು ಅನುಭವಿಸುತ್ತಿರುವರು.

"ಸರಿಯ ಕೌಪದೀ ಕಾಪ ಸರಿದೂಗೆನಲು ಸಕಲ ಮುಖದಿಂ ತೂಗಿ ಮೆರೆದಮರನೀತಿಗಳ ಚರಣಾಂಬುಜಕ್ಕೆ ಶರಣು"

★ ಎಂ. ವ್ಹಿ. ಜಂಬುನಾಥನ್

ಸಿದ್ಧರಾಮನ ವಚನವುಳ್ಳ ಅಪ್ರಕಟಿತ ಶಾಸನಗಳು

ಸೊನ್ನಲಿಗೆಯ ಸಿದ್ಧರಾಮನ ವಚನವುಳ್ಳ ಅನೇಕ ಶಾಸನಗಳು ಅಪ್ರಕಟವಿದ್ದವು. ಈ ಕೊರತೆಯನ್ನು ಪಾರ್ಶ್ವವಾಗಿ ನೀಗಿಸುವ ಉದ್ದೇಶದಿಂದ, ಇಟ್ಕಲ್ ಮತ್ತು ಮಂತ್ರವಾಡಿ ಶಾಸನಗಳನ್ನು ಪರಿಷ್ಕರಿಸಿ ಕರ್ನಾಟಕ ಭಾರತಿಯ ಹಿಂದಿನ ಸಂಚಿಕೆಯೊಂದರಲ್ಲಿ ಪ್ರಕಟಿಸಿದೆ.[೧] ಡಾ. ಕಲಬುರ್ಗಿಯವರ ಪಟ್ಟಿಕೆಯಲ್ಲಿ ಇನ್ನೂ ಎರಡು ಶಾಸನಗಳು ಅಪ್ರಕಟಿತವೆಂದು ತಿಳಿದು,[೨] ಅವುಗಳನ್ನು ಅಭ್ಯಸಿಸುವ ಯೋಜನೆಯಲ್ಲಿ ಸಿದ್ಧರಾಮನ ವಚನವುಳ್ಳ ಮತ್ತೊಂದು ಹೊಸ ಶಾಸನವು ಬೆಳಕಿಗೆ ಬಂದಿತು. ಈ ಲೇಖನದಲ್ಲಿ ಈ ಮೂರೂ ಶಾಸನಗಳನ್ನು ಪರಿಷ್ಕರಿಸಿ ಪ್ರಕಟಿಸುತ್ತಿದ್ದೇನೆ. ಇಲ್ಲಿಗೆ ಸಿದ್ಧರಾಮನ ಶಾಸನವುಳ್ಳ ಎಲ್ಲ ೨೨ ಶಾಸನಗಳೂ ಪ್ರಕಟಿತವಾದಂತಾಯಿತು.[೩]

ಈ ಮೂರು ಶಾಸನಗಳಲ್ಲಿ ಒಂದು ಉತ್ತರ ಸೊಲ್ಲಾಪುರದ ಮೊಹೋಳ ತಾಲೂಕಿನಲ್ಲಿಯೂ ಇನ್ನೆರಡು ಉಸ್ಮಾನಾಬಾದ್ ಜಿಲ್ಹೆಯ ತುಳಜಾಪುರ ತಾಲೂಕಿನಲ್ಲಿಯೂ ದೊರೆತವು. ತುಳಜಾಪುರ ತಾಲೂಕಿನ ನೀಲೆಗಾಂವ ಶಾಸನವು ಯಾದವ ಭಿಲ್ಲಮನ ಕಾಲಕ್ಕೂ, ಮೊಹೋಳ ತಾಲೂಕಿನ ಜಾಮಗಾಂವ್ ಶಾಸನ ಮತ್ತು ತುಳಜಾಪುರದ ಕೇಶೇಗಾಂವ ಶಾಸನಗಳು ಯಾದವ ಜೈತುಗಿಯ ಕಾಲಕ್ಕೂ ಸೇರಿದವು. ಕೇಶೇಗಾಂವ ಶಾಸನವು ಹೊಸದಾಗಿ ದೊರೆತ ಶಾಸನವು. ನೀಲೇಗಾಂವ ಮತ್ತು ಕೇಶೇಗಾಂವ ಶಾಸನಗಳು ನಂದಿಸ್ತಂಭಗಳ ಮೇಲಿವೆ. ಹಿಂದಿನ ಲೇಖನದಲ್ಲಿ ಇಟ್ಕಲ್ ಶಾಸನವು ನಂದಿಸ್ತಂಭದ ಮೇಲಿದೆಯೋ ಇಲ್ಲವೋ ಎಂಬುದರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದೆ. ಈಗ ಆ ಶಾಸನವೂ ಕೂಡ ನಂದಿಸ್ತಂಭದ ಮೇಲಿದೆಯೆಂದು ಖಚಿತವಾಗಿದೆ. ಜಾಮಗಾಂವ ಶಾಸನವು ಮಾರುತಿ ಗುಡಿಯ ಕಟ್ಟಡದಲ್ಲಿ ಕಟ್ಟಿರುವುದರಿಂದ ಅದು ನಂದಿಸ್ತಂಭದ ಮೇಲಿದೆಯೋ ಇಲ್ಲವೊ ಎಂಬುದು ಅನುಮಾನಾಸ್ಪದ. ಈ ಶಾಸನಗಳ ವೈಶಿಷ್ಟ್ಯವೆಂದರೆ ಇದು ವರೆಗೆ ನಮಗೆ ತಿಳಿದಿರುವ ೨೨ ಶಾಸನಗಳಲ್ಲಿ

---

೧. ನಾಗರಾಜರಾವ್ ಎಂ. ಎಸ್., "ಸಿದ್ಧರಾಮನ ಎರಡು ಶಾಸನಗಳು" ಕರ್ನಾಟಕ **ಭಾರತಿ,** ಸಂಪುಟ: ೩, ಸಂಚಿಕೆ: ೪, ಪುಟಗಳು: ೭-೧೪.

೨. ಕಲಬುರ್ಗಿ, ಎಂ. ಎಂ.. ಶಾಸನಗಳಲ್ಲಿ ಶಿವಶರಣರು, ಪು. ೭೫ ೭೬.

೩. ಚಿತ್ರದುರ್ಗ ಶಾಸನವನ್ನು (EC. XI ಚಿತ್ರದುರ್ಗ ೩) ಸೇರಿಸಿದರೆ ೨೩ ಶಾಸನಗಳಾಗುತ್ತವೆ. ಆದರೆ ಆ ಶಾಸನವು ಜೆಮ್ಮತ್ತನ ಕಲ್ಲು ಸಿದ್ಧನಾಥನಿಗೆ ಸಂಬಂಧಿಸಿದ ಕಾರಣ ಇದನ್ನು ಸೊನ್ನಲಿಗೆ ಸಿದ್ಧರಾಮನ ಶಾಸನಗಳೊಂದಿಗೆ ಸೇರಿಸಲು ಸಾಧ್ಯವಿಲ್ಲ.

ಇಟ್ಗಿಲ್, ನೀಲೇಗಾಂವ್ ಮತ್ತು ಕೇಶೇಗಾಂವ ಶಾಸನಗಳನ್ನು ಕೂಡಿ ಒಟ್ಟು ೧೪ ಶಾಸನಗಳು ಇಂತಹ ನಂದಿಸ್ತಂಭಗಳ ಮೇಲೆ ಇವೆ.[೪]

೧. ಯಾದವ ಭಿಲ್ಲಮನ ನಿಲೇಗಾಂವ ಶಾಸನ

ಈ ಶಾಸನವು ನೀಲೆಗಾಂವ ಗ್ರಾಮಪಂಚಾಯತಿಯ ಕಚೇರಿಯ ಮುಂದೆ ಕಟ್ಟೆಯೊಂದರ ಮೇಲೆ ನಿಲ್ಲಿಸಿರುವ ನಂದಿಸ್ತಂಭದ ಒಂದು ಮುಖದ ಮೇಲೆ ಬರೆದಿದೆ. ಸ್ತಂಭವು ಚೌಕಾಕಾರದ ಎರಡು ಭಾಗವನ್ನು ಅವುಗಳ ನಡುವೆ ಅಷ್ಟಾಕಾರ ಭಾಗವನ್ನು ಹೊಂದಿದೆ. ಸ್ತಂಭದ ಮೇಲೆ ಸೊಗಸಾದ ನಂದಿಯೊಂದು ಕಡೆಯಲ್ಪಟ್ಟಿದೆ. ಬಸವಣ್ಣನ ಕಂಠವು ಆಭರಣಯುಕ್ತವೂ ಘಂಟಾಮಾಲೆಯನ್ನು ಹೊಂದಿಯೂ ಇದೆ. ಈ ಮೂರ್ತಿಯು ನೈಜವಾಗಿಯೂ, ಸುಂದರವಾಗಿಯೂ ಚಿತ್ರಿಸಲ್ಪಟ್ಟಿದೆ. ಆದರೆ ಮುಖದ ಭಾಗವು ಒಡೆದಿದೆ.

ಶಾಸನವು ಸಿದ್ಧರಾಮನ ವಚನಪೂರ್ಣ ಪಾಠದಿಂದ ಪ್ರಾರಂಭವಾಗುತ್ತದೆ. (ಸಾಲುಗಳು ೧ ರಿಂದ ೧೬). ಆದರೆ ವಚನದ ಕೊನೆಯಲ್ಲಿ "ಸಿದ್ಧರಾಮನ ವಚನ" ವೆಂದಾಗಲಿ, "ಗುರು ವಚನ" ವೆಂದಾಗಲಿ ಇಲ್ಲ. ಆದರೆ ವಚನದ ಪೂರ್ಣಪಾಠದಿಂದ ಇದು ಸಿದ್ಧರಾಮನ ವಚನವೆಂಬುದು ನಿಸ್ಸಂದೇಹ. ನಂತರ ಯಾದವ ಭಿಲ್ಲಮನ ಗುಣವರ್ಣನೆಯಿದೆ (ಸಾಲುಗಳು ೧೭ ರಿಂದ ೨೫). ಮುಂದೆ ಶಾಸನದ ಕಾಲವಿದೆ. ಶಾಸನದ ಪ್ರಕಾರ ಇದು ಯಾದವ ಭಿಲ್ಲಮಚಕ್ರವರ್ತಿಯ ೭ ನೆಯ ವರ್ಷದ ಪರೀಧಾವಿ ಸಂವತ್ಸರ ಜೇಷ್ಠ ಬಹುಳ, ಪಂಚಮಿ ಸೋಮವಾರ ದಕ್ಷಿಣಾಯನ ಸಂಕ್ರಾಂತಿ ವ್ಯತಿಪಾತದ ದಿವಸ (ಸಾಲುಗಳು ೨೬ ರಿಂದ ೨೯). ತದನಂತರ ಮಹಾಪ್ರಧಾನ ಖೇಯದೇವ ನಾಯಕನ ಗುಣ ಮತ್ತು ಬಿರುದಾವಳಿಗಳನ್ನೂ (ಸಾಲುಗಳು ೩೦–೩೭) ಮತ್ತು ವಿಜಯಪುರದಲ್ಲಿ ಆಳುತ್ತಿದ್ದ ಮಹಾಮಂಡಳೇಶ್ವರ ಶಿಲಾಹಾರ ದಾಂಕರಸ ಮಲ್ಲಿದೇವರಸನ ಶೌರ್ಯದ ವರ್ಣನೆಯೂ (ಸಾಲುಗಳು ೩೮–೪೫) ಇವೆ. ನಂತರದಲ್ಲಿ ಅಂಕುಲಗೆ ೮೦೨ ವಿಭಾಗದ ಬಳಿಯ ಕುಳಿಯ ಭಾಗದೊಳಗಿರುವ ನೀಲೆಯಗಾಂವೆ ಗ್ರಾಮವನ್ನು ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನದೇವರ ಅಂಗಭೋಗ ರಂಗಭೋಗ, ಜೀರ್ಣೋದ್ಧಾರ ಮತ್ತು ಅನ್ನಸತ್ರಕ್ಕೆ ಧಾರಾಪೂರ್ವಕವಾಗಿ ದಾನ ಮಾಡಿದರೆಂದು ತಿಳಿದುಬರುತ್ತದೆ.

ಶಾಸನದಲ್ಲಿ ಉಲ್ಲೇಖಿಸಿರುವ ಕಾಲ, ಯಾದವ ಭಿಲ್ಲಮನ ೭ನೆಯ ವರ್ಷ. ಭಿಲ್ಲಮನು ಕ್ರಿ.ಶ. ೧೧೭೩ ರಿಂದ ೧೧೯೨ ವರೆಗೆ ಆಳಿದನೆಂದು ವಿದ್ವಾಂಸರ ಅಭಿ

೪. ಉಳಿದ ೧೧ ನಂದಿಸ್ತಂಭಗಳ ಬಗ್ಗೆ ನೋಡಿ: ನಾಗರಾಜರಾವ್, ಎಂ. ಎಸ್. "ಸಿದ್ಧರಾಮನ ಎರಡು ಶಾಸನಗಳು", **ಕರ್ನಾಟಕ ಭಾರತಿ**, ಸಂಪುಟ ೨, ಸಂಚಿಕೆ: ೪, ಪು. ೩೪.

ಪ್ರಾಯ.[೫] ಆದರೂ ಅವನ ಕಾಲದ ಎಣಿಕೆಯು ಕ್ರಿ.ಶ. ೧೧೮೫ರಲ್ಲಿ ಪ್ರಾರಂಭವಾಗಿರಬೇಕು. ಏಕೆಂದರೆ ಈ ಅರಸನ ೨, ೩ ಇತ್ಯಾದಿ ವರ್ಷಗಳ ಉಲ್ಲೇಖವಿರುವ ಶಾಸನಗಳು ಇವೆ.[೬] ಅವುಗಳ ಎಣಿಕೆಯಂತೆ ಇವನ ೭ನೆಯ ವರ್ಷವು ಕ್ರಿ. ಶ. ೧೧೯೨ ಇರಬೇಕು. ಮತ್ತು ಪ್ರಸ್ತುತ ಶಾಸನದಲ್ಲಿರುವ ಪರಿಧಾವಿ ಸಂವತ್ಸರವು ಕ್ರಿ.ಶ. ೧೧೯೨ಕ್ಕೆ ಹೊಂದುತ್ತದೆ.[೭]

ಶಾಸನದಲ್ಲಿ ಉಲ್ಲೇಖಿಸಿರುವ ಸ್ಥಳಗಳೆಂದರೆ, ಕೂರ್ಮಗಿರಿ (ಸಾಲು ೨೫), ವಿಜೆಯಪುರ (ಸಾಲು ೩೮), ಅಂಕುಲಗೆ (ಸಾಲು ೪೫), ಕುಳಿಯ (ಸಾಲು ೪೬), ನೀಲೆಗಾಂವ (ಸಾಲು ೪೬), ಶ್ರೀಶೈಲ ಮತ್ತು ಸೊಂನಲಿಗೆ (ಸಾಲು ೪೭). ವಿಜೆಯಪುರ ವಿಜಾಪುರವೆಂದೂ. ಅಂಕುಲಗಿಯು ಅಕ್ಕಲಕೋಟೆಯೆಂದು ಗುರುತಿಸಬಹುದು. ಕೂರ್ಮಗಿರಿಯನ್ನು ಮತ್ತು ಕುಳಿ ಅಥವಾ ಕುಳಿಯವನ್ನು ಗುರುತಿಸಲು ಅಸಾಧ್ಯವಾಗಿದೆ. ನೀಲೆಗಾಂವೆಯು ಶಾಸನವು ದೊರೆತಿರುವ ನೀಲೆಗಾಂವೆ. ಶ್ರೀಶೈಲವು ಪ್ರಸಿದ್ಧ ಯಾತ್ರಾ ಸ್ಥಳವು. ಸೊಂನಲಿಗೆಯಂತೂ ಇಂದಿನ ಸೊಲ್ಲಾಪುರ.

ನೀಲೆಗಾಂವ ಶಾಸನದ ಪೂರ್ಣಪಾಠ

೧. ಓಂ ಜಯಪರಮೇಶ್ವರ ಪರಮಾತ್ಮ ಈಶ್ವರನು ಉಬ್ಬಿರ್ಪಬ್ಬಿರ್ ಯಡಂಗಿಕೊಂಡಿಪ್ಪನು ಒಬ್ಬಂಣಿ[೮]ಗೆಯಾಗಿ

೨, ಯೋಗಿಗಳ ಮನದ ಕೊನೆಯ ಜ್ಯೋತೀಶ್ವರನುಂ ವ್ರಿಷಭನ ರೂಪಾಗಿ

೩. ಯಜಮಾನನುಂ ಆಚಾರ್ಯ್ಯನುಂ ತಾನೆಯಾಗಿ ಯೋಗಾದಿ ಸಂಪಂನ ಖಳೆಯಂ[೯]

---

೫. Narasinha Murthy, A. V., The Sevunas of Devagiri. P. 64. *A History of Karnataka*. P. 225.

೬. Mudnur inscription, ARIE 1960-61; Nimbal inscription EI, Vol. XXVIII. ಈ ಮಾಹಿತಿಯನ್ನು ಕೊಟ್ಟ ಡಾ. ರಿತ್ತಿಯವರಿಗೆ ಕೃತಜ್ಞತೆಗಳು. Desai, P B. (Ed)

೭. Ketkar, V. B., "Indian and Foreign Chronology" *JBBRAS*, No. LXXV-A, Extra number, (1923), P. 194.

೮. ಓರ್ವಂಸಿಂಗೆ, ಪ್ರೊಬ್ಬಣ್ಣಿಗೆ, ಸೋವ್ವಣ್ಣಿಗೆ, ಓಬ್ಬಣ್ಣಿಗೆ ಮುಂತಾದ ವಿವಿಧ ಪಾಠಗಳಿವೆ. ವಿವರಗಳಿಗೆ ನೋಡಿ: ವೃಷಭೇಂದ್ರಸ್ವಾಮಿ, ಎಸ್. ಎಂ., "ಶಾಸನಗಳಲ್ಲಿ ಶ್ರೀ ಸಿದ್ಧರಾಮನ ವಚನಗಳು" The Karnatak University, Humanities, vol. X 1966,— p-204.

೯. "ಬಳೆಯು" (ಚುರ್ಗಿ, ಸಂಗೂರ) ಮತ್ತು "ಕಳಿಯಂ" (ಗುಂಡ ಕರ್ಜಗಿ) ಶಾಸನಗಳಲ್ಲಿ ಪಾಠಾಂತರವಿದೆ.

೪. ಗಳೆಲ್ಲವಂ ಸಂಪಾದಿಸಿ ಯೋಗರಮಣೀಯಂ ಕ್ಷೇತ್ರಮನೆ ತಳವಿಟ್ಟು[೧೦] ಶಳಾಖೆ[೧೧]ವಿಡಿದು ಅಭಿನವ

೫. ಶ್ರೀಶೈಳ ವನೆ ಮಾಡಿ ಕಪಿಲ ಸಿದ್ಧ ಮಲ್ಲೇಶ್ವರ ದೇವನೆ ನೆಲಸಿನಿಂದು ಪುಂಣ್ಯ ಪಾಪಂಗಳಂ ಬರ

೬. ಪೇಳ್ದು ಬೆಸಂ ಪೇಳುತ್ತವಿರಲು ಯೇಂ ಬೆಸಂ ದೇವಾಯೆನಲು ಈ ಸ್ಥಾನದಲು ಮಾಂನ್ಯ

೭. ವಾಗಿ ಪೂರುಗಳಂ ಭೂಮಿಗಳಂ ಧನಂಗಳಂ ಯಿ ಲಿಂಗಕ್ಕೆ ಹಸ್ತೋದಕಂ ಮಾಡಿಕೊಟ್ಟುದುಮಂ

೮. ಮನಂ ಪೆಸದೆ ಕಳೆದುಕೊಂಡಿಹೆನೆಂಬಾತನ ಆತನಮಾತಾಮಾತಾ ಪಿತೃಗಳೆಲ್ಲ ಯೆಪ್ಪತ್ತೇಳ ಕೋ

೯. ಟಿ ವರ್ಷಂಬರಂ ಪುಳುಗೊಂಡದ ನರಕದೊಳಗಿಕ್ಕಿ ನೀನಾಹುತಿ ಗೊಳುತ್ತಿರು ಗಂಡಾ

೧೦ ಯೆಲೆ ಪಾಪವೇ ಯಿದೇವನ ಭೂಮಿಧನಕ್ಕಾನಂಜುವೆನೆಂದು ಪಾವಡ-ರ್ದ್ದಂತೆ ಮನಂ ಬೆದಱೆ ಪೊಡ

೧೧. ವಟ್ಟನ ಬೇಗ ಶೀಘ್ರಂ ಕೊಂಡು ಬಾ ಕಂ

೧೨. ಡಾ ಯೆಲೆ ಪುಂಣ್ಯವೆ ಕ ವಿಳಾ

೧೩. ಸಕ್ಕೆ ಯಿಂತೆರಡಱ ಬೆಂಗ[೧೨] ಪುಂ

೧೪. ಣ್ಯ ಪಾಪಂಗಳುಂ ಪಾದ್ರ್ದ ಕೊಂಡೊ

೧೫. ಯ್ವುದು ತಪ್ಪದು ದಿಕ ದಿಕಂ

೧೬. ಸತ್ಯಂ ಗಂಡಿರೆ ||[೧೩]

---

೧೦. "ಸ್ಥಳವಿಟ್ಟು" ಎಂದು ಮಂತ್ರವಾಡಿ, ಇಟ್ಕಲ್ ಶಾಸನಗಳಲ್ಲಿದೆ.

೧೧. "ಸಲಾಖೆ" ಎಂದು ಕೆಲ ಶಾಸನಗಳಲ್ಲಿದೆ,

೧೨. "ಬೆಂಸಲು" ಎಂಬ ರೂಪವು ಇಟ್ಕಲ್ ಮತ್ತು ಮಂತ್ರವಾಡಿ ಶಾಸನಗಳಲ್ಲಿ ಇದೆ.

೧೩. ಜಾಮಗಾಂವ್ ಶಾಸನದಲ್ಲಿ "ಗುರುಸಿದ್ಧ ರಾಮನಾಥ" ಎಂಬ ಪಾಠಾಂತರವಿದೆ. ಪ್ರಸ್ತುತ ಶಾಸನದಲ್ಲಿಯೂ, ಕೇಶೇಗಾಂವದ ಶಾಸನದಲ್ಲಿಯೂ ಹಸೂ ಇಲ್ಲ. ಆದರೂ ಇವುಗಳಲ್ಲಿರುವ ವಚನವು ಸಿದ್ಧರಾಮನದೆಂಬುದು ಅನುಮಾನವಿಲ್ಲದ ವಿಷಯ. ಈ ಬಗ್ಗೆ ಪಾಠಾಂತರ ವೈಪರೀತ್ಯವನ್ನು ವಿವೇಚಿಸುತ್ತಾ, ಶ್ರೀ ವೃಷಭೇಂದ್ರ ಸ್ವಾಮಿಯವರು, "ಜಂಬಗಾಂವ್ ಮತ್ತು ಇಟ್ಕಲ್ ಶಾಸನಗಳನ್ನು ಬಿಟ್ಟರೆ ೧೨೫೬ರ ಸೊರಬ ಶಾಸನದ ವರೆಗೆ, ಎಲ್ಲಿಯೂ, 'ಶ್ರೀ ಸಿದ್ಧರಾಮನಾಥನ ಶ್ರೀವಚನ' ಎಂಬುದು ಕಾಣಿಸುತ್ತಿಲ್ಲ", ಎಂದು ಹೇಳಿದ್ದಾರೆ. The Karnatak University Journal, Humanities, vol. X, 1966. p–205.
ಇಟ್ಕಲ್ ಶಾಸನದಲ್ಲಿ "ಗುರು ವಚನ" ವೆಂದಿವೆ ಮತ್ತು ಜಂಬಗಾಂವ ಶಾಸನದಲ್ಲಿ "ಗುರು ಸಿದ್ಧರಾಮನಾಥ" ನೆಂದು ಮಾತ್ರವಿದೆ. ಕ್ರಿ. ಶ. ೧೨೩೪ರ ಮಂತ್ರವಾಡಿ ಶಾಸನದಲ್ಲಿ "ಗುರುಸಿದ್ಧ ರಾಮನಾಥ ದೇವರ ವಚನ" ವೆಂದಿರುವುದನ್ನು ಇಲ್ಲಿಗಮನಿಸಬಹುದು.

೧೭. ಸ್ವಸ್ತಿ ಸಮಧಿಗತ ಪಂಚ ಮಹಾ
೧೮. ಶಬ್ದ ದ್ವಾರಾವತೀಪುರವರಾಧೀಶ್ವರ
೧೯. ವಿಷ್ಣು ವಂಶೋದ್ಭವಂ ಯಾದವ
೨೦. ಕುಳಕಮಳಕಳಿಕಾವಿಕಾ
೨೧. ಸ ಭಾಸ್ಕರ ಮಾಳವಿ ಮಲ್ಲ ಯರಿರಾ
೨೨. ಯ ಪುರ ಸೆಲ್ವ ಗೂರ್ಜ್ಜರ ವಾರಣಾಂ
೨೩. ಕು ಶಂ ಯರಿರಾಯ ಜಗಝ್ಝಂ
೨೪. ಪ ರಾಯ ವಿಭ್ರಾಡ ರಾಯ ನಾರಾ
೨೫. ಯಣಂ ಪ್ರತಾಪ ಚಕ್ರವರ್ತಿ ಭಿಲ್ಲ
೨೬. ಮ ದೇವ ವರ್ಷದ ೭ ಪರಿಧಾವಿ ಸಂವ
೨೭. ತ್ಸರದ ಜ್ಯೈಷ್ಟ ಬಂ ಸೋಮವಾ
೨೮. ರ ದಕ್ಷಿಣಾಯ ಶಂಕ್ರಾಂ
೨೯. ತಿ ವೆತಿಪಾತದಂದು ○ ಸ್ವಸ್ತಿ ಸ
೩೦. ಮಸ್ತ ಪ್ರಶಸ್ತಿ ಸಹಿತಂ
೩೧. ಶ್ರೀ ಮದುಪ್ಪರ ವಟ್ಟ ದಖಣಾಧಿ
೩೨. ಪತಿ ಸೂಳವಾಳ ದಧಿಷ್ಟಾಯ
೩೩. ಕಂ ಯರಿಬಿರುದ ಮಂಡಳಿಕ ಮ
೩೪. ಕರ ವಗ್ರಾಹು ಹೊಯ್ಸಣ ದಿಸಾಪ
೩೫. ಟ್ಟ ಕೂರ್ಮ್ಮಗಿರಿ ದೇಶ ಘರಟ್ಟ ಹಟ್ಟ
೩೬. ಗಾಱರಾಜ್ಯ ನಿರ್ಮೂಳ್ಮಳ ಮಕ
೩೭. ರ ಮುರಾರಿ ಶ್ರೀಮನು ಮಹಾ ಪ್ರಧಾನಂ ಖೇಯ
ದೇವ ನಾಯಕರುಂ ಸಂಗಮದೇವನುಂ ಗೊಯೆ (?)
೩೮. ಯ ಸಾಹಣಿಯರುಂ ಮುಖ್ಯವಾಗಿ ○ ○ ಶ್ರೀಮನು
ಮಹಾ ಮಂಡಳೇಶ್ವರಂ ವಿಜಯಪುರ ವರಾ
೩೯. ಧೀಶ್ವರಂ ಜೀಮೂತ ವಾಹನಾನ್ವಯಾಂಬರ ಶರಚ್ಚಂ-
ದ್ರ ವಿಭವಾ ಮರೇಂದ್ರ ಸಮಸ್ತಾಶ್ರಿ
೪೦. ತ ಜನ ದಾರಿದ್ರಾದ್ರಿ ಕುಳೀಶ ದಂಡಶಿಳಹಾರ
ಕುಳ ಕಮಳ ಮಾರ್ತ್ತಂಡ ರಿಪು ಮಂಡ
೪೧. ಳಿಕ ಮಂಡಳೋತ್ಪಾತ ರಾಜ ಮಂಡಲ ಶತ್ರು ಜನ
ಯುವತೀ ಮುಖ ಕಮಳ ಹಿಮಾಕರ
೪೨. ಸಂಗ್ರಾಮ ಭಯಂಕರ ಮಂ ನೆಯ ವಲ್ಲಭಂ ಭುವನಲೋ
ಭ ದುರ್ಲ್ಲಭಂ ಆಳಿಂ ಮುಂನಿಟ ಮಂ

೪೩. ಸೌರ್ಯ್ಯ ಮಂ ಮೆಱೆವ ಚಲದಂಕರಾಮ ಸಂಗ್ರಾಮ ಭೀಮ
ಯೇಕಾಂಗ ವೀರ ಸೂದ್ರ ಕಾವತಾರ ಶ್ರೀ

೪೪. ಚಾಮುಂಡೀ ದೇವಿಯ ಲಬ್ಧ ವರ ಪ್ರಸಾದ ದಾನ ವಿನೋದ
ಯಿನ್ತೀ ನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ

೪೫. ಶ್ರೀ ಮನು ಮಹಾ ಮಂಡಳೇಶ್ವರಂ ದಾಂಕರಸ ಮಲ್ಲಿದೇವ
ರಸರುಂ ಅಂಕುಲಗೆ ಯೆಂಭತ್ತ

೪೬. ಱ ಬಳಿಯ ಬಾಡ ಕುಳಿಯ ಭಾಗದೊಳಗಣ ನೀಲೆ
ಯಗಾಂವೆ ಯ ದಕ್ಷಿಣ ವಾರಣಾಸಿ ಅಭಿನವ

೪೭. ಶ್ರೀ ಶೈಳವೆನಿಪ್ಪ ಸೊಂನಲಿಗೆಯ ಶ್ರೀ ಕಪಿಲ ಸಿದ್ಧ
ಮಲ್ಲಿಕಾರ್ಜುನ ದೇವರ ಅಂಗ ಭೋಗ ರಂಗ ಭೋ

೪೮. ಗ ಜೀರ್ಣ್ನೋದ್ಧಾರಕ್ಕೆ ಅವಾರಿ ಛತ್ರಕ್ಕೆ ಗಿರಿತರು
ಜಲ ಪಾಷಾಣ ಸ

೪೯. ಹಿತವಾಗಿ ಸರ್ಬ್ಬನಮಶ್ಯವಾಗಿ ಧಾರಾಪೂರ್ವ್ವಕಂ
ಮಾಡಿ ಕೊಟ್ಟ ಧರ್ಮ್ಮ ಚಂದ್ರಾ

೫೦. ರ್ಕ್ಕ ತಾರಂ ಬರಂ ಸಲುಗು ಯಿಧರ್ಮ್ಮವ ಪ್ರತಿ
ಪಾಳಿಸಿದವರು ಕವಿಳಾಸ ಪ್ರಾಪ್ತ

೫೧. ವಪ್ಪರು ಯಿೂ ಧರ್ಮ್ಮಕ್ಕೆ ವಕ್ರಸ್ಥವಾದವರು ಯ
ಘೋಗತಿಗಿಳಿವರು

೨. ಯಾದವ ಜೈತುಗಿಯ ಜಾವಗಾಂವ್ ಶಾಸನ

ಈ ಶಾಸನವು ಈ ಗ್ರಾಮದ ಮಾರುತಿಯ ಗುಡಿಯ ಬಾಗಿಲ ಮೇಲ್ಭಾಗ ದಲ್ಲಿ ಗೋಡೆಯಲ್ಲಿ ಸೇರಿಸಲ್ಪಟ್ಟಿದೆ. ಉಳಿದ ಶಾಸನಗಳಂತೆ ಸಿದ್ಧರಾಮನ ವಚನದಿಂದ ಶಾಸನವು ಪ್ರಾರಂಭವಾಗುತ್ತದೆ(ಸಾಲುಗಳು ೧ ರಿಂದ ೨೮). ವಚನವು "ಗುರುಸಿದ್ಧ ರಾಮನಾಥ" ಎಂದು ಕೊನೆಗೊಳ್ಳುತ್ತದೆ. ನಂತರ ಯಾದವ ಚಕ್ರವರ್ತಿ ಜೈತುಗಿಯ ಸಾಹಸ ವರ್ಣನೆಯಿದೆ. (ಸಾಲುಗಳು ೨೧ ರಿಂದ ೨೯) ಮುಂದೆ ಶಾಸನದ ಕಾಲದ ಉಲ್ಲೇಖವಿದೆ. ಇದರ ಪ್ರಕಾರ ಶಾಸನದ ಕಾಲವು ಶಕ ವರ್ಷ ೧೧೧೭ನೆಯ ರಾಕ್ಷಸ ಸಂವತ್ಸರದ ಪುಷ್ಯ ಬಹುಳ ೧೩ (ತ್ರಯೋದಸಿ) ಸೋಮವಾರವು (ಸಾಲುಗಳು ೨೯ ರಿಂದ ೩೧). ನಂತರ, ಮಹಾಪ್ರಧಾನ ದಾಂಮುಗಿದೇವ ಮತ್ತು ಅವನ ಪುತ್ರ ಹೊನ್ನೋಜ ದಂಡ ನಾಯಕ, ಇವರುಗಳ ಗುಣ ವರ್ಣನೆಯಿದೆ. (ಸಾಲುಗಳು ೩೧ ರಿಂದ ೪೩). ಈ ಹೊನ್ನೋಜ ದಂಡನಾಯಕನು, ಸೂರ್ಯ ಗ್ರಹಣ ಪರ್ವ ನಿಮಿತ್ತವಾಗಿ, ಅಂಕುಲಗೆ ನಾಡಿನೊಳಗಿರುವ ಜಂಬುಗಾವೆಯನ್ನು, ಸೊಂನ್ನಲಿಗೆಯ ಕಪಿಲಸಿದ್ಧ

ಮಲ್ಲಿಕಾರ್ಜುನ ದೇವರ ಅಂಗಭೋಗ, ರಂಗಭೋಗ, ನೈವೇದ್ಯ ಮತ್ತು ಅನ್ನ ಸತ್ರಕ್ಕೆ ಧಾರಾಪೂರ್ವಕವಾಗಿ ದಾನ ಮಾಡಿದನೆಂದು ತಿಳಿದುಬರುತ್ತದೆ.

ಶಕ ವರ್ಷ ೧೧೧೭ನೆಯ ವರ್ಷ ಕ್ರಿ. ಶ. ೧೧೯೫ನೇ ವರ್ಷಕ್ಕೆ ಹೊಂದುತ್ತದೆ. ಈ ವರ್ಷವೇ ರಾಕ್ಷಸ ಸಂವತ್ಸರವಿದ್ದಿತು.[೧೪] ಶಾಸನದಲ್ಲಿ ಶ್ರೀಶೈಲ, ಸೊನ್ನಲಿಗೆ, ಅಂಕುಲಗೆ ಮತ್ತು ಜಂಬುಗಾಂವೆಯ ಉಲ್ಲೇಖವಿದೆ. ಮೊದಲಿನ ಮೂರು ಊರುಗಳು ಚಿರಪರಿಚಿತವಿವೆ. ಜಂಬುಗಾಂವೆಯಾದರೋ ಈ ಶಾಸನ ದೊರೆತಿರುವ, ಜಾಮಗಾಂವ ಎಂದು ಗುರುತಿಸಬಹುದು.

ಜಾಮಗಾಂವ ಶಾಸನದ ಪೂರ್ಣಪಾಠ

೧. * ಓಂ ಜಯ ಪರಮೇಶ್ವರ ಪರಮಾತ್ಮ ಯಿಶ್ವರ (ನುರ್ವಿ)
೨. (ಪ) ಬ್ರ್ಯ ಯಡಂಗಿ ಕೊಂಡಿಪ್ಪನು ಪೂರ್ಬ್ಬಣ್ಣಿಗೆ[೧೫] (ಯಾ)
೩. (ಗಿ) ಯೋಗಿಗಳ ಮನದ ಕೊನೆಯ ಜ್ಯೋತೀಶ್ವ(ರ)
೪. (ನುಂ ವೃ) ಷ ಭನ ರೂಪಾಗಿ ಯಜಮಾನನುಂ
೫. (ಆಚಾ)ರ್ಯನುಂ ತಾನೆಯಾಗಿ ಯೋಗಾದಿ ಸಂಪಂನ ಕಳೆ
೬. (ಯಂಗಳೆ)[೧೬]ಲ್ಲವಂ ಸಂಪಾದಿಸಿ ಯೋಗರ ಮಣೀಯ ಕ್ಷೇತ್ರವ
೭. (ನೆಸ್ತಳವಿ)ಟ್ಟು ಶಳಾಕೆ[೧೭]ವಿಡಿದು ಅಭಿನವ ಶ್ರೀಶೈಲ ಮನೆ
೮. ಮಾಡಿ ಕಪಿಲ ಸಿದ್ಧ ಮಲ್ಲಿಕಾರ್ಜ್ಜುನ ದೇವನೆ ನೆಲಸಿ ನಿಂದು
೯. ಪುಂಣ್ಯ ಪಾಪಂಗಳಂ ಬರಸಿದ್ದುರ್ ಬೆಸಂ ಪೇಳುತ್ತ ವಿರ
೧೦. ಲು ಯೆಂ ಬೆಸಂ ದೇವಾ ಯೆನಲು ಯಿ ಸ್ಥಾನದಲು ಮ
೧೧. ನ್ಯವಾಗಿ ಪೂರುಗಳಂ ಭೂಮಿಗಳಂ ಧನಂಗಳಂ ಯಿ
ಲಿಂಗಕ್ಕೆ
೧೨. ಹಸ್ತೋದಕಂ ಮಾಡಿಕೊಟ್ಟುದುವಂ ಮನಂ ಪೆಸದೆ ಕಳ
ದು ಕೊಂ
೧೩. ಡೆ ಹೆ ನೆಂಬಾತನ ಆತನ ಮಾತಾ ಮಾತಾ ಪಿತೃಗಳೆಲ್ಲ
೧೪. ಯೆಪ್ಪತ್ತೇಳು ಕೋಟಿ ವರ್ಷಂಬರಂ ಪುಳುಗೊಂಡದ
ನರಕದೊಳಗಿ
೧೫. ಕ್ಕಿ ನೀನಾಹುತಿಗೊಳುತ್ತಿರು ಕಂಡಾ ಯೆಲೆ ಪಾಪವೆ ಯಿ
೧೬. ದೇವನ ಭೂಮಿ ಧನಕ್ಕಾನಂಜುವೆನೆಂದು ಪಾವಡದ್ದನ್ತೆ

---

೧೪. Ketkar, V. B. *op. cit.* p. 194

೧೫. ಪಾದಸೂಚಿ ೮ರಂತೆಯೆ

೧೬. ಪಾದಸೂಚಿ ೯

೧೭. ಸಲಾಕೆ

ಮನಂ ಬೆ

೧೭. ದಟಿ ಪೊಡೆವಟ್ಟನಂ ಬೇಗ ಶೀಘ್ರಂ ಕೊಂಡು ವೆ
ಕಂಡಾ ಯೆಲೆ

೧೮. ಪುಂಣ್ಣ್ಯವೇ ಕವಿಳಾಸಕ್ಕೆ ಯಿಂತೆಟಡರ ಬೆಂಗ[೧೮]ಪುಂಣ್ಣ್ಯ
ಪಾಪಂ

೧೯. ಗಳುಂ ಪಾದ್ರ್ದಕೊಂಡಿದೊರ್ಯುವ್ವದು ತಪ್ಪದು ದಿಟದಿಟಂ
ಸತ್ಯ

೨೦. ಗಂಡಿರೆ || ಗುರು ಸಿದ್ಧರಾಮನಾಥ[೧೯]

೨೧. * ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದಂ ದ್ವಾರಾವತಿ ಪು

೨೨. ರವರಾಧೀಶ್ವರಂ ವಿಷ್ಣು ವಂಶೋದ್ಭವಂ ಯಾದವಕು

೨೩. ಳ ಕಮಳ ಕಳಿಕಾ ವಿಕಾಸ ಭಾಸ್ಕರ ಮಾಳವಿ ಮಲ್ಲ

೨೪. ಯರಿರಾಯಪುರ ಸಿಲ್ತ ಗೂರ್ಜ್ಜರ ವಾಣಾಂಕುಷಂ ಯ

೨೫. ರಿರಾಯ ಜಗಜ್ಝಂಪರಾಯ ವಿಭ್ರಾಡ ರಾ

೨೬. ಯ ನಾರಾಯಣ ಪ್ರತಾಪ ಚಕ್ರವರ್ತಿ ಜಯಿತು

೨೭. ಗಿ ದೇವ ವಿಜಯ ರಾಜ್ಯಮುತ್ತರೋತ್ತರಾಭಿವಿರ್ಧಿ ಪ್ರ

೨೮. ವರ್ದ್ಧವಮಾನ ಮಾಚಂದ್ರಾರ್ಕ್ಕ ತಾರಂ ಬರಂ ಸಲುತ್ತವಿ

೨೯. ರಲು ಶ್ರೀಮತು ಸಕವರ್ಷದ ೧೧೧೭ ನೆಯ ರಾ

೩೦. ಕ್ಷಸ ಸಂವತ್ಸರದ ಪುಷ್ಯ ಬಹುಳ ೧೩ ದಷಿ[೨೦] ಸೋಮ

೩೧. ವಾರದಲು ತತ್ಪಾದ ಪದ್ಮೋಪ ಜೀವಿ ಶ್ರೀ ಮನು

೩೨. ಮಹಾ ಪ್ರಧಾನಂ ಸೇನಾಧಿಪತಿಂ ಕಾಸ್ಮೀರ ವಂಶೋದ್ಭವ ಸಾ(ಹ)

೩೩. ಸಿಕುಳತಿಳಕ ಸರಸ್ವತಿ ಕಂಠಾಭರಣ ನುಂ ವಿವೇಕ ವಿ

೩೪. ದ್ಯಾಧರನುಂ ವಿನೆಯರತ್ನಾಕರ ನುಂ ಕಲಿಯುಗ ಯು

೩೫. ಧಿಷ್ಟಿರನುಂ ವಿಪ್ರಕುಳ ಚೂಡಾಮಣಿಯುಂ

೩೬. ಸಮಸ್ತಗುಣ ಸಂಪಂನರಪ್ಪ ಶ್ರೀಮತು ವಾಂಮಗಿ

೩೭. ದಂಡನಾಯಕರ ಸುಪುತ್ರಂ ಸ್ವಸ್ತಿ ಶ್ರೀಮತು ಸ

೩೮. ಮಸ್ತ ಪ್ರಸಸ್ತಿ ಸಹಿತಂ ಶ್ರೀ ಮನು ಮಹಾ ಪ್ರಧಾನ

೩೯. ಸಿದ್ಧೇಶ್ವರ ದೇವರ ಪಾದ ಅಂಕಿತಾ ಭ್ರಮರನುಂ ಯನವ

೪೦. ರತ ದೇವ ದ್ವಿಜ ಪೂಜಾ ತತ್ಪರರುಂ ಗೋತ್ರ ಪವಿತ್ರ

೪೧. ನು ಯಿಷ್ಟ ಜನಕಲ್ಪ ವ್ರಿಕ್ಷನುಂ ಯಾಶ್ರಿತ

---

೧೮. ಪಾದಸೂಚಿ ೧೨ರಂತೆಯೆ

೧೯. ಪಾದಸೂಚಿ ೧೩ನ್ನು ನೋಡಿ

೨೦. ತ್ರಯೋದಶಿ ಎನ್ನಲು ೧೩ ಬರೆದು 'ದಷಿ' ಎಂದು ಸೇರಿಸಿದೆ.

೪೨. ಜನ ಚಿಂತಾಮಣಿಯುಂ ಅನೇಕಗುಣಗಣಾಳಂಕ್ರಿತ
೪೩. ನುಮಪ್ಪ ಶ್ರೀಮತು ಹೊಂನೋಜ ದಂಣ್ನಾಯಕರು ಸೂ
೪೪. ರ್‍ಯ್ಯ ಪರ್‍ವ್ವ ನಿಮಿತ್ತವಾಗಿ (ಶ್ರೀಮತು
೪೫. ದಕ್ಷಿಣ ವಾರಣಾಸಿ ಅಭಿನವ ಶ್ರೀಶ್ರೈಲವೆ (ನಿಪ)
೪೬. ಮಹಾಸಿದ್ಧಕ್ಷೇತ್ರ ಸೊನ್ನಲಿಗೆಯ ಪುರದ ಶ್ರೀ... ...
೪೭. ಕಪಿಲಸಿದ್ಧ ಮಲ್ಲಿಕಾರ್ಜ್ಜುನ ದೇವರ ಅ(ಂಗ ಭೋ)
೪೮. ಗ ರಂಗ ಭೋಗ ನಿವೇದ್ಯ ಅವಾರಿಛತ್ರಕ್ಕೆ (ಅಂಕು)
೪೯. ಲಗೆ ನಾಡೊಳಗಣ ಜಂಬುಗಾಂವೆಯನು ಸರ್‍ಬ್ಬ ನಮಸ್ಯ
೫೦. ವಾಗಿ ಧಾರಾಪೂರ್‍ಬ್ಬಕಂ ಮಾಡಿಕೊಟ್ಟ ಧರ್‍ಮ್ಮ ಆ ಚಂದ್ರಾ
೫೧. ರ್ಕ್ಕ ತಾರಂಬರ ಸಲ್ಗ ಲಕ್ಕಿಸೆಟ್ಟಿಯುಂ ನಾರಣದೇವ
೫೨. ನುಂ ಮುಖ್ಯವಾಗಿ ಕೊಟ್ಟ ಧರ್ಮಕ್ಕೆ ವಕ್ರಸ್ತವಾದರು
೫೩. ಅಧೋಗತಿಗಿಳಿವರು ಯಿ ಧರ್‍ಮ್ಮವಂ ಪ್ರತಿಪಾಳಿ (ಸಿ)
೫೪. ದವರು ಕೋಟಿ ಕವಿಲೆಯ ವಾರಣಾಸಿ ಯಲು ದಾನು ಮಾ
೫೫. ಡಿದ ನಿತು ಪುಣ್ಣ್ಯವಂ ಪಡೆವರು ಮಂಗಳ ಮಹಾ ಶ್ರೀ........

೩. ಯಾದವ ಜೈತುಗಿಯ ಕೇಶೇಗಾಂವ ಶಾಸನ

ಈ ಶಾಸನವು ಉದ್ದವಾದ ಚೌಕಾಕಾರದ ಸ್ತಂಭದ ಒಂದು ಮುಖದ ಮೇಲೆ ಬರೆದಿದೆ. ಮೇಲೆ, ಸುಂದರವಾದ ನಂದಿ ವಿಗ್ರಹವು ಇದೆ. ಉಳಿದ ಸ್ತಂಭಗಳ ನಂದಿಗಳಂತೆ, ಇದರ ಕುತ್ತಿಗೆಯ ಸುತ್ತಲೂ ಘಂಟಾಮಾಲೆಯು ಇದೆ. ದುರದೃಷ್ಟ ಸಂಗತಿಯೆಂದರೆ, ಇದರ ತಲೆ ಒಡೆದು ಹೋಗಿದೆ. ಈ ಸ್ತಂಭವು ಊರಿನ ಮಾರುತಿ ಗುಡಿಯ ಮುಂದೆ ನಿಲ್ಲಿಸಲ್ಪಟ್ಟಿದೆ.

ಶಾಸನವು ಸಿದ್ಧರಾಮನ ವಚನದಿಂದ ಪ್ರಾರಂಭವಾಗುತ್ತದೆ(ಸಾಲುಗಳು ೧ ರಿಂದ ೨೭). ನೀಲೇಗಾಂವ ಶಾಸನದಂತೆ, ಇಲ್ಲಿಯೂ "ಗುರುಸಿದ್ಧರಾಮನ ವಚನ" ವೆಂದಾಗಲೀ, "ಗುರು ವಚನ" ವೆಂದಾಗಲೀ ಉಲ್ಲೇಖವಿಲ್ಲ. ಆದರೆ, ಇದು ಸಿದ್ಧರಾಮನ ವಚನವೆಂಬುದು ನಿಸ್ಸಂದೇಹ. ನಂತರ ಯಾದವ ಜೈತುಗಿಯ ಸಾಹಸ ವರ್ಣನೆಯಿದೆ (ಸಾಲುಗಳು ೭೮–೩೪). ನಂತರ ಶಾಸನದ ಕಾಲ ವನ್ನು ಶಕ ವರ್ಷ ೧೧೧೯ನೆಯ ಪಿಂಗಳ ಸಂವತ್ಸರ, ಮಾಘ ಬಹುಳ ೧೦ (ದಶಮಿ) ಸೋಮವಾರವೆಂದು ತಿಳಿಸಿದೆ (ಸಾಲುಗಳು ೩೫–೩೭). ಮುಂದೆ, ನೀಲೇಗಾಂವ ಶಾಸನದಲ್ಲಿ ಬಂದಿರುವ ಖೇಯದೇವ ನಾಯಕ ಮತ್ತು ಸಂಗಮ ದೇವ ಇವರ ಉಲ್ಲೇಖವಿದೆ. (ಸಾಲುಗಳು ೩೭–೪೩). ನಂತರ ಮಹಾ ಮಂಡಳೇಶ್ವರ, ವಿಜಯೇಶ್ವರ ದೇವರ ಭಕ್ತ, ದಾಂಕರಸರು, ಅಂಕುಲಗೆ ೮೦

ವಿಭಾಗದ ಬಳಿಯ ಕೇಸೆಯಂಗಾಂವೆಯಂನ್ನು, ಸೊನ್ನಲಿಗೆಯ ಮಲ್ಲಿಕಾರ್ಜುನ ದೇವರ ಅಂಗರಂಗ ಭೋಗ, ಅನ್ನಸತ್ರ ಮತ್ತು ಜೀರ್ಣೋದ್ಧಾರಕ್ಕೋಸ್ಕರ ಧಾರಾಪೂರ್ವಕವಾಗಿ ದಾನವಾಡಿದರೆಂದು ತಿಳಿದುಬರುತ್ತದೆ(ಸಾಲುಗಳು ೪೩-೫೧). ಈ ಶಾಸನದಲ್ಲಿ ಉಲ್ಲೇಖಿಸಿರುವ ದಾಂಕರಸರು, ನೀಲಿಗಾಂವ ಶಾಸನದ ವಿಜಿಯಃಪುರದ ಮಹಾಮಂಡಳೇಶ್ವರ ದಾಂಕರಸರೇ ಎಂಬುದು ತಿಳಿದು ಬರುತ್ತದೆ. ಅಲ್ಲದೆ ತಂದೆ ಭಿಲ್ಲಮನ ಮಹಾಮಂಡಳೇಶ್ವರರು, ಮಗ ಜೈತುಗಿಯ ಕಾಲದಲ್ಲಿಯೂ ಮಹಾ ಮಂಡಳೇಶ್ವರರಾಗಿದ್ದರೆಂಬುದು ಗೊತ್ತಾಗುತ್ತದೆ. ಅದೇ ರೀತಿ ಈ ಶಾಸನದ ಖೇಯದೇವ ನಾಯಕರು ಮತ್ತು ಸಂಗಮದೇವನು, ನೀಲೆಗಾಂವ ಶಾಸನದಲ್ಲಿ ಹೇಳಿರುವ ಮಹಾಪ್ರಧಾನ ಖೇಯದೇವ ಮತ್ತು ಸಂಗಮದೇವರೆಂದು ತಿಳಿಯಬಹುದು.

ಶಾಸನದ ಕಾಲವು ಶಕೆ ವರ್ಷ ೧೧೧೯ ಎಂದಿದೆ. ಇದು ಕ್ರಿ. ಶ. ೧೧೯೭ ಕ್ಕೆ ಹೊಂದುತ್ತದೆ. ಅಲ್ಲದೆ ೧೧೯೭ ರಲ್ಲಿ ಪಿಂಗಳ ಸಂವತ್ಸರವಿದ್ದಿತೆಂಬುದು ಸರಿಯಾಗಿದೆ.[೨೧]

ಶಾಸನದಲ್ಲಿ ಉಲ್ಲೇಖಿಸಿರುವ ಸ್ಥಳಗಳೆಂದರೆ ಕೂರ್ಮ್ಮಗಿರಿ ಶ್ರೀಶೈಲ, ಸೊನ್ನಲಿಗೆ, ಅಂಕುಲಗೆ ಮತ್ತು ಕೆಸೆಯಗಾಂವೆ. ಮೊದಲಿನ ಮೂರು ಸ್ಥಳಗಳೂ ನೀಲೇಗಾಂವ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿವೆ, ಮತ್ತು ಗುರುತಿಸಲ್ಪಟ್ಟಿವೆ. ಇನ್ನು ಕೇಸೆಯಗಾಂವೆಯೂ ಶಾಸನ ದೊರೆತಿರುವ ಇಂದಿನ ಕೇಶೇಗಾಂವ.

ಕೇಶೇಗಾಂವ ಶಾಸನದ ಪೂರ್ಣ ಪಾಠ

೧. * ಸ್ವಸ್ತಿ ಶ್ರೀ ಯೊಂ ಜಯ ಪರಮೇಷ್ಪರ[೨೨] ಪರಮಾತ್ಮ
೨. ಈಸ್ವರನು[೨೩] ರ್ಬ್ಬಿ ಪರ್ವ್ವಯಡಂಗಿ
೩. ಕೊಣ್ಣ ಪರ್ದ್ದ ನೋಬ್ಬ೯ಂಣ್ಣಿಗೆ[೨೪]
೪. ಯಾಗಿ ಯೋಗಿಗಳ ಮನದ
೫. ಕೊನೆಯ ಜ್ಯೋತೀಸ್ವರನುಂ[೨೫] ವ್ರಿಷಭನ ರೂಪಾ
೬. ಗಿ ಯಜಮಾನ(ನುಂ) ಯಾಚಾರ್ಯನುಂ ತಾ
೭. ನೆಯಾಗಿ ಯೋಗಾದಿ ಸಂಪಂನ ಖಳೆಯ(ಂ)[೨೬]
೮. ಗಳಲ್ಲ ವಂ ಸಂಪಾದಿ(ಸಿ) ಯೋಗ ರಮಣೀಯ ಕ್ಷೇ

---

೨೧. Ketkar, V. B. *Op-cit.* p. 194.

೨೨. ಪರಮೇಶ್ವರ. ೨೪. ಪಾದಸೂಚಿ ೮ ರಂತೆಯೆ ೨೬. ಪಾದಸೂಚಿ ೯ ರಂತೆಯೆ

೨೩. ಈಶ್ವರ ೨೫. ಜ್ಯೋತೀಶ್ವರನುಂ

೯. ತ್ರವನೆ ಸ್ಥಳವಿಟ್ಟು ಶಲಾಕೆ ಪಿಡಿದು ಯಭಿನವ
೧೦. ಶ್ರೀಶೈಳವನೆ ಮಾಡಿ ಕಪಿಲಸಿದ್ಧ ಮಲ್ಲಿಕಾ
೧೧. ಜ್ರ್ಜುನ ದೇವನೆ ನೆಲಸಿ ನಿಂದು ಪುಣ್ಯ
೧೨. ಪಾಪಂಗಳಂ ಪೇಳ್ದು ಪೆಸಂ
೧೩. ಪೇಳುತ್ತ ವಿರಲು ಯೆಂ ಬೆಸಂ ದೇವಾ ಯೆ
೧೪. ನಲು ಯಿ ಸ್ಥಾನದಲು ಮಾಂನ್ಯವಾಗಿ ವೂರು
೧೫. ಗಳಂ ಭೂಮಿಗಳಂ ಧನಗಳಂ ಯಿೂ ಲಿಂಗಕ್ಕೆ
೧೬. ಹಸ್ತೋದಕಂ ಮಾಡಿ ಕೊಟ್ಟುದುವಂ ಮನಂ ಪೇ
೧೭. ಸದೆ ಕಳೆದು ಕೊಣ್ಡರ್ಪೆ ವೆಂಬಾತನ ಯಾ
೧೮. ತನ ಮಾತಾ ಪಿತ್ರುಗಳೆಲ್ಲರಂ ಯುಪ್ಪ
೧೯. ತ್ತೇಳು ಕೋಟಿ ವರ್ಷಂ ಬರಂ ಪುಳ್ಗೊಂಡದ ನರ
೨೦. ಕ ದೊಳಗಿಕ್ಕಿ ನೀನಾಹುತಿಗೊಳುತ್ತವಿರು ಗಂ
೨೧. ಡಾ ಯೆಲೆ ಪಾಪವೆ ಯಿ ದೇವನ ಭೂಮಿ ಧನಕ್ಕೆ
೨೨. ಯಾ ನಂಜುವೆನೆಂದು ಪಾವಡದರ್ದ್ದ
೨೩. ನ್ತೆ ಮನಂ ಬೆದಱಿ ಪೊಡವಟ್ಟನಂ (ಬೇಗ) ಶೀ
೨೪. ಘ್ರಂ ಕೊಂಡು ಬಾ ಕಂಡಾ ಯೆಲೆ ಪುಂ
೨೫. ಣ್ಯವೇ ಕವಿಳಾಸಕ್ಕೆ[೨೭]ಯಿನ್ತೆರಡಱ ಬೆಂಗೆ[೨೮] ಪುಂ
೨೬. ಣ್ಯ ಪಾಪಂಗಳು ಪಾದರ್ದ್ದ ಕೊಣ್ಡದ್ದ್ರಯ್ಯು
೨೭. (ದು) ತಪ್ಪದು ದಿಠ ದಿಠ ಸತ್ಯಂ ಗಣ್ಡರೆ[೨೯]
೨೮. ಸ್ವಸ್ತಿ ಸಮಧಿಗತ ಪಂಚ ಮಹಾ ಸಬ್ದ ದ್ವಾರಾವತೀ ಪು
೨೯. ರವರಾಧೀಶ್ವರ ವಿಷ್ಣು ವಂಶೋದ್ಭವ ಯಾದವ ಕುಳ ಕಮ
೩೦. ಳ ಕಳಿಕಾ ವಿಕಾಸ ಭಾಸ್ಕರ ಮಾಳವಿ ಮಲ್ಲ ಯರಿರಾ
೩೧. ಯ ವುರ ಸಿಲ್ಯ ಗೂಜ್ಜರ ವಾರಣಾಂಕುಶ ಯರಿರಾಯ
ಜಗ ಝಂ.
೩೨, ಪರಾಯ ವಿಭಾಡರಾಯನಾರಾಯಣ ಪ್ರತಾಪ
೩೩. ಚಕ್ರವರ್ತ್ತಿ ಶ್ರೀಮತು ಜೈತ್ರಿಪಾಳ ದೇವರಾಜ ಉತ್ತ
ರೋತ್ತರಾಭಿವ್ರಿ
೩೪. ದಿ ಪ್ರವರ್ದ್ಧ ಮಾನಮಾಚಂದ್ರಾರ್ಕ್ಕ ತಾರಂಬರ ಸಲುತ್ತಮಿರ
೩೫. ಲು ಶ್ರೀಮತು ಶಕ ವರ್ಷ ೧೧೧ (೯)ನೆಯ ಪಿಂ

---

೨೭. ಕೈಲಾಸ.
೨೮. ಪಾದಸೂಚಿ ೧೨ ರಂತೆಯೆ.
೨೯. ಪಾದಸೂಚಿ ೧೩ ರಂತೆಯೆ.

೩೬. ಗಳ ಸಂವತ್ಸರದ ಮಾಘ ಬಹುಳ ೧೦ ಸೋಮವಾರ (ವೆತಿಪಾ)
೩೭. ತ ಸೂರ್ಯ್ಯ ಗ್ರಹಣದಲು || ಸ್ವಸ್ತಿ ಸಮಸ್ತ ಪ್ರಸಸ್ತಿ ಸಹಿತಂ
೩೮. ಶ್ರೀ ಮತು ಉಪ್ಪುರವಟ್ಟ ದಕ್ಷಿಣಾಧಿಪತಿ ಸೂಳವಳಿ ಅಧಿ
೩೯. ಷ್ಟಾಯಾಕಂ ಯರಿಬಿರುದ ಮಂಡಳಿಕ ಮಕರಗ್ರಾಹು ಹೊ
೪೦. ಯ್ಸಣ ದಿಶಾಪಟ್ಟ ಕೂರ್ಮ್ಮಗಿರಿ ಘರಟ್ಟಹಟಗಾಜ ರಾಜ್ಯ
೪೧. ನಿರ್ಮೂಳ
೪೨. ಮಗರ ಮುರಾರಿಖೇಯ ...ನಾಯಕ........

ಜ ಸಂಗಮದೇವ

೪೩. ನುಂ|| ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಮನುಮಹಾಮಂಡ
ಳೇಶ್ವರಂ ವಿಜಿ
೪೪. ಯೇಶ್ವರ ದೇವರ ದಿವ್ಯ ಶ್ರೀಪಾದಾರಾಧಕರುಮಪ್ಪ ದಾಂಕರ
೪೫. ಸರಪ್ಪಯಂಗಳು ಶ್ರೀಮತು ದಕ್ಷಿಣ ವಾರಣಾಸಿ
೪೬. ಅಭಿನವ ಶ್ರೀಶೈಳವೆನಿಪ್ಪ ಸೊನ್ನಲಿಗೆಯ ಶ್ರೀ ಕಪಿಲ
ಸಿದ್ಧ ಮಲ್ಲಿಕಾ
೪೭. ಜ್ರ್ಜುನ ದೇವರ ಅಂಗಭೋಗ ರಂಗಭೋಗ ಅವಾರಿ ಚತ್ರ
ಖಣ್ಡಸ್ಫೋಟಿ
೪೮. ತ ಜೀರ್ಣೋದ್ಧಾರನಿತ್ಯನಿವೇದ್ಯಕ್ಕೆ ಅಂಕುಲಗೆಂಭತ್ತ
ಟಿಯೊ
೪೯. ಳ ಗಣ ಬಳಿಯ ಗ್ರಾಮು ಕೇಸೆಯಗಾಂವೆಯನ್ನು
ಗಿರಿದುರ್ಗ್ಗ
೫೦. ಜಲ ಪಾಸಾಣ ಸಹಿತವಾಗಿ ಸರ್ಬ್ಬನಮಸ್ಯವಾಗಿ
ಧಾರಾ ಪೂರ್ಬ್ಬ
೫೧. ಕಂ ಮಾಡಿ ಕೊಟ್ಟ ಧರ್ಮ್ಮ ಚಂದ್ರಾರ್ಕ್ಕ ತಾರಂಬರಂ
ಸಲ್ಗು ಈ ಧರ್ಮ ವಂ
೫೨. ಪ್ರತಿ ಪಾಳ್ಸಿ ದವ..........................ಧರ್ಮ್ಮ ಈ
ಧರ್ಮ್ಮಕ್ಕೆ ವಕ್ರಸ್ಥವಾದವ
೫೩. ರು ಅಧೋಗತಿಗಿಳಿವರು ಮಂಗಳ ಮಹಾ ಶ್ರೀಶ್ರೀಶ್ರೀ.

★ ಎಂ. ಎಸ್. ನಾಗರಾಜರಾವ್

ತಕರಾರು

ತಲೆಯ ಮೇಲೆ ಗಿಮಿ ಗಿಮಿ ಪಂಖ
ಬಾಹ್ಯಾಕಾಶದ ನೌಕೆ ಹೊಕ್ಕ ಅಂತರಂಗ
ತೆರಪಿಲ್ಲದ—
ಒತ್ತಡದ ಒಣಗಾಳಿ–ದೆವ್ವ
ಸೆಳಕು ಸೆಳಕಿನಲಿ ಬಂದು ಹೊಡೆಯುತಿದೆ ಮುಸಡಿಯ ಮೇಲೆ
(ಗಾಳಿ ಬೇಕೋ ನಿನಗೆ, ತಕೋ ಮಗನೇ!)
ಒದ್ದೆ ಬಟ್ಟೆಯ ಹೊಟ್ಟೆ–ಗುಡಾಣ
ಒದ್ದಾಡುತಿದೆ ಒಳಗೆ ಪ್ರಾಣ
ತಿದಿಯೊತ್ತಿನಲಿ ಉಸಿರಾಡುತಿದೆ
ಪರವಾ ಇಲ್ಲ, ಇನ್ನೂ ಬದುಕಿದ್ದಾನೆ
ಎಂಬಷ್ಟರೊಳಗೆ
ವಿದ್ಯುತ್ ಪೂರೈಕೆಯಲ್ಲಿ ತಡೆ
ಎಲ್ಲವೂ ಸ್ತಬ್ಧ :
ಆಗ ಕತ್ತಲೆಯ ಶಬ್ದ
ಸೃಷ್ಟಿಗೆ ತೊಡಗಿತು.
ಬೆಳಕಿನ ಮೊಟ್ಟೆ ಒಡೆದರೆ
ಬಿಳಿ ಪದರಿನ ಒಳಗೆ
ಹಳೆಯ ಗೆಳೆಯ ಕುಳಿತಿದ್ದಾನೆ
ಗಹಗಹಿಸಿ ನಕ್ಕರು
ಗುಳಿಬೀಳದ ಪಿಳಿ ಪಿಳಿ ಕಣ್ಣು
ಹಳದಿ ಮೀನು!
ಗುಡ್ಡದ ಪೊಡೆಯೊಳಗೆ
ಕಾಲ ಕಾಲೇಶ್ವರನ ಬಂಧಿಸಿ ಪೂಜಿಪ ಹವಣು.
ತಟಕಿಕ್ಕುವ ಅಂತರಗಂಗೆ

ಮಡುಗಟ್ಟಿದೆ ಕಲ್ಗೆದೆಯೊಳಗೆ!
ಮಣ್ಣಿನ ಹಂಬಲ
ಕೊರೆಯುತ್ತಿಹ ಹುಳ
ಹಿಮಾಲಯ ಜಾತಳು
ಹಿಮವಾತಕೆ ಮನ ಸೋತಿಹಳು,
ಕೆಳಗೆ–ಸೃಷ್ಟಿ ಚಕ್ರ ಗಿಮಿ ಗಿಮಿ
ತಲೆಯ ಮೇಲೆ ಪಂಖ ಗಿಮಿ ಗಿಮಿ......
ನಿರ್ವಾತವನು ತುಂಬುವ ಸೃಷ್ಟಿ
ನಿರ್ವಾತವ ತುಂಬುವ ಪಂಖ
ಮಯೂರ ನರ್ತನ............
ಮರಳಿತು ವಿದ್ಯುತ್ ಪೂರೈಕೆ
ಬೆಳಗಿನ ಹೊಟ್ಟೆಯ ಸೀಳಿತು ಕತ್ತಲೆ
ಹೊಕ್ಕಿತು ಅದರೊಡಲೊಳಗೆ
ಧಿಮಿ ಧಿಮಿ ಬೀಸುವ ಗಿಮಿ ಗಿಮಿ ಯಂತ್ರದ
ಬಿಸಿಗಾಳಿಯ ಸುಳಿಗೆ–
ಉಸಿರು ಆಡದೆ
ಬದುಕಲಾರೆ, ನೀರು, ನೀರು
ಎನ್ನುತ್ತಿದೆ ಮೀನು
ನಾವಾದರು ಮಾಡುವುದೇನು?
ಆಮ್ಲಜನಕಕು ಜಲಜನಕಕು
ಬಿದ್ದಿದೆ ಏನೊ ತಕರಾರು??

★ ಇಟಗಿ ರಾಘವೇಂದ್ರ

ವೈದಿಕ ಅಪ್ರಕಟಿತ ಗ್ರಂಥಗಳು

ಅ ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
1	ಅಕ್ಷರ ಮಾಲಿಕೆ	ಬ್ರಹ್ಮಾನಂದಯೋಗೀಂದ್ರ	1840	?	ಅಲಭ್ಯ
2	ಅಕ್ರೂರ ಚರಿತ್ರೆ	ಚನ್ನ	19 ಶ.	ಯ.	KB. 239
3	ಅಕ್ರೂರ ಚರಿತ್ರೆ	ನುಗ್ಗಿಹಳ್ಳಿ ರಂಗಾಚಾರ್ಯ	19 ಶ.	ಯ. ?	III. 239
4	ಅಖಂಡ ಸ್ವರೂಪ	?	17 ಶ.	?	III. 418
5	ಅಖಂಡಾನಂದ ಸ್ವರೂಪ	ವೆಂಕಟದಾಸ	1750	ಗ.	III. 256–57
6	ಅಘಭೇದ ಟೀಕೆ	?	15 ಶ. (ಮುಂ)	ಟೀ.	III. 418
7	ಅಚ್ಚಗನ್ನಡ ರಾಮಾಯಣ	ಸಿದ್ಧಾಂತ ಸುಬ್ರಹ್ಮಣ್ಯಶಾಸ್ತ್ರಿ	19 ಶ.	ಷ.	III. 226
8	ಅರ್ಚರಾದಿ	?	?	ಗ.	III. 418
9	ಅಜಾಮಿಳ ಕಥೆ	?	17 ಶ.	?	III. 418
10	ಅಜಾಮಿಳ ಚರಿತ್ರೆ	?	18 ಶ.	ಹಾ.	III. 418
11	ಅರ್ಜುನ ಕೊರವಂಜಿ	?	18 ಶ.	ಹಾ.	III. 418
12	ಅದ್ಭುಕಥೆಗಳ ಬುಕ್ಕು	ಶಾಂತಕವಿ	1856–1920	ಗ.	III. 467
13	ಅರ್ಥ ಪಂಚಕ	ಚಿಕ್ಕುಪಾಧ್ಯಾಯ	1672	ಚಂ.	II. 481
14	ಅರ್ಥಪಂಚಕದ ಟೀಕೆ	?	17 ಶ.	ಟೀ.	III. 418

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
15	ಅದ್ವೈತ ಬ್ರಹ್ಮವಿದ್ಯೆ	?	?	ಟೀ.	K. 246
16	ಅಧ್ಯಾತ್ಮ ರಾಮಾಯಣ	ಶಂಕರನಾರಾಯಣ	17 ಶ.	ಭಾ. ಷ., 56-2052	KB. 422/1
17	ಅಧ್ಯಾತ್ಮ ರಾಮಾಯಣದ ಟೀಕು	ಭಾಗವತ ಕೃಷ್ಣಸ್ವಾಮಿ	1869	ಟೀ. ಸರ್ಗ 19	KA. 154-55
18	ಅಧ್ಯಾತ್ಮ ರಾಮಾಯಣದ ಮಹತ್ವ	ನರಸಿಂಹ	1800	ಭಾ. ಷ., 30	K. 422/3
19	ಅಧ್ಯಾತ್ಮ ಶತಕ	ಚಿದಾನಂದಾವಧೂತ	1750	?	'ಶ್ರೀ ಚಿದಾನಂದಾವಧೂತರ ಆಧ್ಯಾತ್ಮ ಜೀವನ ಚರಿತ್ರೆ' ಪೀಠಿಕೆ 4 N. G. ಜಾಡಗೌಡರ
20	ಅನಂತನ ಕಥೆ	ಗಣಪಕ್ಕ	1870	ಹಾ.	ಕ. ಕ. 327
21	ಅನಂತನ ಕಥೆ	?	?	ಚಂ.	GOM. L. III. ಸಂ. 318
22	ಅನಂತ ಶತಕ	ಶಾಮಾಚಾರ್ಯ	1861	ಕಂ. + ಟೀ.	KA. 290
23	ಅನುಭವ ಮುಕುರ	ಪರಂಜ್ಯೋತಿಯತಿ	1450	ತ್ರಿ. 16-995	II. 93
24	ಅನುಭವಾಮೃತ	?	?	ಗ.	III. 418
25	ಅನುಭವಾಮೃತ (ಮಹಲಿಂಗರಂಗ)ದ ಪದ್ಯಗಳಿಗೆ ವ್ಯಾಖ್ಯಾನ	ಗುರುಕೃಷ್ಣ ?	1830	ಹಾ.	III. 187
26	ಅಪರಾಧಸ್ತೋತ್ರ ಟೀಕೆ	?	?	ಷ.	III. 418
27	ಅಪರೋಕ್ಷಾನುಭೂತಿಯ ಟೀಕೆ	?	19 ಶ.	ಟೀ.	KII. 418
28	ಅಭಿನವ ಪಂಚತಂತ್ರ	?	19 ಶ.	?	III. 418

29	ಅಭಿಮನ್ಯು ಕಾಳಗ	ಪರಮೇಶ್ವರಭಟ್ಟ	19 ಶ.	ಯ.	III. 462
30	ಅಮರಕೋಶ ವ್ಯಾಖ್ಯೆ	ಕವಿ ವಿಟ್ಠಲ	1600	ಟೀ.	II. 331-32
31	ಅಮರ ಟೀಕೆ	ಲಕ್ಷ್ಮಣಶಾಸ್ತ್ರಿ	18 ಶ.	ಟೀ.	III. 155-418
32	ಅಮರಸಿಂಹದ ವೃತ್ತಿ	?	15 ಶ. (ಮುಂ)	ಟೀ.	III. 418
33	ಅಮರುಕ ಟೀಕೆ	ವೆಂಕಟರಾಮಶಾಸ್ತ್ರಿ	1823	ಟೀ.	III. 182
34	ಅಮರುಕ ಶತಕ	ಚಿಕ್ಕುಪಾಧ್ಯಾಯ	1672	?	II. 467
35	ಅಮ್ಮಣ್ಣಿ ಪಾರಿಜಾತ	?	1830	ಯ.	III. 325
36	ಅಮಾ ಸೋಮವಾರವ್ರತ	ವೆಂಕಟರಾಮಶಾಸ್ತ್ರಿ	1823	ಟೀ.	III. 182-83
37	ಅರುಂಧತಿಯ ಹಾಡು	?	18 ಶ.	ಹಾ.	III. 418
38	ಅಲರ್ಮೇಲುಮಂಗೆ ಲಾಲೀಪದ	ಚೆಲುವಾಂಬೆ	1725	ಹಾ., 35	III. 22-5
39	ಅಲಂಕಾರ ಶಾಸ್ತ್ರ	ಶಾಂತಕವಿ	1856-1920	ಗ., ಭಾಗ ೧, ೨	III. 467
40	ಅಲಂಕಾರ ಶಾಸ್ತ್ರ	ಕೇಶವಶಾಸ್ತ್ರಿ	?	ಗ.	K. 409
41	ಅಶ್ವಶಾಸ್ತ್ರ	ರಾಮಚಂದ್ರ	1625	ಗ., ಅ. 18	II. 367-68
42	ಅಶ್ವಿನೀ ಸಂಹಿತೆಯ ಟೀಕೆ	?	18 ಶ.	ಟೀ.	III. 418
43	ಅಶೋಕಸುಂದರೀ ಪರಿಣಯ	?	19 ಶ.	ನಾ ?	III. 419
44	ಅಷ್ಟಪದೀ ಟೀಕು	ಅಪ್ರಮೇಯಶಾಸ್ತ್ರಿ	1750	ಟೀ., ಸರ್ಗ 12	K. 222/7
45	ಅಷ್ಟಶ್ಲೋಕಿಯ ಟೀಕೆ	?	17 ಶ.	ಟೀ.	III, 419
46	ಅಷ್ಟೋತ್ತರಶತನಾಮಂಗಳ ಗೀತಾವಳಿ	ಗಿ. ತಮ್ಮಯ್ಯ	19 ಶ.	ಹಾ.	III. 228

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
47	ಆಳವಂದಾರ್‌ಸ್ತೋತ್ರ ತಾತ್ಪರ್ಯ	ಚಿಕ್ಕುಪಾಧ್ಯಾಯ	1672	ಟೀ.	K. 733
48	ಅಂಬರೀಷ ಚರಿತ್ರೆ	ವಾಸುದೇವ	19 ಶ.	ಯ.	III. 239
49	ಅಂಬರೀಷ ನಾಟಕ	ಐ. ವೆಂಕಟದಾಸ	1835-1915	ನಾ.	ಹಕ. 289
50	ಅಂಬರೀಷ ನೃಪಾಲ ಚರಿತ್ರೆ	?	18 ಶ.	ಷ.	III. 418
51	ಆದಿತ್ಯಪುರಾಣ*	ರಾಮಚಂದ್ರ ಗುರುಶಿಷ್ಯ	1550	ಭಾಷ., 48–2668	II. 260–61
52	ಆನಂದಕಂದದ ಟೀಕೆ	?	19 ಶ.	ಟೀ.	III. 419
53	ಆನಂದ ಲಹರಿ	ಶಾಂತಕವಿ	1856-1920	ಷ.	III. 467
54	ಆನಂದ ಸುಂದರೀ ಕಥೆ	ಸೂಲಿಬೆಲೆ ಡಿ. ಶಾಮರಾಯ	19 ಶ.	ಗ.	III. 238
55	ಆನಂದಾನುಭವ	ಏಕನಾಥ	?	? 235	ಕಕಚಅ ಸಂ. 145
56	ಆರತಿಪದ	ಗಣಪಕ್ಕ	1870	ಹಾ.	ಕಕ. 327
57	ಆರ್ಯಮತ ಸಮನ್ವಯ	ಎಂ. ಎ. ತಿರುಮಲಾಚಾರ್ಯ	19 ಶ.	ಗ.	III. 463
58	ಆರೋಗ್ಯ ಚಿಂತಾಮಣಿ	?	?	ಗ ?	III. 419
59	ಆಳವಂದಾರ್ ಸ್ತೋತ್ರದ ಟೀಕೆ	?	?	ಟೀ.	III. 419
60	ಆಳಿದ ಮಹಾಸ್ವಾಮಿಯವರ ಸವಾರಿ ವರ್ಣನೆ	ಅಂ/'ವೇಂಕಟ ವಿಠಲೇಶ'	?	ಹಾ.	KB. 240/1
61	ಆಂಜನೇಯ ವಿಜಯ	ಶಾಂತಕವಿ	1856-1920	ನಾ.	III. 467
62	ಇಂದ್ರಕೀಲಕ	ದೇವಿದಾಸ	1700	ಯ.	ಯ ಬ. 164

63	ಇಂದ್ರಕೀಲ ಚೌಪದ	ರಾಮಸೂರಿ	1750	ಚೌ., 80	III. 94
64	ಇಂದ್ರಜಿತು ಕಾಳಗ	ಹ. ರಾಮಭಟ್ಟ	19 ಶ.	ಯ.	ಯ ಬ. 225
65	ಇಂದ್ರಜಿತು ಮೈರಾವಣರ ಕಾಳಗ	?	19 ಶ.	ಯ.	III. 419
66	ಇಂದ್ರವಿಜಯ	ತಿಮ್ಮಪ್ಪಯ್ಯ ಉಬರಡ್ಕ	19 ಶ.	ಯ.	ಯಬ. 277
67	ಇಂದ್ರಸಭೆ	ಎ. ಅಣ್ಣಾಜಿರಾಯ	19 ಶ.	ನಾ.	III. 237
68	ಉತ್ತರ ಗೋಗ್ರಹಣ	ವಿಷ್ಣುಕವಿ	19 ಶ.	ಯ.	III. 230
69	ಉತ್ತರ ರಾಮಾಯಣ	ನರಸಪ್ಪ	1612	ಭಾಷ., 56.2675	K. 189
70	ಉತ್ತರ ರಾಮಾಯಣ	ಯೋಗೀಂದ್ರ	1650	ಕು. ಷ., 48. ?	II. 412
71	ಉತ್ತರ ರಾಮಾಯಣ	?	?	ಷ.	III. 419
72	ಉದಯರಾಗ	ಕ. ಅನಂತರಾಮಯ್ಯ	19 ಶ.	ಹಾ.	K. 564/3
73	ಉದಯರಾಗದ ವಚನ	?	?	ಗ.	III. 419
74	ಉದ್ಧವಪ್ರಶ್ನ ಟೀಕೆ	?	18 ಶ.	ಟೀ.	III. 419
75	ಉಪದೇಶಮಾಲೆ	ಕೊ. ರಾಮಸ್ವಾಮಿ ಅಯ್ಯಂಗಾರ್	1860-1920	?	III. 465
76	ಉಪನಿಷತ್ತುಗಳ (30) ಟೀಕೆ	?	19 ಶ.	ಟೀ.	III. 419
77	ಉಂಗುರಸಂಧಿ	?	18 ಶ.	ಯ.	III. 419
78	ಋತುಸಂಹಾರ	ಶಾಂತಕವಿ	1856-1920	ಷ.	III. 467
79	ಏಕಾದಶೀಪ್ರಸಂಗ	ಗೇ. ಶಾಂತಯ್ಯ	1830	ಯ.	III. 188

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
80	ಐರಾವತ	ಎಂಬಾಚಯ್ಯ	18 ಶ.	ಸಾಂ.	III. 419
81	ಐರಾವತ	ಶ್ರೀಧವಿಠಲ	?	ಯ.	KA. 107/1
82	ಐರಾವತ	?	18 ಶ.	ಹಾ.	III, 419
83	ಐರಾವತಕಥೆ	?	19 ಶ.	ಗ.	III. 419
84	ಐರಾವತದ ಚೌಪದ	?	?	ಚೌ.	K. 207/8
85	ಕಕ್ಕೋ್ರೀಕ	?	?	ಷ.	III. 419
86	ಕರ್ಣಾರ್ಜುನರ ಕಾಳಗ	ಅಂ/' ಗಜಪುರದ ಗಣೇಶ'	?	ಯ.	KB. 534/3
87	ಕರ್ಣಾರ್ಜುನರ ಕಾಳಗ	ಪಾಂಡೇಶ್ವರ ವೆಂಕಟ	1750	ಯ.	ಯಬ. 233
88	ಕರ್ಣಾಟಕ ಕೊರನಂಜಿ	?	1710	ಯ.	III. 314
89	ಕರ್ಣಾಟಕ ಮಾಳವಿಕಾಗ್ನಿಮಿತ್ರ	ಸಾಗ್ಗೆರೆ ಶ್ರೀಕಂಠಶಾಸ್ತ್ರಿ	19 ಶ.	ನಾ ?	III. 228
90	ಕರ್ಣಾಟಕ ರಘುವಂಶ	?	18 ಶ.	ಷ.	III. 420, 428
91	ಕರ್ಣಾಟಕಾಷ್ಟಪದಿ	ವೆಂಕಟಕವಿ	1750	ಷ+ಹಾ	III. 91-2
92	ಕಥಾಕೀರ್ತನೆ	ಐ. ಭೀಮರಾಯ	1835-1915	ಕೀ.	ಜಯಂತಿ, 9.7 (ಪು. 271-73)
93	ಕಥಾಮಂಜರಿ	ಗೊ. ನರಸಿಂಹಾಚಾರ್ಯ	19 ಶ.	ಗ.	III. 220
94	ಕನಕವಲ್ಲರೀ ಅಥವಾ ಶೂರಸ್ತ್ರೀ ಪ್ರತಾಪ	ಶಾಂತಕವಿ	1856-1920	?	?

95	ಕನ್ನಡ ದಾಸಯ್ಯನ ಪದಗಳು	ಶಾಂತಕವಿ	1856-1920	ಹಾ.	III. 467
96	ಕನ್ನಡ ಲೀಲಾವತಿ	ಬಾ. ಚೆಲುವ	1715	ಕಂ + ವಾ. ಷ.	III. 5·8
97	ಕನ್ನಡ ವಿಶ್ವಗುಣಾದರ್ಶ	ಗೊ. ನರಸಿಂಹಾಚಾರ್ಯ	19 ಶ.	ಗ.	III. 220
98	ಕನ್ನಡಿಗರಿಗೆ ಸವಾಲುಗಳು	ಶಾಂತಕವಿ	1856-1920	ಗ.	III. 467
99	ಕಪೋತ ಚರಿತೆ	?	?	ಭಾ. ಷ, 127	K. 551/1
100	ಕನುಲಾಚಲ ಮಾಹಾತ್ಮ್ಯ	ಚಿಕ್ಕುಪಾಧ್ಯಾಯ	1672	ಚಂ., 16-4031	II. 471-73
101	ಕರಿಯುಬಂಟನ ಕಥೆ	ನಂಜಯ್ಯ	?	ನಾ.	ಕ. ಸಾ. 49
102	ಕಲಾನಾಥ	ವಿದ್ವಾನ್ ವೆಂಕಟಾಚಾರ್ಯ	19 ಶ.	ಗ.	KII. 239
103	ಕಲ್ಯಾಣ ಗೀತಾವಳಿ	ಜಯರಾಯಾಚಾರ್ಯ	19 ಶ.	ಹಾ.	III. 466
104	ಕಲಿಧರ್ಮ ಶತಕ	ವೆಂಕಟಾಚಲಯ್ಯ	19 ಶ.	ಕಂ.	III. 223
105	ಕಲಿಮಾಹಾತ್ಮ್ಯ	ವಿ. ನರಸಿಂಹಮೂರ್ತಿರಾಯ	19 ಶ.	ಕಂ.	III 462
106	ಕವಿಕಂಠಹಾರ (ಕಲ್ಪಿತ ಕಾದಂಬರಿ)	ಶಾಂತಕವಿ	1856-1920	ಗ.	III. 467
107	ಕವಿತೆ	ಚೆನಕಯ್ಯ ಭಾಗವತ	19 ಶ.	ಹಾ.	III. 323
108	ಕವಿತೆ	ಬಟ್ಟರಜೆಟ್ಟಿ ಆನಂದರಾಯ	19 ಶ.	ಹಾ.	III. 393
109	ಕಸ್ತೂರಿತಿಲಕ ಪಂಚಾಶತ್ತಿನ ಟೀಕೆ	?	18 ಶ.	ಟೀ.	III. 420
110	ಕಳಿಂಗ ನೀತಿ	?	17 ಶ.	?	III. 420
111	ಕ್ಷತ್ರಿಯ ಪುರಾಣ ಟೀಕೆ	ಡಿ. ಸುಬ್ಬಾಶಾಸ್ತ್ರಿ	19 ಶ.	ಟೀ.	III. 237
112	ಹಜ್ಜಲ್ಲಕಂಸವಧೆ	ಹ. ರಾಮಭಟ್ಟ	19 ಶ.	ಯ.	ಯ. ಬ. 225

ಅ. ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
113	ಕಾಮುಚರಿತವ ಹಾಡು	?	17 ಶ.	ಹಾ.	III. 420
114	ಕಾಮುದೇವನ ತೊರವಿ	?	17 ಶ.	ಹಾ.	III. 420
115	ಕಾಮುಲೀಲಾ ತಂತ್ರ	?	16 ಶ.	?	III 420
116	ಕಾಯುಪುರಿವಾಸ ಪ್ರಕರಣ	?	?	ಗ.	KB. 328/2
117	ಕಾಲಜ್ಞಾನ	ಬಾಗಡಿಕೋಟೆ ಚಿಕ್ಕಸ್ವಾಮಿ	?	ಗ.	III. 420
118	ಕಾಲಜ್ಞಾನ	ವಿದ್ಯಾರಣ್ಯ	?	ಗ.	III. 420
119	ಕಾಲಜ್ಞಾನ	ಸದಾಶಿವ	1700	ಗ.	II. 559
120	ಕಾಲಜ್ಞಾನ	ಸಿಂಹಗಿರಿ ಕೃಷ್ಣಮಾಚಾರ್ಯ	1712	ಗ.	III. 2-4
121	ಕಾಲಮಹಿಮೆ	ಶಾಂತಕವಿ	1856-1920	?	III. 467
122	ಕಾವೇರೀ ಪುರಾಣ	ಗೊ. ನರಸಿಂಹಾಚಾರ್ಯ	19 ಶ.	?	III. 220
123	ಕಾವೇರೀ ಪುರಾಣ	?	1800	ಭಾ. ಷ., 11.354	III. 322
124	ಕಾಳಾಸುರ	ಶಾಂತಕವಿ	1856–1920	ನಾ.	III. 467
125	ಕಾಳಿಕಾಪಟಲ ಟೀಕೆ	?	17 ಶ.	ಟೀ.	III. 420
126	ಕಿರಾತಾರ್ಜುನೀಯ	ತಿ. ಶ್ರೀನಿವಾಸಯ್ಯಂಗಾರ್	19 ಶ.	ನಾ.	ಕ. ನಂ. 3-5 (ಪು. 8)
127	ಕಿರಾತಾರ್ಜುನೀಯ	ಶ್ರೀನಿವಾಸ	1881	ಯ.	KA. 87/4
128	ಕಿರಾತಾರ್ಜುನೀಯ ಕಥೆ	ದೇ. ಶ್ರೀನಿವಾಸಯ್ಯಂಗಾರ್	19 ಶ.	ಗ.	III. 226

129	ಕ್ರಿಯಾಕಾರಕ	?	15 ಶ.	?	III. 420
130	ಕೀಚಕವಧೆ	?	17 ಶ.	ನಾ.	KB. 102
131	ಕೀಚಕವಧೆ	?	?	ಯ.	KB. 118
132	ಕೀಚಕ ಸಂಹಾರ	?	19 ಶ.	?	III. 420
133	ಕೀರ್ತನಾಲಕ್ಷಣ	?	?	?	III. 420
134	ಕೀರ್ತನೆ	ರಾಯವೇಲೂರು ಶಠಕೋಪದಾಸ	?	ಕೀ.	III. 234
135	ಕೀರ್ತನೆಗಳು	ಚೆ. ಅಹೋಬಲದಾಸ	?	ಕೀ.	III. 238
136	ಕೀರ್ತನೆಗಳು	ತಿ. ಶ್ರೀನಿವಾಸಯ್ಯಂಗಾರ್	19 ಶ.	ಕೀ.	ಕನಂ. 3-5 (ಪು. 8)
137	ಕೀರ್ತನೆಗಳು	ಭಾಗಣದಾಸ	?	ಕೀ.	III. 426
138	ಕೀರ್ತನೆಗಳು	ರಾಮಣ್ಣ ವೆಂಕಟಸುಬ್ಬಯ್ಯ	19 ಶ.	ಕೀ.	ಸಿಗ್ರಂಚಕೋ. 121
139	ಕೀರ್ತನೆಗಳು	ವೀರಣಕವಿ	17 ಶ.	ಕೀ.	III. 420
140	ಕೀರ್ತನೆಗಳು	ಹಯಗ್ರೀವದಾಸ	19 ಶ.	ಕೀ.	III. 433
141	ಕೀರ್ತಿರಾಜ ವಿಜಯ	?	18 ಶ.	ಗ.	III. 420
142	ಕುಮಾರರಾಯ ಚರಿತ್ರೆ	ರಂಗಯ್ಯ	17 ಶ.	?	III. 420
143	ಕುಮಾರಶೇಖರ	ಕೆ. ಸುಬ್ಬರಾಯ	19 ಶ.	ಗ.	III. 470
144	ಕುಮಾರಿ	?	?	?	III. 420
145	ಕುವಲಯಾನಂದ ಟೀಕೆ	?	?	ಟೀ.	III. 420
146	ಕುಶಲವರ ಕಥೆ	?	?	ಯ.	K. 103/1

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
147	ಕುಶಲವರ ಕಾಳಗ	?	?	ಯ.	K. 201/1
148	ಕುಶಲವರ ಕಾಳಗ	ಮುದ್ದುವಿಠಲ	?	ಯ.	K. 242
149	ಕುಶಲವೋಪಾಖ್ಯಾನ	?	1700	ಗ., ಅ. 20	III. 312
150	ಕುಂಭಕರ್ಣ ಯುದ್ಧ	?	19 ಶ.	ಯ ?	III. 420
151	ಕೂಷ್ಮಾಂಡ ಪುರಾಣ	?	?	?	III. 420
152	ಕೃಷ್ಣಕರ್ಣಾಮೃತ	ಕೃಷಣ	1700	ಭಾ. ಷ., 125	II. 540-41
153	ಕೃಷ್ಣಕರ್ಣಾಮೃತ ಟೀಕೆ	ಚೆಲುವಾಂಬೆ	1725	ಟೀ.	III 420
154	ಕೃಷ್ಣಕಥೆ	ಅಂ/'ವೆಂಕಟಚಾರಿ'	1700	ವಾ. ಷ., 2500	III. 310, 426
155	ಕೃಷ್ಣ ಕೊರವಂಜಿ	ಹೆ. ಗಿರಿಯಮ್ಮ	1750	ಹಾ.	ಕ. ಕ. 274-78
156	ಕೃಷ್ಣಗೋಪೀ ಸಂವಾದ	?	?	ಹಾ.	III. 420
157	ಕೃಷ್ಣಗೋವರ್ಧನ	ವಿಷ್ಣುದಾಸ	?	?	KB. 138/2
158	ಕೃಷ್ಣ ಚರಿತಾಮೃತ	ಗೊ. ನರಸಿಂಹಾಚಾರ್ಯ	19 ಶ.	?	III. 220
159	ಕೃಷ್ಣಚರಿತ್ರೆ	ಬಳ್ಳಾರಿ ರಾಮಭಟ್ಟ	19 ಶ.	ಗ ?	III.227
160	ಕೃಷ್ಣಚಾರಿತ್ರ	ಶ್ರೀಶೈಲಾರ್ಯ	1700	ಸಾಂ., 100	II. 557
161	ಕೃಷ್ಣನ ಹುಟ್ಟು	ಗಣಪಕ್ಕ	19 ಶ.	ಹಾ.	ಕ. ಕ. 330
162	ಕೃಷ್ಣನೃಪ ಜಯೋತ್ಕರ್ಷ	ಶ್ರೀನಿವಾಸ ಕವಿ	1812	ಪ+ಗ., 8+6	III. 170-72

163	ಕೃಷ್ಣ ಪಾರಿಜಾತ	ಅನಂತರಾಮಯ್ಯಂಗಾರ	19 ಶ.	ಯ ?	III. 230
164	ಕೃಷ್ಣ ಪಾರಿಜಾತ	ವೆಂಕಟಲಕ್ಷ್ಮಮ್ಮ	19 ಶ.	ಯ ?	III. 226
165	ಕೃಷ್ಣ ಪಾರಿಜಾತ	?	?	ಹಾ.	KA. 247/3
166	ಕೃಷ್ಣ ಬಾಲಲೀಲೆ	ಅ. ವೆಂ. ಸುಬ್ಬ	19 ಶ.	ಯ.	ಯ. ಬ. 187
167	ಕೃಷ್ಣ ಬಾಲಲೀಲೆ	ದೇವಿದಾಸ ?	17 ಶ.	ಯ.	ಯ. ಬ. 164
168	ಕೃಷ್ಣ ಬಾಲಲೀಲೆ	ಮಟ್ಟಿವಾಸುದೇವ ಪ್ರಭು	19 ಶ.	ಯ.	ಹರಿದಾಸರ ಕೀರ್ತನೆಗಳು, ಭಾ. ೨ (ಪು. 5) ಸಂ. K. ವೆಂಕಟ ರಾಯಾಚಾರ್ಯ (1960)
169	ಕೃಷ್ಣ ಬಾಲಲೀಲೆ	?	?	ಯ.	KB. 237
170	ಕೃಷ್ಣ ಬಾಲಲೀಲೆ	ಗುರುಕೃಷ್ಣ	1830	ಚೌ.	III. 185-87
171	ಕೃಷ್ಣರಾಜ ಒಡೆಯರವರ ವಂಶಾವಳಿ	ಮುಶಾವಳಿ ರಾಮಯ್ಯ	1865	ಗ.	III. 420
172	ಕೃಷ್ಣರಾಜ ಡೋಳೋತ್ಸವ ಚರಿತೆ	ಸೋಬಾನೆ ರಂಗದಾಸ	19 ಶ.	ಹಾ + ಷ.	III. 185
173	ಕೃಷ್ಣರಾಜ ಮಂಗಳ ಮಂಜರಿ	ಉಪಾಧ್ಯಾಯ ಮುದುಕ ಶ್ರೀನಿವಾಸಯ್ಯಂಗಾರ್	19 ಶ.	ಹಾ ?	III. 421
174	ಕೃಷ್ಣರಾಜ ಮಂಗಳಾಷ್ಟಕ	ಉಪಾಧ್ಯಾಯ ಮುದುಕ ಶ್ರೀನಿವಾಸಯ್ಯಂಗಾರ್	10 ಶ.	ಹಾ ?	III. 421
175	ಕೃಷ್ಣರಾಜ ಯೋಗಾವಳಿ	?	?	ಹಾ., 27	KB. 199
176	ಕೃಷ್ಣರಾಜ ಶತಕ	?	1720	ವೃ., 3-111	ಕ.ಸಾ.ಪ.ಪ.. 24-4

ಅ.ನಂ.	ಕೃತಿಯ ಹೆಸರು	ಕೃತಿಕರ್ತೃ	ಕಾಲ	ಛಂದಸ್ಸು, ಗ್ರಂಥಗಾತ್ರ	ಕೃತಿಯ ಬಗೆಗೆ ವಿಶೇಷ ವಿಷಯ
177	ಕೃಷ್ಣರಾಜ ಸ್ವಾರಿ ವರ್ಣನೆ	ವೆಂಕಟವಿಠಲೇಶ	1825	?	III. 323-24
178	ಕೃಷ್ಣರಾಜ ಸೋಬಾನೆ	?	1825	ಹಾ.	III. 324-421
179	ಕೃಷ್ಣರಾಜಾಭ್ಯುದಯ ಟೀಕೆ	?	19 ಶ.	ಟೀ., ಸರ್ಗ 8	III. 421
180	ಕೃಷ್ಣರಾಜೇಂದ್ರ ವಿಲಾಸ	ಶ್ರೀನಿವಾಸ ಸಿದ್ಧಾಂತಿ	19 ಶ.	ಯ.	III. 420
181	ಕೃಷ್ಣರಾಧಿಕಾ ವಿಲಾಸ	ಶಾಂತಕವಿ	1856-1920	ನಾ.	III. 467
182	ಕೃಷ್ಣರಾಯ ರಾಜ್ಯವಾಳಿದ ವಿವರ	?	18 ಶ.	ಗ.	III. 421
183	ಕೃಷ್ಣಲೀಲಾ	ತಿ. ಶ್ರೀನಿವಾಸಯ್ಯಂಗಾರ್	19 ಶ.	ನಾ.	ಕ. ನಂ., 3·5 (ಪು. 8)
184	ಕೃಷ್ಣಲೀಲಾಭ್ಯುದಯ	ವೆಂಕಯಾರ್ಯ	1650	ಭಾ.ಷ., 51·2543	II. 437
185	ಕೃಷ್ಣಲೀಲೆ	ಗಣಪಕ್ಕ	19 ಶ.	ಯ.	ಕ.ಕ. 332-34
186	ಕೃಷ್ಣ ಸಂಧಾನ ಕೀರ್ತನೆಗಳು	?	?	ಹಾ.	K. 554
187	ಕೃಷ್ಣಸ್ವಾಮಿ ದಾಸಕೂಟ್ಟ ಪದ	ಗುರುಕೃಷ್ಣ	1830	ಸಾಂ., 157	III.185-86
188	ಕೃಷ್ಣಾರ್ಜುನರ ಕಾಳಗ	ಎಂಬಾಚಯ್ಯ	18 ಶ.	ಸಾಂ.	III. 421
189	ಕೃಷ್ಣಾರ್ಜುನರ ಕಾಳಗ	ದೇವಿದಾಸ	17 ಶ.	ಯ.	ಯ. ಜಿ. 164
190	ಕೃಷ್ಣಾರ್ಜುನರ ಕಾಳಗ	'ಮಧ್ವಪತಿ ಶ್ರೀಕೃಷ'	?	ಯ	KB. 355/3
191	ಕೃಷ್ಣಾರ್ಜುನರ ಕಾಳಗ	ವಿಮಲಾನಂದ	1685	ಯ.	III. 248
192	ಕೃಷ್ಣಾರ್ಜುನರ ಕಾಳಗ	ವಿಮಲಾನಂದ	1685	ಭಾ. ಷ., 30-1825	III. 300

193	ಕೃಷ್ಣಾರ್ಜುನರ ಕಾಳಗ	ಸಂಕಯ್ಯ ಭಾಗವತ	1820-80	ಯ.	ಯ. ಬ. 267
194	ಕೃಷ್ಣಾರ್ಜುನರ ಕಾಳಗ	ಹಳೆಮುಕ್ಕಿರಾಮ	18 ಶ.	ಯ.	ಯ. ಬ. 216
195	ಕೃಷ್ಣಾರ್ಜುನರ ಕಾಳಗ	?	?	ಯ.	KB. 439
196	ಕೃಷ್ಣಾರ್ಜುನರ ಸಂಗ್ರಾಮ	?	18 ಶ.	ಯ.	III. 421
197	ಕೇಶವ ಶತಕ	ಅದ್ವೈತಾನಂದ	1700	ಕಂ.	II. 554
198	ಕ್ಷೇತ್ರ ಗಣಿತ	ತಿಮ್ಮರಸ	1700	ಕಂ. + ಟೀ.	II. 547-49
199	ಕೈಶಕ ದ್ವಾದಶೀ ಮಾಹಾತ್ಮ್ಯದ ಕನ್ನಡ ಟೀಕು	?	?	ಟೀ.	K. 603
200	ಕೈಶಕ ಪುರಾಣ	?	?	?	GOML. II ಸಂ. 102
201	ಕೊಮಾರ ಕಾಳಗ	ಪದ್ಮಸಾಲೆ ತಿಮ್ಮಣ್ಣ	?	ಭಾ. ಷ..	ಶ. ಸಾ., 12·4
202	ಕೊರವಂಜಿ ಕಥೆ	?	1700	ಯ.	KA. 256/2
203	ಕೋಶತ್ರಯ ಖಂಡ	?	17 ಶ.	ಗ ?	III. 421
204	ಖಗ ಪ್ರಕಾಶ ಟೀಕೆ	?	18 ಶ.	ಟೀ.	III.421

★ ಎಸ್. ಶಿವಣ್ಣ

ಮಲಯಾಳ ನಾಡನ್ ಪಾಟ್ಟುಗಳ್ ಅಥವಾ ನಾಡೋಡಿ ಪಾಟ್ಟುಗಳ್

[ಮಲಯಾಳ ಜಾನಪದ ಗೀತೆಗಳ ಸಿಂಹಾವಲೋಕನ]

ಕನ್ನಡ ಜಾನಪದ ಗೀತೆಗಳಿಗೆ ಸಂವಾದಿಯಾಗಿ ಮಲಯಾಳದಲ್ಲಿ 'ನಾಡನ್ ಪಾಟ್ಟುಗಳ್' ಅಥವಾ 'ನಾಡೋಡಿ ಪಾಟ್ಟುಗಳ್' ಎನ್ನುವ ಸಮೃದ್ಧ ಸಾಹಿತ್ಯ ವಿಭಾಗವಿದೆ. ಕೇರಳದ ಎಲ್ಲೆಡೆಗಳಲ್ಲೂ ಒಂದಲ್ಲ ಒಂದು ವೈವಿಧ್ಯತೆಯಿಂದ ಕೂಡಿದ ನಾಡನ್ ಪಾಟ್ಟುಗಳು ಕೇಳಿಬರುತ್ತವೆ. ಇಂದು ವೃದ್ಧರಾಗಿರುವ ಸ್ತ್ರೀ-ಪುರುಷರ ನಾಲಿಗೆಯಲ್ಲಿ ಮಾತ್ರ ಉಳಿದು ಬೆಳಕಿಗೆ ಬರದಿರುವ ಹಾಡುಗಳನ್ನೆಲ್ಲ ಸಂಗ್ರಹಿಸಿದರೆ ಬಹುಶಃ ಇದಕ್ಕಿಂತ ದೊಡ್ಡ ಸಾಹಿತ್ಯ ವಿಭಾಗ ಮಲಯಾಳ ಸಾಹಿತ್ಯದಲ್ಲಿ ಮತ್ತೊಂದಿರಲಾರದು ಎನ್ನುವಷ್ಟು ಗೀತೆಗಳು ಕೇರಳ ನಾಡಿನಲ್ಲಿವೆ. ಕೇರಳದ ಪ್ರತಿಯೊಂದು ಸ್ಥಳದ ವೈಶಿಷ್ಟ್ಯಗಳ ಹಿನ್ನೆಲೆಯಲ್ಲಿ ರಚಿತವಾದ ನಾಡೋಡಿ ಪಾಟ್ಟುಗಳನ್ನು ಸಂಗ್ರಹಿಸಿ ಪ್ರಕಟಿಸಿರುವ ಸಾಹಸಿಗಳ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ. ಎಷ್ಟೋ ನಾಡನ್ ಪಾಟ್ಟುಗಳು ಹಲವಾರು ಪತ್ರಿಕೆಗಳಲ್ಲಿ, ಮಾಸಿಕಗಳಲ್ಲಿ ಅಚ್ಚಾಗಿ ಮೂಲೆಗುಂಪಾಗಿರುವುದೂ ಉಂಟು. ಇತ್ತೀಚೆಗೆ ಈ ಗೀತೆಗಳ ಅಧ್ಯಯನ ಮತ್ತು ಸಂಶೋಧನೆಗಳ ಬಗ್ಗೆ ಜನತೆಯಲ್ಲಿ ಉತ್ಸಾಹ ಮೂಡಿ ಬರುತ್ತಿರುವುದು ಈ ದಿಕ್ಕಿನಲ್ಲಿ ಒಂದು ಹೊಸ ಬೆಳಕು ಕಾಣಿಸಿಕೊಂಡಂತಾಗಿದೆ.

ನಾಡೋಡಿ ಪಾಟ್ಟುಗಳ ಕಾಲ ಮತ್ತು ಕರ್ತೃಗಳು

ಈ ಗೀತೆಗಳ ಕಾಲನಿರ್ಣಯ ಮಾಡುವುದು ತುಂಬ ಜಟಿಲವಾದ ಕಾರ್ಯ. ನಾಡೋಡಿ ಪಾಟ್ಟುಗಳು ಕೇರಳದ ವಿವಿಧ ಪ್ರದೇಶಗಳಲ್ಲಿ. ವಿವಿಧ ಕಾಲಸ್ಥಿತಿಗಳಲ್ಲಿ ಹುಟ್ಟಿದ ಗೀತೆಗಳು. ಅಷ್ಟೇ ಅಲ್ಲ, ಆಧುನಿಕ ಕಾಲದಲ್ಲೂ ಹಿಂದಿನ ಕಾಲದ ನಾಡನ್ ಪಾಟ್ಟುಗಳ ಮಾದರಿಯಲ್ಲಿ ಗೀತೆಗಳನ್ನು ರಚಿಸುತ್ತಿರುವುದು ಕಂಡು ಬರುತ್ತಿದೆ. ನಾಡನ್ ಪಾಟ್ಟುಗಳ ಕಾಲವನ್ನು ನಿರ್ಧರಿಸಿ ಹೇಳಲಾಗದ ತೊಡರು ಕಾಣಿಸಿಕೊಳ್ಳುತ್ತದೆ. ಆದರೆ ವಡಕ್ಕನ್ ಪಾಟ್ಟುಗಳ (ಉತ್ತರ ಕೇರಳದ ಗೀತೆಗಳ ಅಥವಾ ಮಲಬಾರಿನ ಗೀತೆಗಳ) ರೀತಿಯಲ್ಲಿರುವ ಕೆಲವು ಪ್ರಾದೇಶಿಕ ಗೀತೆಗಳ ಕಾಲವನ್ನು ನಿರ್ಣಯಿಸಲು ಮಲಯಾಳ ಸಾಹಿತ್ಯ ಸಂಶೋಧಕರು ಪ್ರಯತ್ನಿಸಿದ್ದಾರೆ. ಆ ಕಥೆಗಳಲ್ಲಿ ಬರುವ ಕೆಲವು ಮಂದಿ ಸಮರ ಶೂರರ ಹೆಸರುಗಳು ಕೇರಳ ಇತಿಹಾಸದ ಪುಟಗಳಲ್ಲೂ ಕಂಡು ಬರುವುದರಿಂದ ಆ ಹಾಡುಗಳ ಕಾಲವನ್ನು ಸುಲಭವಾಗಿ ಗುರುತಿಸುವುದಕ್ಕೆ ಅವ

ರಿಗೆ ಸಾಧ್ಯವಾಯಿತು. ದಕ್ಷಿಣ ಕೇರಳದ ಗೀತೆಗಳು ಇಷ್ಟೊಂದು ಐತಿಹಾಸಿಕ ಆಧಾರವನ್ನು ನೀಡದಿದ್ದರೂ ಕೇರಳ ಇತಿಹಾಸದ ಮೇಲೆ ಅವುಗಳೂ ಬೆಳಕು ಚೆಲ್ಲುತ್ತವೆ. ಎಂಬುದನ್ನು ತಳ್ಳಿಹಾಕುವಂತಿಲ್ಲ.

ನಾಡನ್ ಪಾಟ್ಟುಗಳ ಉದ್ಗಮಕ್ಕೆ ಕೇರಳದ ಇತಿಹಾಸ, ಜನಜೀವನ, ಸಂಸ್ಕೃತಿಗಳು ಕಾರಣವಾದಂತೆ, ಕಾವ್ಯಗಳೂ ಪ್ರೇರೇಪಣೆ ನೀಡಿವೆಯೆನ್ನಲು ಆಧಾರಗಳಿವೆ. ಈ ಗೀತೆಗಳು ಅದಂದಿನ ಸಾಮಾಜಿಕ ಪದ್ಧತಿಗಳನ್ನು ರಾಜಕೀಯ ವಿಚಾರಗಳನ್ನು, ಧಾರ್ಮಿಕ ವಿಷಯಗಳನ್ನು, ಹಬ್ಬದಿಬ್ಬಣಗಳ ವೈಭವಗಳನ್ನು ಮತ್ತು ಕೇರಳ ಸಂಸ್ಕೃತಿಯನ್ನು ಪ್ರತಿಬಿಂಬಿಸಿರುವುದರಿಂದ ಕೇರಳ ಚರಿತ್ರಕಾರರು ಕೂಡ ಇವುಗಳಿಂದ ತುಂಬ ಪ್ರಯೋಜನವನ್ನು ಪಡೆದಿದ್ದಾರೆ. ನಾಡೋಡಿ ಪಾಟ್ಟುಗಳಿಗೆ ಆಧುನಿಕ ಮಲಯಾಳ ಸಾಹಿತ್ಯದಲ್ಲಿ ಮಹತ್ವಪೂರ್ಣ ಸ್ಥಾನ ದೊರೆತಂತೆ ಚರಿತ್ರೆಯಲ್ಲೂ ಸ್ಥಾನ ದೊರೆತಿರುವದರಿಂದ ಅವುಗಳ ಅಭ್ಯಾಸ ಮತ್ತು ಸಂಗ್ರಹ ಕಾರ್ಯದ ಆವಶ್ಯಕತೆ ಇಂದು ಕಂಡು ಬರುತ್ತಿದೆ.

ಈ ಗೀತೆಗಳ ಕಾಲನಿರ್ಣಯ ಎಷ್ಟು ತೊಡಕೋ ಅದಕ್ಕಿಂತಲೂ ಹೆಚ್ಚಿನ ತೊಡಕು ಕರ್ತೃನಿರ್ಣಯ ಕಾರ್ಯ. ಯಾವ ಗೀತೆಗಳಲ್ಲೂ ನಮಗೆ ಕವಿಗಳನ್ನು ಕುರಿತು ಸ್ಪಷ್ಟ ಆಧಾರಗಳು ದೊರೆಯುವದಿಲ್ಲ.

ಭಾಷೆಯ ದೃಷ್ಟಿಯಿಂದ ನೋಡಿದರೆ ಈ ಗೀತೆಗಳಲ್ಲಿ

೧] ಅಚ್ಚಮಲಯಾಳ ಗೀತೆಗಳಿವೆ.
೨] ಮಲಯಾಳ ತಮಿಳು ಮಿಶ್ರಗೀತೆಗಳಿವೆ.
೩] ಮಲಯಾಳ ಸಂಸ್ಕೃತ ಮಿಶ್ರಗೀತೆಗಳಿವೆ.

ಮಲಯಾಳ ಭಾಷೆಯ ನಾಡನ್ ಪಾಟ್ಟುಗಳನ್ನು ಪರಿಚಯ ಮಾಡಿಕೊಳ್ಳಲು ಆಸಕ್ತರಾದವರಿಗೆ ಶ್ರೀ ಚೆಲನಾಟ್ಟ್ ಅಚ್ಯುತ ಮೆನನ್ ಮತ್ತು ಡಾ|| ಎಸ್. ಕೆ. ನಾಯರ್ ಅವರು ಪ್ರಕಟಿಸಿರುವ ಬ್ಯಾಲಡ್ಸ್ ಆಫ್ ಮಲ-ಬಾರ್ (ವಡಕ್ಕನ್ ಪಾಟ್ಟುಗಳ್) ಎನ್ನುವ ಮೂರು ಸಂಪುಟಗಳು, ಶ್ರೀ ಜಿ. ಶಂಕರ ಪಿಳ್ಳೆ ಅವರು ಸಂಪಾದಿಸಿದ ತೋಟ್ಟಂಪಾಟ್ಟು. ಶ್ರೀ ಕಿಳಿಯಾನೂರ್ ವಿಶ್ವಂಭರನ್ ಅವರು ಸಂಗ್ರಹಿಸಿರುವ 'ಕೇರಳತ್ತಿಲೆ ನಾಡೋಡಿ ಪಾಟ್ಟುಗಳ್', ಶ್ರೀ ಸಿ. ಪಿ. ಗೋವಿಂದ ಪಿಳ್ಳೆ ಅವರು ಪ್ರಕಟಿಸಿದ, ಮಲಯಾಳತ್ತಿಲೆ ಪವಿಯ ಪಾಟ್ಟುಗಳ್, ಮುಂತಾದ ಗ್ರಂಥಗಳು ಮಾರ್ಗದರ್ಶನ ನೀಡುವ ಮುಖ್ಯ ಗ್ರಂಥಗಳು.

ಉತ್ತರ ಕೇರಳದ ಹಾಡುಗಳನ್ನು ' ವಡಕ್ಕನ್ ಪಾಟ್ಟುಗಳ್ ' ಎಂತಲೂ ದಕ್ಷಿಣ ಕೇರಳದ ಗೀತೆಗಳನ್ನು 'ತೆಕ್ಕನ್ ಪಾಟ್ಟುಗಳ್' ಎಂತಲೂ ಕರೆದಿದ್ದಾರೆ. ಇವು ಹೆಚ್ಚಾಗಿ ಯುದ್ಧವೀರರ ಸಾಹಸಮಯ ಜೀವನಕ್ಕೆ ಸಂಬಂಧಿಸಿದ ಗೀತೆ

ಗಳು. ಕೇರಳದ ವೀರರ ಚರಿತ್ರೆ ವಿಸ್ತಾರವಾಗಿ ಹಬ್ಬಿರುವುದು ಮತ್ತು ವೈವಿಧ್ಯ ತ್ರಗಳಿಂದ ಕೂಡಿರುವುದು ತೆಕ್ಕನ್ ಪಾಟ್ಟುಗಳಿಗಿಂತಲೂ ಹೆಚ್ಚಾಗಿ ವಡಕ್ಕನ್ ಪಾಟ್ಟುಗಳಲ್ಲಿ.

ಉತ್ತರ ಕೇರಳದ ಜಾನಪದ ಗೀತೆಗಳನ್ನು (ನಾಡನ್ ಪಾಟ್ಟು) ಕುರಿತು ಚೆಲನಾಟ್ ಅಚ್ಯುತ ಮೆನನ್ ಅವರು ತಮ್ಮ Ballads of Malabar ಎನ್ನುವ ಗ್ರಂಥ ಮುನ್ನುಡಿಯಲ್ಲಿ

"......These ballads apart from their Literarey and historical importance furnish ample evidence about the social and military institutions that dominated the ancient society of Kerala. They further throw light on the daily habits of the Malayalis and their marriage customs and the probabale date of Putturam Pattugal relating to the family of Aromal Chevakar the well known Izhuva hero about 12th Century" ಎಂದಿದ್ದಾರೆ.

ಈ ದೃಷ್ಟಿಯಿಂದ ವಡಕ್ಕನ್ ಪಾಟ್ಟುಗಳು ಕೇರಳದ ಜಾನಪದ ಗೀತೆಗಳಲ್ಲಿ ಬಹುಮುಖ್ಯ ಸ್ಥಾನವನ್ನು ಪಡೆದು ಜನಮನವನ್ನು ಇಂದಿಗೂ ಆಕರ್ಷಿಸುತ್ತಾ ಬಂದಿವೆ.

ನಾಡನ್ ಪಾಟ್ಟುಗಳಲ್ಲಿ ಸಂಗೀತ

ಕೇರಳ ಸಂಗೀತದ ರಾಗ ತಾಳಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಿ ಪ್ರಬಂಧ ರಚಿಸಿರುವ ಶ್ರೀಮತಿ ವಿಜಯ ರಾಘವನ್ ಅವರು ಈ ಗೀತೆಗಳನ್ನು ಕುರಿತು 'ಕೇರಳದ ನಾಡನ್ ಪಾಟ್ಟುಗಳಲ್ಲಿ ಸ್ವರದ ವ್ಯಾಪ್ತಿ ಮಂದ್ರ ಪಂಚಮದಿಂದ ಪ್ರಾರಂಭವಾಗಿ ಮಧ್ಯ ಪಂಚಮದ ವರೆಗೆ ಮಾತ್ರ ಮುಂದುವರಿಯುತ್ತದೆ. ಮಧ್ಯ ಪಂಚಮದಿಂದ ಆಚೆಗೆ ಹೋಗುವ ಉದಾಹರಣೆಗಳು ಕಡಿಮೆ' ಎಂದು ಹೇಳಿ ಕೇರಳ ಸಂಗೀತದಲ್ಲಿ ಈ ಗೀತೆಗಳ ಸ್ಥಾನ ಮತ್ತು ವೈಶಿಷ್ಟ್ಯವನ್ನು ಗುರುತಿಸಿದ್ದಾರೆ. ಈ ಗೀತೆಗಳಲ್ಲಿ ಸ್ವರದೀರ್ಘತೆಯಿಲ್ಲ. ಸ್ವರಸ್ಥಾನಗಳಿಗೆ ಪರಿಮಿತಿಯಿದೆ. ಸಂಗೀತ ಪದ್ಧತಿ ವಾಚ್ಯ. ತಾಳವೂ ಪ್ರಧಾನ. ಸಾಮಾನ್ಯವಾಗಿ ಎಲ್ಲ ಗೀತೆಗಳಿಗೂ ಪಕ್ಕವಾದ್ಯಗಳನ್ನು ಬಳಸಲಾಗುತ್ತದೆ. 'ನಂದುಣಿ' ಮತ್ತು 'ಪುಳ್ಳುವನ್ ವೀಣ' ಎನ್ನುವ ಪ್ರಾಚೀನ ವಾದ್ಯಗಳನ್ನು ಈ ಗೀತೆಗಳನ್ನು ಹಾಡುವಾಗ ಉಪಯೋಗಿಸುತ್ತಾರೆ. ಮೃದಂಗ, ಡೋಲು, ಗಿಂಜಿರ, ಘಟ, ಕೈಮಣಿ ಮುಂತಾದುವುಗಳನ್ನೂ ಆಯಾ ಹಾಡುಗಳಿಗೆ ತಕ್ಕಂತೆ ಬಳಸುವುದು ರೂಢಿಯಲ್ಲಿದೆ. ಕೆಲವು ಗೀತೆಗಳು ಏಲೇಲೋ, ಐಲೇ ಸಾಂ, ತಿತ್ತೈದ, ಲಲಲಾ, ಲಲಾಲೋ-ಎನ್ನುವ ಅರ್ಥವಿಲ್ಲದ ಅಂತ್ಯ ಆವರ್ತನಗಳನ್ನೊಳಗೊಂಡಿರುತ್ತವೆ.

ಪ್ರಾಚೀನಕಾಲದಲ್ಲಿ ಮಾನವನ ಬದುಕು 'ತಾರಾಟ್ಟುಪಾಟ್ಟ'ನಿಂದ ಹಿಡಿದು 'ಒಪ್ಪಾರಿಪಾಟ್ಟ್'ಗಳವರೆಗೆ (ತೊಟ್ಟಿಲ ಹಾಡಿನಿಂದ ಹಿಡಿದು ಸಿದಿಗೆಯ ಹಿಂದೆ ಹಾಡುವ ಶೋಕಗೀತೆಗಳವರೆಗೆ) ಸಂಗೀತಮಯವಾಗಿತ್ತು ಎನ್ನುವುದು ಈ ಜಾನಪದ ಗೀತೆಗಳಲ್ಲಿ ಸ್ಪಷ್ಟಗೊಳ್ಳುತ್ತದೆ. ಜಾನಪದ ಗೀತೆಗಳ ಜೀವಾಳ ವೆಂದರೆ ಬದುಕೆಲ್ಲ ಗಾನಮಯವೆನ್ನುವುದು ಜೀವನದಲ್ಲಿ ಯಾವ ಯಾವ ಸಮಾರಂಭಗಳಿವೆಯೋ ವಿನೋದ ವ್ಯಥೆಗಳಿವೆಯೋ ಅವಕ್ಕೆಲ್ಲ ಹಾಡುಗಳಿವೆ. ಇದು ಕೇರಳದ ನಾಡನ್ ಪಾಟ್ಟುಗಳಲ್ಲಿ ಮಾತ್ರ ಕಂಡು ಬರುವುದಲ್ಲ, ವಿಶ್ವದ' ಎಲ್ಲೆಡೆಗಳಲ್ಲೂ ಆಯಾ ಭಾಷೆಗಳಲ್ಲಿ ಜಾನಪದ ಗೀತೆಗಳು ಸೃಷ್ಟಿಗೊಂಡಿರುವುದು ಕಂಡು ಬರುತ್ತದೆ. ಭಾರತದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗು ಧಾರ್ಮಿಕ ವಿಷಯಗಳನ್ನೊಳಗೊಂಡ ಜಾನಪದ ಗೀತೆಗಳ ಸಂಪದ್ಭರಿತ ಭಂಡಾರವೇ ಇದೆಯೆನ್ನಬಹುದು. ಕಾವ್ಯಗಳ ಗುರಿಯಂತೆ ಈ ಗೀತೆಗಳ ಗುರಿಯೂ ಆನಂದವೇ.

ಕನ್ನಡದಲ್ಲಿ ಕೋಲಾಟದ ಪದಗಳು, ಜೋಗುಳ, ಶೋಭಾನೆ ಹಾಡುಗಳು, ಸುಗ್ಗಿಯ ಹಾಡು, ಕಂಸಾಳೆಯ ಪದಗಳು, ರಾಗಿ ಬೀಸುವ ಪದಗಳು, ಬಂಡಿಯ ಪದಗಳು, ಗ್ರಾಮದೇವತೆಗಳ ಮೇಲಿನ ಪದಗಳು, ಚೌಡಿಕೆ ಪದಗಳು, ಮಾಸತಿ ಗೀತೆಗಳು ಮುಂತಾದ ಕನ್ನಡ ಜಾನಪದ ಗೀತೆಗಳಂತೆ ಕೇರಳದ ನಾಡನ್ ಪಾಟ್ಟುಗಳಲ್ಲಿಯೂ ಹಲವಾರು ರೀತಿಯ ಗೀತೆಗಳಿವೆ. ಉದಾಹರಣೆಗಾಗಿ ಕೆಲ ವನ್ನು ಮಾತ್ರ ಇಲ್ಲಿ ಹೆಸರಿಸಲಾಗಿದೆ.

(೧) ಸಾನ್ಮಾರ್ಗಿಕ ಪಾಟ್ಟುಗಳ್
(೨) ತತ್ವ ಚಿಂತಾ ಪರಮಾಯ ಗಾನಂಗಳ್
(೩) ಕೃಷಿ ಪಾಟ್ಟುಗಳ್
(೪) ತುಳಿಲ್ ಪಾಟ್ಟುಗಳ್ (ಕಾರ್ಮಿಕರ, ಕೂಲಿಗಾರರ ಹಾಡುಗಳು)
(೫) ಭಕ್ತಿ ಗಾನಂಗಳ್
(೬) ಕ್ಷುದ್ರ ದೇವತಾ ಸ್ತುತಿಗಳ್
(೭) ಪಾಟ್ಟು ಜಾತಿಕಾರುಡೆ ಪಾಟ್ಟುಗಳ್
(೮) ಪುರಾಣ ಪರಮಾಯ ಗಾನಂಗಳ್ (ಗುಡ್ಡಗಾಡಿನ ಜನರ ಹಾಡುಗಳು)
(೯) ತಾರಾಟ್ಟುಪಾಟ್ಟು (ಜೋಗುಳ)
(೧೦) ಕಥಾಗಾನಂಗಳ್
(೧೧) ಕಲ್ಯಾಣ ಪಾಟ್ಟುಗಳ್ (ಶೋಭಾನೆ ಹಾಡುಗಳು)
(೧೨) ಔಷಧ ಪಾಟ್ಟುಗಳ್
(೧೩) ಮ್ಯಾಲಾಂಜಿ ಪಾಟ್ಟುಗಳ್ (ಮಾಪಿಳ್ಳೆಗಳ ಮದುವೆಯ ಕಾಲದಲ್ಲಿ ಮದುಮಕ್ಕಳಿಗೆ ಅಲಂಕರಿಸ ಲೇಪಿಸುವಾಗ ಹಾಡುವ ಗೀತೆಗಳು)

(೧೪) ತೀಯಾಟ್ಟುಪಾಟ್ಟು (ಬೆಂಕಿ ಸೇವೆಯ ಹಾಡು)
(೧೫) ಭದ್ರಕಾಳಿ ಪಾಟ್ಟು
(೧೬) ಅಯ್ಯಪ್ಪನ್ ಪಾಟ್ಟು (ಅಯ್ಯಪ್ಪದೇವರ ಸ್ತುತಿ)
(೧೭) ಪುಳ್ಳುವನ್ ಪಾಟ್ಟು ('ಪುಳ್ಳುವನ್') ಎನ್ನುವ ಒಂದು ಜಾತಿಯವರ ಹಾಡು)
(೧೮) ಊಂಞಾಲ್ ಪಾಟ್ಟು (ಉಯ್ಯಾಲೆ ಹಾಡು)
(೧೯) ವಂಚಿ ಪಾಟ್ (ದೋಣಿಯ ಹಾಡು)
(೨೦) ಓಣಂ ಪಾಟ್ಟು (ಓಣಂ ಹಬ್ಬವನ್ನು ಆಚರಿಸುವಾಗಿನ ಹಾಡು)
(೨೧) ತಿರುವಾದಿರ ಪಾಟ್ಟು (ತಿರುವಾದಿರ ಹಬ್ಬದ ಗೀತೆ)
(೨೨) ಮಾರನ್ ಪಾಟ್ಟು (ಮದುವೆಯ ಹಾಡು)
(೨೩) ವಡಕ್ಕನ್ ಪಾಟ್ಟು (ಕೇರಳದ ಉತ್ತರ ಪ್ರದೇಶದ ಹಾಡು)
(೨೪) ಪರಯನ್ ಪಾಟ್ಟು (ಪರಯ ಜಾತಿಯವರ ಹಾಡು)
(೨೫) ಪುಲಯನ್ ಪಾಟ್ಟು (ಹರಿಜನರ ಹಾಡು)
(೨೬) ವೇಟ್ಟುವನ್ ಪಾಟು
(೨೭) ವಳ್ಳೋನ್ ಪಾಟ್ಟು
(೨೮) ಮಣ್ಣಾನ್ ಪಾಟು
(೨೯) ಮಲಯನ್‌ಪಾಟ್ಟು
} ಆಯಾ ಜಾತಿಯವರ ಹಾಡುಗಳು.
(೩೦) ವೇಲನ್ ಪಾಟ್ಟು (ಮಂತ್ರವಾದಿಯ ಹಾಡು)
(೩೧) ಕುರುತ್ತಿ ಪಾಟ್ಟು (ಕೊರವಂಜಿ ಹಾಡು)
(೩೨) ಕಿರಾತ್‌ಪ್ಪಾಟ್
(೩೩) ಕೋಲಡಿ ಪಾಟ್ (ಕೋಲಾಟದ ಪದ)
(೩೪) ಅಮ್ಮಾನ ಪಾಟ್ಟು (ಪುರಾತನ ಹಾಡುಗಳು)
(೩೫) ವಳ್ಳಪ್ಪಾಟ್ಟು (ನೀರಿನ ಹಾಡು)
(೩೬) ಭೀಮಕಥ ಪಾಟ್ಟು
(೩೭) ಸಂತಾನ ಗೋಪಾಲನ್ ಪಾಟ್ಟು
(೩೮) ಸೋಮವಾರ ವ್ರತ ಪಾಟ್ಟು
(೩೯) ವೇಲಾಯುಧಂ ಪಾಟ್ಟು
(೪೦) ಬ್ರಾಹ್ಮಣಿ ಪಾಟ್ಟು
(೪೧) ದೇವೇಂದ್ರ ಪಳ್ಳ ಪಾಟ್ಟು (ದೇವೇಂದ್ರ ಪಳ್ಳ ಎನ್ನುವ ಪ್ರಾದೇಶಿಕ ಹಿನ್ನೆಲೆಯನ್ನುಳ್ಳ ಹಾಡು)
(೪೨) ಪಯ್ಯನೂರ್ ಪಾಟ್ಟು.
(೪೩) ಅಂಜು ತಂಬುರಾನ್ ಪಾಟ್ಟು......

ಹೀಗೆ ಈ ಹಾಡುಗಳಲ್ಲದೆ ಇನ್ನೂ ಅನೇಕ ರೀತಿಯ ಹಾಡುಗಳು ಕೇರಳದ ಜನಜೀವನ ಮತ್ತು ಸಂಸ್ಕೃತಿಯನ್ನು ಹಲವಾರು ದಿಕ್ಕುಗಳಿಂದ ತಿಳಿಯಲು ಸಹಕಾರಿಯಾಗಿವೆ.

ಶ್ರೀ ಅಪ್ಪನ್ ತಂಬುರಾನ್ ಅವರು ಕೇರಳದ ನಾಡನ್ ಪಾಟ್ಟುಗಳನ್ನು ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ವೈನೋದಿಕ ಮುಂತಾಗಿ ಹನ್ನೆರಡು ವಿಭಾಗ ಮಾಡಿದ್ದಾರೆ.

ಇನ್ನು ಮುಂದೆ ಮೇಲೆ ಹೇಳಿದ ಗೀತೆಗಳಲ್ಲಿ ಕೆಲವನ್ನು ಮಾದರಿಗಾಗಿ ಆಯ್ದು ಕೊಡಲಾಗಿದೆ.

ಉತ್ತರ ಕೇರಳದಲ್ಲಿ ತಚ್ಚೋಳಿ ವೀಡು (ತಚ್ಚೋಳಿ ಕುಟುಂಬ, ವಂಶ) ತುಂಬ ಪ್ರಸಿದ್ಧಿ ಪಡೆದಿದ್ದ ಮನೆತನ. ಆ ಕುಟುಂಬಗಳಲ್ಲಿ ತಚ್ಚೋಳಿ ಚಂದು ಎಂಬ ಒಬ್ಬ ಶೂರಾಗ್ರಣಿಯಿದ್ದ. ವಡಕ್ಕನ್ ಪಾಟ್ಟುಗಳಲ್ಲಿ (ಉತ್ತರ ಕೇರಳದ ಗೀತೆಗಳಲ್ಲಿ) ತಚ್ಚೋಳಿ ಚಂದುವಿಗೆ ಒಂದು ಪ್ರತ್ಯೇಕ ಸ್ಥಾನವಿದೆ. ಅವನ ಜೀವನದಲ್ಲಿ ಜರುಗಿದ ಒಂದು ಮುಖ್ಯ ಘಟನೆ ಹೀಗಿದೆ.

ಚಂದುವಿನ ಹೆಂಡತಿ ಮಾಧುಕುಟ್ಟಿ ಅತ್ಯಂತ ಸುಂದರಿಯೂ ವೀರವನಿತೆಯೂ ಆಗಿದ್ದಳು. ಮಾಧುಕುಟ್ಟಿ ಒಮ್ಮೆ ಓಮಲ್ಲೂರು ಕಾವಿನಲ್ಲಿ ಸ್ನಾನ ಮಾಡಲು ಹೋಗಿದ್ದಳು. ತುಳುನಾಡು ಕೋಟೆಯ ಕಂಡೋರ್‌ಮೆನನ್ ಆ ಮಾರ್ಗವಾಗಿ ಬರುತ್ತಿದ್ದ. ಸ್ನಾನ ಮುಗಿಸಿ ಹಿಂದಿರುಗುತ್ತಿದ್ದ ಮಾಧವಿ ಕುಟ್ಟಿಯನ್ನು ನೋಡಿದ. ಅವಳ ಸೌಂದರ್ಯ ಅವನನ್ನು ಸೆರೆಹಿಡಿಯಿತು. ಆದರೆ ಅವಳು ಪರಪತ್ನಿ. ಅವನ ವಿವೇಕ ಮರೆಯಾಯಿತು. ಅವಳನ್ನು ನೋಡುತ್ತಾ ನೋಡುತ್ತಾ ಹುಚ್ಚನಂತಾದ ಮೆನನ್ ವರ್ಣಿಸುವ ಬಗೆ ಇದು .

"ಈ ವಗ ಪೆಣ್ಣಂಙಳ್ ಭೂಮಿಲುಂಡೋ
ಮಾನತ್ತಿ ನೆಂಙಾನು ಪೊಟ್ಟಿವೀಣೋ

ಭೂಮೀನ್ನು ತನಿಯೇ ಮುಳಚ್ಚುವನ್ನೋ
ಎನ್ದು ನಿರಮೆನ್ನು ಚೆಲ್ಲೆಂಡು ಞಾನ್
ಕುನ್ನತ್ತು ಕೊನ್ನಯುಂ ಪೂತ್ತಪೋಲೆ
ಇಳಮಾವಿನ್ ತಯ್ಯು ತಳಿರ್ತ್ತಪೋಲೆ
ಕುರುತ್ತೋಲಯಾದಿಲ್ ವಣ್ಣಂ ಪೋಲೆ
ವಯನಾಡ ಮಂಙ್ಙಳ್ ಮುರಿಚ್ಚಪೋಲೆ.........
[ಹೆಣ್ಣುಂಟೆ ಈ ಬಗೆ ಭೂಮಿಯೊಳು
ಕೈತಪ್ಪಿ ಗಗನದಿಂದಿಳಿದವಳೋ
ಭೂಮಿಯು ತಾನಾಗಿ ಮೊಳೆಬಿಟ್ಟಿತೋ
ಬಣ್ಣಿಸಲೆಂತು ಈ ಬಣ್ಣವನು !

ಗುಡ್ಡದಿ ಆವರಿಕೆ ಹೂಬಿಟ್ಟಂತೆ,
ಸಸಿಮಾವು ಮೈತುಂಬ ಚಿಗುರಿದಂತೆ
ತೆಂಗಿನ ಎಳಗರಿ ಬಣ್ಣದಂತೆ
ವಯನಾಡ ಅರಸಿನ ಮುರಿದಿಟ್ಟಂತೆ ....]

ಇಂತಹ ಸುಂದರಿಯಾದ ಮಾಧುಕುಟ್ಟಿಯನ್ನು ತುಳುನಾಡು ಕೋಟೆಗೆ ಅಪಹರಿಸಿಕೊಂಡು ಹೋಗಲು ತೀರ್ಮಾನಿಸಿದ. ಪಲ್ಲಕಿಯಿಂದ ಕೆಳಗಿಳಿದು ಅವಳ ಹತ್ತಿರಕ್ಕೆ ಹೋಗಿ ತನ್ನ ಅರಮನೆಗೆ ಬರುವಂತೆ ಅವಳನ್ನು ಕೇಳಿಕೊಂಡ. ಮಾಧುಕುಟ್ಟಿ ವೀರವನಿತೆ. ಪರಪುರುಷನ ಸಂಗಡ ಓಡಿಹೋಗಲು ಒಪ್ಪಿಯಾಳೆ? ಕಂಡೋರ್ ಮೆನನ್ನನ ವರ್ತನೆಯನ್ನು ಕಂಡು ಮಾಧುಕುಟ್ಟಿಗೆ ಸಿಟ್ಟು ಬಂದಿತು. ಅವಳು ಹೇಳುತ್ತಾಳೆ:

"ಎನ್ನೆ ನೀಯ್ಯರಿಂ ಇಾ ಮರುದಿಕಯ್ಯ
ತಚ್ಚೋಳಿ ಚಂದುನೆ ಅರಿಯು ನೀಯ್ಯ
ಅವನುಡೆ ಪೆಣ್ಣಾಯ ಮಾಧು ಞಾನೊ
ಅವನೀ ಸಂಗತಿ ಅರಿಞ್ಞುವೆಂಗಿಲ್
ಕಳುವಿನೆ ಕೊತ್ತುಂ ಪೋಲ್ ಕೊತ್ತು ನಿನ್ನೆ.........."

[........ನಾನಾರು ಎಂಬುದು ಗೊತ್ತೇನೊ ನಿನಗೆ ?
ತಚ್ಚೋಳಿ ಚಂದನ ಹೆಸರು ಗೊತ್ತೇನೋ ?
ಅವನ ಹೆಂಡತಿ ನಾನು ಮಾಧವಿ ಕಾಣೊ ?
ಅವನಿಗೀ ಸಂಗತಿ ತಿಳಿಯಿತೆಂದಾದರೆ
ಗಿಡುಗನಂತೆರಗಿ ಕೊಂದಾನು ನಿನ್ನ ....]

ಮೆನನ್ ಅದೊಂದಕ್ಕೂ ಕಿವಿಗೊಡಲಿಲ್ಲ. ಬಲಾತ್ಕಾರವಾಗಿ ಅವಳನ್ನು ಎತ್ತಿಕೊಂಡು ಹೋಗಿ ಪಲ್ಲಕಿಯಲ್ಲಿ ಕೂರಿಸಿಕೊಂಡು ತುಳುನಾಡು ಕೋಟೆಗೆ ಬಂದ. ಆ ಸುದ್ದಿ ತಚ್ಚೋಳಿ ಚಂದುಗೆ ತಿಳಿಯಿತು. ಕೂಡಲೆ ಸನ್ಯಾಸಿಯ ವೇಷವನ್ನು ಧರಿಸಿಕೊಂಡು ತುಳುನಾಡ ಕೋಟೆಗೆ ಬಂದ. ಒಂಟಿಯಾಗಿ ಮೆನನ್ನನ ಸೈನ್ಯಕ್ಕೆ ಎದುರಾಗಿ ಹೋರಾಡಿದ. ಮಾಧುಕುಟ್ಟಿಯನ್ನು ತುಳುನಾಡಕೋಟೆಯ ಸೆರೆಯಿಂದ ಬಿಡಿಸಿಕೊಂಡು ಬಂದ.

ವಡಕ್ಕನ್ ಪಾಟ್ಟುಗಳಲ್ಲಿ ಬರುವ ಸಮರ ಶೂರರ ಯುದ್ಧ ಕೌಶಲಗಳ ವರ್ಣನೆಗಳು ಅದ್ಭುತ ಕಲ್ಪನೆಯ ಉತ್ತುಂಗ ಶೃಂಗವನ್ನು ತಲುಪಿವೆ. ಅವುಗಳಲ್ಲಿ ಒಂದು ಉದಾಹರಣೆಯನ್ನು ನೋಡೋಣ: ಆರೋಮಲ್ ಚೇವಕರ್ ಎನ್ನುವ ವೀರಾಗ್ರಣಿ ಯುದ್ಧಸನ್ನದ್ಧನಾಗುವ ಮುನ್ನ ಅವನು ಆಚರಿಸಿದ 'ಅಸಿಧಾರಾವ್ರತ'ವನ್ನು ಮಾತ್ರ ಈ ಕೆಳಗೆ ಕೊಡಲಾಗಿದೆ.

ಯುದ್ಧಕ್ಕೆ ಹೊರಡಬೇಕೆಂಬ ಸುದ್ದಿ ತಲುಪಿತು. ಆರೋಮಲ್ ಚೇಪಕರ್ ಆ ಸುದ್ದಿಯನ್ನು ಕೇಳಿ:

“ಅವಿಡಿನ್ನೆಳು ನ್ನೇಟ್ಟು ಆರೋಮರು
ಪೀಠಂ ದಲಿಚ್ಚಂಜು ಚೇಕೋನ್
ಪಾವಾಡಂ ತನ್ನೆ ವಿರಿಕ್ಕುನ್ನುಂಡು
ಪಾವಾಡ ತನ್ನಿಲ್ ತಳಿಗವಚ್ಚು
ತಳಿಗ ನಿರಯೋಳಂ ವೆಳ್ಳರಿಯುಂ
ವೆಳ್ಳರಿ ಮೀತೊರು ನಾಳಿಕೇರಂ
ನಾಳಿಕೇರತ್ತಿನ್ ಮೇಲ್ ಚೆಂಬಳುಕ್ಕಾ
ಪಟುಕ್ಕಾ ಮುಗಳಿಲೊರು ಕೋಟಿಮುಟ್ಟ
ಕೋಟಿ ಮುಟ್ಟಮೇಲ್ ಸೂಜಿನಾಟ್ಟಿ
ಸೂಚಿ ಮುನಮೇಲ್ ಮರಿಞು ನಿನ್ನು
ನೃತ್ತಂಞಳೇಟಿಂ ಕಟಿಚ್ಚವನು...........”
...........[ಅಲ್ಲಿಂದ ಮೇಲೆದ್ದ ಆರೋಮರು
ಪೀಠವ ತಂದಿಟ್ಟು ಚೇವಕನು
ಪಾವಾಡ ತಂದಲ್ಲಿ ಹಾಸಿದನು
ಪಾವಾಡ ಮೇಲೊಂದು ತಳಿಗೆಯಿಟ್ಟ
ಬೆಳ್ತಕ್ಕಿ ತುಂಬಿದ ತಳಿಗೆಯಲಿ
ಬೆಳ್ತಕ್ಕಿ ಮೇಲೊಂದು ತೆಂಗಿನಕಾಯಿ
ಕಾಯಿಯ ಮೇಲೊಂದು ಹಣ್ಣಡಕೆ
ಹಣ್ಣಡಕೆ ಮೇಲೊಂದು ಕೋಳಿ ಮೊಟ್ಟೆ
ಮೊಟ್ಟೆಯ ಮೇಲೊಂದು ಸೂಜಿ ನಾಟಿ
ಸೂಜಿಯ ಮೇಲೊಂದು ಕತ್ತಿಯನಿಟ್ಟು
ಕತ್ತಿಯ ಮೇಲೆ ತಲೆಕೆಳಗು ಮಾಡಿ
ನೃತ್ಯಗಳೇಳನು ಮಾಡಿದನು...]

ಇದೇ ಆರೋಮಲ್ ಚೇವಕರ್ ಗಾಂಧರ್ವ ರೀತಿಯಲ್ಲಿ ವಿವಾಹಿತನಾದ ಕಥೆ ಹೀಗಿದೆ:

ಒಮ್ಮೆ ಆರೋಮಲ್ ಚೇವಕರ್ ತನ್ನ ಸೋದರ ಮಾವನ ಮನೆಗೆ ಹೋಗಿದ್ದ. ಆ ಮಾವನಿಗೆ ತುಂಬೋಲಾರ್ಚಿ ಎನ್ನುವ ಮಗಳಿದ್ದಳು. ಚೇವಕರ್ ಮಾವನ ಮನೆಯ ಜಗಲಿಯ ಮೇಲೆ ಕುಳಿತಿದ್ದಾಗ ತುಂಬೋಲಾರ್ಚಿ ನದಿಗೆ

ಸ್ನಾನಕ್ಕೆ ಹೋಗಿದ್ದವಳು ಮನೆಯ ಮೆಟ್ಟಿಲಿನ ಹತ್ತಿರಕ್ಕೆ ಬಂದಾಗ ಜಗಲಿಯ ಮೇಲೆ ಕುಳಿತಿದ್ದ ಚೇವಕನನ್ನು ನೋಡಿದಳು. ಅವನೂ ನೋಡಿದ.

"...ಮಾರತ್ತು ಕಿಣ್ಣಂ ಕಮುಟ್ಟಿಗೊಂಡು
ಪಡಿಯುಂ ಪುಡಿಪುರಂ ಕಡನ್ನುವನ್ನು
ಒಳಿಮಿನ್ನಲ್ ಪೋಲಂಜು ಕಂಡು ಚೇಕೋನ್
ದೃಷ್ಟಿಮರಚ್ಚಂಜು ನೋಕಿ ಚೇಕೋನ್
ಪೂಂಚಿರಿಗೊಂಡು ಚಿರಿಚ್ಚು ಪೆಣ್ಣು...."
[ಎದೆಯಲ್ಲಿ ಗಿಂಡಿಯ I ಕವುಚಿಕೊಂಡು
ಮೆಟ್ಟಿಲನೇರಿ ಬರುತ್ತಿದ್ದಳು
ಸುಳಿಮಿಂಚಿನಂಥವಳ
ಕಂಡು ಚೇಕೋನ್
ಕಣ್ಣಿವೆಯಿಕ್ಕದೆ ನೋಡಿದನು.
ಹೂನಗೆ ನಕ್ಕಳು ಅವನೋಡಿ ಅವಳು...]

ಹಾಗೆ ಪ್ರಥಮ ದೃಷ್ಟಿಯಲ್ಲೇ ಪ್ರೇಮಾಂಕುರವುಂಟಾಯಿತು. ಅವರಿಬ್ಬರೂ ಅನುರಾಗ ಬಂಧನಕ್ಕೊಳಗಾದರು. ಈ ಕಥೆ ಇಲ್ಲಿಗೆ ಮುಕ್ತಾಯಗೊಳ್ಳುವುದಿಲ್ಲ. ಮನೆಯವರಿಗೆ ತಿಳಿಯದಂತೆ ಅವರಿಬ್ಬರೂ ಗಾಂಧರ್ವ ವಿಧಿಯಲ್ಲಿ ವಿವಾಹ ಮಾಡಿಕೊಳ್ಳುವುದು, ತುಂಬೋಲಾರ್ಚೆ ಗರ್ಭಿಣಿಯಾಗುವುದು, ತುಂಬೋಲಾರ್ಚೆಯನ್ನು ಗಂಧರ್ವ ಪದ್ಧತಿಯಲ್ಲಿ ಕೈ ಹಿಡಿದಿದ್ದೇನೆಂದು ಒಪ್ಪಿಕೊಳ್ಳುವುದು,....ಇತ್ಯಾದಿಯಾಗಿ ಕಥೆ ಮುಕ್ತಾಯಗೊಳ್ಳುತ್ತದೆ.

ತಚ್ಚೋಳಿ ಮನೆತನದ ಮತ್ತೊಬ್ಬ ವೀರ ತಚ್ಚೋಳಿ ಒತೇನನ್. ಅವನ ಪರಾಕ್ರಮಗಳಿಗೆ, ಸಾಹಸ ಕಾರ್ಯಗಳಿಗೆ ಸಂಬಂಧಿಸಿದಂತೆ ಅಸಂಖ್ಯಾತವಾದ ಗೀತೆಗಳಿವೆ. ಅವನ ಪ್ರೇಮ ವಿವಾಹಕ್ಕೆ ಸಂಬಂಧಿಸಿದ ಒಂದು ಗೀತೆಯ ಕೆಲವು ಸಾಲುಗಳನ್ನು ಈ ಕೆಳಗೆ ಕೊಡಲಾಗಿದೆ.

ಕಾವಿಲುಂ ಚಾತ್ತೋತ್ತು ಮಾತೇಯಿ ಅಮ್ಮನಿಗೆ ತನ್ನ ಒಂಬತ್ತನೆಯ ಮಗಳು ಚೀರುವನ್ನು ಒತೇನನಿಗೆ ಮದುವೆ ಮಾಡಿ ಕೊಡಬೇಕೆಂದು ಆಸೆಯುಂಟಾಗುತ್ತದೆ. ಆಗ ಆ ಹುಡುಗಿ ಇನ್ನೂ ಚಿಕ್ಕವಳಾಗಿರುತ್ತಾಳೆ. ತಚ್ಚೋಳಿ ಒತೇನನ ಹತ್ತಿರ ಚೀರುವನ್ನು ಮದುವೆ ಮಾಡಿಕೊಳ್ಳುತ್ತೀಯಾ ಎಂದು ಕೇಳಿದಾಗ ಒತೇನನ್ ಹೇಳುತ್ತಾನೆ.

"ಕಾಕ್ಕಯೆ ಪೋಲೆ ಕರುತ್ತಚೀರು;
ಎನಕ್ಕಿನ್ನ ಚೀರುನೆ ವೇಣ್ಡನ್ನೇಟಾ
ಚಕ್ಕಚ್ಚುಳ ಪಲ್ಲು ಪೇಸ್ಸಲಯುಂ
ಎನಕ್ಕನ್ನ ಚೀರುನೆ ವೇಣ್ಡನ್ನೇಟಾ

ಅಚ್ಚನುಂ ಮಮ್ಮಯ್ಯುಂ ವೇಣೆಂಗಿಲುಂ
ವಡಗರ ಪೊಕ್ಕಪ್ಪನ್ ಚೋನಕನುಂ
ಕುಪ್ಪಯಿಟ್ಟಾಟ್ಟಾನಯುಚ್ಚೇಕ್ಕಟ್ಟಿ,
ಕೊಪ್ಪರ ಕಾಕ್ಕಾನಂ ಐಕ್ಕಿಕೊಟ್ಟೆ........"
[ಕಾಗೆಯು ಹಾಗೆ ಕಪ್ಪಾದ ಚೀರು,
ಆ ಚೀರು ನನಗೆ ಬೇಡ ಕಾಣಣ್ಣ,
ಹಲ್ಲು ಹಳಸಿನ ತೊಳೆ ಹೇನು ತುಂಬಿದ ತಲೆ
ಆ ಚೀರು ನನಗೆ ಬೇಡ ಕಾಣಣ್ಣ
ಅವರಪ್ಪ ಅಮ್ಮಗೆ ಬೇಕೆನಿಸಿದ್ದರೆ
ಬಡಗರ ಪೊಕ್ಕಪ್ಪ ಚೋನಕಗೆ
ಮದುವೆಯು ಮಾಡಿಕೊಡಲೇಳಣ್ಣ........]

ಬಡಗರದಲ್ಲಿ ಪೊಕ್ಕಪ್ಪ ಚೋನಕನ್ ಎನ್ನುವ ಮಾಪಿಳ್ಳೆಯಿದ್ದಾನೆ. ಅವನು ಎಣ್ಣೆ ತೆಗೆಸುವದಕ್ಕಾಗಿ ಕೊಬ್ಬರಿಯನ್ನು ಒಣಗಲು ಹಾಕಿದ್ದಾನೆ. ಅಲ್ಲಿಗೆ ತುಂಬ ಕಾಗೆಗಳು ಬರುತ್ತವೆ. ಚೀರುವಿನ ತಂದೆ ತಾಯಿಗಳಿಗೆ ಇಷ್ಟವಿದ್ದರೆ ಅವನಿಗೆ ಮದುವೆ ಮಾಡಿಕೊಡಲಿ. ಅಲ್ಲಿ ಕಾಗೆ ಓಡಿಸಿಕೊಂಡಿರಬಹುದು. ಕಾಗೆಗಳ ಬಣ್ಣಕ್ಕೂ ಚೀರುವಿನ ಬಣ್ಣಕ್ಕೂ ಒಳ್ಳೆಯ ಹೊಂದಿಕೆಯಾಗುತ್ತದೆ ಎಂದು ಪರಿಹಾಸ್ಯ ಮಾಡಿದ. ಅವನು ಹಾಗೆ ಹಾಸ್ಯ ಮಾಡಿದುದು ಚೀರುವಿಗೂ ತಿಳಿಯಿತು.

ಕೆಲವು ವರ್ಷ ಕಳೆದವು. ಚೀರು ಯುವತಿಯಾದಳು. ಒಮ್ಮೆ ಅಕಸ್ಮಾತಾಗಿ ಚೀರುವನ್ನು ಕಂಡ ಓತೇನನ್ ಚೀರುವಿನ ಸೌಂದರ್ಯಕ್ಕೆ ಮಾರುಹೋದ. ಅವಳ ರೂಪ ಲಾಲಿತ್ಯಕ್ಕೆ ಪರವಶನಾದ ಓತೇನನ್ ಅವಳನ್ನೇ ಮದುವೆ ಮಾಡಿಕೊಳ್ಳಲು ತೀರ್ಮಾನಿಸಿದ. ಯೌವ್ವನ ಅವಳಲ್ಲಿ ಅಪ್ರತಿಮ ಸೌಂದರ್ಯವನ್ನು ಸೃಷ್ಟಿಸಿತ್ತು. ತನ್ನ ಮನದಿಂಗಿತವನ್ನು ಅವಳಿಗೆ ನೇರವಾಗಿ ತಿಳಿಸಲಾರ. ಚಿಕ್ಕಂದಿನಲ್ಲಿಅವಳ ಬಣ್ಣವನ್ನು ಕುರಿತು ತಮಾಷೆಮಾಡಿದ್ದ. ಅದಕ್ಕಾಗಿ ಚಾಪ್ಪನ್‌ಎನ್ನುವ ತನ್ನ ಮಿತ್ರನ ಸಹಾಯವನ್ನು ಕೋರಿದ. ವೀಳ್ಯೆದೆಲೆ ಈಸಿ ತರಿಸುವ ನೆವಹೂಡಿ ಚಾಪ್ಪನನ್ನು ಅವಳಲ್ಲಿಗೆ ಕಳುಹಿಸಿ ತಾನು ಅವಳನ್ನು ಪ್ರೀತಿಸುವದಾಗಿ ತಿಳಿಸಿದ.

ಚೀರು, ಹಿಂದಿನ ಘಟನೆಯನ್ನು ಮರೆತಿಲ್ಲ. ಅವಳು ಕೊಟ್ಟ ಉತ್ತರ ಇದು

" ಕುರುಪ್ಪಲ್ಲೇ ವೆಟ್ಟಿಲಯ್ಯುಯ ಚ್ಚೂಟ್ಟದುಂ ?
ಚೋನಕನ್ ತಿನ್ನುಳ್ಳ ವೆಟ್ಟಿಲೆಯುಳ್ಳು
ಕುರುಪ್ಪಿನ್ನು ವೆಟ್ಟಿಲಯಿಲ್ಲಚಾಪ್ಪಾ
ವಡಗರ ಪೊಕ್ಕಪ್ಪನ್ ಚೋನಕನ್ನೆ
ಕೊಪ್ಪರಯಿಲ್ ಕಾಕ್ಕಾನೆ ನೋಕ್ಕಿಟ್ಟುಳ್ಳು......"

" ತಾಂಬೂಲ ಈಸಿ ತರಲು ಕಳುಹಿಸಿದ್ದು ಒತೇನನ್ ಕುರುಪ್ ಅಲ್ಲವೆ? ಅವನು ಹಾಕುವ ಎಲೆ ನನ್ನಲ್ಲಿಲ್ಲ. ನನ್ನ ಹತ್ತಿರ ಇರುವುದು ಬಡಗರದ ಪೊಕ್ಕ-ಪ್ಪನ್ ಮಾಪಿಳ್ಳೆ ಹಾಕುವ ಎಲೆ ಮಾತ್ರ. ನೀನು ಹೋಗಿ ಹೇಳು: ಚೀರು, ಬಡಗರದ ಮಾಪಿಳ್ಳೆಯು ಕೊಬ್ಬರಿ ಕಾಯುವುದಕ್ಕೆ ಯೋಗ್ಯಳು. ಕಾಗೆಯನ್ನು ಓಡಿಸಿಕೊಂಡಿರುವುದಕ್ಕೆ ಮಾತ್ರ ತಕ್ಕವಳು. ನಿನ್ನಂಥವನಿಗೆ ಹೆಂಡತಿಯಾಗುವ ಯಾವ ಯೋಗ್ಯತೆಯಿದ್ದೀತು ಚೀರುವಿನಲ್ಲಿ" ಎಂದು.

ಚಾಪ್ಪ ಹಿಂದಿರುಗಿ ಬಂದ. ಚೀರು ತಿಳಿಸಿದ ನಾಟುನುಡಿಯನ್ನು ಒತೇ-ನನಿಗೆ ತಿಳಿಸಿದ. ಇದರಿಂದ ಒತೇನನಿಗೆ ಸಮಾಧಾನವಾಗಲಿಲ್ಲ. ಹೇಗಾದರೂ ಸರಿಯೆ ಚೀರುವನ್ನು ಒಲಿಸಿಕೊಳ್ಳಬೇಕೆಂದು ನಿರ್ಧರಿಸಿದ. ಕಿವುಡನ ವೇಷಧರಿಸಿಕೊಂಡು ಚೀರುವಿನ ಮನೆಗೆ ಬಂದು, ಅಲ್ಲಿ ಕೆಲವುದಿನಗಳಿದ್ದು, ಒಂದು ದಿನ ರಾತ್ರಿಯ ಹೊತ್ತು ಚೀರುವಿಗೆ ಅರಿಯದಂತೆ ಅವಳ ಮಂಚದಡಿಯಲ್ಲಿ ಮಲಗಿದ್ದು ನಡುರಾತ್ರಿಯಲ್ಲಿ ಎದ್ದು ಅವಳ ಕಾಲಿಗೆ ಬಿದ್ದು ಕ್ಷಮೆ ಕೇಳಿ, ಅವಳನ್ನು ಒಲಿಸಿಕೊಂಡು ವಿವಾಹ ಮಾಡಿಕೊಂಡ ಕಥೆ ಈ ಗೀತೆಯಲ್ಲಿದೆ.

ಕುರತ್ತಿಪಾಟ್ಟು

ಕನ್ನಡದಲ್ಲಿ ಕೊರವಂಜಿ ಹಾಡುಗಳಿರುವಂತೆ, ಮಲಯಾಳದಲ್ಲೂ 'ಕುರುತ್ತಿ ಪಾಟ್' [ಕೊರವಂಜಿ ಹಾಡುಗಳು] ಇವೆ. ರಾಮಾಯಣ ಕಥಾ-ಸಾರವನ್ನೊಳಗೊಂಡ ಒಂದು 'ಕುರುತ್ತಿ ಪಾಟ್ಟ್' ಆ ಕೊರವಂಜಿ ದಂಪತಿಗಳ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಡುವುದರ ಮೂಲಕ ಪ್ರಾರಂಭವಾಗುತ್ತದೆ.

ವಿಷ್ಣುಭಕ್ತನಾದ ಒಬ್ಬ ಕೊರವನಿರುತ್ತಾನೆ. ಆಗ ತಾನೆ ಮದುವೆಯಾದವನು. ಆ ದಂಪತಿಗಳಿಗೆ ಊರನ್ನು ಸುತ್ತುವುದನ್ನು ಬಿಟ್ಟು ಯಾವುದಾದರೂ ಒಂದು ನಗರದಲ್ಲಿ ವಾಸ ಮಾಡಬೇಕು ಎನ್ನಿಸುತ್ತದೆ. ಆದರಂತೆ ಒಂದು ನಗರಕ್ಕೆ ಬಂದು ವಾಸಮಾಡುತ್ತಿರುತ್ತಾರೆ.

" ಭಕ್ತ ನಾಯ ನಲ್ಲುರವನ್
ವೇಟ್ಟುಕೊಂಡವಳೇ
ಇಷ್ಟಮೋಡೆ ಪಟ್ಟಣತ್ತಿಲ್
ವಾಳುನ್ನೋರು ಕಾಲಂ......."
[...ದೈವಭಕ್ತ ಕೊರವನು
ಸತಿಯೊಡಗೂಡಿ
ಇಷ್ಟದಿಂದ ಪಟ್ಟಣದಿ
ಬಾಳುತ್ತಿದ್ದ ಕಾಲ....]

ಅವರಿಗೆ ಒಬ್ಬ ಮಗ ಹುಟ್ಟುತ್ತಾನೆ. ಆರು ತಿಂಗಳು ಕಳೆಯುತ್ತವೆ. ಅವನಿಗೆ ನಿಂತ ನೀರಿನಂತೆ ಜೀವಿಸುವುದು ಸರಿಯಲ್ಲವೆನ್ನಿಸುತ್ತದೆ. ಒಂದು ದಿನ ಆ ಕೊರವ ಹೆಂಡತಿಯನ್ನು ಹತ್ತಿರ ಕರೆದು :

ಇನ್ನಿವಿಡಿನಿನ್ನು ನಾಂ ಪು-
ರಪ್ಪೆಡುಗ ಬಾಲೇ
ನಮ್ಮುಡಯ ಜಾತಿಧರ್ಮ
ಮುಂಙಾನೆಯು ದೊಳ್ಳು..."

[... ಇನ್ನು ನಾವು ಈ ಊರಿಂದ
ಹೊರಡೋಣ ಎಳೆ
ನಮ್ಮದೊಂದು ಜಾತಿಧರ್ಮ
ಹಾಗೆ ಉಂಟು ಕೇಳೆ...]

ನಾವು ಇಲ್ಲಿಂದ ಹೊರಡೋಣ. ನಮ್ಮದೇ ಆದ ಜಾತಿ ಧರ್ಮವೊಂದಿದೆ. ಅದು ಕಣಿ ಹೇಳುತ್ತಾ ಊರೂರು ಸಂಚರಿಸುವುದು. ನಮ್ಮ ಜಾತಿ ಧರ್ಮ-ಕ್ಕನುಸರಿಸಿ ನಾವು ಬಾಳಬೇಕು.

"... ಜಾತಿಧರ್ಮಂ ಚೆಯ್ದಿಲ್ಲೆಂಗಿಲ್
ಪಾಪ ಕರ್ಮ ಮುುಂಡಾಂ
ಊರು ಚುಟ್ಟ ಸಂಚರಿಚ್ಚಾಲ್
ಪಾಪ ಕರ್ಮಂ ತೀರುಂ
ವೀಡುಪುಕ್ಕಿರುನ್ನು ಗೊಂಡಾಲ್
ಪಾಪಕರ್ಮ ಮುುಂಡಾಂ...."

[ಜಾತಿ ಧರ್ಮ ಮಾಡದಿರೆ
ಪಾಪ ಉಂಟಾದೀತು.
ಊರುಸುತ್ತಿ ಸಂಚರಿಸೆ
ಪಾಪ ಸವೆದೀತು
ಮನೆ ಹೊಕ್ಕಿಕೊಂಡಿದ್ದರೆ
ಪಾಪವುಂಟಾದೀತು...]

ಗಂಡ, ಹಾಗೆ ಇದ್ದಕ್ಕಿದ್ದಂತೆ ಹೊರಟದ್ದನ್ನು ಕಂಡು ಕೊರವಂಜಿಗೆ ಆಶ್ಚರ್ಯವೆನ್ನಿಸಲಿಲ್ಲ. ಗಂಡನ ಮಾತು ಸರಿಯೆನ್ನಿಸಿತು.

"ಅಕ್ಕಥಗಳ ಕಂಡನೇರಂ
ಅಕ್ಕುರತ್ತಿ ತಾನುಂ
ಕೃಷ್ಣನಿರಂ ಚೆಲಯುು ಪೆ-

ಡುತ್ತಳುಂಡುತ್ತು.
ಒಟ್ಟು ಚೇಲ ಕೊಂಡವಳಂ—
ಗುತ್ತರೀಯಂ ಕೆಟ್ಟಿ
ಉತ್ತರೀಯಂ ಕೆಟ್ಟಿಯದಿಲ್
ಕುಟ್ಟಿಯೇಯುಂವಿಟ್ಟು...."

"ಆ ವಿಷಯವನ್ನು ತಿಳಿದ ಕೊರವಂಜಿ, ತಾನೂ ಹೊರಟು ನಿಂತಳು. ಕಪ್ಪು ಸೀರೆಯನ್ನು ತೆಗೆದು ಉಟ್ಟುಕೊಂಡಳು. ಮತ್ತೊಂದು ತುಂಡು ಸೀರೆಯನ್ನು ಉತ್ತರೀಯದಂತೆ ಕೊರಳನ್ನು ಬಳಸಿ ಕಟ್ಟಿದಳು. ಆ ಉತ್ತರೀಯದಲ್ಲಿ ಮಗುವನ್ನಿಟ್ಟು ಕೊಂಡಳು." ಕೊರವಂಜಿಯ ವೇಷವನ್ನು ಮತ್ತೆ ಧರಿಸಿ ನಿಂತಳು. ಆ ದಂಪತಿಗಳು ಆ ನಗರವನ್ನು ಬಿಟ್ಟು ಹೊರಟರು. ಎಷ್ಟೋ ಊರುಗಳನ್ನು ಸುತ್ತಿದರು. ಕೊನೆಗೆ ಅಯೋಧ್ಯಾ ನಗರಿಗೆ ಬಂದರು. ದಶರಥನ ಪತ್ನಿಯರ ಕೈ ನೋಡಿ ಶ್ರೀರಾಮನ ಕಥೆಯನ್ನು ಹೇಳಿದರು. ಈ ವಿಷಯವೆಲ್ಲ ಮೇಲೆ ಹೇಳಿದ ಕುರತ್ತಿ ಪಾಟ್ಟಿನಲ್ಲಿ ಬರುತ್ತದೆ.

ಯಾತ್ರಕ್ಕಳಿ ಪಾಟ್ಟು ಅಥವಾ ಸಂಘಕ್ಕಳಿ ಪಾಟ್ಟು

ಇದರ ಹೆಸರೇ ಸೂಚಿಸುವಂತೆ ಜನರು ಒಟ್ಟಾಗಿ ಅಭಿನಯಿಸುತ್ತ ಹಾಡುವುದು. ಈ ಗೀತೆಗಳು ನಂಬೂದಿರಿಗಳು ಕೇರಳದಲ್ಲಿ ನೆಲಸಿದ ನಂತರ ಹುಟ್ಟಿಕೊಂಡ ಗೀತೆಗಳು. ಅನ್ನಪ್ರಾಶನ, ಉಪನಯನ, ವಿವಾಹ ಮುಂತಾದ ಸಮಾರಂಭಗಳಲ್ಲಿ ನಂಬೂದಿರಿಗಳು ಹಾಡುವ ಗೀತೆಗಳು. ಒಂದು ದೀಪದ ಕಂಬವನ್ನು ಹಚ್ಚಿಟ್ಟು ಅದರ ಸುತ್ತ ಅಭಿನಯಿಸುತ್ತ ನಂಬೂದರಿಗಳು ಹಾಡುವ ಈ ಗೀತೆಗಳು ಭಕ್ತಿ, ಶೃಂಗಾರ, ಹಾಸ್ಯ ಮುಂತಾದ ವಿವಿಧ ರಸಗಳನ್ನೊಳಗೊಂಡಿರುತ್ತವೆ

ಹಾಸ್ಯಕ್ಕೆ ಒಂದು ಸಣ್ಣ ಉದಾಹರಣೆ :

"ಕೊಚ್ಚೀಲೋರಚ್ಚೀಕ್ಕು ಮೀಶವನ್ನು...."
"ಕೊಚ್ಚೀಲೊಬ್ಬಜ್ಜೀಗೆ ಮೀಸೆ ಬಂತು..."

ಶೃಂಗಾರಕ್ಕೆ,

"ಕೊಪ್ಪಿಟ್ಟ ಪೆಣ್ಣಿನ್ತೆ ಕೋಮಳಂ ಕಂಡಿಟ್ಟು
ಕೊಳಮಯಿರ್ ಗೊಳ್ಳನ್ನು ಮಾಲೋಗರೇ..."
"ಸಿಂಗಾರ ಹೆಣ್ಣಿನ ಚೆಂದವ ಕಂಡಾಗ
ಮೈನವಿರೆದ್ದೀತು ಮಾನವರೇ...." ಇತ್ಯಾದಿ.

ಕೋಲಾಟದ ಪದಗಳು

ಕನ್ನಡನಾಡಿನ ಕೋಲಾಟದ ಪದಗಳಂತೆ ಕೇರಳದಲ್ಲಿ 'ಕೋಲಡಿಪಾಟ್ಟು' (ಕೋಲಾಟದ ಹಾಡು) ಎನ್ನುವ ಗೀತೆಗಳಿವೆ. ಆದರೆ ಕೇರಳದಲ್ಲಿ ಕೋಲಾಟ

ಆಡುವವರು (ಕೋಲುಹುಯ್ಯುವವರು) ಪುರುಷರಲ್ಲ. ಸ್ತ್ರೀಯರು. ಚಿಕ್ಕ ಚಿಕ್ಕ ಮಕ್ಕಳಿಂದ ಹಿಡಿದು ಯುವತಿಯರವರೆಗೆ.

ಮಲಯಾಳ ಭಾಷಾಚರಿತ್ರೆಯಿಂದ ಕೆಲವು ಪಾದಗಳನ್ನಾಯ್ದು ಕೋಲಾಟದ ಪದದ ಲಯ ವಿನ್ಯಾಸಕ್ಕೆ ಉದಾಹರಣೆಯಾಗಿ ಈ ಕೆಳಗೆ ಕೊಡಲಾಗಿದೆ.

"ಕಣ್ಣನಾ ಮುಣ್ಣಿದನ್ ಲೀಲಗಳ್ ಚೊಲ್ವಾನ್
ಶಂಬುವನ್ ಪಿಕ್ಕರ್ ತುಣಕ್ಕರುಳ್ ಪೋಟ್ಟ |
ವಾಣಿಯಾಳ್ ದೇವಿತಾನ್ ನಾವಿನ್ ಮೇಲ್ ನಿತ್ಯಂ
ನನ್ನಾಯಿ ನಡವಾಡೀಡುಗ ದೇವಿ
ಚಂದ್ರನುಂ ಸೂರ್ಯಭಗವಾನುಂ ಮೇಟ್ಟಂ
ಅಗ್ನಿಭಗವಾನು ಲೋಕಮಾತಾವುಂ
ಎನ್‌ಗುರುವರನುಂ ಚಿತ್ತೇಮಸಿಕ
ಕಾರ್ವರ್ಣಗಿಲ್ ವರ್ಣನೆ ಒರುದಿನ ಕಾಲಂ
ಉಣ್ಣಿಯಾಯ್‌ನಲ್ಲೊರು ವೇಷಂ ಧರಿಚ್ಚು......"

ಓಣಪ್ಪಾಟ್ಟು

ಓಣಂ, ತಿರುವಾದಿರ, ವಿಶು ಮುಂತಾದ ಕೇರಳದ ಹಬ್ಬಗಳಲ್ಲಿ ಓಣಂ ಹಬ್ಬ ಅತಿ ಮುಖ್ಯವಾದದ್ದು. ಓಣಂ ಹಬ್ಬ ಇನ್ನೇನು ಸಮೀಪಿಸುತ್ತಿದೆ, ಮನೆಯಲ್ಲಿ ಯಾವ ಸಿದ್ಧತೆಗಳೂ ಆಗಿಲ್ಲ ಎಂದು ಸಡಗರಗೊಳ್ಳುವ ತರುಣಿಯೊಬ್ಬಳ ಒಂದು ಗೀತೆ ಹೀಗಿದೆ :

"ಚೆಂಪತ್ತಿಲ್ ಮುಟ್ಟಂ ಚೆತ್ತಿಪರಣೀಲ
ಎಂದೆನ್ತೆ ಮಾವೇಲಿ ಓಣಂ ವನ್ನು
ಚಂತಯ್ಕ್ಕು ಪೋಯಿಲ್ಲ ನೇಂದ್ರಕ್ಕಾ ವಾಂಣೀಲ
ಎಂದೆನ್ತೆಮಾವೇಲಿ ಓಣಂ ವನ್ನು !
ಅಮ್ಮಾಮನ್‌ವನ್ನೀಲ ಆಡಂಗಳ್ ತನ್ನೀಲ
ಎನ್ದೆನ್ತೆ ಮಾವೇಲಿ ಓಣಂ ವನ್ನು!......"

"...ಚೆಂದದಿ ಅಂಗಳ ಕೆತ್ತಿ ಆಗಿಲ್ಲ
ಆಗಲೆ ಮಾವೇಲಿ ಬಂತಲ್ಲೆ ಓಣಂ |
ಸಂತೆಗು ಹೋಗಿಲ್ಲ ನೇಂದ್ರಕಾಯ್* ತಂದಿಲ್ಲ
ಆಗಲೆ ಮಾವೇಲಿ ಬಂತಲ್ಲೇ ಓಣಂ |
ಮಾವನು ಬಂದಿಲ್ಲ ಉಡುಗೂರೆ ತಂದಿಲ್ಲ
ಆಗಲೆ ಮಾವೇಲಿ ಬಂತಲ್ಲೆ ಓಣಂ |......

---

* ನೇಂದ್ರ ಬಾಳೆಹಣ್ಣು

''ಆಭರಣಗಳನ್ನು ಮಾಡಿಸಿಕೊಂಡು ಬರಲು ಪೇಟೆಗೆ ಹೋಗಿರುವ ತಂದೆ ಇನ್ನೂ ಮನೆಗೆ ಹಿಂದಿರುಗಿಲ್ಲ. ಓಣಂ ಆಗಲೇ ಬಂತಲ್ಲೆ ಭತ್ತ ಕುಸುವಿಲ್ಲ. ಕುಸುವಿಟ್ಟ ಭತ್ತ ಇನ್ನೂ ಒಣಗಿಲ್ಲ. ಕುಟ್ಟದ ಅಕ್ಕಿಯೂ ಇಲ್ಲ. ಆಗಲೇ ಓಣಂ ಬಂದು ಬಿಟ್ಟಿತಲ್ಲೇ ಮಾವೇಲಿ''........ಹೀಗೆ ಈ ಗೀತೆ ದೀರ್ಘವಾಗಿ ಮುಂದು ವರಿಯುತ್ತದೆ.

ಸರ್ಪಪಾಟ್ಟು ಅಥವಾ ಪುಳ್ಳುವನ್ ಪಾಟ್ಟು

ಕೇರಳದಲ್ಲಿ ನಾಗಪೂಜೆ ಮಾಡಿಸುವಾಗ 'ಪುಳ್ಳುವನ್' ಎನ್ನುವ ಜಾತಿ ಯವರು ಹಾಡುವ ಗೀತೆಗಳಿಗೆ ಸರ್ಪ ಪಾಟ್ಟು ಅಥವಾ ಪುಳ್ಳುವನ್ ಪಾಟ್ಟು ಎಂದು ಹೆಸರು.

ಪುಳ್ಳುವನ್, ನಾಗಪೂಜೆಯ ಸಮಯದಲ್ಲಿ ಹಾಡುವಾಗ ವೀಣೆ ನುಡಿಸು ತ್ತಾನೆ. ಆ ವೀಣೆಗೂ 'ಪುಳ್ಳುವನ್ ವೀಣ' ಎಂದು ಹೆಸರು. ಮಾದರಿಗಾಗಿ ಒಂದು ಹಾಡನ್ನು ಈ ಕೆಳಗೆ ಕೊಡಲಾಗಿದೆ.

'' ಓರೋರು ನಾಗತ್ತಿನ್ನೆ
ಪೇರುಗಳ್ ಚೊಲ್ಲಾಂ
ಒರುತಲವಾಳುನ್ನಾ
ಓಂಕಾರನಾಗಂ.
ರಂಡುತಲಯುಳ್ಳ
ಶಿವಶಕ್ತಿನಾಗಮೇ
ಮೂನುತಲಯುಳ್ಳ ಮಣಿನಾಗ ಸರ್ಪಮೇ
ಅಂಜುತಲಯುಳ್ಳ ಅಂಜನ ಮಣಿ ಸರ್ಪಮೇ
ಏಳುತಲಯುಳ್ಳ ಎರಿನಾಗ ಸರ್ಪಮೇ
ಒಂಬದು ತಲಯುಳ್ಳ ತುಳ್ಳಿಮಣ್ಣಿನಾಗಮೇ
ಆಯಿರಂ ತತಿಯುಳ್ಳ ನಾಗಶ್ರೀ ಅನಂತನು
ಆಯಿರತ್ತೆಟ್ಟು ನಲ್ಲ ಕೆಟ್ಟು ವಡಕ್ಕುಂ
ಅಂಬರೇ ಸರ್ಗಭೂಮಿ ಪಾತಾಳವುಂ
ಚೆಂದುವನ ಮದಿಲ್ ವೃಕ್ಷಾದಿಗಳಿಲುಂ
ನಿತ್ಯಸುಖತ್ತೋಡಿರಿಕ್ಕುನ್ನವರ್‌ಗಳ್
ತಂತ್ರಕೋಲಾದಿಗಳೆ ಕೊಂಡುಕೊಡುಕ್ಕೇಣಂ''

[...ಒಂದೊಂದು ನಾಗಗಳ ಹೆಸರ ಹೇಳುವೆ.
ಒಂದು ತಲೆಯಿರುವುದು ಓಂಕಾರನಾಗ
ಎರಡು ತಲೆಯಿರುವುದು ಶಿವಶಕ್ತಿನಾಗ
ಮೂರು ತಲೆಯಿರುವುದು ಮಣಿನಾಗ ಸರ್ಪ........]

ಕೇರಳದ ನಾಡೋಡಿ ಪಾಟ್ಟುಗಳ ಸಂಕ್ಷಿಪ್ತ ಪರಿಚಯಕ್ಕಾಗಿ ನಡೆಸಿದ ಒಂದು ವಿಹಂಗಮ ಯಾತ್ರೆ ಇದು. ಕನ್ನಡ ಮತ್ತು ಮಲಯಾಳ ಜಾನಪದ ಗೀತೆಗಳ ತೌಲನಿಕ ಅಧ್ಯಯನ ನಡೆಸಲು ಆಸಕ್ತರಾದವರಿಗೆ ಇದೊಂದು ರಸವತಾದ ಬಹುದೊಡ್ಡ ಸಾಹಿತ್ಯ ಕ್ಷೇತ್ರ. ಕನ್ನಡ-ಮಲಯಾಳ ನಾಡುಗಳೆರಡರ ಸಂಸ್ಕೃತಿಯ, ಧಾರ್ಮಿಕ ವಿಚಾರಗಳ, ಭಾಷಾ ಸಂಪತ್ತಿನ, ಆಚಾರವಿಚಾರಗಳ ಬೇರು ತಿರುಳುಗಳನ್ನು ತೌಲನಿಕವಾಗಿ ಅರಿಯಲು ಈ ಎರಡೂ ನಾಡಿನ ಜಾನಪದ ಗೀತೆಗಳೇ ಮೂಲ ಆಧಾರ.

★ ಬಿ. ಕೆ. ತಿಮ್ಮಪ್ಪ

ಒರೆಗಲ್ಲು

ಕಪ್ಪೆ ಅರಭಟ್ಟನ್

" ಸಾಧುಗೆ ಸಾಧು ಮಾಧುರ್ಯ್ಯನ್ಗೆ ಮಾಧುರ್ಯಂ " ಎಂಬ ಬಾದಾಮಿ ಶಾಸನ ಕನ್ನಡಿಗರ ಮನೆಮಾತಾಗಿದೆ. ' ಕಪ್ಪೆ ಅರಭಟ್ಟನ್ ' ಎಂಬವನ ವ್ಯಕ್ತಿತ್ವ ಕೀರ್ತನೆ ಇದರ ವಸ್ತು. ಮೋಜಿನದೂ, ಕುತೂಹಲಜನಕವೂ ಆದ ಈ ಹೆಸರಿನಲ್ಲಿ 'ಕಪ್ಪೆ' ಮತ್ತು 'ಅರ' ಎಂಬ ಎರಡು ಪದಗಳು ಸಂದಿಗ್ಧವಾಗಿವೆ. ಮೊದಲು ' ಅರ ' ಪದವನ್ನೇ ವಿವೇಚಿಸಬಹುದು.

ಅರ : ಈ ಪದವನ್ನು ' ಕಪ್ಪೆ 'ಗೆ ಜೋಡಿಸ(ಕಪ್ಪೆಅರ)ಬೇಕೋ, 'ಭಟ್ಟನ್'ಕ್ಕೆ ಜೋಡಿಸ(ಅರಭಟ್ಟ)ಬೇಕೋ ಎಂಬುದು ಇಲ್ಲಿಯಮುಖ್ಯ ಪ್ರಶ್ನೆ. ಡಾ. ಚಿದಾನಂದ ಮೂರ್ತಿಗಳು " ಈ ಹೆಸರು ಕಪ್ಪೆ + ಅರ ಭಟ್ಟ ಅಲ್ಲ. ಕಪ್ಪೆ ಯುರ + ಭಟ್ಟ ಎಂದು ಪ್ರೊ. ತೀ. ನಂ. ಶ್ರೀಕಂಠಯ್ಯನವರು ಸೂಚಿಸುತ್ತಾರೆ. ಇದು ನಿಜವಾದರೆ 'ಕಪ್ಪೆಯುರ' ಎಂಬುದು 'ಕಪ್ಪೆಯುರಸ' ಎಂಬುದರ ಸಂಕ್ಷಿಪ್ತ ರೂಪವೆಂದು ಭಾವಿಸಬೇಕಾಗುತ್ತದೆ" ಎಂದು ಹೇಳಿ 'ಅರ' ಪದವನ್ನು 'ಕಪ್ಪೆ' ಪದಕ್ಕೆ ಜೋಡಿಸುತ್ತಾರೆ.[೧] ಆದರೆ ಸಮಾಸಪ್ರಸಂಗದಲ್ಲಿ ಪೂರ್ವಪದವಾಗಿ ಬಂದ ಅರಸು>ಅರ ಆಗುವುದೇ ಹೊರತು (ಅರಸ + ಗಿಳಿ = ಅರಗಿಳಿ), ಉತ್ತರಪದವಾ ಬಂದುದು (ಗಿಳಿ + ಅರಸು = ಗಿಳಿಯುರ) ಆಗುವುದಿಲ್ಲ. ಆದಕ್ಕಾಗಿ "ಕಪ್ಪೆಯುರ" ಎಂದರೆ ಕಪ್ಪೆಯುರಸು ಎಂದು ಪರಿಭಾವಿಸಲು ಮನವೊಪ್ಪದು. ಮೇಲಾಗಿ ಮೂಲ ಪಾಠವಿದ್ದುದು 'ಕಪ್ಪೆಅರಭಟ್ಟ'ನೇ ಹೊರತು 'ಕಪ್ಪೆಯುರಭಟ್ಟ'ನಲ್ಲ. ಆದ ಕ್ಕಾಗಿ 'ಕಪ್ಪೆಅರ' ಎಂಬುದು ವಿಸಂಧಿರೂಪದ ಷಷ್ಠೀರೂಪವಿರಬಹುದೇನೋ ಎನಿಸುತ್ತದೆ. ಹಾಗಿದ್ದರೆ ಇದರ ಶುದ್ಧ ರೂಪ 'ಕಪ್ಪೆಯುರ'. ಈ ಪದವನ್ನು ಒಬ್ಬ ಸಾಮಾನ್ಯ ಲಿಪಿಕಾರನನ್ನು ಕುರಿತ " ಬರೆದಂ ಸೇನಬೋವಂ ಕಪ್ಪೆಯುರ ಚಾವು ಣ್ಡಯ್ಯನ ಸ್ವಹಸ್ತ ಲಿಖಿತ " ಎಂಬ ಮುಲ್ಗುಂದ ಶಾಸನ[೨] (೧೧೫೬) ವಾಕ್ಯದ ಹಿನ್ನೆಲೆಯಲ್ಲಿ ನೋಡಿದರೆ ಬಾದಾಮಿ ಶಾಸನದ ಕಪ್ಪೆಯುರ (< ಕಪ್ಪೆಅರ) ಪದ ದಲ್ಲಿ ಅರಸು ಅರ್ಥಕ್ಕೆ ಅವಕಾಶವೇ ಇಲ್ಲ, ಇದು ' ಕಪ್ಪೆ ' ಹೆಸರಿನ ವಂಶ ಇಲ್ಲವೆ ವರ್ಗವನ್ನು ಸೂಚಿಸುತ್ತಿರಬಹುದು ಎಂದು ಹೇಳಬೇಕಾಗುತ್ತದೆ.

ಇನ್ನು 'ಅರ' ಪದವನ್ನು ' ಭಟ್ಟನ್ ' ಕ್ಕೆ ಜೋಡಿಸಿ (ಅರಭಟ್ಟನ್) ದರೆ ' ಕಪ್ಪೆ ' ಹೆಸರಿನ ವಂಶ ಇಲ್ಲವೆ ವರ್ಗಕ್ಕೆ ಸಂಬಂಧಿಸಿದ ' ಅರಸುಭಟ್ಟ ' ಎಂದು ಮಾತ್ರ ಹೇಳಬೇಕಾಗುತ್ತದೆ.

---

೧. ಸಂಶೋಧನ ತರಂಗ: ಸಂಪುಟ ೨. ಪುಟ ೨೨೫

೨. SII XV-೫೩ ಮುಲ್ಗುಂದ, ರೋಣ ತಾಲೂಕ, ಧಾರವಾಡ ಜಿಲ್ಲೆ ೧೧೫೬

ಕಪ್ಪೆ : ಇಂಥ ಬೇರೆ ಉಲ್ಲೇಖಗಳಾಗಲೀ ಇದಕ್ಕೆ ಅನ್ಯ ಆಧಾರಗಳಾಗಲಿ ಬೆಳಕಿಗೆ ಬಂದಿಲ್ಲ. ಆದರೆ ಬಳ್ಳಾರಿ ಜಿಲ್ಲೆಯ ಓರುವಾಯಿ ಗ್ರಾಮದ ಶಾಸನ (೧೧೮೪) ದಲ್ಲಿ ಸಾವಂತ ಲಚ್ಚಿಯನಾಯಕನನ್ನು

ಇಂವುಡಿ ರಾಚವುಲ್ಲದೇವ ರಾಜ್ಯ ಸಮುದ್ಧರಣಂ ಕೃತಯುಗ ಚರಿತ್ರೋದ್ಧರಣಂ
ಕಪ್ಪೆಯರಾಹಾರ ದಾನ ವಿನೋದ [ಂ] ಕೃತ ಪರಿಜನಾಹ್ಲಾದಂ
ವಿದ್ವಿಷ್ಟ ಸಾವಂತ ವಾಹಿನೀ ತ್ರಿಪುರತ್ರಿನೇತ್ರ[ಂ]ಪರಾಂಗನಾ ಪುತ್ರಂ[3]

ಎಂದು ವರ್ಣಿಸಲಾಗಿದೆ. ಬಾದಾಮಿ (ಕಪ್ಪೆಅರ) ಮತ್ತು ಮಲ್ಲಾಪುರ (ಕಪ್ಪೆಯರ) ಶಾಸನಗಳಲ್ಲಿ ಕಾಣುವ ಪದ ಈ ಶಾಸನದಲ್ಲಿಯೂ ಇದೆ. ಬಹುಶಃ 'ಆಹಾರ ದಾನ' ಪಡೆಯುವ ಯತಿ ಇಲ್ಲವೆ ಆಚಾರ್ಯ ವರ್ಗವನ್ನು ಇದು ಸೂಚಿಸುವಂತಿದೆ,

ಇನ್ನು ಈ ಓರುವಾಯಿಗೆ ಸಮೀಪದಲ್ಲಿರುವ ಶತಕೋಟಿ ತೀರ್ಥ ಹೆಸರಿನ ಕುಡುತಿನಿ ಗ್ರಾಮದ ಸ್ವಾಮಿ (ಷಣ್ಮುಖ) ದೇವಾಲಯದ ಶಾಸನ (೧೧೪೮) ದಲ್ಲಿ ಒಂದು ವಾಕ್ಯ ಹೀಗಿದೆ.

"ಶತಕೋಟಿ ತೀರ್ತ್ಥದ ಶ್ರೀ ಸ್ವಾಮಿ ದೇವರ ಸಂನಿಧಾನದಲು ಸ್ವಾಮಿ ಯಾತ್ರೆಗೆ ಬಂದ ಕಪ್ಪಡಿಗಳ ಸತ್ರಕ್ಕೆ ಮಲ್ಲರಸ ಬಿಟ್ಟ ಕೆಯಿ[4]"

ಇಲ್ಲಿ 'ಕಪ್ಪಡಿ' ಗಳ ಆಹಾರಕ್ಕೆ ಮಲ್ಲರಸ ದಾನ ಬಿಟ್ಟಿದ್ದಾನೆ. ಮೇಲಣ ಓರುವಾಯಿ ಶಾಸನ 'ಕಪ್ಪೆಯರಾಹಾರದಾನ'ವನ್ನು ಸೂಚಿಸುತ್ತದೆ. ಈ ಕುಡುತಿನಿ ಮತ್ತು ಓರುವಾಯಿ ಸಮೀಪದ ಗ್ರಾಮಗಳು ಈ ಎರಡೂ ಶಾಸನಗಳು ಒಂದೇ ಕಾಲ(೧೧೪೮)ದವು. ಆದಕ್ಕಾಗಿ 'ಕಪ್ಪೆಯರ' ಮತ್ತು 'ಕಪ್ಪಡಿಗಳು' ಒಂದೇ ಅರ್ಥದ ಪದಗಳೇನೋ ಎನಿಸುತ್ತದೆ. ಇದು ನಿಜವಿದ್ದರೆ 'ಕಪ್ಪೆ ಅರಭಟ್ಟ'ನು ಕಪ್ಪಡಿಗಳ ವರ್ಗಕ್ಕೆ ಸಂಬಂಧಿಸಿದ ಒಬ್ಬ ಭಟ್ಟನೋ ಅರಸುಭಟ್ಟನೋ ಎಂದು ಹೇಳಬೇಕಾಗುತ್ತದೆ.

ಕಪ್ಪಡಿ ಪದವನ್ನು ಕಾಯ್+ಪ= ಕಾಯ್ಪು (ಕಾಯುವ)+ಅಡಿ= ಕಾಯ್ಪಡಿ>ಕಪ್ಪಡಿ ಎಂದು ಶ್ರೀ ಎಚ್. ದೇವೀರಪ್ಪನವರು ಅರ್ಥೈಸುತ್ತಾರೆ.[5] ಇತ್ತೀಚೆಗೆ ಶೈವ ಸನ್ಯಾಸಿಗಳಿಗೆ ಮಾತ್ರ ಸೀಮಿತವಾಗಿರುವ ಕಪ್ಪಡಿ ಎಂಬುದು, "ಕಾಯುವವ" (ರಕ್ಷಕ) ಅರ್ಥದಲ್ಲಿ ಮೊದಮೊದಲು ಎಲ್ಲ ಮತದ ಸನ್ಯಾಸಿಗಳಿಗೂ ಅನ್ವಯಿಸುತ್ತಿರಬಹುದೇನೊ. ಆದಕ್ಕಾಗಿಯೆ 'ಮಾಧವೀನೀತನ್ಪೆಜಿನಲ್ಲ'

೩. SII-IX-i ೨೫೩ ಓರುವಾಯಿ (೧೧೮೪)

೪. SII-IX-i ೨೫೨ ಕುಡತಿನಿ (೧೧೪೮)

೫. ಪ್ರ. ಕ. ೫೧-೧ (ಕಮ್ಮಟದ ಕಿಡಿಗಳು)

ಎಂದು ಈ ಕಪ್ಪೆ (ಕಪ್ಪಡಿ) ಆರಭಟ್ಟನನ್ನು ವೈಷ್ಣವ ರೀತಿಯಲ್ಲಿ ಬಾದಾಮಿ ಶಾಸನ ವರ್ಣಿಸಿರಬೇಕು.

ಈ ಎಲ್ಲ ವಿವರಣೆ, ಅಭಿಪ್ರಾಯಗಳ ಬಗೆಗೆ ನನಗೆ ಇನ್ನೂ ಸಂದೇಹ. ಆದರೆ ಈ ಪದವನ್ನೊಳಗೊಂಡ ಕೆಲವು ಅಪರೂಪ ಪ್ರಯೋಗಗಳನ್ನು ಹುಡುಕಿ ವಿದ್ವಾಂಸರ ಮುಂದೆ ಹಿಡಿದಿದ್ದೇನೆ. ಈ ಪ್ರಯೋಗಗಳ ಬೆಳಕಿನಲ್ಲಿ ನನ್ನ ಸಂದೇಹವನ್ನು ವಿದ್ವಾಂಸರು ಒರೆಹಚ್ಚಬೇಕಾಗಿದೆ.

★ **ಡಾ. ಎಂ. ಎಂ. ಕಲಬುರ್ಗಿ**

---

೬. ಕಪ್ಪಡಿ ಎಂಬ ಪದ ಹುನಗುಂದ ತಾಲೂಕಿನ ಸಂಗಮದ ಶಾಸನ(SII XV-88 ಕ್ರಿ.ಶ. ೧೧೬೦)ದಲ್ಲಿ, ಬ್ರಹ್ಮಶಿವನ ಸಮಯಪರೀಕ್ಷೆ (IX-61)ಯಲ್ಲಿ, ಹರಿಹರನ ಬಸವರಾಜದೇವರ ರಗಳೆ, ತೆಲುಗು ಬಸವ ಪುರಾಣಗಳಲ್ಲಿ ಕಂಡುಬರುತ್ತದೆ. ಈ ಪದದ ಬಗ್ಗೆ ಶ್ರೀ. ಎಚ್. ದೇವೀರಪ್ಪ ಅವರ ಒಂದು ಲೇಖನವನ್ನು ಪ್ರ. ಕ. ೫೧.೧ ಪು. ೪೭ರಲ್ಲಿ ನೋಡಬಹುದು.

ಗ್ರಂಥಾವಲೋಕನ

ಶ್ರೀ ಶರಣಬಸವೇಶ್ವರ ಪುರಾಣ : ಕವಿಗಳು : ಗುರುಲಿಂಗಸಿದ್ಧ ಕವಿ, ತಡಕಲ್, ಪ್ರಕಾಶಕರು : ಶರಣಬಸವೇಶ್ವರ ಸಂಸ್ಥಾನ, ಗುಲಬರ್ಗಾ, ಬೆಲೆ : ಉತ್ತಮ ಪ್ರತಿ ೬-೦೦, ಸಾದಾ ಪ್ರತಿ ೫-೦೦.

ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಪುರಾಣ ಕಾವ್ಯಗಳು ವೈಶಿಷ್ಟ್ಯಪೂರ್ಣ ಸ್ಥಾನ ಪಡೆದಿವೆ. ಪ್ರಾಚೀನ ಕನ್ನಡ ಸಾಹಿತ್ಯೇತಿಹಾಸವನ್ನು ಅವಲೋಕಿಸಿದರೆ ಈ ಮಾತು ನಿಚ್ಚಳವಾಗಿ ಹೊಳೆಯುವದು. ಇವು ನ್ಯಾಯ, ನೀತಿ, ಧರ್ಮ, ಸಂಸ್ಕೃತಿ, ತತ್ತ್ವಜ್ಞಾನ ಮತ್ತು ಇತಿಹಾಸಗಳ ಆಕರ ಗ್ರಂಥಗಳಾಗಿರುವಂತೆ ಜನಸಾಮಾನ್ಯರಿಗೆ ತತ್ತ್ವಬೋಧಾಮೃತ ನೀಡುವ ಪುಣ್ಯಗ್ರಂಥಗಳಾಗಿ ವಿರಾಜಿಸುತ್ತಿವೆ. ಅಂತೆಯೇ ಪ್ರಾಚೀನಕಾಲದಿಂದಲೂ ಈ ಸಾಹಿತ್ಯಪ್ರಬೇಧ ಬೆಳೆದು ಬಂದಿತು. ಈ ದೃಷ್ಟಿಯಿಂದ ಪರಿಶೀಲಿಸಿದರೆ ಪ್ರಸ್ತುತ ಶ್ರೀ ಶರಣಬಸವೇಶ್ವರ ಪುರಾಣವು ಈ ಶತಮಾನದ ಬೃಹತ್‌ಪ್ರಮಾಣದ ಪ್ರಥಮ ಮಹತ್ವದ ಪುರಾಣವೆಂದು ನಿಃಸಂದೇಹವಾಗಿ ಹೇಳಬಹುದು.

ಈ ಪುರಾಣಕಾವ್ಯದ ನಾಯಕರು ಪುಣ್ಯದ ಪುಂಜವೇಯಾದ ಶ್ರೀ ಶರಣ-ಬಸವೇಶ್ವರರು ; ಕಳೆದ ಶತಮಾನದಲ್ಲಿ ಈ ನಾಡಿನಲ್ಲಿ ಬೆಳಗಿದ ಮಹಿಮಾನ್ವಿ-ತರು. ಭಕ್ತಿಯೇ ಮುಕ್ತಿಗೆ ಸಾಧನವೆಂದು ತಮ್ಮ ನಡೆ-ನುಡಿಗಳಿಂದ ಆಚರಿಸಿ ತೋರಿಸಿದ ಆದರ್ಶ ಪುರುಷರು.

ಕಲಬುರ್ಗಿ ಜಿಲ್ಲೆ ಜೇವರಗಿ ತಾಲೂಕಿನ ಅರಳಗುಂಡಿಯಲ್ಲಿ ಜನಿಸಿ ಸಂಸಾರದಲ್ಲಿದ್ದೂ ಸದ್ಗತಿ ಪಡೆದ ಶರಣರು ; ಆತ್ಮೋದ್ಧಾರಕ್ಕಾಗಿ ಕಲ್ಯಾಣಕ್ಕೆ ಹೊರಟು ಕಲ್ಯಾಣದ ಬಾಗಿಲು ಕಲಬುರ್ಗಿಯಲ್ಲಿಯೇ ನಿಂತವರು. ಕಲಬುರ್ಗಿ ಕಾರ್ಯಕ್ಷೇತ್ರವಾದಂದಿನಿಂದ ಶರಣರ ಕಾಯಕಕ್ಕೆ ಕಳೆಕಟ್ಟಿತು. ದೀನದರಿದ್ರ-ರಿಗೆ ಪ್ರಸಾದವಿತ್ತು, ಅಳುವ ಅನಾಥರ ಕಣ್ಣೊರಸಿದರು. ಆಧ್ಯಾತ್ಮಿಕ ಬಲದಿಂದ ಅಸಾಧ್ಯವಾದ ರೋಗಗಳನ್ನು ಗುಣಪಡಿಸಿದರು. ಪಾಪಿಯು ಪವಿತ್ರನಾಗುವಂತೆ ಸೂಕ್ತ ಮಾರ್ಗದರ್ಶನ ಮಾಡಿದರು. ಹೆಚ್ಚೇನು ! ಸತ್ತವರನ್ನು ಬದುಕಿಸಿದರು ; ಕುರುಡರಿಗೆ ಕರುಣೆಯಿಂದ ಕಣ್ಣು ಕೊಟ್ಟರು. ಮಕ್ಕಳಿಲ್ಲದವರಿಗೆ ಮಕ್ಕಳನ್ನು ಕೊಟ್ಟರು. ಹೀಗೆ ಪವಾಡ ಪುರುಷರಾಗಿ, ಜಾಗೃತ ಧಾರ್ಮಿಕ ಮಹಾಪುರುಷರಾಗಿ, ವಿಶ್ವಸಂಸ್ಕೃತಿಯ ಪರಮಾರಾಧಕರಾಗಿ ಸಕಲಜೀವಿಗಳಿಗೆ ಲೇಸನೇ ಬಯಸುವ ಶರಣವರೇಣ್ಯರಾಗಿ ಬೆಳಗಿದರು. ಈ ಲೋಕೋತ್ತರ ಮಹಾಮಹಿಮನ ಪುಣ್ಯಜೀವನವನ್ನು ಕುರಿತು ಶರಣರ ಸಮಕಾಲೀನರಾದ ಲಿಂ. ಮಾವನೂರು ಚನ್ನಬಸವಕವಿಗಳು ೧೮೪೦ರಲ್ಲಿ ೧೧ ಪವಾಡಗಳನ್ನೊಳಗೊಂಡ ಪುರಾಣ

ಬರೆದರು. ಪ್ರಸ್ತುತ ಪುರಾಣವು ಶ್ರೀ ಶರಣಬಸವೇಶ್ವರರನ್ನು ಕುರಿತು ಬರೆದ ಎರಡನೇ ಪುರಾಣವು. (ಮೂರನೆಯದು ೧೯೪೭ರಲ್ಲಿ ಪಂ. ಲಿಂ. ಕಲ್ಲಿನಾಥ ಶಾಸ್ತ್ರಿಗಳಿಂದ ರಚಿತವಾಗಿ ಇದೀಗ ಧಾರವಾಡ ಮುರಘಾಮಠದಿಂದ ದ್ವಿತೀಯ ಆವೃತ್ತಿಯಾಗಿ ಪ್ರಕಟವಾಗಿದೆ). ಶರಣರನ್ನು ಕುರಿತು ನಾಟಕಗಳೂ ರಚಿತ ವಾಗಿವೆ. ಇದರಿಂದ ಶ್ರೀ ಶರಣಬಸವೇಶ್ವರರ ವ್ಯಕ್ತಿತ್ವದ ಘನತೆಯನ್ನು ಓದುಗರೇ ಅರಿಯಬಹುದು.

೧೫ ಸಂಧಿ, ೧೩೨೯ ಪದ್ಯಗಳ ಈ ಪುರಾಣ ಶ್ರೀ ಗುರುಲಿಂಗಸಿದ್ಧ ಕವಿ ಗಳಿಂದ ವಿರಚಿತವಾಗಿದೆ. ೧೯೧೧ರಲ್ಲಿ ಕವಿಗಳಿಂದಲೇ ಪ್ರಕಟವಾದ ಈ ಪುರಾಣ ಪುಷ್ಪ ಶರಣಬಸವೇಶ್ವರ ಸಂಸ್ಥಾನದವರಿಂದ ಪರಿಷ್ಕೃತ ಎರಡನೇ ಆವೃತ್ತಿಯಾಗಿ ಬೆಳಕಿಗೆ ಬಂದಿದೆ.

ಪುರಾಣ ಕರ್ತೃಗಳಾದ ಲಿಂ. ಶ್ರೀ ಗುರುಲಿಂಗಸಿದ್ಧ ಕವಿಗಳು ವೀರಶೈವ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯ ಪಡೆದವರು. ಶರಣರ ಮಾರ್ಗದಲ್ಲಿ ನಡೆದ ಅನುಭಾವಿಗಳು ; ಹರಿಹರ, ರಾಘವಾಂಕ, ಚಾಮರಸ, ಷಡಕ್ಷರಿ ಮೊದಲಾದ ಮಹಾಕವಿಗಳ ಕಾವ್ಯಗಳನ್ನು ನಿಷ್ಠೆಯಿಂದ ಓದಿಕೊಂಡವರು. ಮೇಲಾಗಿ ಶರಣರು ಬೆಳಗಿದ ನಾಡಿನವರು ; ಅವರ ಮಹಿಮೆಗಳನ್ನು ಕಿವಿಯಾರೆ ಕೇಳಿದ ವರು. ಅಂತೆಯೇ ಅತ್ಯಂತ ಭಕ್ತಿ, ಶ್ರದ್ಧೆ, ನಿಷ್ಠೆಯಿಂದ ಈ ಕಾವ್ಯ ಅವರ ಲೆಕ್ಕಣಿಕೆಯಿಂದ ಮೂಡಿಬಂದಿದೆ ಶರಣರ ಘನ ವ್ಯಕ್ತಿತ್ವವನ್ನು ಸವಿಸ್ತಾರ ವಾಗಿ ಹೃದಂಗಮವಾಗಿ ವರ್ಣಿಸಿದ್ದಾರೆ. ಓದುಗನ ಕಣ್ಣಿಗೆ ಕಟ್ಟುವಂತೆ ಕಥೆ ಯನ್ನು ಮನೋಜ್ಞವಾಗಿ ಬೆಳೆಸಿಕೊಂಡು ಬಂದಿರುವದನ್ನು ಪುರಾಣಾಭ್ಯಾಸಿ ಗಳಿಗೆ ಗೋಚರಿಸದೆ ಇರದು. ಸಾಂಪ್ರದಾಯಶೀಲರಾದ ಕವಿಗಳು ಹಿಂದಿನ ಕವಿಗಳ ಪುರಾಣ ಪಥವನ್ನು ಚಾಚೂ ತಪ್ಪದೆ ಅನುಸರಿಸಿಕೊಂಡು ಬಂದಿದ್ದಾರೆ. ಮೊದಲೆರಡು ಸಂಧಿಗಳಲ್ಲಿ ಶರಣರ ಅವತಾರದ ಕಾರಣಗಳು, ಜನ್ಮ ವೃತ್ತಾಂತದ ವರ್ಣನೆ ಬಂದಿದೆ. ೩ ರಿಂದ ೯ ಸಂಧಿಗಳನ್ನು ವೀರಶೈವ ಸಂಸ್ಕೃತಿ, ತತ್ವಜ್ಞಾನ ವಿವರಣೆಗೆ ಮೀಸಲಿಟ್ಟಿದುದರಲ್ಲಿ ಕವಿಗಳ ಹಿರಿಮೆ ಇದೆ. ಪುರಾಣದ ಜೀವಳವೇ ಇಲ್ಲಿ ತುಂಬಿ ನಿಂತಿದೆಯೆಂದು ಹೇಳಬಹುದು. ವೀರಶೈವರಿಗೆ ಅತ್ಯಂತ ಮಹತ್ವ ಪೂರ್ಣವೆನಿಸಿದ ಅಷ್ಟಾವರಣ, ಪಂಚಾಚಾರ, ಷಟ-ಸ್ಥಳಗಳ ಸೂಕ್ಷ್ಮವಾದ ವಿವರಣೆ ಯನ್ನು ಪುರಾತನ, ನೂತನ ಶಿವಶರಣರ ಕಥೆಗಳ ದೃಷ್ಟಾಂತಗಳಿಂದ ಮಾರ್ಮಿಕ ವಾಗಿ ನೀಡಿರುವರು. ಗಹನವಾದ ತತ್ತ್ವಗಳನ್ನು ಸುಲಭವಾಗಿ ತಿಳಿಯುವಂತೆ ವಿವರಿಸುವಲ್ಲಿ ಅವರ ಪಾಂಡಿತ್ಯ, ಪ್ರತಿಭೆ—ಎದ್ದು ಕಾಣುತ್ತದೆ. ಈ ದೃಷ್ಟಿ ಯಿಂದ ಇದು ಕೇವಲ ಶರಣ ಬಸವೇಶ್ವರ ಪುರಾಣವಾಗಿರದೆ ವೀರಶೈವ ಪುರಾಣ ವಾಗಿದೆಯೆಂದು ಹೇಳಿದರೆ ತಪ್ಪಾಗದು.

ಇಲ್ಲಿ ಮೂಡಿದ ಶರಣರ ಲಿಂಗ ಲೀಲಾ ವಿಲಾಸ ವರ್ಣನೆಗಳು ಭಕ್ತರನ್ನು ಆಕರ್ಷಿಸುತ್ತವೆ. ವರಕವಿ ಕಡಕೋಳ ಮಡಿವಾಳಪ್ಪನಿಗೆ ದೀಕ್ಷೆ ನೀಡಿದುದು ಗಮನಾರ್ಹವಾದುದು. ಶ್ರೀ ಶರಣ ಬಸವೇಶ್ವರರ ಕೃಪಾಶೀರ್ವಾದ ಬಲದಿಂ-ದಲೇ ಆವನು ಜಾನಪದ ವರಕವಿಯಾಗಿ ಜನ ಮನ್ನಣೆಗೆ ಪಾತ್ರನಾದುದು ಐತಿಹಾಸಿಕ ಸತ್ಯ. ಶರಣರು ಜಾತಿ, ಮತ, ಪಂಥ, ಬೇಧವಳಿದವರು ಎಂಬುದಕ್ಕೆ ಮೇಲಣ ಘಟನೆಯೇ ಒಂದು ಉಜ್ವಲ ನಿದರ್ಶನವೆಂದು ಬೇರೆ ಹೇಳಬೇಕಾಗಿಲ್ಲ. ೧೧ ನೆಯ ಸಂಧಿಯಲ್ಲಿ ಕಲ್ಯಾಣಕ್ಕಾಗಿ ಹೊರಟವರು ಕಲಬುರ್ಗಿಯಲ್ಲಿಯೇ ನಿಂತು ದಾಸೋಹಕಾಯಕ ಕೈಕೊಂಡುದರ ವಿವರವಿದೆ ಮುಂದೆ ಇದೇ ಇವರ ಕಾರ್ಯಕ್ಷೇತ್ರವಾಗಿ ಅವರ ಅನಂತ ಪವಾಡಗಳ ಲೀಲಾಭೂಮಿಯಾಯಿತು. ಶಿವನ ಪರಿಪೂರ್ಣ ಕೃಪೆಗೆ ಪಾತ್ರರಾದ ಅವರಿಗೆ ಯಾವ ಕೊರತೆಯೂ ಕಾಣುವದಿಲ್ಲ. ಅವರು ಮುಟ್ಟಿದ್ದೆಲ್ಲವೂ ಮರುಜೀವಣಿಯಾಯಿತು. ನಿಂತ ನೆಲವೇ ಅವಿಮುಕ್ತ ಕ್ಷೇತ್ರವಾಯಿತು. ಕಲಬುರ್ಗಿಯೂ ಜಾಗ್ರತ ಧಾರ್ಮಿಕಕೇಂದ್ರವಾಯಿತು. ಅಣ್ಣ ಬಸವಣ್ಣನವರು ದ್ವಿತೀಯ ಶಂಭುವಿನ ಅವತಾರವಾದರೆ ಭಕ್ತರ ಬಂಧು ಶ್ರೀ ಶರಣ ಬಸವೇಶ್ವರರು ದಯಾಸಿಂಧು ಬಸವನ ಪರಮಾವ-ತಾರರೆಂದು ಖ್ಯಾತಿ ಪಡೆದರು. ಮುಂದಿನ ಸಂಧಿಗಳಲ್ಲಿ ಅತ್ಯಂತ ಭಯಭಕ್ತಿಯಿಂದ ಸೇವೆ ಸಲ್ಲಿಸಿದ ದೊಡ್ಡಪ್ಪಗೌಡರ ಮನೆತನದವರಿಗೆ ತಾವು ಹಚ್ಚಿದ ನಂದಾದೀಪವನ್ನು ಸದಾ ಬೆಳಗುವಂತೆ ಹೇಳಿ ಶ್ರೀ ಶಾಲಿವಾಹನ ಶಕೆ ೧೭೪೪ ಫಾಲ್ಗುಣ ಬ|| ಪ್ರತಿಪದೆ (ಕ್ರಿ. ಶ ೧೮೨೨) ಯಂದು ಲಿಂಗೈಕ್ಯರಾಗುವ ವಿಚಾರವೋಹನವಿದೆ. ಅದೇ ಪರಂಪರೆ ಜಾಜ್ವಲ್ಯಮಾನವಾಗಿ ಬೆಳೆದು ಬಂದಿರುವದನ್ನು ಇಂದಿಗೂ ನಾವು ಕಣ್ಣಾರೆ ನೋಡಬಹುದು. ಶರಣರ ಕಲಬುರ್ಗಿ ಇಂದು ಅಭಿನವ ಕಲ್ಯಾಣ ನಗರವಾಗಿ, ಧಾರ್ಮಿಕ ಶೈಕ್ಷಣಿಕ ಕೇಂದ್ರವಾಗಿ ಕರ್ನಾಟಕದಲ್ಲಿಯೇ ಖ್ಯಾತಿವೆತ್ತಿ ನಿಂತಿದೆ. ಶರಣ ಸಂಸ್ಕೃತಿಯ ಪತಾಕೆಯನ್ನು ಎತ್ತಿ ಹಿಡಿದಿದೆ.

ಈ ಪುರಾಣದ ಶೈಲಿಯು ಬಂಧುರವಾಗಿರುವಂತೆ, ಸಲಲಿತವೂ ಆಗಿದೆ ಭಾವಕ್ಕೆ ತಕ್ಕ ಭಾಷೆಯನ್ನು ಬಳಸಿರುವದು ಕವಿಯ ಪಾಂಡಿತ್ಯದ ನಿದರ್ಶನ ಈ ಪುರಾಣದಲ್ಲಿ ಭಕ್ತಿಯೇ ಸ್ಥಾಯಿ ಭಾವವಾಗಿದೆ. ಕಥನ ಕಲೆ ಕವಿಗೆ ಚನ್ನಾಗಿ ಸಾಧಿಸಿದೆ

ಒಟ್ಟನಲ್ಲಿ ಈ ಪುರಾಣ ಪವಾಡಗಳನ್ನೊಳಗೊಂಡ ಒಂದು ಚಾರಿ-ತ್ರಿಕ ಬೃಹತ್ ಕಾವ್ಯ. ಕವಿಯ ಉದ್ದೇಶ. ನಾಯಕನ ಘನವ್ಯಕ್ತಿತ್ವದ ಹಿರಿಮೆಯನ್ನು ಜನಸಾಮಾನ್ಯರ ಮನಸ್ಸಿನಲ್ಲಿ ಅಚ್ಚಳಿಯದೆ ಮೂಡುವಂತೆ ಬಿಂಬಿಸುವದೇ ಆಗಿರುವದನ್ನು ಇಲ್ಲಿ ಗಮನಿಸಬೇಕು. ಪ್ರೊ. ಎಸ್. ಎಸ್. ಬಾಣದ ಅವರ

ಸುಮಾರು ೫೬ ಪುಟಗಳ ವಿಸ್ತಾರವಾದ ಲೇಖನವು ಕವಿ, ಕಾವ್ಯ ಪರಿಚಯವನ್ನು ಚನ್ನಾಗಿ ಮಾಡಿಕೊಡುತ್ತದೆ. ಪುರಾಣದ ಸಾರಾಂಶವು ಓದುಗರಿಗೆ ಬಹು ಉಪಯುಕ್ತವಾಗಿದೆ. ಕಾವ್ಯದ ಕೊನೆಗೆ ಶಬ್ದಕೋಶ ಕೊಟ್ಟಿರುವದು ಉಚಿತವಾಗಿದೆ. ಇದು ಎರಡನೇ ಆವೃತ್ತಿಯಾಗಿದ್ದರಿಂದ ತಪ್ಪುಗಳು ಉಳಿಯಬಾರದಿತ್ತೇನೋ! ಸುಂದರವಾದ ಭಾವಚಿತ್ರಗಳು, ದಪ್ಪವಾದ ರಟ್ಟಿನ ಕಟ್ಟು, ಸುಲಭವಾದ ಬೆಲೆಗಳಿಂದ ಪುರಾಣವು ಜನಪ್ರಿಯವಾಗುವದರಲ್ಲಿ ಸಂದೇಹವಿಲ್ಲ, ಇಂಥ ಒಂದು ಉತ್ತಮ ಕಾವ್ಯವನ್ನು ಬೆಳಕಿಗೆ ತಂದ ಶ್ರೀ ಶರಣಬಸವೇಶ್ವರ ಸಂಸ್ಥಾನವು ಜನತೆಯ ಅಭಿನಂದನೆಗೆ ಪಾತ್ರವಾಗಿದೆ.

★ ಎಸ್. ಎಸ್. ಭೂಸರಡ್ಡಿ

ಕನ್ನಡದ ವಾಗ್ರೂಢಿಗಳು : ಸಂಪಾದಕರು : ಪ್ರೊ. ಎಂ. ರಾಜಗೋಪಾಲಾಚಾರ್ಯ, ಎಂ. ಎ, ಸಾಹಿತ್ಯ ಶಿರೋಮಣಿ, ವಿದ್ವಾನ್. ಪ್ರಕಾಶಕರು : ಎಕಾಡೆಮಿ ಆಫ್ ಜನರಲ್ ಎಜ್ಯುಕೇಶನ್, ಮಣಿಪಾಲ. ಪ್ರಥಮ ಮುದ್ರಣ : ೧೯೭೦. ಪುಟಗಳು : xvi+222. ಬೆಲೆ : ಸಾದಾಪ್ರತಿ ರೂ. ೬. ಉತ್ತಮ ಪ್ರತಿ ರೂ. ೮.

ಶಿಕ್ಷಣದ ಎಲ್ಲ ಹಂತಗಳಲ್ಲಿ, ಆಡಳಿತದ ಎಲ್ಲ ಮಟ್ಟಗಳಲ್ಲಿ ಕನ್ನಡವೇ ಅಗ್ರಸ್ಥಾನ ಪಡೆಯುವ ದಿಶೆಯಲ್ಲಿ ಕಾರ್ಯಚಟುವಟಿಕೆಗಳು ಈಗ ಭರದಿಂದ ಸಾಗಿವೆ. ಇದಕ್ಕೆ ಪೂರಕವೆನ್ನುವಂತೆ ಭಾಷಾಶಾಸ್ತ್ರದ ಅಭ್ಯಾಸಕ್ಕೆ ಕರ್ನಾಟಕದ ವಿಶ್ವವಿದ್ಯಾಲಯಗಳು ವಿಶೇಷ ವ್ಯವಸ್ಥೆ ಮಾಡುತ್ತಲಿವೆ. ಈ ಮಹಾಕಾರ್ಯದಲ್ಲಿ ಕನ್ನಡಿಗರೆಲ್ಲರ ಸಹಕಾರ, ಸಹಾಯ ಎಷ್ಟು ಸಮನಿಸಿದರೂ ಕಡಿಮೆಯೇ. ಕನ್ನಡದ ಐಸಿರಿಯನ್ನು ಹೆಚ್ಚಿಸಲು ನುಡಿ ಸಂಪತ್ತಿನ ಸರಿಯಾದ ಅರಿವನ್ನುಂಟುಮಾಡುವ ಹಲವು ಪುಸ್ತಕಗಳು ಈಗ ಬೇಕು. 'ಕನ್ನಡದ ವಾಗ್ರೂಢಿಗಳು' ಅಂತಹ ಒಂದು ಪ್ರಯತ್ನ. ಆದ್ದರಿಂದ ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವೆ.

ಕನ್ನಡ ಭಾಷೆಯ ಸ್ವಂತಿಕೆ, ಸತ್ವ ಅಭಿಮಾನಪಡುವಂತಿವೆ. ಯಾವುದೇ ಭಾವ, ಅನುಭವ, ವಿಚಾರವನ್ನು ಅಭಿವ್ಯಕ್ತಗೊಳಿಸಲು ಕನ್ನಡ ಶಬ್ದಸಂಪತ್ತು ಸಮರ್ಥವಾಗಿದೆ. ಇನ್ನೂ ಬೇಕೆನಿಸಿದಾಗ ಹಲವು ಹಂಚಿಕೆಗಳಿಂದ ಹೊಸ ಪದಗಳನ್ನು ಸಾಧಿಸಿಕೊಳ್ಳಲು ಈ ಭಾಷೆಯಲ್ಲಿ ಅನುಕೂಲತೆಗಳಿವೆ. ಶ್ರೀ ಶಂ. ಬಾ. ಜೋಶಿ ಅವರ 'ಕಂನುಡಿಯ ಹುಟ್ಟು' ಮತ್ತು 'ಕನ್ನಡನುಡಿಯ ಜೀವಾಳ', ಇವು ಈ ಮಾತಿಗೆ ಸಾಕ್ಷಿ ನೀಡುವ ಕೃತಿಗಳಾಗಿವೆ. ವಿಶೇಷ ವಿವರ

ಜೆಗೆ ಕೈಹಾಕದೆ ಶ್ರೀ ಟಿ. ವಿ. ವೆಂಕಟರಮಣಯ್ಯನವರು ಹೊರತಂದಿರುವ 'ಕನ್ನಡ ಪಡೆನುಡಿಗಳ ಕೋಶ' (೧೯೬೪) ಇನ್ನೊಂದು ಗಮನಾರ್ಹ ಕೃತಿ. ಈಗ ಕನ್ನಡಿಗರ ಕೈಸೇರಿರುವ ಪ್ರೊ, ಎಂ. ರಾಜಗೋಪಾಲಾಚಾರ್ಯ ಅವರ 'ಕನ್ನಡದ ವಾಗ್ರೂಢಿಗಳು' ಈ ಮಾಲಿಕೆಯಲ್ಲಿಯ ಮತ್ತೊಂದು ಮಹತ್ವದ ಕೃತಿ.

ಪ್ರೊ. ಎಂ. ರಾಜಗೋಪಾಲಾಚಾರ್ಯ ಅವರು ತಮ್ಮ ವಿದ್ಯಾಗುರುಗಳಾದ ಶ್ರೀ ಯು. ಪುಂಡಲೀಕ ಶೆಣೈ ಅವರ ಸಣ್ಣ ಸಂಗ್ರಹವನ್ನು ಮೂಲಧನವನ್ನಾಗಿಟ್ಟುಕೊಂಡು ಅವರ ಮಾರ್ಗದರ್ಶನದಂತೆ ಮುಂದುವರಿದು ಗ್ರಾಂಥಿಕ ಮತ್ತು ಆಡುನುಡಿಯ ಅಭ್ಯಾಸವನ್ನು ಶ್ರದ್ಧೆಯಿಂದ ಮಾಡಿದ್ದಾರೆ. ಅವರ ಶ್ರದ್ಧಾಪೂರ್ಣ ಪರಿಶ್ರಮದ ಫಲರೂಪವಾಗಿ 'ಕನ್ನಡದ ವಾಗ್ರೂಢಿಗಳು' ನಮ್ಮ ಕೈಸೇರಿದೆ.

ಪ್ರಸ್ತಾವನೆಯಲ್ಲಿ ಸಂಪಾದಕರೇ ಹೇಳಿರುವಂತೆ ಇದೊಂದು ಪ್ರಾದೇಶಿಕ ಸಂಗ್ರಹ. 'ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿ ಬಳಕೆಯಲ್ಲಿರುವ ವಾಗ್ರೂಢಿಗಳೂ ಗ್ರಂಥಗಳಲ್ಲಿ ದೊರೆಯುವ ಇತರ ಕೆಲವು ಪ್ರಯೋಗಗಳೂ' ಇಲ್ಲಿವೆ. ಪ್ರೊ, ಎಂ. ರಾಜಗೋಪಾಲಾಚಾರ್ಯ ಅವರು ತಮ್ಮ ಅಳವಿಗೆ ಸಿಕ್ಕ ವಾಗ್ರೂಢಿಗಳನ್ನು ಸಂಗ್ರಹಿಸಿ, ಸಂಯೋಜಿಸಿ ಎಂಟು ಅಧ್ಯಾಯಗಳಲ್ಲಿ ವಿಭಾಗಿಸಿ, ಅಭ್ಯಾಸಕ್ಕೆ ಅನುಕೂಲವಾಗುವಂತೆ ಸಂಪಾದನೆಮಾಡಿದ್ದಾರೆ. ಪ್ರತಿ ಅಧ್ಯಾಯದ ಪ್ರಾರಂಭಕ್ಕೆ ಚಿಕ್ಕ ವಿವರಣೆ ನೀಡಿ, ಅನಂತರ ಅದರಲ್ಲಿಟ್ಟುಕೊಳ್ಳುವ ವಾಗ್ರೂಢಿಗಳ ಪಟ್ಟಿಕೊಡುತ್ತಹೋಗಿದ್ದಾರೆ.

ಮೊದಲನೆಯ ಅಧ್ಯಾಯ ಅನುಕರಣವಾಚಕ ಪದಗಳದು. ಕನ್ನಡದಲ್ಲಿ ಅನುಕರಣವಾಚಕ ಪದಗಳ ವೈಶಿಷ್ಟ್ಯ, ನುಡಿಗೆ ಅವುಗಳ ಪ್ರಯೋಜನ ಮೊದಲು ವಿವರಿಸಿ, ಅನಂತರ ನಾಲ್ಕು ವಿಭಾಗಗಳಲ್ಲಿ ಪಟ್ಟಿ ಮಾಡಿ ಕೊಟ್ಟಿರುವ ಅನುಕರಣ ವಾಚಕಗಳು ಅಭ್ಯಾಸ ಯೋಗ್ಯವಾಗಿವೆ. ಆದರೆ "ಮಾತಿನ ಭಾವವು ಸ್ಪಷ್ಟವಾಗಿ ಮೂಡುವಂತೆ ಕೆಲವು ಸಲ ಧ್ವನ್ಯನುಕರಣ ಶಬ್ದವನ್ನು ಪ್ರಯೋಗಿಸುವುದು ಇದೆ." ಮುಂತಾಗಿ ಆರಂಭದಲ್ಲಿ ವಿವರಣೆ ನೀಡಿ, "ದೀಪವು ಮಿಣಮಿಣನೆ ಉರಿಯಿತು, ಭುಗ್ಗನೆ ಉರಿಯಿತು" ಎಂಬ ಉದಾಹರಣೆ ಕೊಟ್ಟಿದ್ದಾರೆ. ದೀಪ ಒಮ್ಮೆಲೆ ಹತ್ತಿಕೊಂಡು ಉರಿಯುವಾಗ ಭುಗ್ಗ ಇಲ್ಲವೆ ಭಗ್ಗ ಎಂಬ ಧ್ವನಿ ಕೇಳಲು ಸಾಧ್ಯ. ಆದರೆ ದೀಪ ಸಾವಕಾಶವಾಗಿ (ಸಣ್ಣಗಿ) ಉರಿಯುವ ಕ್ರಿಯೆ ಹೇಳುವ ಮಿಣಮಿಣನೆ ಎಂಬುದು ಕಣ್ಣಿಗೆ ಮಾತ್ರ ವೇದ್ಯವಾಗಬಹುದಾದ ಭಾವನೆ. ಧ್ವನಿಯ ಅನುಕರಣವೇನೂ ಇಲ್ಲಿಲ್ಲ. ಹೀಗಿದ್ದೂ ಇದಕ್ಕೆ ಧ್ವನ್ಯನುಕರಣ ಶಬ್ದವೆನ್ನಬಹುದೇ? ಧ್ವನಿಯ ಅನುಕರಣಾವ್ಯಯಗಳಲ್ಲಿ ಕೆಲವನ್ನು ಕೊಟ್ಟ ಪಟ್ಟಿಯಲ್ಲೂ ಇಂಥವಿವೆ. 'ಗಮ್ಮನೆ ವಾಸನೆ, ಚಕಚಕನೆ ಹೊಳೆ, ಮಿಟ್ಟನೆ ಮೌನ, ಮಿರಮಿರನೆ ಮಿರುಗು' ಇತ್ಯಾದಿಗಳೆಲ್ಲ ಅನುಕರಣಗಳೇನೋ

ಹೌದು; ಆದರೆ ಧ್ವನ್ಯನುಕರಣಗಳೇ ? ಇಂಥವುಗಳದೂ ಒಂದು ವಿಭಾಗ ಈ ಅಧ್ಯಾಯದಲ್ಲಿ ಮಾಡಿದ್ದರೆ ಒಳಿತಾಗುತ್ತಿತ್ತೇನೊ ?

ಇಲ್ಲಿ ಸಂಗ್ರಹಗೊಂಡ 'ಕುಂಯೋ ಎಂದು ಕೂಗಿಕೊಂಡನು; ಆ ಕೆಲಸವು ಕಚಪಚ ಆಯಿತು; ಮಗುವು ಕ್ಯಾಂವ್ ಕ್ಯಾಂವ್ ಎಂದು ಅಳುತ್ತದೆ' ಇಂಥ ವಾಗ್ರೂಢಿಗಳು ಬೇರೆ ಬೇರೆ ಪ್ರದೇಶದವರಿಗೆ ವಿಚಿತ್ರವೆನಿಸುವವು ಮತ್ತು 'ಕುಚು ಕುಚನ್ನು ಕುಚು ಕುಚಿಸು; ಕೊಣ ಕೊಣ; ಲೊಟ ಲೊಟ (ಶೂನ್ಯ ವಾಗಿತ್ತು); ಸಣಸಣ ಎನ್ನುತ್ತಾನೆ' ಇಂಥವುಗಳ ಅರ್ಥ ಅರಿಯುವುದೇ ಬೇರೆ ಯುವರಿಗೆ ಕಷ್ಟವಾಗುತ್ತದೆ. ಇದಕ್ಕೆಲ್ಲ ಪ್ರಾದೇಶಿಕ ವೈಶಿಷ್ಟ್ಯದ ಪ್ರಭಾವವೇ ಕಾರಣ.

ಎರಡನೆಯ ಅಧ್ಯಾಯ ಮಾತಿಗೊಂದು ಗೀತು. ಪರಿವಿಡಿಯಲ್ಲಿ ಇದನ್ನು ಓದಿದಾಗ ಕುತೂಹಲ ಕೆರಳಿ, ಈ ಅಧ್ಯಾಯದಲ್ಲಿ ಏನಿರಬಹುದೆಂದು ಅರಿಯಲು ಮನ ಹಾತೊರೆಯುತ್ತದೆ. ಮಾತು ಮಾತಿಗೆ ನಾವು ಬಳಸುವ ರೊಟ್ಟಿಗಿಟ್ಟಿ, ಮರ ಗಿರ, ಆನೆ ಗೀನೆ, ಗಾಳ ಗೀಳ ಎಂಬವುಗಳ (ಒಂದು ಬಗೆಯ ಜೋಡು ನುಡಿಗಳೇ ಇವು) ವಿಷಯವೇ ಇಲ್ಲಿದೆ. ಇಂಥ ಪದಗಳ ಬಳಕೆಯ ರೀತಿ, ಇವು ಸ್ಫುರಿಸುವ ಅರ್ಥ ಇತ್ಯಾದಿಗಳ ಬಗ್ಗೆ ಸಂಕ್ಷಿಪ್ತವಾಗಿಯಾದರೂ ಚೆನ್ನಾಗಿ ವಿವರಣೆ ಕೊಡುವಲ್ಲಿ ಸಂಪಾದಕರು ಯಶ ಗಳಿಸಿದ್ದಾರೆ. ಇದರಂತೆಯೇ ಪ, ಪಾ ಎಂಬ ವುಗಳನ್ನು ಜೋಡಿಸಿ ಮೇಲಿನಂತೆ ವಾಗ್ರೂಢಿಗಳನ್ನು (ಉತ್ತರ ಕರ್ನಾಟಕದ ಕಡೆಗೆ) ಬಳಸುವುದೂ ಉಂಟು. ಉದಾ : ರೊಟ್ಟಿ ಪಟ್ಟಿ, ಮರ ಪರ, ಆನೆ ಪಾನೆ, ಗಾಳ ಪಾಳ ಇತ್ಯಾದಿ. ಆದರೆ ಸಂಪಾದಕರು " 'ಗಿ'ಯಿಂದ ಆರಂಭವಾಗುವ ಪದಗಳಿಗೆ 'ಗಿ'ಗೆ ಬದಲಾಗಿ ಪ ಎಂಬ ವರ್ಣವೂ 'ಗಿ'ಯಿಂದ ಆರಂಭವಾಗುವ ಪದಗಳಿಗೆ 'ಗೀ'ಗೆ ಬದಲಾಗಿ ಪಾ ಎಂಬ ವರ್ಣವೂ ಮುಂದಿನ ಪದಗಳನ್ನು ಮಾಡುತ್ತವೆ. ಉದಾ : ಗಿಳಿ ಪಳಿ, ಗೀಟು ಪಾಟು' (ಪುಟ ೧೮) ಎಂದು ಹೇಳಿರುವರು. ಆದುದರಿಂದ ಪ, ಪಾ ವರ್ಣಗಳ ಬಳಕೆಯಿಂದ ಜೋಡುನುಡಿ ಸಾಧಿಸಿಕೊಳ್ಳುವ ರೀತಿ ದಕ್ಷಿಣ ಕನ್ನಡದ ಕಡೆಗೆ ತೀರ ಮರ್ಯಾದಿತವಾಗಿದೆಯೆಂದು ಭಾವಿಸಬೇಕಾಗುತ್ತದೆ. ಆದರೆ ಚಿಲ್ಲರೆ ಪಲ್ಲರೆ, ಚೀಟಿ ಪಾಟಿ, ಚೂರು ಪಾರು ಎಂಬ ಪ್ರಯೋಗಗಳನ್ನು 'ಜೋಡು ನುಡಿಗಳು' ಎಂಬ ನಾಲ್ಕನೆಯ ಅಧ್ಯಾಯ ದಲ್ಲಿ (ಪುಟ ೨೯) ಕೊಟ್ಟಿದ್ದಾರೆ. ವಾಸ್ತವವಾಗಿ ಇವು ಈ ಅಧ್ಯಾಯದಲ್ಲಿ ಬರಬೇಕಲ್ಲವೇ ? ಈ ಹಿನ್ನೆಲೆಯಲ್ಲಿ ನೋಡಿದಾಗ ಅಧ್ಯಾಯದ ತಲೆಬರಹ ಔಚಿತ್ಯಪೂರ್ಣವಾಗಿಲ್ಲವೆಂದು ಅನಿಸದಿರದು.

ದ್ವಿರುಕ್ತಿಗಳದು ಮೂರನೆಯ ಅಧ್ಯಾಯ. ಒಂದೇ ಪದವನ್ನು ಎರಡು ಸಲ ಬಳಸಿ, ಭಾವಕ್ಕನುಸರಿಸಿ ಭಾಷೆಯನ್ನು ದುಡಿಸಿಕೊಳ್ಳುವ ರೀತಿ ಇಲ್ಲಿ ವಿವರಣೆಗೊಂಡಿದೆ. ಎಂಥ ಅರ್ಥ ಸೂಚಿಸಲು ಯಾವ ಯಾವ ದ್ವಿರುಕ್ತಿಗಳು

ಬಳಕೆಗೊಳ್ಳುವವೆಂಬುದನ್ನು ಉದಾಹರಣೆ ಸಹಿತ ಕೊಟ್ಟಿದ್ದಾರೆ. ಕೆಲವು ದ್ವಿರುಕ್ತಿಗಳು ಸೂಚಿಸುವ ಅರ್ಥದ ಬಗ್ಗೆ ಸಂಪಾದಕರ ಮಾತಿಗೆ ಸಂಶಯ ವ್ಯಕ್ತ ಮಾಡಬಹುದು. ಉದಾ : ಮೊದಮೊದಲು ತಿಳಿಯಲಿಲ್ಲ; ಕಡೆಕಡೆಗೆ ತಿಳಿಯಿತು; ಈಚೀಚೆಗೆ ಸರಿಯಾಗುತ್ತದೆ. ಇವು ಸಂಪಾದಕರ ಪ್ರಕಾರ ಸಾಧಾರಣ (ಸಾಮೀಪ್ಯದಲ್ಲಿ) ಎಂಬ ಅರ್ಥ ಸೂಚಿಸುತ್ತವೆ. ಇಲ್ಲಿ ಅರ್ಥ ಸಂಶಯಕ್ಕೆ ಸಾಕಷ್ಟು ಎಡೆಯಿದೆ. ಇನ್ನೂ ಒಂದೆರಡರ ಬಗ್ಗೆಯೂ ಇಂಥ ಭಾವನೆ ಮೂಡುತ್ತದೆ. ದ್ವಿರುಕ್ತಿಗಳು ನಿರ್ದೇಶಿಸುವ ಅರ್ಥ ಕೊಡುವಾಗ ಹೆಚ್ಚಿಗೆ ಗಮನಸಮೀಯುವುದು ಅಗತ್ಯ.

ಜೋಡು ನುಡಿಗಳು ನಾಲ್ಕನೆಯ ಅಧ್ಯಾಯದ ವಿಷಯ. ಆರಂಭದಲ್ಲಿ ಅವುಗಳ ಪ್ರಯೋಜನ, ಬಳಕೆಯ ರೀತಿಗಳ ವಿವರಣೆ ನೀಡಿದ್ದಾರೆ. ಅನಂತರ ಜೋಡು ನುಡಿಗಳ ಪಟ್ಟಿಯೊಂದನ್ನು ಮೂರು ವಿಭಾಗಗಳಡಿಯಲ್ಲಿ ಕೊಟ್ಟಿದ್ದಾರೆ. ಸಮನಾರ್ಥಕ ಪದಗಳಿಂದಾಗಿ ಜೋಡು ನುಡಿಗಳು, ಸಜಾತೀಯ ಪದಗಳಿಂದಾದ ಮೇಳ ನುಡಿಗಳು, ವಿಜಾತೀಯ (ವಿರುದ್ಧ) ಪದಗಳಿಂದಾಗಿ ಮೇಳ ನುಡಿಗಳು ಎಂಬ ಈ ಮೂರು ವಿಭಾಗಗಳಲ್ಲಿ ನೂರಾರು ಪದಗಳನ್ನು ವಿಂಗಡಿಸುವಾಗ ಒಂದು ವಿಭಾಗದಲ್ಲಿ ಸೇರಬೇಕಾದ ಪದ ಇನ್ನೊಂದು ವಿಭಾಗದಲ್ಲಿ ನುಸುಳುವುದು ಸಹಜ. ಅಳತೆ ತೂಕ, ಸೇರು ಅಚ್ಚೇರು ಇತ್ಯಾದಿ ಸಮಾನಾರ್ಥಕ ಅನ್ನುವುದಕ್ಕಿಂತ ಸಜಾತೀಯಗಳೆನ್ನುವುದು ಸೂಕ್ತ. ಹಾಗೆಯೇ ಹಾಸ ಪರಿಹಾಸ, ಪೌರ ಜಾನಪದ, ಸುಗ್ಗಿ ನುಸುಳಿ ಇತ್ಯಾದಿಗಳು ವಿಜಾತೀಯ ಪದಗಳೆನ್ನುವುದು ಹೆಚ್ಚು ಸೂಕ್ತ. ಗಾಳಿ ಗಂಟು (ಸುಳ್ಳು), ಡೊಳ್ಳು ಹೊಟ್ಟೆ, ಮೀನ ಮೇಷ ಎಣಿಸು ಇವು ಮೇಳ (ಜೋಡು) ನುಡಿಗಳೆನ್ನುವುದಕ್ಕಿಂತ ನುಡಿಗಟ್ಟುಗಳೆನ್ನುವುದು ಒಳಿತು. ಮಹೋತ್ಸವದಲ್ಲಿಯ ಮಹ ಎಂಬುದಕ್ಕೆ ಉತ್ಸವ ಎಂಬರ್ಥದಲ್ಲಿ ಬಳಸುತ್ತೇವೆಯೇ ಹೊರತು ಜೋಡು ನುಡಿಯು ಹಾಗಲ್ಲ. ಜೋಡು ನುಡಿಯಲ್ಲಿ ಸೇರಿಸಿರುವ ಸ್ವಾರ್ಥ (ಸ್ವ-ಅರ್ಥ) ಎಂಬುದರ ಬಗೆಗೂ ಇದೇ ಬಗೆಯ ವಿವರಣೆ ಕೊಡಬಹುದು.

ಜೋಡು ನುಡಿಗಳ ಪಟ್ಟಿಯಲ್ಲಿ ಮತ್ತು ಅದರ ವಿಭಾಗೀಕರಣದಲ್ಲಿ ಸಂಪಾದಕರ ಪರಿಶ್ರಮ, ಪಾಂಡಿತ್ಯ ಎದ್ದು ಕಾಣುತ್ತಿದ್ದರೂ ಮೇಲೆ ವಿವರಿಸಿದಂಥ ಕೆಲವು ಕೊರತೆಗಳು ಉಳಿದಿವೆ.

ಐದನೆಯ ಅಧ್ಯಾಯ ಧಾತು ನಿಷ್ಪನ್ನವಾದ ನುಡಿಗಟ್ಟುಗಳ ಕುರಿತಿದೆ. ಕನ್ನಡದ ಒಂದು ಧಾತು ರೂಪದೊಡನೆ ಮತ್ತೊಂದು ಧಾತು ರೂಪ ಸೇರಿಕೊಂಡಾಗ ಇಲ್ಲವೆ ನಾಮ ಪದಗಳೊಡನೆ ಬಂದಾಗ ಅವು ವಿಶೇಷಾರ್ಥಗಳನ್ನು ಕೊಡಬಲ್ಲವು. ಉದಾ : ತೇಲಾಡು, ಹಾರಾಡು, ಓಡಾಡು, ತೇಲಾಟ, ಹಾರಾಟ, ಓಡಾಟ ಇತ್ಯಾದಿ. ಎರಡು ಪುಟಗಳ ಈ ಅಧ್ಯಾಯದಲ್ಲಿ ಇಂಥ ಕೆಲವು ಉದಾಹರಣೆಗಳನ್ನು ವಿವರಣೆಯೊಂದಿಗೆ ಕೊಡಲಾಗಿದೆ.

ಇನ್ನು ಸಾಮಾನ್ಯ ಶಬ್ದಗಳ ನುಡಿಗಟ್ಟುಗಳು ಎಂಬುದು ಆರನೆಯ ಅಧ್ಯಾಯ. "ಕೆಲವು ಕ್ರಿಯಾಪದಗಳಾಗಲಿ ಉದಾ : ಇಳಿ, ಏರು, ಹತ್ತು, ಬಿಳಿಕು ಇತ್ಯಾದಿ ಕೆಲವು ನಾಮಪದಗಳಾಗಲಿ ಉದಾ : ಆಳು, ಕಟ್ಟು, ಕೇಡು ಇತ್ಯಾದಿ ಕೆಲವು ಗುಣವಾಚಕಗಳಾಗಲಿ ಉದಾ : ಎಳೆ, ಒಣ ಇತ್ಯಾದಿ ಇತರ ಶಬ್ದಗಳೊಡನೆ ಸೇರಿ ವಿಶಿಷ್ಟಾರ್ಥದ ನುಡಿಗಟ್ಟುಗಳಾಗುತ್ತವೆ" ಎಂಬುದಾಗಿ ಅಧ್ಯಾಯದ ಆರಂಭಕ್ಕೆ ಹೇಳಿ ಅನಂತರ ಅವುಗಳಿಂದ ಸಾಧಿತವಾಗುವ ಹಲವು ಪದಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಕ್ರಿಯಾಪದ, ನಾಮಪದ ಮತ್ತು ಗುಣವಾಚಕಗಳಿಂದ ವಿಶಿಷ್ಟಾರ್ಥದ ಹೊಸ ಪದಗಳನ್ನು ಸಾಧಿಸಿಕೊಳ್ಳಲು ಕನ್ನಡ ನುಡಿಯು ಹೇಳದೆ ಸಮರ್ಥವಾಗಿದೆಯೆಂಬುದನ್ನು ತಿಳಿಸುವ ಸ್ತುತ್ಯ ಕಾರ್ಯವಮಾಡಿದ್ದಾರೆ.

ಆದರೆ ಐದನೆಯ ಮತ್ತು ಆರನೆಯ ಅಧ್ಯಾಯಗಳಲ್ಲಿ ಸಂಪಾದಕರು ಪ್ರತಿಪಾದಿಸಿರುವ ವಿಷಯ ವ್ಯಾಕರಣ ಪ್ರಕ್ರಿಯೆಗೆ ಸಂಬಂಧಿಸಿದ್ದಲ್ಲವೇ ? ಈ ಎರಡು ಅಧ್ಯಾಯಗಳಲ್ಲಿಯ ಹಲವು ಪ್ರಯೋಗಗಳು ಎಂಟನೆಯ ಅಧ್ಯಾಯದಲ್ಲಿ ಪುನರುಕ್ತಗೊಂಡಿವೆ. "ಆರನೆಯದರಲ್ಲಿ (ಅಧ್ಯಾಯದಲ್ಲಿ) ಧಾತುಗಳು ತಮ್ಮ ಸ್ವಂತ ಅರ್ಥವನ್ನು ಬಿಟ್ಟು ಲಾಕ್ಷಣಿಕವಾಗಿ ಇತರ ಅರ್ಥವನ್ನು ಕೊಡುವ ವಿಧಾನವನ್ನು ವಿವರಿಸಿದೆ. ಇದು ಸಂಗ್ರಹವಲ್ಲ. ದಿಗ್ದರ್ಶನ ಮಾತ್ರ. ಕೊನೆಯ ಅಧ್ಯಾಯದಲ್ಲಿ ಯಥೋಚಿತವಾಗಿ ಈ ನುಡಿಗಟ್ಟುಗಳನ್ನು ಅಲ್ಲಲ್ಲಿ ಅರ್ಥದೊಂದಿಗೆ ವಿವರಿಸಿದೆ" ಎಂಬುದಾಗಿ ಪ್ರಸ್ತಾವನೆ(ಪುಟ vi)ಯಲ್ಲಿ ಸಂಪಾದಕರು ಹೇಳಿರುವ ಮಾತುಗಳನ್ನು ಗಮನಿಸಬೇಕು. ಇದರಿಂದ ಹಲವು ಪ್ರಯೋಗಗಳ ಪುನರುಕ್ತಿ ಉದ್ದೇಶಪೂರ್ವಕವೆಂಬುದು ವಿದಿತವಾಗುತ್ತದೆ. ಔಚಿತ್ಯ ಮಾತ್ರ ಒಗಟಾಗುತ್ತದೆ.

ಏಳನೆಯ ಅಧ್ಯಾಯದಲ್ಲಿ ಪ್ರಸಿದ್ಧವಾದ ಹೋಲಿಕೆಗಳನ್ನುಳ್ಳ ಅನೇಕ ನುಡಿಗಟ್ಟುಗಳನ್ನು ಸಂಗ್ರಹಿಸಿಲಾಗಿದೆ, ಅವುಗಳಿಂದ ಅಭಿವ್ಯಕ್ತವಾಗುವ ಅರ್ಥ ವಿವರಿಸಿ ಸಂಪಾದಕರು ಅಭ್ಯಾಸಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಆದರೆ ಒಂದೆರಡರ ಅರ್ಥ ವಿವರಣೆಯ ಬಗ್ಗೆ ಸಂಶಯಬರುತ್ತದೆ. 'ಬೊಗಳುವ ಆದರೆ ಕಚ್ಚದ ನಾಯಿಯಂತೆ 'ನಿರುಪದ್ರವಿ' ಎಂದು(ಪುಟ ೬೫)ಹೇಳುವುದಕ್ಕಿಂತಲೂ ಕೈಲಾಗದ ಇಲ್ಲವೆ ಒಣಮಾತಿನ ಎನ್ನುವುದು ಸೂಕ್ತವಲ್ಲವೇ ? ಇನ್ನು, ಪುಟ ೬೭ ರಲ್ಲಿಯ 'ಸಾಮಾನ್ಯ ವಸ್ತುಗಳು' ಎಂಬ ವಿಭಾಗದ ಹೆಸರಿನ ಔಚಿತ್ಯ ವೇನು ? ಸಾಮಾನ್ಯ ಭಾವಾಭಿವ್ಯಕ್ತಿಯ ಹೋಲಿಕೆಗಳು ಎಂಬುದು ಉಚಿತ ವಾಗುತ್ತಿತ್ತೇನೋ ?

ಎಂಟನೆಯ ಅಧ್ಯಾಯದಲ್ಲಿ ಸೊಗಸಾದ ಲಾಕ್ಷಣಿಕ ವಾಗ್ರೂಢಿಗಳ ವಿಪುಲ ಸಂಗ್ರಹವಿದೆ. ಆರಂಭದಲ್ಲಿಯ ಚಿಕ್ಕ ವಿವರಣೆ ಸಮಾಧಾನಕರವಿದೆ. ಎಲ್ಲೆಡೆ

ಯಲ್ಲಿ ಪ್ರಚಲಿತವಿರುವ ಹಲವು ಪ್ರಸಿದ್ಧ ನುಡಿಗಟ್ಟುಗಳೊಡನೆ ಪ್ರಾದೇಶಿಕ ವೈಶಿಷ್ಟ್ಯ ಪಡೆದಿರುವ ನುಡಿಗಟ್ಟುಗಳಿಗೂ ಇಲ್ಲಿ ಸಾಕಷ್ಟು ಅವಕಾಶ ಸಿಕ್ಕಿದೆ. ಹಾಗೆ ನೋಡಿದರೆ, ಪ್ರಾದೇಶಿಕ ನುಡಿಗಟ್ಟುಗಳ ಸಂಗ್ರಹವೇ ನಿಜವಾದ ಕಾಣಿಕೆ. ಅಂಡಿಗೆ ನೀರುಬಿಡು=ಮಾಡಿದ್ದನ್ನು ಮರೆ; ಅಂಡು ಮಾಡಿಕೋ=ಆಶ್ರಯ ಪಡೆ; ಅಬೆ ಹಿಡಿಯು=ಸಾಕಾಗಿ ಬೇಸರ ಬರು; ದೋಂದಲು ಬಾಚು= ಯಾರೂ ಮಾಡದೆ ಉಳಿದ ಕೆಲಸ ಮಾಡು ಇತ್ಯಾದಿಗಳೆಲ್ಲ ಪ್ರಾದೇಶಿಕ ವೈಶಿಷ್ಟ್ಯ ಪಡೆದ ಪ್ರಯೋಗಗಳು. ಕೆಲವು ನುಡಿಗಟ್ಟುಗಳಿಗೆ ದಕ್ಷಿಣ ಕನ್ನಡದ ಕಡೆಗಿನ ಅರ್ಥಕ್ಕೆ ಬೇರೆಡೆಯ ಅರ್ಥಕ್ಕೂ ವ್ಯತ್ಯಾಸವೂ ತೋರುತ್ತದೆ. ದಾದಿಲ್ಲ ಪಿರ್ಯಾದಿಲ್ಲ ಎಂಬುದಕ್ಕೆ 'ಯಾರ ಸಮಾಚಾರವೂ ಇಲ್ಲ' ಎಂದು ದಕ್ಷಿಣ ಕನ್ನಡದ ಕಡೆಗೆ ಅರ್ಥವಾದರೆ ಉಳಿದೆಡೆ 'ಹೇಳುವವರಿಲ್ಲ ಕೇಳುವವರಿಲ್ಲ' ಎಂದು ಲಾಕ್ಷಣಿಕ ಅರ್ಥವಿದೆ. ಪ್ರಾದೇಶಿಕ ವೈಶಿಷ್ಟ್ಯಗಳ ಅಭ್ಯಾಸ ಮಾಡುವವರಿಗೆ ಇಂಥ ಪ್ರಯೋಗಗಳು ವಿಶೇಷ ನೆರವಾಗಬಲ್ಲವು. ೧೪೪ ಪುಟಗಳ ದೀರ್ಘ ವಿಸ್ತಾರದಲ್ಲಿ ಸಂಗ್ರಹಿಸಿರುವ ವಿಪುಲ ಸಂಖ್ಯೆಯ ನುಡಿಗಟ್ಟುಗಳು ಅಭ್ಯಾಸ ಯೋಗ್ಯವಾಗಿವೆ.

ಎಂಟು ಅಧ್ಯಾಯಗಳಲ್ಲಿ ಸಂಗ್ರಹಗೊಂಡ 'ಕನ್ನಡದ ವಾಗ್ರೂಢಿಗಳು' ಪ್ರೊ. ಎಂ. ರಾಜಗೋಪಾಲಾಚಾರ್ಯ ಅವರ ಶ್ರದ್ಧೆ, ಪರಿಶ್ರಮಗಳ ಫಲ. ಈ ಕೃತಿಯ ಸಂಯೋಜನೆಯಲ್ಲಿ ಸಂಪಾದಕರು ಅಳವಡಿಸಿಕೊಂಡಿರುವ ಹೊಸ ಕ್ರಮ ಮೆಚ್ಚುವಂತಹದು. ಕನ್ನಡ ಭಾಷೆಯನ್ನು ಯಾವ ಅಂಶಗಳು ಬೇರೆ ಭಾಷೆಗಳಿಂದ ಪ್ರತ್ಯೇಕಿಸುತ್ತವೆಂಬುದನ್ನು ಗಮನದಲ್ಲಿಟ್ಟು ವಾಗ್ರೂಢಿಗಳನ್ನು ಸಂಗ್ರಹಿಸಿರುವುದು; ಸಂಯೋಜಿಸಿರುವುದು ಸ್ತುತ್ಯ ಕಾರ್ಯ.

ಸಂಪಾದಕರಾದ ಪ್ರೊ. ಎಂ. ರಾಜಗೋಪಾಲಾಚಾರ್ಯ ಅವರು "ನಾನು ಎಲ್ಲವನ್ನೂ ಸರಿಯಾಗಿಯೇ ಸಂಗ್ರಹಿಸಿದ್ದೇನೆ ಎಂಬ ಎದೆ ನನಗಿಲ್ಲ. ಕೈತಪ್ಪಿನ, ಕಣ್ಣುತಪ್ಪಿನ, ಅರಿಯುಮಿಕೆಯ ದೋಷಗಳಿರಬಹುದು. ಪುನರುಕ್ತಿಯೂ ಇರಬಹುದು" ಎಂದು ಪ್ರಸ್ತಾವನೆಯಲ್ಲಿ ಹೇಳಿರುವಂತೆ ಅಷ್ಟಿಷ್ಟು ಲೋಪದೋಷಗಳು ಉಳಿದಿದ್ದರೂ ಶ್ರೀಯುತರ ಶ್ರದ್ಧಾಪೂರ್ಣತೆಯನ್ನು ನಾವು ಶ್ಲಾಘಿಸಬೇಕು. ಲೋಪದೋಷಗಳು ಕೃತಿಯ ಮೌಲ್ಯವನ್ನೇ ಕಡಿಮೆ ಮಾಡುವಂಥವು ಅಲ್ಲವೆಂಬುದೂ ಮುಖ್ಯ.

ಪ್ರೊ. ಎಂ. ರಾಜಗೋಪಾಲಾಚಾರ್ಯ ಅವರು ಕನ್ನಡಕ್ಕೆ ಈಗ ಅವಶ್ಯಬೇಕಾದ ಕಾರ್ಯವೊಂದನ್ನು ಮಾಡಿದ್ದಾರೆ. ಆ ಮೂಲಕ ಕನ್ನಡಕ್ಕಾಗಿ ದುಡಿಯಬೇಕೆನ್ನುವವರಿಗೆ ಹೊಸ ಹಾದಿಯೊಂದನ್ನು ತೋರಿಸಿಕೊಟ್ಟಿದ್ದಾರೆ. ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಶ್ರೀಯುತರ ಈ ಕಾರ್ಯ ಇನ್ನೂ ಹಲವರಿಗೆ ಪ್ರೇರಣೆ ನೀಡಲೆಂದು ಹಾರೈಸುವೆ.

★ ಜ್ಯೋತಿ ಹೊಸೂರ

ಸಾದರ ಸ್ವೀಕಾರ

೧. ಸಂಗೀತ ಮೀಮಾಂಸೆ :

ಲೇಖಕರು: ಎಂ. ಆರ್. ಶಂಕರಮೂರ್ತಿ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ : ೧೧೬ + xii, ಬೆಲೆ: ರೂ. ೪-೦೦, ೧೯೭೧.

೨. ಸಂಶೋಧನ ತರಂಗ (ಸಂಪುಟ ೨) :

ಲೇಖಕರು: ಎಂ. ಚಿದಾನಂದಮೂರ್ತಿ ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೩೦೧+xvi, ಬೆಲೆ: ಸಾದಾಪ್ರತಿ ೧೦-೦೦, ಕ್ಯಾಲಿಕೊ ೧೫-೦೦. ೧೯೭೦.

೩. ಪ್ರಾಯೋಗಿಕ ವಿಮರ್ಶೆ :

ಸಂಪಾದಕರು: ಜಿ. ಎಸ್. ಶಿವರುದ್ರಪ್ಪ ಮತ್ತು ಎನ್. ಎಸ್. ಲಕ್ಷ್ಮೀನಾರಾಯಣ ಭಟ್, ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೧೭೧+xviii; ಬೆಲೆ: ಸಾದಾ ಪ್ರತಿ ೬-೦೦, ಉತ್ತಮ ಪ್ರತಿ ೭-೫೦. ೧೯೭೧.

೪. ತಿಮ್ಮಪ್ಪದಾಸರ ಅರ್ಚನ :

ಸಂಪಾದಕರು: ಎಂ. ವಿ. ಸೀತಾರಾಮಯ್ಯ, ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೩೦೧+xxxviii; ಬೆಲೆ: ಸಾದಾಪ್ರತಿ ೧೨-೦೦ ಉತ್ತಮ ಪ್ರತಿ ೧೫-೦೦ ೧೯೭೧.

೫. ಸಾರ್ವಜನಿಕದಲ್ಲಿ ಸಾತ್ತ್ವಿಕ :

ಲೇಖಕರು: ಡಿ. ವಿ. ಜಿ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೫೦+viii ಬೆಲೆ: ರೂ. ೧-೫೦. ೧೯೭೧.

೬. ಕರ್ನಾಟಕ ಶಾಸನ ಸಮೀಕ್ಷೆ :

ಲೇಖಕರು: ಡಾ. ಕೋ. ಸ್ವಾ. ರಮೇಶ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣೆ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೮೦+iv, ಬೆಲೆ: ೨-೫೦. ೧೯೭೧.

೭. ಸಾಹಿತ್ಯ ಮತ್ತು ಸಾಮಾಜಿಕ ಮೌಲ್ಯ:

ಪ್ರ. ಸಂಪಾದಕರು: ಜಿ. ಎಸ್. ಶಿವರುದ್ರಪ್ಪ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ : ೧೬೫+viii; ಬೆಲೆ: ಸಾದಾಪ್ರತಿ ೪-೫೦. ಉತ್ತಮ ಪ್ರತಿ ೬-೦೦. ೧೯೭೧.

೮. ಭಾರತೀಯ ಕಾವ್ಯಮೀಮಾಂಸೆ: ತತ್ತ್ವ ಮತ್ತು ಪ್ರಯೋಗ:

ಲೇಖಕರು : ಡಾ. ಕೆ. ಕೃಷ್ಣಮೂರ್ತಿ. ಪ್ರಕಾಶಕರು : ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು—೧. ಪುಟ : ೫೪+vi, ಬೆಲೆ: ರೂ. ೨-೦೦. ೧೯೭೧.

೯. ಭೌತಶಾಸ್ತ್ರ :

ಲೇಖಕರು : ಎಚ್.ಡಿ. ಸಿದ್ಧರಂಗಪ್ಪ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೪೧೬+x, ಬೆಲೆ: ರೂ. ೫-೦೦. ೧೯೭೧.

೧೦. ಪರಮಾಣು ಕೇಂದ್ರ ಮತ್ತು ಅದರ ಶಕ್ತಿ

ಲೇಖಕರು : ಕೆ. ಶೇಷಾದ್ರಿ ಐಯ್ಯಂಗಾರ್. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧ ಪುಟ: ೨೨೮+xii. ಬೆಲೆ: ರೂ. ೪-೦೦ ೧೯೭೧.

೧೧. ಭೌತ ವಿಜ್ಞಾನ :

ಲೇಖಕರು : ವಿ. ಚೆಲುವರಾಜ ಅಯ್ಯಂಗಾರ ಪ್ರಕಾಶಕರು : ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ : ೨೬೪+x, ಬೆಲೆ: ರೂ. ೪-೦೦ ೧೯೭೧.

೧೨. ಸಾಂಖ್ಯಿಕ ಶಾಸ್ತ್ರ :

ಲೇಖಕರು : ಪಿ. ಎಸ್. ನಾರಾಯಣರಾವ್, ಪ್ರಕಾಶಕರು : ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೧೪೦ +viii, ಬೆಲೆ: ರೂ. ೩-೦೦ ೧೯೭೦.

೧೩. ಪರಮಾಣು ಮತ್ತು ಅದರ ರಚನೆ:

ಲೇಖಕರು: ಕೆ. ಶೇಷಾದ್ರಿ ಅಯ್ಯಂಗಾರ್. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧ ಪುಟ: ೨೦೨ + x, ಬೆಲೆ: ರೂ. ೩-೦೦, ೧೯೭೦.

೧೪. ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು: (ಭಾಗ–೧)

ಲೇಖಕರು: ಕೃಷ್ಣನಾಯಕ್. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೪೯೦ + xi, ಬೆಲೆ: ರೂ. ೭-೦೦, ೧೯೭೧.

೧೫. ಆಧುನಿಕ ಭಾರತದ ಆರ್ಥಿಕ ಸಮಸ್ಯೆಗಳು: (ಭಾಗ-೨)

ಲೇಖಕರು: ಟಿ. ಎನ್. ವಿಜಯಪ್ಪ. ಪ್ರಕಾಶಕರು: ಕೆ.ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೨೮೦ + xii, ಬೆಲೆ: ರೂ. ೪-೫೦, ೧೯೭೧.

೧೬. ಸಾಮಾಜಿಕ ಮನೋವಿಜ್ಞಾನ:

ಲೇಖಕರು: ಆರ್. ಎ. ಫಣಿಶಾಯಿ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೨೫೬ + viii, ಬೆಲೆ: ೪-೨೫, ೧೯೭೧.

೧೭. ಶೈಕ್ಷಣಿಕ ಮನೋವಿಜ್ಞಾನ:

ಲೇಖಕರು: ಎಂ. ಬಸವಣ್ಣ. ಪ್ರಕಾಶಕರು: ಕೆ.ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೩೧೨ + x, ಬೆಲೆ: ರೂ. ೪-೫೦, ೧೯೭೦.

೧೮. ವಿಜ್ಞಾನ ಮತ್ತು ಸಮಾಜ:

ಪ್ರ. ಸಂಪಾದಕರು: ಡಾ|| ಜಿ. ಎಸ್. ಶಿವರುದ್ರಪ್ಪ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೧೪೧ + vi, ಬೆಲೆ: ಸಾದಾ ಪ್ರತಿ ೪-೦೦, ಉತ್ತಮ ಪ್ರತಿ ೫-೦೦, ೧೯೭೧.

೧೯. ಸಮಾಜಶಾಸ್ತ್ರ:

ಪ್ರ. ಸಂಪಾದಕರು: ಜಿ. ಎಸ್. ಶಿವರುದ್ರಪ್ಪ. ಪ್ರಕಾಶಕರು: ಕೆ. ಸಿ. ಶಿವಪ್ಪ, ಕೋ-ಆರ್ಡಿನೇಟರ್, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-೧. ಪುಟ: ೭೦೪ + vi, ಬೆಲೆ: ೫-೦೦ ೧೯೭೧.

೨೦. **Man and Society:**

by-K. Subba Rao. Published by K. C. Shivappa, Co-ordinator, Department of Publications and Extension Lectures, Bangalore University, Bangalore-1. Pages: 90+viii, Price: Rs. 4-00 Calico Rs. 6-00 1971.

೨೧. **Public Law—Some Aspects :**

by-A. T. Markose. Published by K. C. Shivappa, Co-ordinator, Department of Publications and Extension Lectures, Bangalore University Bangalore-1. Pages: 96+xxiv. Price: Rs. 5—00, Calico Rs. 7-50 1971.

೨೨. **Social Science :**

Editar: B. R. A. Rao. Bangalore University, Bangalore. Pages: 268, Price 3-50.

೨೩. **ಜ್ಞಾನ ಗಂಗೋತ್ರಿ : (ಮನುಕುಲದ ಕಥೆ)**

ಪ್ರ. ಸಂಪಾದಕರು: ನಿರಂಜನ. ಪ್ರಕಾಶಕರು: ಕರ್ನಾಟಕ ಕೋ-ಆಪರೇಟಿವ್ ಪಬ್ಲಿಷಿಂಗ್ ಹೌಸ್, ಲಿ. ಪುಟ: ೭೪೫+xvi+Plates. ಬೆಲೆ: ರೂ. ೫೦—೦೦ ೧೯೭೦

ಸಂಪಾದಕೀಯ

ಇದು ನಾಲ್ಕನೆಯ ವರ್ಷದ ಮೂರನೆಯ ಸಂಚಿಕೆ. ಓದುಗರಿಗೆ ಹೊಸ ಹೊಸತನ್ನು ನೀಡಬಯಸುವ 'ಭಾರತಿ', 'ಕರ್ನಾಟಕದ ಅಗ್ರಹಾರಗಳು' 'ಅಪ್ರಕಟಿತ ಗ್ರಂಥಸೂಚಿ' ಲೇಖನವಾಹಿನಿಯೊಂದಿಗೆ, ಈ ಸಲದಿಂದ ಈ ಸಂಚಿಕೆಯ ಮೂಲಕ 'ಒರೆಗಲ್ಲು' ಎಂಬ ವಿಶೇಷ ವಿಭಾಗವನ್ನು ಪ್ರಾರಂಭಿಸಿದೆ. ಟಿಪ್ಪಣಿರೂಪದ ಸಮಸ್ಯೆಗಳ ವಿವೇಚನೆಗೆ ಇಲ್ಲಿ ಅವಕಾಶವಿದೆ. ಸಾಹಿತ್ಯ, ಇತಿಹಾಸ ಇತ್ಯಾದಿಗಳಿಗೆ ಸಂಬಂಧಿಸಿದ ಕಗ್ಗಂಟುಗಳು ಕನ್ನಡದಲ್ಲಿ ನೂರಾರು. ನೆನೆಗುದಿಗೆ ಬಿದ್ದ ಇಂಥ ಸಮಸ್ಯೆಗಳ ಪರಿಹಾರಕ್ಕೆ ಒಂದು ವೇದಿಕೆ ಅವಶ್ಯವೆಂದು ಮನದಂದು ಈ 'ಒರೆಗಲ್ಲು' ವಿಭಾಗವನ್ನು ಆರಂಭಿಸಲಾಗಿದೆ. ಇದು ಹೆಸರಿಗೆ ತಕ್ಕಂತೆ ಅರ್ಥಪೂರ್ಣವಾಗಿ ಬೆಳೆಯಲು ವಿದ್ವಾಂಸರು ಸಹಕರಿಸಬೇಕಾಗಿ ಬಿನ್ನಹ.

ಶ್ರೀ ಬಸವೇಶ್ವರ ಅಧ್ಯಯನ ಪೀಠ

"ದೇವವಾಣಿಗೆ ಜನವಾಣಿಯಾಗುವದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು" ಎಂಬ ಕನ್ನಡಾಭಿಮಾನಿಗಳ ಕೇಂದ್ರಶಕ್ತಿಯಾದ ಬಸವಣ್ಣನವರ ದಿವ್ಯ ಸ್ಮರಣೆಯ ದ್ಯೋತಕವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಶ್ರೀ ಬಸವೇಶ್ವರ ಅಧ್ಯಯನ ಪೀಠ" ಅಧಿಷ್ಠಾನಗೊಳ್ಳಲು ೧೮-೧೨-೭೧ರಂದು ಕೂಡಿದ ಸಿಂಡಿಕೇಟ ಸಭೆ ಮನ್ನಣೆಯಿತ್ತುದು ಕನ್ನಡಾಭಿಮಾನದ ಇತಿಹಾಸದಲ್ಲಿ ಜರುಗಿದ ಮಹತ್ವಪೂರ್ಣ ಘಟನೆ. "ಶ್ರೀ ಮ.ನಿ.ಪ್ರ. ಮಹಾಂತ ಶಿವಯೋಗಿಗಳು ಮುರಗೋಡ, ಶತಮಾನೋತ್ಸವ ಸ್ಮಾರಕ, ಶ್ರೀಬಸವೇಶ್ವರ ಅಧ್ಯಯನ ಪೀಠ" ಎಂಬ ಹೆಸರಿನಿಂದ ಸ್ಥಾಪನೆಗೊಂಡ ಈ ಪೀಠದ ಅಡಿಯಲ್ಲಿ ಅಧ್ಯಯನ ಕಾರ್ಯ ಶೀಘ್ರಪ್ರಾರಂಭವಾಗಲಿ. ಮಿಕ್ಕ ಮಹಾಪುರುಷರ ಹೆಸರಿನಲ್ಲಿ ಇಂಥ ಪೀಠಗಳು ಅಸ್ತಿತ್ವಕ್ಕೆ ಬಂದು ವಿಶೇಷ ಅಧ್ಯಯನ ನಡೆಯಲಿ ಎಂದು 'ಭಾರತಿ' ಹಾರೈಸುತ್ತದೆ.

ಸಾಹಿತ್ಯ ಸಮ್ಮೇಳನ

'ಜನ ಬದುಕಬೇಕೆಂದು' ನಿರ್ಮಾಣಗೊಳ್ಳುವ ಸಾಹಿತ್ಯ, ಜನರ ಮಧ್ಯದಲ್ಲಿ ಬದುಕಬೇಕು: ಅಂದರೆ ಸಮಾಜ ಮತ್ತು ಸಾಹಿತ್ಯಗಳ ಸಂಪರ್ಕ ಸಾಂದ್ರಗೊಳ್ಳಬೇಕು. ಈ ಉದ್ದೇಶದಿಂದ ಸಾಹಿತ್ಯ ಸಮಾರಂಭಗಳು ನಾಡಿನ ತುಂಬ ನಡೆಯುವದು ಅವಶ್ಯ. ಇಂಥ ಸಮಾರಂಭಗಳಲ್ಲಿ ಪರಿಷತ್ತಿನವರು ನಡೆಸುತ್ತಿರುವ

' ಜಿಲ್ಲಾ ಸಾಹಿತ್ಯ ಸಮ್ಮೇಲನಗಳು ' ಗಮನಾರ್ಹವೆನಿಸಿವೆ ಇತ್ತೀಚೆಗೆ ಬೆಳಗಾವ, ರಾಯಚೂರ, ಧಾರವಾಡ, ದಾವಣಗೆರೆಗಳಲ್ಲಿ ಇಂಥ ಸಮಾರಂಭಗಳು ಜರುಗಿದವು. ಲೇಸಿನತ್ತ ನಡೆಸುವ ಸಮಾರಂಭಗಳು ಎಷ್ಟು ನಡೆದರೂ ಸಂತೋಷವೇ. ಆದರೆ ಹತ್ತೊಂಬತ್ತು ಭಾವನೆಗಳು ತಲೆಯೆತ್ತದಂತೆ, ಪರಿಷತ್ತು ನೋಡಿಕೊಳ್ಳಲಿ, ನಾಡಿನತುಂಬ ಸಾಹಿತ್ಯ ಬೆಳೆಯಲಿ ಎಂದು " ಭಾರತಿ " ಹಾರೈಸುತ್ತದೆ.

ಘಟಿಕೋತ್ಸವ

೧೯೭೧ ಡಿಸೆಂಬರ ೩೧ ರಂದು ಕರ್ನಾಟಕ ವಿಶ್ವವಿದ್ಯಾಲಯವು ತನ್ನ ೨೨ನೆಯ ಘಟಿಕೋತ್ಸವವನ್ನು ಆಚರಿಸಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಉಪರಾಷ್ಟ್ರಪತಿ ಶ್ರೀ ಜಿ. ಎಸ್. ಪಾಠಕ ಅವರು ದೇಶದ ಸಧ್ಯದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಮ್ಮ ಉಪನ್ಯಾಸವನ್ನು ಆರಂಭಿಸಿ, ಈ ವಿಶ್ವವಿದ್ಯಾಲಯವು ಭಾರತೀಯ ಮಟ್ಟದಲ್ಲಿ ಎದ್ದುಕಾಣುವ ಘನತೆಯನ್ನು [ಪಡೆದಿದೆ. ಎರಡು ದಶಕಗಳಲ್ಲಿ ಅದು ಸಾಧಿಸಿದ ಪ್ರಗತಿ ಆದರ್ಶಪ್ರಾಯವಾಗಿದೆ ಎಂದು ಮನಃಪೂರ್ವಕ ನುಡಿದುದು ನಮ್ಮ ವಿಶ್ವವಿದ್ಯಾಲಯದ ಸಾಧನೆಗೆ ತೋರಿದ ಯೋಗ್ಯ ಮರ್ಯಾದೆಯಾಗಿದೆ. ತೂಕದಮಾತಿಗೆ ಪ್ರಸಿದ್ಧವಾಗಿರುವ ನಮ್ಮ ಉಪರಾಷ್ಟ್ರಪತಿಗಳ ಈ ಮಾತನ್ನು ಗಮನಿಸಿ, ಈ ವಿಶ್ವವಿದ್ಯಾಲಯವು ಇನ್ನೂ ತೂಕದ ಘನತೆಯತ್ತ ಮುನ್ನಡೆಯಲಿ ಎಂದು ' ಭಾರತಿ ' ಹಾರೈಸುತ್ತದೆ.

ಕನ್ನಡ ಅಧ್ಯಯನ ಸಂಸ್ಥೆಯ ಕಟ್ಟಡ

ಕನ್ನಡನಾಡಿನಲ್ಲಿ ' ಕನ್ನಡ ' ಕ್ಕೆ ಅಗ್ರ ಮನ್ನಣೆ ಬೇಕು. ಕನ್ನಡಿಗನ ಆಚಾರ-ವಿಚಾರಗಳು ಕನ್ನಡದಲ್ಲಿ ಅಭಿವ್ಯಕ್ತಗೊಂಡು ಕನ್ನಡ ಜಗತ್ತು, ಜಗತ್ತಿನ ದೃಷ್ಟಿಯಲ್ಲಿ ಒಡೆದು ಕಾಣಬೇಕು ಎಂಬ ಎಚ್ಚರ ಜನತೆಯಲ್ಲಿ ಜಾಗ್ರತವಾಗಿರುವ ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯಗಳು ನಾಯಕ ಪಾತ್ರ ವಹಿಸುವುದು ಅವಶ್ಯ. ಮೊದಲಿನಿಂದಲೂ ಈ ದೃಷ್ಟಿಯಿಟ್ಟುಕೊಂಡು ನಡೆದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಕನ್ನಡ ಅಧ್ಯಯನ ಸಂಸ್ಥೆಯಾಗಿ ಮಾರ್ಪಟ್ಟು ಈಗ ಒಂದು ಸ್ವತಂತ್ರ ಕಟ್ಟಡವನ್ನು ಪಡೆದುಕೊಳ್ಳುವ ಕಾರ್ಯದಲ್ಲಿ ನಿರತವಾಗಿದೆ. ಭವ್ಯವಾದ ಈ ಕಟ್ಟಡದ ನೀಲನಕಾಶ ಈಗಾಗಲೇ ಸಿದ್ಧವಾಗಿದೆ. ಸುಪ್ರಸಿದ್ಧ ಎಂಜನಿಯರರೂ ಭಾಷಾಭಿಮಾನಿಗಳೂ ಆದ ನಮ್ಮ ಕುಲಪತಿಗಳು ಈ ಕಾರ್ಯವನ್ನು ಕೈಗೂಡಿಸಿಕೊಡುವಲ್ಲಿ ತೀವ್ರ ಉತ್ಸುಕರಾಗಿದ್ದಾರೆ. ' ಕನ್ನಡ ಅಧ್ಯಯನ ಸಂಸ್ಥೆ ' ಇಟ್ಟುಕೊಂಡ ಆದರ್ಶಗಳಿಗೆ

ಆಶ್ರಯವಾದ ಈ ಕಟ್ಟಡ, ತೀವ್ರ ನಿರ್ಮಾಣಗೊಳ್ಳಲೆಂದು 'ಭಾರತಿ' ಇಚ್ಛಿಸುತ್ತದೆ.

ಸ್ವತಂತ್ರ ಬಂಗ್ಲಾದೇಶ

ಉತ್ಕಟ ದೇಶಭಕ್ತಿ, ನವಿನ ವಿಚಾರಧಾರೆಗಳಿಗೆ ಹೆಸರಾದ ಬಂಗಾಲ ಬ್ರಿಟಿಶರ ಆಳಿಕೆಯಲ್ಲಿ 'ಭಂಗ'ಗೊಂಡು ೧೯೪೭ ರಲ್ಲಿ ಪಾಕಿಸ್ತಾನಕ್ಕೆ ಅರ್ಧ ಒಡೆದುಹೋಯಿತು. ಅಂದಿನಿಂದ ಪಶ್ಚಿಮ ಪಾಕಿಸ್ತಾನದ ಕೈಸೆರೆಯಾಗಿದ್ದ ಬಂಗ್ಲಾದೇಶ ಈ ವರ್ಷ ಸ್ವಾತಂತ್ರ್ಯಕ್ಕಾಗಿ ಜೀವವನ್ನೇ ಪಣಕ್ಕಿಟ್ಟು ಹೋರಾಟ ನಡೆಸಿತು. ಇದು ಭಾರತದ ಆಂತರಿಕ ಸಮಸ್ಯೆಯಾಗಿ ಪರಿಣಮಿಸಲು ನಮ್ಮ ಜವಾನರು ರಣರಂಗಕ್ಕಿಳಿಯಬೇಕಾಯಿತು. ಗಡಿಯಲ್ಲಿ ಯೋಧರು ನಿಕರದ ಹೋರಾಟದಲ್ಲಿ ತೊಡಗಿದಾಗ ನಮ್ಮ ಕವಿಗಳು ಕನಸುಲೋಕದ ವ್ಯಕ್ತಿಗಳಾಗಿ ಉಳಿಯಲಿಲ್ಲ. ಅವರ ಯುದ್ಧದ ಬಿಸಿಗೆ ತಕ್ಕಂತೆ ಇವರ ಮಸಿ ಬಿಸಿ ಏರಿತು. ಎಲ್ಲ ಪ್ರಾಂತದ ಸಾಹಿತಿಗಳು ವಾತಾವರಣಕ್ಕೆ ತಕ್ಕ ಸಾಹಿತ್ಯವನ್ನು ನಿರ್ಮಿಸಿ ಜನರಲ್ಲಿ ಪರಿಸ್ಥಿತಿಯ ಎಚ್ಚರವನ್ನುಂಟುಮಾಡಿದರು. ಯೋಧರನ್ನು ಕುರಿತು ವೀರಗೀತೆಗಳನ್ನು, ಬಂಗ್ಲಾದೇಶವನ್ನು ಕುರಿತು ದೇಶಪ್ರೇಮ ಗೀತೆಗಳನ್ನು ರಚಿಸಿದರು. ಜಯಲಕ್ಷ್ಮಿಯನ್ನು ಗೆದ್ದು ತಂದ ನಮ್ಮ ಯೋಧರಿಗೆ, ಈ ಸಂದರ್ಭದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿದ ಎಲ್ಲ ಪ್ರಾಂತಗಳ ಸಾಹಿತಿಗಳಿಗೆ 'ಭಾರತಿ' ಅಭಿವಂದನೆಗಳನ್ನು ಸಲ್ಲಿಸುತ್ತದೆ.

ಲೇಖಕರ ಪರಿಚಯ

೧. **ಶ್ರೀ ಚೆನ್ನಣ್ಣ ವಾಲೀಕಾರ :**

ಕನ್ನಡ ಅಧ್ಯಾಪಕರು, ಎಲ್. ವ್ಹಿ. ಡಿ. ಕಾಲೇಜ್, ರಾಯಚೂರು.

೨. **ಶ್ರೀ ಪಾಟೀಲ ಪುಟ್ಟಪ್ಪ :**

ಸಂಪಾದಕರು, ಪ್ರಪಂಚ ಮತ್ತು ವಿಶ್ವವಾಣಿ, ಹುಬ್ಬಳ್ಳಿ.

೩. **ಶ್ರೀ ಆರ್. ರಾಚಪ್ಪ,** ಎಂ. ಎ.

ಕನ್ನಡ ವಿಭಾಗದ ಮುಖ್ಯಸ್ಥರು, ಶ್ರೀ ರೇಣುಕಾಚಾರ್ಯ ಕಾಲೇಜು, ಬೆಂಗಳೂರು-೯

೪. **ಶ್ರೀ ಎಸ್. ಆರ್. ಶಾಸ್ತ್ರಿ :**

ಸಹಾಯಕ ಸಂಶೋಧಕರು, ಮಾನವ ಸಮಾಜಶಾಸ್ತ್ರವಿಭಾಗ, ಕ. ವಿ. ವಿ., ಧಾರವಾಡ.

೫. **“ಶ್ರೀಚೆನ್ನ”** (ಶ್ರೀ ಸಿ. ಪಿ. ಹೇಮಗಿರಿಮಠ):

ಕನ್ನಡ ಅಧ್ಯಾಪಕರು, ಶ್ರೀ ಮಹಾಂತಸ್ವಾಮಿ ಆರ್ಟ್ಸ ಮತ್ತು ಸೈನ್ಸ್ ಕಾಲೇಜ, ಹಂಸಭಾವಿ.

೬. **ಶ್ರೀ ಪ್ರಭುಸ್ವಾಮಿಮಠ :**

ಕನ್ನಡ ಅಧ್ಯಾಪಕರು, ಲಾಲ್ ಬಹಾದ್ದೂರ್ ಕಾಲೇಜು, ಸಾಗರ.

೭. **ಶ್ರೀ ಎನ್. ಪ್ರಭುಸ್ವಾಮಿ:**

ಅರ್ಥಶಾಸ್ತ್ರ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು-೫

೮. **ಶ್ರೀ ಲಿಂಗಣ್ಣ ಸತ್ಯಂಪೇಟೆ :**

ಸುರಪುರ, ಜಿ. ಗುಲ್ಬರ್ಗಾ

೯. **ಡಾ. ಎಂ. ಬಿ. ಕೊಟ್ರಶೆಟ್ಟಿ. :**

ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ. ಕ. ವಿ. ವಿ. ಧಾರವಾಡ.

೧೦. **ಡಾ. ಎಸ್. ಎಲ್. ಶಾಂತಕುಮಾರಿ :**

ಸಹಾಯಕ ಸಂಶೋಧಕರು, ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ., ಧಾರವಾಡ.

೧೧. ಶ್ರೀ ಕಣವಿ ಮಹದೇವ :

ಕನ್ನಡ ಅಧ್ಯಾಪಕರು, ಆರ್ಟ್ಸ್ ಮತ್ತು ಸೈನ್ಸ ಕಾಲೇಜ, ಗುಳೇದಗುಡ್ಡ

೧೨. ಶ್ರೀಮತಿ ಉಮಾದೇವಿ :

ಕನ್ನಡ ಅಧ್ಯಯನ ಸಂಸ್ಥೆ, ಕ. ವಿ. ವಿ., ಧಾರವಾಡ.

೧೩. ಶ್ರೀ ಗು. ಅ. ಶಿವಲಿಂಗಯ್ಯ :

ಕನ್ನಡ ಉಪಾಧ್ಯಾಯರು, ಮರಿಮಲ್ಲಪ್ಪ ಹೈಸ್ಕೂಲ್, ಮೈಸೂರು.

೧೪. ಶ್ರೀ ಎಸ್. ವ್ಹಿ. ಪಾಟೀಲ :

ಉಪ ಸಂಪಾದಕರು, ಕರ್ಮವೀರ, ಹುಬ್ಬಳ್ಳಿ.

೧೫. ಪ್ರೊ. ಎಂ. ವ್ಹಿ. ಜಂಬುನಾಥನ್ :

ಸರಸ್ವತೀಪುರಂ, ಮೈಸೂರು-೯.

೧೬. ಡಾ. ಎಂ. ಎಸ್. ನಾಗರಾಜರಾವ್ :

ಕನ್ನಡ ಸಂಶೋಧನ ಸಂಸ್ಥೆ, ಕ. ವಿ. ವಿ., ಧಾರವಾಡ.

೧೭. ಶ್ರೀ ಇಟಗಿ ರಾಘವೇಂದ್ರ :

ಆಕಾಶವಾಣಿ, ಹೈದರಾಬಾದ್.

೧೮. ಶ್ರೀ ಎಸ್. ಶಿವಣ್ಣ :

ಸಹಾಯಕ ಸಂಶೋಧಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯. ಶ್ರೀ ಬಿ. ಕೆ. ತಿಮ್ಮಪ್ಪ :

ಕನ್ನಡ ಅಧ್ಯಾಪಕರು, ಸರಕಾರಿ ಕಾಲೇಜು, ಕಾಸರಗೋಡು.

೨೦. ಡಾ. ಎಂ. ಎಂ. ಕಲಬುರ್ಗಿ :

ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಕ. ವಿ. ವಿ., ಧಾರವಾಡ

೨೧. ಶ್ರೀ ಎಸ್. ಎಸ್. ಭೂಸನೂರಮಠ :

ಕನ್ನಡ ಪಠ್ಯಪುಸ್ತಕ, ನಿರ್ದೇಶನಾಲಯ, ಕ. ವಿ. ವಿ., ಧಾರವಾಡ.

೨೨. ಶ್ರೀ ಜ್ಯೋತಿ ಹೊಸೂರ :

ಕನ್ನಡ ಅಧ್ಯಾಪಕರು, ವಾಣಿಜ್ಯ ಮಹಾವಿದ್ಯಾಲಯ, ಶೇಡಬಾಳ.

ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟನೆಗಳು

I. Text Books (ಪಠ್ಯಪುಸ್ತಕಗಳು)

		PRICE Rs. Ps.
1	Selections from Mahābhārata & Rāmāyaṇa (Sanskrit)	3·00
2	Sanskrit Selections for P. U. C. (Arts & Science)	1·50
3	संस्कृत सौदामिनी	2·00
4	ಕಾವ್ಯಮಂಜರಿ : ಭಾಗ ೧, ಸಂಪುಟ ೧	1·00
5	ಕಾವ್ಯಮಂಜರಿ : ಭಾಗ ೧, ಸಂಪುಟ ೨	1·00
6	ಕಾವ್ಯಮಂಜರಿ : ಭಾಗ ೨, ಸಂಪುಟ ೧	1.00
7	ಕಾವ್ಯಮಂಜರಿ : ಭಾಗ ೨, ಸಂಪುಟ ೨	1·00
8	ಕಾವ್ಯಮಂಜರಿ : ಭಾಗ ೧, ಸಂಪುಟ ೩	2·00
9	ಕಾವ್ಯವಿಲಾಸ	1·50
10	ಕಾವ್ಯಕಂಜ	1·50
11	ಗದ್ಯವಿಲಾಸ	2·50
12	ಗದ್ಯಮಂಜರಿ	2·00

II. Research Publications Series (ಸಂಶೋಧನ ಗ್ರಂಥಮಾಲೆ)

1	Pleistocene Studies in the Malaprabha Basin (Joint Publication of Karnatak University, Dharwar and Deccan College Research Institute, Poona)	*—R. V. Joshi*	15·00
2	The Karnatak Theatre *—H. K. Ranganath*	Ord. binding Half calico	3·00 5·00
3	Some Problems in Jaina Psychology *—T. G. Kalghatgi*	Full cal. Half calico	7·00 6·00
4	The Concept of Comedy	*—G. S. Amur*	7·00 $ 2 or Sh. 13
5	Local Self-Government in Mediaeval Karnatak *—G. S. Dikshit*		7·00 $ 2 or Sh. 13
6	Basic Syllabus in Practice	*—N. R. Hiremath*	10·00 $ 3 or £. 1
7	The Later Phase in the Development of W. B. Yeats	*—S. R. Mokashi*	10·00 $ 3 or £. 1
8	Some Studies in Boolean Algebra *—E. Sampathkumarachar*		7·00 $ 2 or Sh. 14

9 A History of South Kanara —*K. V. Ramesh* 30.00

10 A Critical Study of the Hindu Astronomy in the Light and Language of the Modern 12·00
—*D. A. Somayaji* $ 4 or Sh. 25

11 The Havyaka Dialect of North Kanara 12·00
—*K. G. Shastri* $ 4 or Sh. 25

12 Keladi Polity —*K. N. Chitnis* (In Press)

13 ನೇಮಿಚಂದ್ರ —ಬಿ. ಎಸ್. ಕುಲಕರ್ಣಿ 12·00

14 ಕನ್ನಡ ಜಾನಪದ ಗೀತಗಳು —ಬಿ. ಎಸ್. ಗದ್ದಗಿಮಠ 10·00

15 ಕನ್ನಡ ಸಾಹಿತ್ಯದಲ್ಲಿ ಹಾಸ್ಯ —ಎಂ. ಎಸ್. ಸುಂಕಾಪುರ 8·00

III. Extension Lectures Publications Series
(ವಿಶೇಷ ಉಪನ್ಯಾಸ ಗ್ರಂಥಮಾಲೆ)

1 Introduction to Karnatak Mysticism 1.50
—*R. D. Ranade* Cents 50 or Sh.4

2 Hindu Code Bill —*P. B. Gajendragadkar* 2·00

3 Karnataka's Trans-Oceanic Contacts 3.00
—*B. A. Saletore*

4 Kālidāsa (2nd Edn.) —*R. D. Karmarkar* (In Press)

5 Bhavabhūti —*R. D. Karmarkar* 3.00
$ 1 or Sh. 7

6 Bāṇa —*R. D. Karmarkar* 3·00

7 Rockets, Satellites and Space Travel 2·00
—*G. B. Pant*

8 Purandara and Haridāsa Movement 6.00
—*M. V. Krishna Rao* $ 2 or Sh. 13

9 Śaṅkara's Advaita —*R. D. Karmarkar* 3·00

10 ಮಹಾಕವಿ ಷಡಕ್ಷರದೇವ —ಜಿ. ಶಿವಮೂರ್ತಿಶಾಸ್ತ್ರೀ } 3.00 / 4·00

11 ಸಾಹಿತ್ಯ : ಸಂಪ್ರದಾಯ ಮತ್ತು ಹೊಸ ಮಾರ್ಗ
— ವಿ. ಸೀತಾರಾಮಯ್ಯ 4·00

12 ಕನ್ನಡ ಸಾಹಿತ್ಯದಲ್ಲಿ ನಾಲ್ಕು ನಾಯಕ ರತ್ನಗಳು 3·00
—ದ. ರಾ. ಬೇಂದ್ರೆ

13 ವಿಚಾರ ಸಾಹಿತ್ಯ ನಿರ್ಮಾಣ —ಕೆ. ಎಸ್. ಕಾರಂತ 2·00

14 ಕನ್ನಡ ರಂಗಭೂಮಿಯ ಪುರೋಭಿವೃದ್ಧಿ
—ಆದ್ಯ ರಂಗಾಚಾರ್ಯ 2·50

15 ಸಾಹಿತ್ಯ ವಿಮರ್ಶೆಯ ಮಾರ್ಗದರ್ಶಕ ಸೂತ್ರಗಳು
—ರಂ. ಶ್ರೀ. ಮುಗಳಿ 3·00

IV. Economics Series

1 A Survey of Handicrafts in Eight Districts of the Mysore State —*S. S. Mensinkai* 5·00

2 Community Development and Employment —*D. M. Nanjundappa* 3·00

3 Research Reporting in Social Sciences —*M. H. Gopal* 2·00

4 Economy of Scarcity Areas —*T. K. Meti* 4·(0
$ 1 or Sh. 7

5 Foreign Trade and Economic Development —*V. L. D'souza* 1·50

6 Food and Freedom —*V. M. Dandekar* 2·50

7 Local Taxation in Urban Areas —*D. M. Nanjundappa & M. V. Nadkarni* 3·00

8 Economic Development in India —*R. Balakrishna* 5·00

9 Economic Development of the Under-developed Region in Italy —*T. K. Meti* 10·00
$ 5 or Sh. 30

10 Rural Industrialisation: An Integrated Approach —*V. S. Vyas* 3·00
$ 1 or Sh. 7

11 Economic Development and Social Change in Mysore State —*Ed. T. K. Meti* 1·005

12 Resale Price Maintenance in a Developing Economy —*D. M. Nanjundappa* Cal 5·00
$ 3·50 or Sh. 10
Ord. 3·50
$ 1 or Sh. 7

V. ಕನ್ನಡ ಕಾವ್ಯಮಾಲೆ (Kannada Classical Series)

1 ರಾಜಶೇಖರವಿಳಾಸ ಸಂಗ್ರಹ 2·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

2 ಸೋಮನಾಥ ಚಾರಿತ್ರ 5·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

3 ರಾಜಶೇಖರವಿಳಾಸಂ 10·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

4 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೧ 6·00
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ

5 ತ್ರಿಷಷ್ಟಿಪುರಾತನಚಾರಿತ್ರ ಸಂ. : ಆರ್. ಸಿ. ಹಿರೇಮಠ 12·00

6 ಬಸವರಾಜವಿಜಯಂ ಸಂ. : ಆರ್. ಸಿ. ಹಿರೇಮಠ 20·0

7 ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರ—ಭಾಗ ೨
ಸಂ. : ಆರ್. ಸಿ. ಹಿರೇಮಠ, ಎಂ. ಎಸ್. ಸುಂಕಾಪುರ 8·00

8 ಹರಿಹರದೇವಕೃತ ಪುರಾತನರ ಆರು ರಗಳೆಗಳು 3·50
ಸಂ. : ಆರ್. ಸಿ. ಹಿರೇಮಠ

9 ನೇಮಿನಾಥ ಪುರಾಣಂ ಸಂ. : ಬಿ. ಎಸ್. ಕುಲಕರ್ಣಿ 6·00

10 ಅಕ್ರೂರಚರಿತ್ರೆ ಸಂ. : ಬೆಟಗೇರಿ ಕೃಷ್ಣಶರ್ಮಾ (ಕೆಲಿಕೋ) 6·00
(ಸಾದಾ) 4·00

11 ಜೀವಂಧರಚರಿತೆ ಸಂ. : ಬಿ. ಎಸ್. ಕುಲಕರ್ಣಿ 7·00

12 ಮಹಾಭಾರತ : ಪೌಲೋಮ-ಆಸ್ತೀಕ ಪರ್ವಗಳು 8·00
—ಕೆ. ಜಿ. ಶಾಸ್ತ್ರಿ

13 ಹರಿಹರದೇವಕೃತ ಪುರಾತನರ ರಗಳೆಗಳು (ಅಚ್ಚಿನಲ್ಲಿ)
ಸಂ : ಆರ್. ಸಿ. ಹಿರೇಮಠ

14 ಮೋಹನ ತರಂಗಿಣಿ ಸಂ : ಆರ್. ಸಿ. ಹಿರೇಮಠ ,,

15 ಮಲ್ಲಿನಾಥ ಪುರಾಣ ಸಂ : ಬಿ. ಎಸ್. ಕುಲಕರ್ಣಿ ,,

16 ಲೋಭದತ್ತ ಚರಿತೆ ಸಂ : ಬಿ. ಎಸ್. ಕುಲಕರ್ಣಿ ,,

17 ಐರಾವತ ನೋಂಪಿ ಸಂ : ಕೆ. ಜಿ. ಶಾಸ್ತ್ರಿ ,,

VI. ಉಪನ್ಯಾಸಗ್ರಂಥಮಾಲೆ
(Kannada Extension Lectures Booklets Series)

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

. ಭವಭೂತಿ — ಕೆ. ಕೃಷ್ಣಮೂರ್ತಿ
2 ಮನೋರೋಗಗಳು — ಎನ್. ಆರ್. ಕುಲಕರ್ಣಿ
3. ಪ್ರಥಮ ಪಂ.ವಾ. ಯೋಜನೆ ಹಾಗೂ ಒಕ್ಕಲುತನ — ಎನ್.ಪಿ. ಪಾಟೀಲ
4. ಗಾದೆಗಳು — ಎ. ಕೆ. ರಾಮಾನುಜನ್
5. ಭಾರತದಲ್ಲಿ ಜಾತಿಪದ್ಧತಿ — ವ್ಹಿ. ಎಸ್. ಡಿಸೋಜಾ
6 ಕೀಟಕ ಪಿಡುಗುಗಳ ಸಮೀಕ್ಷಣೆ — ಎಸ್. ಎಸ್. ಕಟಗಿಹಳ್ಳಿಮಠ
7. ರಾಜಕೀಯ ಪಕ್ಷಗಳು — ಎನ್. ರಾಜಗೋಪಾಲರಾವ್
8. ಸ್ವಾದಿ ಅರಸುಮನೆತನ — ಎಸ್. ಎಸ್. ಮಾಳವಾಡ
9. ಮಕ್ಕಳ ಶಿಕ್ಷಣ — ಡಿ. ಎಸ್. ಕರ್ಕಿ
10. ಮೂಢ ನಂಬಿಕೆಗಳು — ಎಲ್. ಆರ್. ಹೆಗಡೆ
11. ಸಂಸ್ಕೃತ ಕವಯಿತ್ರಿಯರು — ಕೆ. ಟಿ. ಪಾಂಡುರಂಗಿ
12. ನಿತ್ಯಜೀವನದಲ್ಲಿ ರಸಾಯನಶಾಸ್ತ್ರ — ಬಿ. ವಿರೂಪಾಕ್ಷಪ್ಪ
13. ಸಾರ್ವಜನಿಕ ಆಡಳಿತ — ಜಿ. ಎಸ್. ಹಾಲಪ್ಪ

14. ವಿಚಾರವಾದ — ಗೌರೀಶ ಕಾಯ್ಕಿಣಿ
15. ಮಹಾಕವಿ ಮಿಲ್ಟನ್ — ಜಿ. ಎಸ್. ಆಮೂರ
16. ಭಾರತದಲ್ಲಿ ಗ್ರಂಥಾಲಯ ಪ್ರಸಾರ — ಕೆ. ಎಸ್. ದೇಶಪಾಂಡೆ
17. ಭಾರತೀಯ ನಾಗರಿಕತೆಗೆ ಮನುವಿನ ಕೊಡುಗೆ — ಬಿ. ಎಚ್. ಶ್ರೀಧರ
18. ಜನಸಂಖ್ಯೆ ಹಾಗೂ ಆಹಾರ ಸಮಸ್ಯೆ — ಪಿ. ಎಂ. ಉಮಾಕಾಂತಶಾಸ್ತ್ರಿ
19. ಸೌರವ್ಯೂಹ — ಸಿ. ಎನ್. ಶ್ರೀನಿವಾಸ ಅಯ್ಯಂಗಾರ
20. ಪ್ರಾಚೀನ ಭಾರತದಲ್ಲಿ ಸಾಮಾಜಿಕ ಜನಜೀವನ — ಸಿ. ವಿ. ರಂಗಸ್ವಾಮಿ
21. ಸಮಾಜ ಕಾರ್ಯ — ಎಚ್. ಎಂ. ಮರುಳಸಿದ್ಧಯ್ಯ
22. ಸಂಸತ್ತಿನ ಕಾರ್ಯಪದ್ಧತಿ — ಎ. ಎಂ. ರಾಜಶೇಖರಯ್ಯ
23. ಕನ್ನಡನಾಡಿನ ಶಾಸನಗಳು — ಪಿ. ಬಿ. ದೇಸಾಯಿ
24. ಕವೀಂದ್ರ ರವೀಂದ್ರರು — ಎಸ್. ಎಸ್. ಮಾಳವಾಡ
25. ನಾಗಾನಂದ — ಎಚ್. ಪಿ. ಮಲ್ಲೇದೇವರು
26. ಜೀವನದಲ್ಲಿ ನಗೆ — ಎಂ. ಎಸ್. ಸುಂಕಾಪುರ
27. ಬಸವಣ್ಣನವರ ಯೋಜನೆಗಳು — ಬಿ. ಸಿ. ಜವಳಿ
28. ೧೮೫೭ರ ಕ್ರಾಂತಿ — ಸಿ. ವೀರಬಸಣ್ಣ
29. ಕನ್ನಡ ಕಥಾಸೃಷ್ಟಿ — ಬಿ. ಬಿ. ಮಹೀಶವಾಡಿ
30. ಸಂಸ್ಕೃತ ಸಾಹಿತ್ಯದಲ್ಲಿ ಶೃಂಗಾರರಸ — ಕೆ. ಕೃಷ್ಣಮೂರ್ತಿ
31. ನೀರಾವರಿ ಬೇಸಾಯ — ಎಸ್. ಎ. ಹೊಸಮನಿ
32. ಸಾರ್ವಜನಿಕ ಅಭಿಪ್ರಾಯ — ಎಸ್. ರಾಜಗೋಪಾಲರಾವ್
33. ಕನ್ನಡ ಕಾವ್ಯಗಳಲ್ಲಿ ಕಿರಾತಾರ್ಜುನ ಪ್ರಸಂಗ — ದೇವೇಂದ್ರಕುಮಾರ ಹಕಾರಿ
34. ಕನ್ನಡಕ್ಕೆ ಪುರಂದರದಾಸರು ನೀಡಿದ ಕೊಡುಗೆ — ಜಿ. ಡಿ. ನಾಡಕರ್ಣಿ
35. ಫ್ಯಾಶನ್ನುಗಳು — ಕೆ. ಡಿ. ಶಂಗೋಡ
36. ಮಹಾಕವಿ ರಾಘವಾಂಕನ ಪಾತ್ರಗಳಲ್ಲಿ ತತ್ವನಿಷ್ಠೆ — ಬಿ. ವ್ಹಿ. ಮಲ್ಲಾಪುರ
37. ಅಭಿವೃದ್ಧಿಯೋಜನೆಗಳಲ್ಲಿ ಸಹಕಾರದ ಪಾತ್ರ — ಎಸ್. ಜಿ. ಕರಭಂಟನಾಳ
38. ಕನ್ನಡ ಜೈನಪುರಾಣಗಳು — ಎಸ್. ಎನ್. ನಾಯಕ
39. ಕನ್ನಡ ನಾಟ್ಯಸೃಷ್ಟಿ — ಎಚ್. ಜಿ. ಲೋಕೂರ
40. ಹರಿಹರನು ಚಿತ್ರಿಸಿದ ಶಿವಶರಣೆಯರು — ಬಿ. ಬಿ. ಹೆಂಡಿ
41. ನೀವು ಬಯಸುವ ಮಗು ಗಂಡೋ? ಹೆಣ್ಣೋ? — ಕೆ. ಆರ್. ರಾಮಸ್ವಾಮಿ
42. ಅಂಡಯ್ಯ — ಬಿ. ಎಸ್. ಕುಲಕರ್ಣಿ
43. ಬೆಳವಲನಾಡಿನ ಬೆಳೆಗಳು — ಎಸ್. ಎ. ಹೊಸಮನಿ
44. ಜಾನಪದ ಕಥೆಗಳು — ಎಲ್. ಆರ್. ಹೆಗಡೆ
45. ಸುಧಾರಿಸಿದ ಬೇಸಾಯ — ಎ. ಸಿ. ಕಲ್ಯಾಣಿಮಠ

46. ಕನ್ನಡನಾಡಿನ ಐತಿಹಾಸಿಕ ಮಹಾಪುರುಷರು — ಬಿ. ಆರ್. ಗೋಪಾಲ್
47. ಗ್ರಂಥಾಲಯದ ಅಂತರಂಗ — ಎಸ್. ಆರ್. ಗುಂಜಾಳ
48. ಸ್ತ್ರೀ ಮತ್ತು ಶಿಕ್ಷಣ — ವನಮಾಲಾ ಆಚಾರ್
49. ಜಾಗತಿಕ ಸರಕಾರ — ಸಿ. ವೀರಬಸಣ್ಣ
50. ಸಮುದಾಯ ಸಂಘಟನೆ — ಎಚ್. ಎಂ. ಮರುಳಸಿದ್ದಯ್ಯ
51. ಅಶೋಕನ ಧರ್ಮಶಾಸನಗಳು — ಶ್ರೀನಿವಾಸ ರಿತ್ತಿ
52. ಪ್ರಾಚೀನ ಭಾರತದ ರಾಜ್ಯಪದ್ಧತಿ — ಸಿ. ವ್ಹಿ. ರಂಗಸ್ವಾಮಿ
53. ಅಕ್ಕಮಹಾದೇವಿ ಮತ್ತು ಮೀರಾಬಾಯಿ — ಎಸ್. ಎಸ್. ಕಬ್ಬಿನ
54. ಕನ್ನಡ ಕಾವ್ಯದಲ್ಲಿ ವೀರರಸ ನಿರೂಪಣೆ — ಬಿ. ಬಿ. ಮಹೀಶವಾಡಿ
55. ಹರಿಹರ ಮಹಾಕವಿಯ ಕೆಲವು ಮಹೋನ್ನತ ವಿಚಾರಗಳು—ಬಿ.ಸಿ. ಜವಳಿ
56. ಭಾರತ ರಾಜ್ಯಘಟನೆ — ಎಂ. ಎಸ್. ಪಾಟೀಲ
57. ಪಂಚಾಯತಿ ರಾಜ್ಯ — ಎಸ್. ಜಿ. ಕರಭಂಟನಾಳ ಮತ್ತು ಕೆ. ಡಿ. ಬಸವ
58. ವಿಷಮಜ್ವರ — ಪಿ. ಎಸ್. ಶಂಕರ
59. ಪುಸ್ತಕ ಭಾಂಡಾರ ಕಾಯದೆ — ಜಿ. ಎಂ. ಪಾಟೀಲ
60. ಸರ್ ಐಸಾಕ್ ನ್ಯೂಟನ್ — ಆರ್. ವ್ಹಿ. ಅಬ್ಬಿಗೇರಿ
61. ಗ್ರಾಮಾಭ್ಯುದಯದ ಯೋಜನಾಂಗಗಳು — ಟಿ. ಕೆ. ಮೇಟಿ
62. ಹರಿಜನರ ಸಮಸ್ಯೆಗಳು ಹಾಗು ಅವುಗಳ ಪರಿಹಾರ
— ಎನ್. ಕೆ. ಕಡೆತೋಟದ
63. ರಾಸಾಯನಿಕ ಕಿಣ್ವಗಳು — ಎಂ. ಎಸ್. ಎಸ್. ರಾವ್
64. ಪ್ರಜಾಪ್ರಭುತ್ವದ ಮೂಲತತ್ವಗಳು — ಕೆ. ಬಿ. ಬಕ್ಕಪ್ಪ
65. ಹೃದಯಾಘಾತ — ಪಿ. ಎಸ್. ಶಂಕರ್
66. ಆಭರಣಗಳ ಬಗೆಗೆ ಸಾಮಾಜಿಕ ದೃಷ್ಟಿಕೋನ — ಡಿ. ಎ. ಚಿಕ್ಕಿ
67. ಶ್ರೀರಾಮಾಯಣದರ್ಶನದಲ್ಲಿ ಕುವೆಂಪು ಸೃಜಿಸಿದ ಮೂರು ಪಾತ್ರಗಳು
— ಎಂ. ಜಿ. ಬಿರಾದಾರ
68. ಯೋಜನೆಗಳೇಕೆ ಬೇಕು ? — ಎಸ್. ಎಸ್. ಯಮ್ಮಿ
69. ಸಗರನಾಡಿನ ಶಿವಶರಣರು — ವ್ಹಿ. ಶಿವಾನಂದ
70. ವಿಜ್ಞಾನದ ದೃಷ್ಟಿಯಲ್ಲಿ ಸೃಷ್ಟಿ — ಆರ್. ಎಸ್. ಭೂಸನೂರಮಠ
71. ವಿಜಯನಗರದ ನಿರ್ಣಾಯಕ ಯುದ್ಧ — ಎಸ್. ಬಿ. ಕೋಡದ
72. ಬಸವಣ್ಣನವರನ್ನು ಕುರಿತ ಶಾಸನಗಳು — ಎಂ. ಎಂ. ಕಲಬುರ್ಗಿ
73. ಆಧುನಿಕ ಭಾಷಾವಿಜ್ಞಾನ — ಜಿ. ಎಸ್. ಕುಳ್ಳಿ
74. ಪುರಾಣ ಜಿಜ್ಞಾಸೆ — ಎಲ್. ಆರ್. ಹೆಗಡೆ
75. ಭಾರತದಲ್ಲಿ ಶೈಕ್ಷಣಿಕ ಪ್ರಯೋಗ — ವ್ಹಿ. ಎಸ್. ಕುಲಕರ್ಣಿ

76. ಅಧಿಕ ಉತ್ಪಾದನೆಗಾಗಿ ಮಿಶ್ರತಳಿ ಬೆಳೆಗಳು — ಎ. ಸಿ. ಕಲ್ಯಾಣಿಮಠ
77. ಕನ್ನಡ ನುಡಿಯ ಬೆಳವಣಿಗೆ — ಎಚ್. ಜಿ. ಲೋಕೂರ
78. ಹರಿಹರನ ಗಿರಿಜಾಕಲ್ಯಾಣ — ಬಿ. ವ್ಹಿ. ಶಿರೂರ
79. ಹೊಟ್ಟೆಯ ಹುಣ್ಣು — ಪಿ. ಎಸ್. ಶಂಕರ
80. ಸಂಯೋಜಕ ಶಕ್ತಿ — ಬಿ. ಜಿ. ಜ್ಯೋತಿ
81. ಸಂಸದೀಯ ಸರಕಾರವು ಭಾರತಕ್ಕೆ ಒಪ್ಪುವುದೇ? — ವಸಂತ ಪಾಟೀಲ
82. ನಮ್ಮ ರೈತರೇಕೆ ಹಿಂದುಳಿದಿದ್ದಾರೆ? — ಎಂ. ಸಿ. ಕೊಡ್ಲಿ
83. ನಗೆಗಾರ ನಯಸೇನ — ಎಂ. ಎಸ್. ಸುಂಕಾಪುರ
84. ಶೂನ್ಯಸಂಪಾದನೆ — ವ್ಹಿ. ಎಸ್. ಕಂಬಿ
85. ಮಹಮೂದ ಗವಾನ — ಎಲ್. ಆರ್. ಕುಲಕರ್ಣಿ
86. ಕೆಳದಿಯ ನಾಯಕರು — ಜಿ. ಎಸ್. ದೀಕ್ಷಿತ
87. ಮುಳುಗುಂದನಾಡು — ಎಸ್. ಎಚ್. ರಿತ್ತಿ
88. ಶ್ವಾಸಕೋಶ ಕ್ಷಯ—ಪಿ. ಎಸ್. ಶಂಕರ
89. ಕರ್ನಾಟಕದಲ್ಲಿ ಗ್ರಂಥಾಲಯಗಳು — ಎಸ್. ಆರ್. ಗುಂಜಾಳ
90. ಮಿರ್ಜಾ ಘಾಲಿಬ್ — ಅಬ್ದುಲ್ ಮಜೀದಖಾನ್
91. ಕಬೀರದಾಸ — ಬಿ. ಎಸ್. ಸಿರೋಳ
92. ಬ್ಯಾಂಕುಗಳ ರಾಷ್ಟ್ರೀಕರಣ — ಎಸ್. ಜಿ. ಕರಭಂಟನಾಳ
93. ಪ್ರಾಚೀನ ಭಾರತದಲ್ಲಿ ಶ್ರಮಜೀವಿಗಳು — ಎಸ್. ಜಿ. ಘಟಪಣದಿ
94. ಹಿಂದುಸ್ಥಾನಿ ಸಂಗೀತ ಪದ್ಧತಿಯ ರೂಪರೇಷೆಗಳು
— ಎ. ಯು. ಪಾಟೀಲ
95. ಶ್ರೀ ಅರವಿಂದ ಸ್ಮರಣೆ — ಸ. ಸ. ಮಾಳವಾಡ
96. ಮಾನವಜೀವನ ಹಾಗೂ ಭೌಗೋಲಿಕ ಪರಿಸರ
— ಡಿ. ಜಿ. ಕುಲಕರ್ಣಿ
97. ಲಕ್ಕಣದಂಡೇಶ — ವ್ಹಿ. ಶಿವಾನಂದ
98. ವ್ಯಾವಹಾರಿಕ ಮಾನವಶಾಸ್ತ್ರ — ಕೆ. ಜಿ. ಗುರುಮೂರ್ತಿ
99. ಪ್ರಾಚೀನ ಗ್ರೀಕರ ಅಮರ ಕೊಡುಗೆಗಳು — ಡಿ. ಟಿ. ಜೋಶಿ
100. ಭರ್ತೃಹರಿಯ ನೀತಿಶತಕ — ಡಿ. ಎನ್. ಶಾನಭಾಗ
101. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು
— ಜಿ. ಎಸ್. ಹಾಲಪ್ಪ
102. ಪೃಥ್ವಿ ಹಾಗೂ ಜೀವಿಗಳ ರೂಪಾಂತರ—ಎಂ. ಎಸ್. ಎಸ್. ರಾವ್
103. ಪ್ರಜಾಪ್ರಭುತ್ವದಲ್ಲಿ ಕಾಯಿದೆಯ ಸ್ಥಾನ — ಸಿ. ಕೆ. ಎನ್. ರಾಜ

104. ಪೇಟಿ ಮತ್ತು ಜಾಹೀರಾತುಗಳು — ಟಿ. ಎಂ. ಪಂಡಿತ
105. ಆಯುರ್ವೇದಶಾಸ್ತ್ರ — ಧನ್ಯಕುಮಾರ ಇಜಾರಿ
106. ಮೈಲಾರದೇವರು — ಶ್ರೀನಿವಾಸ ರಿತ್ತಿ
107. ಭಗವದ್ಗೀತೆ — ಎಲ್. ಸಿ. ಪಾಟೀಲ
108. ಭೂಸಂರಕ್ಷಣೆ ಮತ್ತು ಒಣ ಬೇಸಾಯ — ಎಂ. ಎಂ. ಹೊಸಮನಿ
109. ಜನಪದ ಕಾವ್ಯದಲ್ಲಿ ಜೀವನಧರ್ಮ — ಪಿ. ವ್ಹಿ. ಮಲ್ಲಾಪುರ
110. ಆಧುನಿಕ ಕನ್ನಡ-ಹಿಂದೀ ಕಾವ್ಯ — ಸಿದ್ಧಲಿಂಗ ಪಟ್ಟಣಶೆಟ್ಟಿ
111. ಪ್ರಾಚೀನ ಕರ್ನಾಟಕದ ಶಿಕ್ಷಣಕ್ರಮ — ಜಿ. ಎಸ್. ದೀಕ್ಷಿತ
112. ತಮಿಳು ಶಿವಭಕ್ತೆ ಕಾರಿಕಾಲಮ್ಮೆ — ಎಂ. ಎಸ್. ಲಕ್ಮೆ
113. ಜಾನಪದ ವೀರಗೀತೆಗಳು — ಬಿ. ಬಿ. ಮಹೀಶವಾಡಿ
114. ಕಸದಿಂದ ರಸೋತ್ಪತ್ತಿ — ಸಂಜೀವರಾವ ಕಲ್ಲಾಪುರ
115. ವಚನಕಾರ ದೇವರ ದಾಸಿಮಯ್ಯ — ಎಸ್. ಎಸ್. ಬಾಣದ
116. ಭಾರತದ ಪ್ರಾಚೀನ ನಾಣ್ಯಗಳು — ಎ. ಎಂ. ಅಣ್ಣಿಗೇರಿ
117. ಗಳಗನಾಥರ ಕಾದಂಬರಿಗಳು — ಕೃಷ್ಣಮೂರ್ತಿ ಕಿತ್ತೂರ
118. ಯೋಜನೆಗಳು ಹಾಗೂ ಗ್ರಾಮೋದ್ಯೋಗಗಳು — ವ್ಹಿ.ಜಿ.ಅಂಗಡಿ
119. ಮಾನವವಿಜ್ಞಾನ ಹಾಗು ಆಧುನಿಕ ಭಾರತ — ಎಲ್. ಎಸ್. ಜನಾಪುರ
120. ಹಳ್ಳಿಗರೇಳ್ಗೆ ಸಾಧಿಸುವ ಬಗೆ — ಬಿ. ಆರ್. ಪಾಟೀಲ
121. ಸಾಮಾಜಿಕ ಭದ್ರತೆ — ಎಚ್. ವಿ. ನಾಗೇಶ
122. ಸಾಮಾಜಿಕ ಸಮಸ್ಯೆಗಳು—ಕೆ. ಜಿ. ಜೋಶಿ
123. ಕರ್ನಾಟಕದಲ್ಲಿ ನವಶಿಲಾಯುಗ—ಬಾ. ರಾ. ಗೋಪಾಲ್
124. ಜೀವಾವಶೇಷಗಳು—ಎಂ. ಎಸ್. ಮನ್ನಿಕೇರಿ
125. ವಿಜಯನಗರ ಕಾಲದ ಧಾರ್ಮಿಕ ಜೀವನ—ಶ್ರೀ ಸದ್ಯೋಜಾತ ಸ್ವಾಮೀಜಿ
126. ಡಾ. ಖೊರಾನಾ ಅವರ ಸಂಶೋಧನೆಗಳು—ಎಚ್. ಕೆ. ಮಲ್ಲಿಕಾರ್ಜುನಪ್ಪ
127. ಸಂಸ್ಕೃತಸಾಹಿತ್ಯದಲ್ಲಿ ಹಾಸ್ಯ—ಎಲ್. ಜಿ. ಜೋಶಿ
128. ಕಾರ್ಮಿಕ ಮತ್ತು ಯೋಜನೆ—ಟಿ. ಕೆ. ಮೇಟಿ
129. ಭಾರತೀಯ ಹಬ್ಬಗಳು—ಸಿ. ವಿ. ಕೆರಿಮನಿ
130. ಕುಷ್ಠರೋಗ ನಿವಾರಣೆ—ಎಸ್. ಜೆ. ನಾಗಲೋಟಿಮಠ
131. ಶ್ರವಣಾತೀತ ಧ್ವನಿ—ಡಿ. ಆರ್. ಬಳೂರಗಿ
132. ಸಿಮೆಂಟ್ ಕಾಂಕ್ರೀಟ್—ಬಸವರಾಜ ಪುರಾಣಿಕ
133. ಜನಪದಕಾವ್ಯ—ಗಿರಡ್ಡಿ ಗೋವಿಂದರಾಜ
134. ಶ್ರೀ ಅರವಿಂದರ ಮಹಾಕಾವ್ಯ 'ಸಾವಿತ್ರಿ'—ಪ್ರಹ್ಲಾದ ನರೆಗಲ್

VII ವಿಶೇಷ ವಾಙ್ಮಯ ಪ್ರಸಾರ ಪುಸ್ತಕಮಾಲೆ

1	ನಿಜಗುಣ ಶಿವಯೋಗಿ ಹಾಗೂ ಅವರ ಕೃತಿಗಳು	0·50
2	ಮಹಾಕವಿ ರನ್ನ ಹಾಗೂ ಅವನ ಕೃತಿಗಳು	1·00
3	ಮಹಾಕವಿ ಪಂಪ ಹಾಗೂ ಅವನ ಕೃತಿಗಳು	1·00
4	ಸರ್ವಜ್ಞಕವಿ : ಜೀವನ ಹಾಗೂ ಕಾವ್ಯ	1·50
5	ಬಸವಣ್ಣನವರ ವ್ಯಕ್ತಿತ್ವ ಹಾಗೂ ಜೀವನಸಿದ್ಧಿ	1·50
6	ಸಾಹಿತ್ಯವಿಮರ್ಶೆ	1·50
7	ಗಾಂಧೀತತ್ವವಿಶ್ಲೇಷಣೆ	1·50
8	ದಾಸಸಾಹಿತ್ಯ : ದ್ವಿತೀಯ ಘಟ್ಟದ ಸಾಧನೆ	2·50
9	ರೆವರೆಂಡ್ ಚೆನ್ನಪ್ಪ ಉತ್ತಂಗಿ : ಜೀವನ ಹಾಗೂ ಕೃತಿಗಳು	2·50

VIII. ಜನಪದ ಸಾಹಿತ್ಯ ಮಾಲೆ

1 ಜೀವನ ಜೋಕಾಲಿ : ಚೌಪದನಗಳು — 4·00

ಸಂ : ಎಂ. ಎಸ್. ಸುಂಕಾಪುರ

2 ಜೀವನ ಜೋಕಾಲಿ : ಸರಸ-ವಿರಸ — 4·00

ಸಂ : ಎಂ. ಎಸ್. ಸುಂಕಾಪುರ

3 ಪರಮೇಶ್ವರಿಯ ಪದಗಳು — (ಅಚ್ಚಿನಲ್ಲಿ)

ಸಂ : ಎಲ್. ಆರ್. ಹೆಗಡೆ

IX. Publications in Anthropology

1 Contributions to the Understanding of Indian Civilization — 3·00

—*Baidyanath Saraswati* $1 or Sh. 8

X. Other Publications (ಇತರ ಪ್ರಕಟನೆಗಳು)

1 Hubli City—A Study in Urban Economic Life — 10·00

—*B. R. Dhekney* $3 or £ 1

2 Private International Law — 10·00

— *N. K. Dixit & Negalur Ranganath*

3	The Structure of Kannada — *R. C. Hiremath*	5.00
4	Studies in State Administration —Ed. *G. S. Halappa*	15·00
5	Yashodhara Charita Ed. *K. Krishnamoorthy*	5.00 $ 1.50 or Sh. 10
6	Essays in Sanskrit Criticism —*K. Krishnamoorthy*	5·00
7	The First General Elections in Goa —*G. S. Halappa, A. M. Rajashekharaiah & K. Raghavendra Rao*	3·00
8	Sunyasampadane—Vol. I (*English version of a Kannada work with Commentary & Notes*) —Ed. *S. C. Nandimath, Menezes and R. C. Hiremath*	12·00 $ 4 or Sh. 20
9	Sunyasampadane—Vol. II —Ed. *S. S. Bhoosanurmath & Armando Menezes*	20·00 $ 5 or Sh. 30
10	Sunyasampadane – Vol. III —*Ed. S. S. Bhoosnurmath & Armando Menezes*	20·00 $ 5 or Sh. 30
11	Sunyasampadane – Vol. IV. -*Ed. S.S. Bhoosnurmath & Armando Menezes*	20.00 $ 5 or Sh. 30
12	Kavi Kaumudi —Ed. *K. Krishnamoorthy*	1.50
13	Critical Essays on Indian Writing in English —Ed. *M. K. Naik, S. K. Desai and G. S. Amur*	20.00 $ 4 or Sh. 30
14	Sāyaṇa's Subhāṣita-Sudhānidhi —Ed. *K. Krishnamoorthy*	10·00
15	Urban Studies : An Aid to Research —*B. N. Sinha & T. N. Achut Rao*	30·00 $ 10
16	Old People of Makunti —*H. M. Marulasiddaiah*	10·00

○○

17 Sirsi: An Urban Study in Application of Reseach Models —*Dr. B. N. Sinha* 20·00 $ 7

18 Konkani, a Language 10.00
—*Jose Pereira* $ 3 or Sh. 20

19 Analytical Survey of Iśāvāsyopanisad 7·00
—*V. V. Mudholkar* $ 2 or Sh. 14

*20 The Image of India in the Western Creative Writing 30·00
(Joint Publication with Macmillan & Co. India)
—*Ed. M. K. Naik, S. K. Desai & S. T. Kallapur*

21 Essays in Criminal Law —*V. R. Bhat* 12·00

22 Songs from the Saranas and other poems 3·00
—*Armando Menezes* $ 1 or Sh. 7

23 Śūnyasampādane Vol. V (In Press)

24 Dāya Vibhāga —*I. S. Pawate* ,,

25 ಕನ್ನಡ ಪರಮಾರ್ಥಸೋಪಾನ —ಸಂ. ಎಂ. ಎಸ್. ದೇಶಪಾಂಡೆ 2·50

26 ಚನ್ನಬಸವಣ್ಣನವರ ವಚನಗಳು (ದ್ವಿ.ಮು.) 20·00
—ಸಂ. ಆರ್. ಸಿ. ಹಿರೇಮಠ

27 ಸಸ್ಯಶಾಸ್ತ್ರ — ಪಿ. ಎಸ್. ಚಿಕ್ಕಣ್ಣಯ್ಯ 1·50

28 ರಸಾಯನಶಾಸ್ತ್ರ — ಆರ್. ಎಸ್. ಹಮಸಾಗರ 4·00

29 ಪ್ರಾಯೋಗಿಕ ರಸಾಯನಶಾಸ್ತ್ರ — ಆರ್. ಬಿ. ಕಂಠಿ 3·00

30 विवेकचिंतामणि 6·75
(Marathi rendering of Nijaguna Shivayogi's Viveka Chintamani in Kannada)
(Joint publication of the Karnatak University, Dharwar & the Poona University, Poona)
—Ed. *D. N. Awalikar*

---

* (Sole Distributors : M/s Macmillan & Co. Madras)

31 ಕನ್ನಡ ಸಂತರ ಪರಮಾರ್ಥಪಥ — ಆರ್. ಡಿ. ರಾನಡೆ 5.00
—(ಅನು. : ಎಂ. ಎಸ್. ದೇಶಪಾಂಡೆ)

32 ಷಟ್‌ಸ್ಥಲಪ್ರಭೆ (ದ್ವಿ.ಮು.) —ಆರ್. ಸಿ. ಹಿರೇಮಠ (ಅಚ್ಚಿನಲ್ಲಿ)

33 ಶ್ರೀ ಸಿದ್ಧರಾಮೇಶ್ವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

34 ಶಿವಶರಣೆಯರ ವಚನಗಳು (ಸಮಗ್ರ ಸಂಪುಟ) 20·00
—ಸಂ. ಆರ್. ಸಿ. ಹಿರೇಮಠ

35 ಬಸವಣ್ಣನವರ ವಚನಗಳು —ಸಂ. ಆರ್. ಸಿ. ಹಿರೇಮಠ 20·00

36 ಮಹಾದೇವಿಯಕ್ಕನ ವಚನಗಳು —ಸಂ. ಆರ್. ಸಿ. ಹಿರೇಮಠ 7·00

37 ನೀಲಮ್ಮನ ವಚನಗಳು ಮತ್ತು ಲಿಂಗಮ್ಮನ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

38 ಇಪ್ಪತ್ತೇಳು ಶಿವಶರಣೆಯರ ವಚನಗಳು 5·00
—ಸಂ. ಆರ್. ಸಿ. ಹಿರೇಮಠ

39 ಅಮುಗೆ ರಾಯಮ್ಮನ ವಚನಗಳು ಮತ್ತು 5·00
ಅಕ್ಕಮ್ಮನ ವಚನಗಳು —ಸಂ. ಆರ್. ಸಿ. ಹಿರೇಮಠ

40 ಶಾಸನಸಂಪದ —ಸಂ. ಆರ್. ಸಿ. ಹಿರೇಮಠ, 2·00
ಎಂ.ಎಂ. ಕಲಬುರ್ಗಿ

41 ಮುಕ್ತಿಕಂಠಾಭರಣ —ಸಂ. ಆರ್. ಸಿ. ಹಿರೇಮಠ 6·00

42 ಶೂನ್ಯ ಸಂಪಾದನೆ (ಶಿವಗಣ ಪ್ರಸಾದಿ ಮಹಾದೇವಯ್ಯ ವಿರಚಿತ) 12·00
—ಸಂ : ಆರ್. ಸಿ. ಹಿರೇಮಠ

43 ವೀರಶೈವ ಚಿಂತಾಮಣಿ —ಸಂ : ಆರ್. ಸಿ. ಹಿರೇಮಠ 7.00

44 ಶಿಕ್ಷಣ : ಆಧಾರಗಳು ಮತ್ತು ಪ್ರಥಮ ತತ್ತ್ವಗಳು
—ಅನು : ವ್ಹಿ. ಕೆ. ಜವಳಿ 10·00

45 ಬ್ರಹ್ಮಾದ್ವೈತ ಸಿದ್ಧಾಂತ ಷಟ್ಸ್ಥಲಾಭರಣ (ಅಚ್ಚಿನಲ್ಲಿ)
—ಸಂ : ಆರ್. ಸಿ. ಹಿರೇಮಠ

46 ಲಿಂಗಚಿದಮೃತ ಬೋಧೆ —ಸಂ : ಆರ್. ಸಿ. ಹಿರೇಮಠ ,,

47 ಸಕಲಪುರಾತನರ ವಚನಗಳು ಭಾಗ ೧—ಸಂ: ಆರ್.ಸಿ. ಹಿರೇಮಠ ,,

48 ವಿಶೇಷಾನುಭವ ಷಟ್ಸ್ಥಲ —ಸಂ : ಆರ್. ಸಿ. ಹಿರೇಮಠ ,,

49 ಬಾಲಸಂಗಯ್ಯನ ವಚನಗಳು —ಸಂ : ಆರ್. ಸಿ. ಹಿರೇಮಠ ,,

Available for sale :

1	Studies in Education and Culture —*Ed. G. S. Halappa*	(Ord.) (Calico)	15·00 25·00
2	Pathway to god in Kannada Literature — *R. D. Ranade*	 Sh. $	6·00 10.6 2·75
3	The Grammatical Structure of Dravidian Languages —*Jules Block*		6.00

XI. UNIVERSITY JOURNALS

Annuals :

1 JOURNAL OF THE KARNATAK UNIVERSITY — Science
2 JOURNAL OF THE KARNATAK UNIVERSITY — Humanities
3 THE JOURNAL OF KARNATAK UNIVERITY—Social Sciences

Rate of Annual Subscription for Each Journal :

Rs. 5-00 (In India)

2 Dollars } (Foreign)
14 Shillings }

Quarterly :

ಕರ್ನಾಟಕ ಭಾರತಿ

ವಾರ್ಷಿಕ ಚಂದಾ : ರೂ. 8/– (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ : ರೂ. 2·50 (ಅಂಚೆವೆಚ್ಚ ಪ್ರತ್ಯೇಕ)

Biannual ;

ವಿಜ್ಞಾನ ಭಾರತಿ

ವಾರ್ಷಿಕ ಚಂದಾ : ರೂ. 4/– (ಅಂಚೆವೆಚ್ಚ ಸಹಿತ)
ಬಿಡಿ ಪತ್ರಿಕೆಯ ಬೆಲೆ : ರೂ. 2·50 (,, ಪ್ರತ್ಯೇಕ)

Monthly :

KARNATAK UNIVERSITY BULLETIN

Subscription :

Annual : Rs. 6/-
Monthly : 50 paise

XII. ಕನ್ನಡ ಪಠ್ಯಪುಸ್ತಕ ಮಾಲೆ

ಪಿ. ಯು. ಸಿ.			ರೂ. ಪೈಸೆ
1	ರಾಜ್ಯಶಾಸ್ತ್ರ		3-00
2	ಸಂಸ್ಕೃತ ಗದ್ಯಪದ್ಯ (ತೃತೀಯ ಮುದ್ರಣ)		3-50
3	ಉದ್ಯಾನಶಾಸ್ತ್ರ ಪರಿಚಯ		3-75
4	ಅರ್ಥಶಾಸ್ತ್ರ ಪರಿಚಯ		4-00
5	ವಾಣಿಜ್ಯಶಾಸ್ತ್ರ ಪರಿಚಯ		5-00
6	ತರ್ಕಶಾಸ್ತ್ರ ಪರಿಚಯ		3-00
7	ಜಗತ್ತಿನ ಇತಿಹಾಸ		4-50
8	ಬೀಜಗಣಿತ-ಕಲನಶಾಸ್ತ್ರ ಪರಿಚಯ		4-50
9	ಸಮಾಜಶಾಸ್ತ್ರ ಪರಿಚಯ		3-00
10	ಮಾನವಶಾಸ್ತ್ರ ಪರಿಚಯ		3-00
11	ಸಸ್ಯಶಾಸ್ತ್ರ ಪರಿಚಯ		5-50
12	ಪ್ರಾಯೋಗಿಕ ರಸಾಯನಶಾಸ್ತ್ರ		3-50
13	ಗಣನಶಾಸ್ತ್ರ ಪರಿಚಯ		5-00
14	ಭೂಮಂಡಲ ಪರಿಚಯ		8-50
15	ರಸಾಯನಶಾಸ್ತ್ರ		8-50
16	ಸಂಗೀತಶಾಸ್ತ್ರ ಪರಿಚಯ		4-50
17	ಪ್ರಾಣಿಶಾಸ್ತ್ರ ಪರಿಚಯ		7-00
18	ಪ್ರಾಯೋಗಿಕ ಭೌತಶಾಸ್ತ್ರ		6-50
19	ಭೂಮಿತಿ ಹಾಗೂ ತ್ರಿಕೋನಮಿತಿ		7-00
20	ಭೌತಶಾಸ್ತ್ರ	(ಸಾದಾ)	10-50
		(ಕೆಲಿಕೋ)	12-50
21	**ಸಂಖ್ಯಾಶಾಸ್ತ್ರ**		6·50

ಬಿ.ಎ., ಬಿ.ಎಸ್‌ಸಿ., ಬಿ.ಕಾಂ. — ಭಾಗ ೧

22	ಸಂಸ್ಕೃತ ಗದ್ಯಪದ್ಯ (ದ್ವಿತೀಯ ಮುದ್ರಣ)	3-00
23	ರಾಜ್ಯಶಾಸ್ತ್ರ	4-00
24	ಮಾರಾಟ ಹಾಗೂ ವಿಕ್ರಯಶಾಸ್ತ್ರ	4-50

25	ಕಾರ್ಯನಿರ್ವಹಣ ಶಾಸ್ತ್ರ		6-50
26	ತರ್ಕಶಾಸ್ತ್ರ (ನಿಗಮನ)		4-50
27	ಸಮಾಜಶಾಸ್ತ್ರ		3-00
28	ಅರ್ಥಶಾಸ್ತ್ರದ ಮೂಲತತ್ತ್ವಗಳು (ವಾಣಿಜ್ಯ)	(ಸಾದಾ)	10-50
		(ಕೆಲಿಕೋ)	12-50
29	ಸಂಸ್ಕೃತ ಸುಭಾಷಿತ ಸಂಗ್ರಹ		4-00
30	ಅರ್ಥಶಾಸ್ತ್ರ : ತತ್ತ್ವನಿರೂಪಣೆ		8·00
31	ಭೌತಿಕ ಭೂಗೋಲ ಶಾಸ್ತ್ರ		8·50
32	ಸಂಖ್ಯಾಶಾಸ್ತ್ರ		6·50
33	ಗಣನಶಾಸ್ತ್ರ		(ಅಚ್ಚಿನಲ್ಲಿ)
34	ಬೀಜಗಣಿತ		,,
35	ಪ್ರಾಚೀನ ಭಾರತ ಚರಿತ್ರೆ		,,

ಪೂರಕ ಗ್ರಂಥಮಾಲೆ

36	ಆಯುರ್ವೇದ ವಿಜ್ಞಾನ	7-00
37	ರಾಗದರ್ಶನ	4-50
38	ಭಾರತ ಸಂವಿಧಾನದ ಇತಿಹಾಸ	3-00
39	ಹೃದಯ ರೋಗಗಳು	4-00
40	ಫ್ರಾನ್ಸ್ ದೇಶದ ಮಹಾಕ್ರಾಂತಿ	(ಅಚ್ಚಿನಲ್ಲಿ)

★